

ಕಸ್ತೂರಿ
ಂಬರ್, ೧೯೮೭
ರೂ.೨-೫೦

ಕಸ್ತೂರಿ

ಕನ್ನಡ ಡೈಜೆಸ್ಟ್

ಸಂಸ್ಥಾಪಕ ಸಂಪಾದಕ :

ಕೆ. ಶಾಮರಾವ್

ಸಹಸಂಪಾದಕ :

ಮಾಧವ ನಾ. ಮಹಿಷಿ

ಕಲೆ :

ಪಿ. ಆರ್. ಪಾಟೀಲ

ಮುಖಪುಟ :

ಪುಟ್ಟ ಪುಟ್ಟ ಗೊಂಬೆ

ಚಿತ್ರ :

ಎನ್. ಸಿ. ದೇಸಾಯಿ

ಚಂದಾ ದರಗಳು :

ಬಿಡಿ ಸಂಚಿಕೆ	...	೨-೫೦
೧ ವರ್ಷಕ್ಕೆ	ಅಂಚೆ ಸೇರಿ	೨೯-೦೦
೨ ವರ್ಷಕ್ಕೆ	,,	೫೫-೦೦
೩ ವರ್ಷಕ್ಕೆ	,,	೮೨-೦೦

KASTURI, September 1987

ಬೆಳಕಿಂಡಿ

ಗುರು – ಬ್ರಹ್ಮ ವಿಷ್ಣು ಮಹೇಶ್ವರರ ಅವತಾರವೆಂಬ ನಂಬಿಕೆ ಒಂದು ಕಾಲದಲ್ಲಿತ್ತು.

ಈಗ? ಉಗುರು ಎಂಬಷ್ಟು ನಿಕೃಷ್ಟವಾಗಿ ಬಿಟ್ಟಿದೆ ಈ ಪದ(ವಿ).

–ಶಿವೋತ್ತಮ

*

ಅಂತಃಪ್ರಜ್ಞೆಯು ಅಪರಾಧಕ್ಕೆ ಕೊಡುವ ತೆರಿಗೆಯೇ ಭಯ.

–ಫ್ರಾಂಕ್ಲಿನ್ ರೂಜ್‌ವೆಲ್ಟ್

*

ನಿರ್ಧಾರ ಬಲವಾಗಿದ್ದಾಗ ಔದ್ಧತ್ಯ ಅನಗತ್ಯವಾಗುತ್ತದೆ.

–ನೆಪೋಲಿಯನ್ ಬೋನಾಪಾರ್ಟ್

*

ಕಲಾತ್ಮಕತೆ ಅಂದರೇನು?

ಮಾತು–ಕೃತಿಗೂ ಬದುಕು–ಬರಹಕ್ಕೂ ಸಂಬಂಧವಿಲ್ಲದಿರುವುದು. –ಪದ್ಮ ಶಿಖಾಮಣಿ

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದ ಚಂದಾದಾರರು ತಮ್ಮ ಟಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಸಹಚಿಂತನ	...		೩
ಕಾವಲುಗಾರ	...	ಪ. ರಾಮಕೃಷ್ಣ	೫
ಬಿಂಬ ಪ್ರತಿಬಿಂಬ	...	ಶ್ರೀನಿವಾಸ ತೋಫಖಾನೆ	೭
ನಾ. ಶ್ರೀ. ರಾಜಪುರೋಹಿತರು	...	ಗೋವಿಂದಮೂರ್ತಿ ದೇಸಾಯಿ	೮
ಪದಾರ್ಥ ಚಿಂತಾಮಣಿ	...	ಪಾವೆಂ.	೧೫
ಬೃಹನ್ನಕ್ಷತ್ರದ ಮಹಾನಿರ್ಯಾಣ –ಸೂಪರ್ ನೋವಾ		ಜಿ. ಟಿ. ನಾರಾಯಣರಾವ್	೧೭
ನಂಬಲಾಗದ ಕಥೆ (ಕಥೆ)	...	ಪುನಿದನ್	೨೫
"ನಾಯಿಗಳಿವೆ ಎಚ್ಚರಿಕೆ"	...	ಎಂ. ವಿ. ಮಾಲಬಾವಡಿ	೩೨
ಶತಮಾನದ ಕೃತಿ ನೂರು	...	ದೇಶಪಾಂಡೆ ಸುಬ್ಬರಾಯ	೩೩
ನಿಮ್ಮ ಶಬ್ದಭಂಡಾರ ಬೆಳೆಯಲಿ	...		೪೧
ಚೆಂಬೂ (ಕಥೆ)	...	ಮ್ಯಾಸಿಮೊ ಬೊಂಟೆಂಪಲ್ಲಿ	೪೩
ಸಿನಿಮಾ ಮಾಧ್ಯಮದ ಸಮಾಜ	...	ವಿಠ್ಠಲ ಕುಲಕರ್ಣಿ	೪೯
ಆ ಭಯಂಕರ ಗುಹೆಯ ರಹಸ್ಯ	...	'ಸವ್ಯಸಾಚಿ'	೫೭
ಸಂಚಾರಿ ವರದಿ ಪ್ರೇಷಕ	...	ಅಶೋಕ ಹಾಸ್ಯಗಾರ	೬೨
ಮಾತೆ ಸಾವಿತ್ರಿ	...	ವೃಷಭೇಂದ್ರಯ್ಯ	೬೩
ಅಬ್ಬಾಸ 'ಕೊನೆ'ಯ ಪುಟ	...	ವಸಂತ ಕಲಕೋಟಿ	೬೬
ರಾಗ ವೈರಾಗ್ಯ (ಕವನ)	...	ಡಾ. ರಾಮಾನುಜಂ	೭೧
ಬಹೂಪಯೋಗಿ ಬಿದಿರು	...	ಟಿ. ಎಮ್. ಸುಬ್ಬರಾಯ	೭೩
ಪುಷ್ಕಿನ್ನನ ಕೊನೆಯ ಕ್ಷಣಗಳು	...	ಜಿ. ಎಂ. ಕೃಷ್ಣಮೂರ್ತಿ	೭೭
'ಗುಣಮಟ್ಟ ವೃತ್ತ' ಎಂದರೇನು?	...	ಬಿ. ಎಸ್. ಎನ್. ಹೆಬ್ಬಾರ್	೮೨
ಬಾವು	...	ಡಾ. ವಸಂತ ಅ. ಕುಲಕರ್ಣಿ	೮೬
ಹುಲಿ ಬಂತು ಹುಲಿ	...	ರಮೇಶಚಂದ್ರ	೮೯
ಇದುವೆ ಜೀವ ಇದು ಜೀವನ	...		೯೩
ದೂರ ಸಂಪರ್ಕ – ತಂತಿಯಿಂದ ಉಪಗ್ರಹದ ವರೆಗೆ		ವಂದನಾ ಶಾನಭಾಗ	೯೫
ಫಾದರ್ ಲೂಯಿಸ್ (ಕಥೆ)	...	ಎ. ಅಶೋಕ	೧೦೦
ಅಂಗವೈಕಲ್ಯವನ್ನೂ ಗೆದ್ದ ಧೀರೆ ಹೇಮಾ	...	ಮಾಧವ ನಾ. ಮಹಿಷಿ	೧೦೫
ಪುಸ್ತಕ ವಿಭಾಗ			
ಅ್ಯಲಿಸ್‌ನಂಥ ಶಹರ		ಮೂಲ: ನೆವಿಲ್ ಶ್ಯೂಟ್ ಕನ್ನಡಕ್ಕೆ: ಗೀತಾ ಮುರಲಿ	೧೧೧

(ಈ ಸಂಚಿಕೆಯ ಮುಖಪುಟದ ಚಿತ್ರದಲ್ಲಿಯ ಗೊಂಬೆಯನ್ನು ಮಾಡಿದವರು ಹೇಮಾ ಪಾಟೀಲ ಅವರು. ಅವರ ಕುರಿತು ಲೇಖನ ಪುಟ ೧೦೫ ರಲ್ಲಿ)

ಸಹಚಿಂತನ

ಅಶುತೋಷ ಮುಖ್ಯೋಪಾಧ್ಯಾಯ

ಜುಲೈ ೮೭ರ ಸಂಚಿಕೆಯಲ್ಲಿ ಚಂದ್ರಶೇಖರ ವಸ್ತ್ರದರವರ 'ಅಶುತೋಷ ಮುಖ್ಯೋಪಾಧ್ಯಾಯರ ಅಪೂರ್ವ ದಾನ' ಲೇಖನದಲ್ಲಿ Vellum ಪದದ ವಿಶ್ಲೇಷಣೆ ಕುರಿತು ಒಂದು ಮಾತು. ಯಾವೊಂದು ವ್ಯಥಿತ ಅನಿಸಿಕೆಯಿಲ್ಲದೆ ಅಪೂರ್ವ-ದಾನವಾಗಿ ಈ ಗ್ರಂಥಗಳು ಶೋಭಿಸುತ್ತವೋ ತಿಳಿಯಲಿಲ್ಲ. ಆಗ ತಾನೆ ಹುಟ್ಟಿದ ಕರುವನ್ನು ಸ್ವಲ್ಪವೂ ಕರುಣೆಯಿಲ್ಲದೆ ಕೊಂದು ಅವುಗಳ ಚರ್ಮದಿಂದ ಸೃಷ್ಟಿ ಮಾಡಿದ ಪುಸ್ತಕಗಳು ನೀಡುವ ಸಂದೇಶ–ಪ್ರೀತಿ, ಕರುಣೆ, ಭ್ರಾತೃತ್ವ ಇತ್ಯಾದಿ. ಈ ಸಂದರ್ಭದಲ್ಲಿ ಕವಿ ಬೇಂದ್ರೆಯವರ 'ಕುರುಡು ಕಾಂಚಾಣ'ದ ಒಂದು ಪದ್ಯದ ಸಾಲು ನೆನಪಿಗೆ ಬರುತ್ತದೆ, "ಬಾಣಂತಿ ಎಲುಬಿನ ಸಾಬಾಣದ ಬಿಳುಪಿನ ಕಾಣಾದ ಕಿರು ಗೆಜ್ಜೆ ಕಾಲಾಗ ಇತ್ತೊ" ಎನ್ನುವಷ್ಟೆ ವೇದನಾಪೂರ್ಣ ಈ ಶಬ್ದದ ಅರ್ಥ.

ಅಳಗಂಚಿ —ಎ. ಡಿ. ನಂಜುಂಡಸ್ವಾಮಿ

ಅಶುತೋಷ ಮುಖರ್ಜಿಯವರು, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದರು. ಅವರ ಉತ್ತೇಜನದಿಂದ ಮುಂದೆ ಬಂದವರಲ್ಲಿ ಒಬ್ಬರಾದ ದಿ. ಡಾಕ್ಟರ್ ಶ್ಯಾಮಶಾಸ್ತ್ರಿಗಳು, 'ಕೌಟಿಲ್ಯನ ಅರ್ಥಶಾಸ್ತ್ರ' ಎಂಬ ಪ್ರಬಂಧ ಬರೆದು ಡಾಕ್ಟರೇಟು ಗಳಿಸಿದರು. ಅಶುತೋಷ ಮುಖರ್ಜಿ ಉಪಕುಲಪತಿಯಾಗಿದ್ದಾಗ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರೂ ಆಗಿದ್ದರು. ಶಾಸ್ತ್ರಿಗಳ ಮನೆಯ ಹೆಸರು "ಅಶುತೋಷ" ಎಂದೇ.

ಪುಣೆ —ಶ್ರೀಕಂಠಯ್ಯ

ತಿದ್ದುಪಡಿ : ಜುಲೈ ಮತ್ತು ಆಗಸ್ಟ್ ಸಂಚಿಕೆಗಳ ಪುಸ್ತಕ ವಿಭಾಗದಲ್ಲಿ ಬಂದ 'ಸಾಕ್ಷಿಯ ಸಾವಿತ್ರಿ'ಯನ್ನು ಸಂಗ್ರಹಿಸಿದವರ ಹೆಸರು ಮಣಿಮಾಲಿನಿ ಎ. ಕೆ. ಎಂದಾಗಬೇಕು. –ಸಂ.

'ಭಗ್ನಮಂದಿರ'ದ ಹೇಮಂತರು

ಶ್ರೀ ಹೇಮಂತ ಕುಲಕರ್ಣಿಯವರ 'ಭಗ್ನ ಮಂದಿರ' ಕಾದಂಬರಿಯನ್ನು ನನ್ನ ಹೈಸ್ಕೂಲ್ ದಿನಗಳಲ್ಲಿ ಓದಿದ್ದೇನೆ. ಆ ಕಾಲಕ್ಕೆ ಬಹಷ್ಟು ಜನರ ಗಮನ ಸೆಳೆದಿದ್ದ ಈ ಕಾದಂಬರಿ, ಭವಿಷ್ಯದ ಒಬ್ಬ ಶ್ರೇಷ್ಠ ಸಾಹಿತಿಯನ್ನು, ಆ ಕಾಲಕ್ಕೆ ಸಾಹಿತ್ಯಪ್ರಿಯರು ಶ್ರೀ ಹೇಮಂತ ಕುಲಕರ್ಣಿಯವರಲ್ಲಿ ಗುರುತಿಸಿದ್ದರು.

ಸುಮಾರು ೧೯೪೭ರ ಪೂರ್ವದಲ್ಲಿ 'ಭಗ್ನ ಮಂದಿರ' ಪ್ರಕಟವಾಗಿರಬೇಕೆಂದು ನನ್ನ ಮಸುಕು ನೆನಪು. ಆ ಕಾಲದಲ್ಲಿ ಪತ್ರಿಕೆಯೊಂದರಲ್ಲಿ ನಗೆ ಲೇಖನ ಓದಿದ್ದು ನೆನಪಿದೆ. ಕಾಸರಗೋಡಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಮರಿ ಸಾಹಿತಿಗಳ ಹಿಂಡೊಂದು ಮಡಿಕೇರಿಯಿಂದ ಬಯಲು ಸೀಮೆಗೆ ಬಸ್ಸಿನಲ್ಲಿ ಬರುತ್ತಾ ಸುತ್ತಮುತ್ತಲಿನ ಪ್ರಕೃತಿಯನ್ನು ಮೆಚ್ಚುವ ಕ್ರಮವನ್ನು ತಿಳಿ ಹಾಸ್ಯದಲ್ಲಿ ಅಣಕವಾಡಿದ್ದರು. ಅದರ ಬಗ್ಗೆ 'ಕೊರವಂಜಿ'ಯಲ್ಲಿ ಲೇಖನ ಬಂದಿತ್ತೆಂಬ ನೆನಪು. ನನಗೀಗಲೂ ನೆನಪಿರುವ ಒಂದು ಮಾತು– ಒಬ್ಬ ಮರಿ ಸಾಹಿತಿ ಪಕ್ಕದ ಗೆಳೆಯ ಕಿರಿ ಸಾಹಿತಿ-ಯನ್ನು ತಿವಿದು "ನೋಡಲ್ಲಿ ಹೇಮಂತರ ಕಾದಂಬರಿ" ಎಂದು ಬೆರಳು ಮಾಡಿ ತೋರಿಸು-ತ್ತಾನೆ. ಆ ಕಡೆ ನೋಡಿದಾಗ ಮುರಿದ ಮನೆ-ಯೊಂದು ಕಾಣುತ್ತಿತ್ತು (ಭಗ್ನಮಂದಿರ).

ಅನಂತರ ಕನ್ನಡಿಗರು ಹೇಮಂತ ಕುಲಕರ್ಣಿ ಯವರನ್ನು ಮರೆತೇ ಬಿಟ್ಟಿದ್ದರು. ಹಳೆಯ ತೆಳು ನೆನಪಾಗಿ 'ಭಗ್ನಮಂದಿರ' ಉಳಿದಿತ್ತು.

ಅಗಸ್ಟು ೧೯೮೭ರ 'ಕಸ್ತೂರಿ'ಯಲ್ಲಿ ಹೇಮಂತ ಕುಲಕರ್ಣಿಯವರನ್ನು ಕನ್ನಡಿಗರಿಗೆ ನೆನಪಿಸಿ ಕೊಟ್ಟು, ಅವರ ಸಾಧನೆಯ ಅದ್ಭುತ ಚಿತ್ರ-ವನ್ನು ಎದುರಿಗಿಟ್ಟು ಶ್ರೀ ವರದರಾಜ ಹುಯಿಲ-ಗೋಳರು ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಸಂಪಾಜೆ —ಸರವು ರಾಮಭಟ್ಟ

ರೋಚಕ ಲೇಖನ

ಅಗಸ್ಟ್ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಪಕ್ಷಿಗಳು ಮತ್ತು ನಾನು' (ಸಾಲೀಂ ಅಲಿಯವರ) ಲೇಖನ ರೋಚಕವಾಗಿತ್ತು. ಸಾಲೀಂ ಅಲಿಯವರ ಬಾಲ್ಯದ ಪಕ್ಷಿಪ್ರೇಮ ಅವರು ತಿಳಿದಂತೆ ಒಂದು ಉನ್ನತ ಮಟ್ಟಕ್ಕೆ ಏರಿಸುತ್ತದೆ

ಎಂದು ನಂಬಿಕೆ. ಬಾಲ್ಯದಲ್ಲಿ ಓದು ಬಿಟ್ಟು ಪಕ್ಷಿಗಳ ಕಡೆಗೆ ವಿಶೇಷ ಆಸಕ್ತಿ, ನಮ್ಮ ಕೋಮಲ ತನುವನ್ನು ನಿಸರ್ಗದ ಕಡೆಗೆ ಎಳೆಯುತ್ತದೆ.

ತಾಳಿಕೋಟೆ —ಡಿ. ಬಿ. ಬಾಗವಾನ

"ಹಸಿರುಡುಗೆಯನ್ನು ಭೂದೇವಿಗೆ ಮತ್ತೆ ತೊಡಿಸಿ–ಅಂದರೆ ಮಾತ್ರ ನಮ್ಮ ಮನಸ್ಸುಗಳು ಹಸಿರಾಗಿರುವುದಕ್ಕೆ, ನಮ್ಮ ಬಾಳು ಹಸನಾಗಿರುವುದಕ್ಕೆ ಸಾಧ್ಯ" ಅಲಿಯವರು ಅಂದ ಈ ಮಾತು, ವಜ್ರಕ್ಕಿಂತ ಬೆಲೆಯುಳ್ಳದ್ದು.

ಮಸ್ಕಿ —ಶಿವಕುಮಾರ ಮರಳದ

ಕಣ್ಣು ಕುರುಡಾದರೂ ಬುದ್ಧಿ ಕುರುಡಲ್ಲ!

ಹೌದು, ಈ ಮಾತಿಗೆ ಅಗಸ್ಟ್ ೮೭ರ'ಕಸ್ತೂರಿ' ಯಲ್ಲಿ ಪ್ರಕಟವಾಗಿರುವ ನಿರಂಜನರ ಬರಹ(ಕಾಣದ ಕಣ್ಣು–ಸೋಲದ ವೇಣು)ದ ನಾಯಕ ಎಂ. ಎಸ್. ವೇಣುಗೋಪಾಲ ಜೀವಂತ ಸಾಕ್ಷಿ. ಬಹುಮುಖ ಪ್ರತಿಭೆಯ ಅವರು ದೃಷ್ಟಿ ಕಳೆದುಕೊಂಡು ಕುರುಡಾದುದು ಒಂದು ದೊಡ್ಡ ದುರಂತ. ಆದರೆ ಅವರು ತಮ್ಮ ಸಾಹಸ ಪ್ರಯತ್ನಗಳಿಂದ ಕಾನೂನು ಪದವಿ ಪಡೆದು ಪ್ರಾಧ್ಯಾಪಕರಾಗಿರುವುದು ಅವರ ಛಲಕ್ಕೆ ಉತ್ತಮ ಉದಾಹರಣೆ. ಅವರ ಪತ್ನಿಯ ಬಗ್ಗೆ ಏನೂ ಹೇಳಿಲ್ಲವೇಕೋ?

ಹುಲಕೋಟಿ —ಚಂದಾ ಬೇಗಂ

ನಾನು ಪಿ. ಜಿ. ಡಿಪ್ ಇನ್ ಇಂಗ್ಲೀಷಿಗೆ ೧೯೭೮–೭೯ ರಲ್ಲಿ ಮಾನಸ ಗಂಗೋತ್ರಿಯಲ್ಲಿ ಅಂಚೆ ಮತ್ತು ಮತ್ತು ತೆರಪಿನ ವಿದ್ಯಾರ್ಥಿನಿಯಾಗಿದ್ದಾಗ ಮೈಸೂರಿನ ಈ 'ವೇಣು' ಕೂಡ ವಿದ್ಯಾರ್ಥಿಯಾಗಿ ಬಂದಿದ್ದರು.

'ಸಂಪರ್ಕ ಶಿಬಿರ'ದಲ್ಲಿ ಒಂದು ದಿನ ಅಮೇರಿಕದ ವಿದ್ವಾಂಸರೊಬ್ಬರು ಶ್ರೀ ಮುಲ್ಕರಾಜ ಆನಂದರ 'ದಿ ಅನ್‌ಟಚೆಬಲ್' ಕಾದಂಬರಿಯ ಬಗ್ಗೆ ಭಾಷಣ ಮಾಡಿ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ಕುರಿತು ಏನಾದರೂ ವಿಚಾರ ವಿಮರ್ಶೆಗಳು ಬೇಕೆನಿಸಿದರೆ ಮಾತಾಡಬಹುದು ಎಂದು ಅವಕಾಶ ಕೊಟ್ಟಾಗ ಇಡೀ ವಿದ್ಯಾರ್ಥಿವೃಂದ ಏನೂ ಹೊಳೆಯದೆ ಮೌನವಾಗಿ ಕುಳಿತಿತ್ತು! ಆಗ ಆ ವಿದ್ವಾಂಸರು ಇನ್ನೇನು ತಮ್ಮ ಭಾಷಣ ವೈಖರಿಗೆ ಎದುರು ಹೇಳುವವರೇ ಇಲ್ಲ ಎಂದು ಹೆಮ್ಮೆಪಡುವಷ್ಟರಲ್ಲಿ ಈ 'ವೇಣು' ಎದ್ದು ನಿಂತು ನಿರರ್ಗಳವಾಗಿ ದಿಟ್ಟವಾಗಿ 'ದಿ ಅನ್‌ಟಚೆಬಲ್' ಬಗ್ಗೆ ಅವರು ಹೇಳದೇ ಬಿಟ್ಟಿದ್ದನ್ನು ಹೇಳುತ್ತಾ ಹತ್ತು ನಿಮಿಷ ಮಾತಾಡಿದರು.

ಮುಂದೆ ಈ 'ವೇಣು'ರವರ ಜೀವನದಲ್ಲಿ ತಾನಾಗಿ ಸ್ವ–ಇಚ್ಛೆಯಿಂದ ಪ್ರವೇಶಿಸಿ ಕಣ್ಣಾಗಿ ಮನಕ್ಕೆ-ಮನೆಗೆ ಬೆಳಕು ನೀಡುತ್ತಿರುವ ಶ್ರೀಮತಿ ಮೀನಾಕ್ಷಿ—ವೇಣುವಿನ ಬಾಳ ವೀಣೆ—ಇವರ ಬಗ್ಗೆ ನಿರಂಜನ ವಾನಳ್ಳಿಯವರ ಲೇಖನದಲ್ಲಿ ಒಂದಾದರೂ ಮಾತು ಇರಲೇಬೇಕಾಗಿತ್ತು. ಶ್ರೀಮತಿ ಮೀನಾಕ್ಷಿಯವರು ಕೂಡಾ ಕನ್ನಡ ಎಂ. ಎ. ಪದವೀಧರೆ; ಕನ್ನಡ ಎಂ. ಎ. ಯಲ್ಲಿ ನನ್ನ ಸಹಪಾಠಿ, ಸ್ನೇಹಿತೆ.

ದಾವಣಗೆರೆ —ಎಸ್. ಶಾರದ

ಶ್ರೀಸಾಮಾನ್ಯ ಮತ್ತು ಬ್ಯಾಂಕ್

ಅಗಸ್ಟ್ 'ಕಸ್ತೂರಿ'ಯಲ್ಲಿ ಶ್ರೀ ಮಾಧವ ನಾ. ಮಹಿಷಿಯವರ 'ಶ್ರೀಸಾಮಾನ್ಯನ ದೃಷ್ಟಿಯಲ್ಲಿ ಬ್ಯಾಂಕಿಂಗ್' ಲೇಖನದ ಒಂದು ಭಾಗದಲ್ಲಿ ಗ್ರಾಮೀಣ ಬ್ಯಾಂಕ್ ಬಗ್ಗೆ ಚರ್ಚಿಸಲಾಗಿದೆ. ಗ್ರಾಮವಾಸಿ ಅಜ್ಞಾನಿ; ಅವನಿಗೆ ಏನು, ಯಾರಿಂದ ಸಿಗುತ್ತದೆ ಎನ್ನುವುದು ತಿಳಿದಿರುವುದಿಲ್ಲ. ಈ ದಿಸೆಯಲ್ಲಿ ಬ್ಯಾಂಕ್ ಸಿಬ್ಬಂದಿಗೆ ಸಹಜ ಪ್ರೇರಣೆಯುಂಟಾಗಬೇಕು ಎಂದಿದ್ದಾರೆ.

ಆದರೆ ಒಬ್ಬ ಗ್ರಾಮೀಣ ಬ್ಯಾಂಕು ನೌಕರನಾಗಿ ನನ್ನ ಅನುಭವದ ಪ್ರಕಾರ ಹಳ್ಳಿಗರು ಇತ್ತೀಚಿಗೆ ಮುಗ್ಧರಾಗಿ ಉಳಿದಿಲ್ಲ. ನಮ್ಮ ಶಾಖೆಯ ವ್ಯಾಪ್ತಿಗೆ ಬರುವ ಹಳ್ಳಿಯೊಂದಕ್ಕೆ ವಸೂಲಾತಿಗಾಗಿ ಹೋದಾಗ ಒಬ್ಬ ಹೇಳಿದ ಮಾತು: "ಏನು! ಹೀಗೆ ಬಾರಿ ಬಾರಿಗೂ—ವಸೂಲಾತಿಗಾಗಿ ಬರ್ತೀರಲ್ಲ! ಸಾಲ ನಿಮ್ಮಪ್ಪನ ಮನೆಯಿಂದ ಕೊಟ್ಟಿದ್ದಾ?" ಇನ್ನು ಜೀವನಾವಶ್ಯಕ ಕನಿಷ್ಟ ಸೌಲಭ್ಯಗಳೂ ದೊರೆಯದ ಹಳ್ಳಿಗಳಲ್ಲಿ ಕಡಿಮೆ ಸಂಬಳ ತೆಗೆದುಕೊಂಡು (ವಾಣಿಜ್ಯ ಬ್ಯಾಂಕುಗಳಿಗೆ ಹೋಲಿಸಿದಲ್ಲಿ) ಸಮರ್ಪಣಾಭಾವದಿಂದ ದುಡಿಯುವ ನಾವು ಹಳ್ಳಿಗರ ದೃಷ್ಟಿಯಲ್ಲಿ ಸಂಬಳಕ್ಕಾಗಿ ದುಡಿಯುವ ಕೂಲಿಗಳು.

ಮಸರಕಲ್ —ವಿಜಯಭಾಸ್ಕರ್

ಕಸ್ತೂರಿ

ವರ್ಷ : ೩೨ ಸಪ್ಟಂಬರ್, ೧೯೮೭ ಸಂಚಿಕೆ : ೧

ಕಾವಲುಗಾರ

ಪ. ರಾಮಕೃಷ್ಣ ಶಾಸ್ತ್ರಿ

ಅರಬಸ್ತಾನದ ಮಹಾಶರಣರಲ್ಲಿ ಒಬ್ಬರೆನಿಸಿದ್ದ ಇಬ್ರಾಹಿಂ ಬಿನ್ ಆಹದಂ ಬಾಲಕರಾಗಿದ್ದಾಗ ಒಂದು ಹಣ್ಣಿನ ತೋಟವನ್ನು ಕಾಯುವ ಕೆಲಸಕ್ಕೆ ಸೇರಿಕೊಂಡರು.

ಒಂದು ದಿನ ಆ ತೋಟದ ಮಾಲಿಕನಾದ ಸಿರಿವಂತನು ತೋಟವನ್ನು ನೋಡಲು ಬಂದ. ಕಾವಲುಗಾರ ಆಹದಂರೊಂದಿಗೆ "ನನಗೆ ತುಂಬ ಆಯಾಸವಾಗಿದೆ. ಈ ತೋಟದಿಂದ ರಸಭರಿತವಾದ ನಾಲ್ಕಾರು ಒಳ್ಳೆಯ ಸಿಹಿ ಹಣ್ಣುಗಳನ್ನು ತೆಗೆದುಕೊಂಡು ಬಾ" ಎಂದು ಆಜ್ಞಾಪಿಸಿದ.

ಆಹದಂ ಹಣ್ಣುಗಳನ್ನೇನೋ ತಂದರು. ಸಿರಿವಂತ ಆತುರದಿಂದ ಹಣ್ಣು ಕಚ್ಚಿದ; ಆದರೆ ಥೂ ಎಂದು ಉಗುಳಿ ದೂರ ಎಸೆದ. ಒಂದಾದರೂ ಹಣ್ಣು ಸಿಹಿಯಾಗಿರಲಿಲ್ಲ. ಕೆಲವು ಹುಳಿ, ಕೆಲವು ಕಹಿ.

ಸಿರಿವಂತ ಸಿಟ್ಟಿನಿಂದ ಕೆಂಪಾಗಿ. ಕೈಯೆತ್ತಿ ಬಾಲಕನ ಕೆನ್ನೆಗೊಂದು ಛಟೀರನೆ ಬಾರಿಸಿ, "ಅಥ

ಮನೆ, ಇಷ್ಟು ದಿನದಿಂದ ನನ್ನ ತೋಟವನ್ನು ಕಾಯುತ್ತಿದ್ದರೂ ಯಾವ ಮರದ ಹಣ್ಣು ಸಿಹಿ ಎಂದು ನಿನಗೆ ಗೊತ್ತಿಲ್ಲವೆ?" ಎಂದು ಅಬ್ಬರಿಸಿದ.

ಆಹದಂರ ಮುಖ ಕಪ್ಪಿಟ್ಟಿತು. ಅವರು ಮೊಣಕಾಲೂರಿ ಕುಳಿತು ಆ ಸಿರಿವಂತನು ತನ್ನ ಕೆನ್ನೆಗೆ ಹೊಡೆದ ಕೈಯನ್ನು ಚುಂಬಿಸಿ, ಆ ಕೈಯ ಮೇಲೆ ಎರಡು ಕಂಬನಿಗಳ ಹನಿಯನ್ನು ಪಟ ಪಟನೆ ಉದುರಿಸಿದನು. ಸಿರಿವಂತ ಅದರಿಂದ ಶಾಂತನಾಗಿ, "ಹೋಗು, ಬೇರೆ ಸಿಹಿ ಹಣ್ಣುಗಳನ್ನು ತಾ" ಎಂದ.

ಅದಕ್ಕೆ ಆಹದಂ, "ಧನಿಯರೇ, ತೋಟವನ್ನು ರಕ್ಷಿಸಲೆಂದು ನೀವು ನನ್ನನ್ನು ನೇಮಿಸಿದ್ದೀರಲ್ಲವೆ? ಕಾವಲುಗಾರ ಸತ್ಯವಂತನೂ ಪ್ರಾಮಾಣಿಕನೂ ಆಗಿರಬೇಕಲ್ಲವೆ?" ಎಂದು ಕೇಳಿದ.

"ನಿಜ ನಿಜ" ಎಂದ ಸಿರಿವಂತ.

"ಹಾಗಾದರೆ ನನಗೆ ಯಾವ ಮರದಲ್ಲಿ ಸಿಹಿ ಹಣ್ಣುಗಳಿವೆಯೋ ಗೊತ್ತಿಲ್ಲ. ಇಂದಿನ ವರೆಗೆ ಒಂದೂ ಹಣ್ಣನ್ನೂ ನಾನೂ ತಿಂದಿಲ್ಲ."

ಆಹದಂ ಹೀಗೆ ಹೇಳಿದಾಗ ಸಿರಿವಂತನ ಕಣ್ಣು ಮಂಜಾಯಿತು. ಇಂತಹ ಅಪರೂಪ ವ್ಯಕ್ತಿಗಳಿರುವರೇ ಎಂದು ಬೆರಗಾಗಿ ಆತ ಅವರ ಕ್ಷಮೆ ಬೇಡಿದ. ✻

ದಿಗಂತ

'ಆಕಾಶ'ಕ್ಕೆ ನಿಖರವಾದ ವ್ಯಾಖ್ಯೆ ಇಲ್ಲ. ಏಕೆಂದರೆ ಅದೇನೆಂದು ಪೂರ್ಣವಾಗಿ ಯಾರಿಗೂ ಗೊತ್ತಿಲ್ಲ. ಕಣ್ಣೆದುರಿರುವ ಹಾಗೂ ಕಣ್ಣಿನ ಮಿತಿಯನ್ನೂ ದಾಟಿರುವ ರಹಸ್ಯವೇ 'ಆಕಾಶ.' ಹಾಗಾದರೆ 'ದಿಗಂತ'?

ದಿಕ್ಕುಗಳ ಅಂತ್ಯವೇ 'ದಿಗಂತ'ವೆಂದು ಯಾರೂ ಹೇಳಿಯಾರು. ಅಂತೆಯೇ ಗೋಚರಿಸುವ ಆಕಾಶ ಭಾಗಕ್ಕೆ 'ದಿಗಂತ'ವೆಂಬ ಹೆಸರನ್ನಿಡಲಾಯಿತು. ಭೂಮಿಯು ಯಾವುದೇ ದಿಕ್ಕಿನ ಕೊನೆಯಲ್ಲಿ ಭೂಮಿಯನ್ನು ಮುಟ್ಟಿದಂತೆ ಕಾಣುವ ಆಕಾಶಭಾಗವನ್ನು 'ದಿಗಂತ'ವೆಂದು ಕರೆಯಲಾಯಿತು. ಆದರೆ ಹೀಗೆ ಕರೆದದ್ದು ಸರಿಯೇ?

ದಿಕ್ಕಿನ ಕೊನೆಯೆಂದರೆ ಅದು ಹೇಗೆ? ದಿಕ್ಕಿಗೆಲ್ಲಾದರೂ ಕೊನೆಯುಂಟೆ? ಕೊನೆಯಿದ್ದಲ್ಲಿ, ಆ ನಂತರ ಏನಿದೆ? ಏನಿರಲಿ, ಇಲ್ಲದಿರಲಿ ಅದು ದಿಕ್ಕಾಗದೆ? ದಿಕ್ಕಿಲ್ಲದ್ದಾಗಿರಬಹುದು, ಅಷ್ಟೆ. ಈ ಅರ್ಥದಲ್ಲಿ 'ದಿಗಂತ'ವೆನ್ನುವುದಾದಲ್ಲಿ, ಅದು, 'ಭೂಮಿಯ ಆಶ್ರಯ ಹೊಂದಿಲ್ಲದಂತೆ ಕಾಣುವ ಆಕಾಶಭಾಗ'ವಾಗಿ, ಸರಿ ಹೋಗುತ್ತದೆ.

ನಮ್ಮ ಯೋಚನೆಗಳೆಲ್ಲ ಅಷ್ಟೇ. ಎಲ್ಲ ನಮ್ಮ ನೇರಕ್ಕೇ, ನಮಗೋಸುಗವೇ.

ಇಲ್ಲಿ ಇನ್ನೊಂದು ಸಂಗತಿಯೂ ಗಮನಾರ್ಹ. ಅದೆಂದರೆ, 'ನಾವು ಎಲ್ಲಿಯವರೆಗೆ ಅರಿತಿದ್ದೇವೋ ಅಲ್ಲಿಯವರೆಗೆ ಮಾತ್ರ ಅರಿಯುವ ವಿಷಯ ಇರುವುದು,' ಎಂಬ ನಮ್ಮ ಧೋರಣೆ. ಅರಿಯದ ವಿಷಯ ಇನ್ನೂ ಇರಬಹುದೆನ್ನುವ ಯೋಚನೆ ಮಾಡದೆಯೇ ಅರಿವಿಗೆ ಅಂತ್ಯವನ್ನು ಸಾರಿಬಿಡುತ್ತೇವೆ. 'ಇದು ಇಷ್ಟೇ,' ಎಂದು ತೀರ್ಮಾನಿಸಿಬಿಡುತ್ತೇವೆ. ಈ ಮಾತಿಗೆ ಉದಾಹರಣೆ, 'ದಿಗಂತ'ವೆಂಬ ಶಬ್ದ.

ನಾವು 'ದಿಗಂತ'ದಾಚೆಗೆ ಯೋಚಿಸಬೇಕಾಗಿದೆ.

—ಎಚ್. ಆನಂದರಾಮಶಾಸ್ತ್ರಿ

ಬಿಂಬ ಬಿಂಬಿ ಪ್ರತಿಬಿಂಬ ಬಿಂಬೋತ್ರ

ಶ್ರೀನಿವಾಸ ತೋಫಖಾನೆ



ಶಂಬೂಕವಧೆಯ ಕಾರಣದಿಂದಾಗಿ ರಾಮಚಂದ್ರ ಜನಸ್ಥಾನಕ್ಕೆ ಬರುತ್ತಾನೆ. ಸೀತೆಯನ್ನು ತಾನು ಪರಿತ್ಯಾಗ ಮಾಡಿದುದರಿಂದ ಅವಳ ವಿರಹದ ವೇದನೆ ಅವನ ಮನವನ್ನು ಕೊರೆಯುತ್ತದೆ. ಆತನು ಅತ್ಯಂತ ವ್ಯಥಿತನಾಗುತ್ತಾನೆ. ವನವಾಸದ ಅವಧಿಯಲ್ಲಿ ತಾನು ಅವಳೊಡನೆ ಇಲ್ಲಿದ್ದು ಹಲವು ಸಂಗತಿಗಳನ್ನು ಅನುಭವಿಸಿದ್ದನು. ವನದೇವತೆ ವಾಸಂತಿ ಲತಾಕುಂಜವೊಂದರೆಡೆ ಬೆರಳು ಮಾಡಿ ತೋರಿಸಿ ಅದಕ್ಕೆ ಸಂಬಂಧಿಸಿದ ಘಟನೆಯೊಂದನ್ನು ನೆನಪಿಸುತ್ತಾಳೆ. ಒಂದು ಸಲ ಗೋದಾವರಿ ತೀರಕ್ಕೆ ತೆರಳಿದ ಸೀತೆ ಮರಳಿ ಬರಲು ವಿಳಂಬವಾಗಲು ರಾಮನು ಈ ಕುಂಜದಲ್ಲಿ ನಿಂತು ಅವಳಿಗಾಗಿ ದಾರಿ ಕಾಯುತ್ತಿದ್ದುದೇ ಆ ಘಟನೆ. ಭವಭೂತಿಯ ಅತ್ಯುತ್ತಮ ನಾಟಕವೆಂದೆನಿಸಿಕೊಂಡ 'ಉತ್ತರ ರಾಮ ಚರಿತ'ದಲ್ಲಿ (೩-೩೭) ಬರುವ ಪದ್ಯ ಇಂತಿದೆ.

ಅಸ್ಮಿನ್ನೇವ ಲತಾಗೃಹೇ ತ್ವಮಭವಸ್ತನ್ಮಾರ್ಗದತ್ತೇಕ್ಷಣಃ
ಸಾ ಹಂಸೈಃ ಕೃತಕೌತುಕಾ ಚಿರಮಭೂದ್ ಗೋದಾವರೀ ಸೈಕತೇ
ಆಯಾಂತ್ಯಾ ಪರಿದುರ್ಮನಾಯಿತಮಿವ ತ್ವಾಂ ವೀಕ್ಷ್ಯ ಬದ್ಧಸ್ತಯಾ
ಕಾತರ್ಯಾದರವಿಂದ ಕುಡ್ಮಲನಿಭೋ ಮುಗ್ಧಃ ಪ್ರಣಾಮಾಂಜಲಿಃ

ಕನ್ನಡ ಭಾವಾನುವಾದ :-

ಹಂಸಗಣದ ಕೆಳೆತನದಿ ಹೊತ್ತು ಕಳೆಯುತ್ತಲೊಮ್ಮೆ ಇರಲು
ಸೀತೆಗಾಯ್ತು ತಡ ಹೊಳೆಯ ಮಳಲ ದಡವನ್ನು ಬಿಟ್ಟು ಬರಲು
ನೀನು ಇತ್ತ 'ತಳುವಿದಳು ತನ್ನವಳು' ಎನುತ ಅವಳಿಗಾಗಿ
ಲತೆಯ ಕುಂಜವನು ಸೇರಿ ನಿಂದಿರುವಿ ಒಳಗೆ ಕೊರಗಿ ಕೊರಗಿ
ತಾನು ಮರಳಿ ಬರುವೆಡೆಗೆ ನೋಟ ಹರಿದಿತ್ತು ನಿನ್ನದೆಂದು
ಕಂಡುಕೊಂಡು ಕಾತರದ ಭಾವದಲಿ ಇನಿಯ ಸೆದುರು ನಿಂದು
ಕಮಲ ಕುಡ್ಮಲವೆ ಎನಿಪ ಕರಗಳವಳಾಗ ಜೋಡಿಸಿಹಳು
ಮುಗ್ಧ ಬದ್ಧ ಅಂಜಲಿಯ ಬಲದಿ ಉಮ್ಮಳವ ಓಡಿಸಿಹಳು



ಕರ್ನಾಟಕದ ಪುನರ್ದರ್ಶನ ಮಾಡಿಸಿದ ಹರಿಕಾರರಲ್ಲಿ ಶ್ರೀಮಾನ್ ನಾರಾಯಣ ಶ್ರೀನಿವಾಸ ರಾಜಪುರೋಹಿತ ಒಬ್ಬರು! ಇತಿಹಾಸ ಸಂಶೋಧನೆ ಶೈಶವಾವಸ್ಥೆಯಲ್ಲಿರುವಾಗ, ಸರಕಾರದ ಕೊಂಬು-ಕಹಳೆ, ಸಂಸ್ಥೆಗಳ ನಗಾರಿ-ನೌಬತ್ತು, ಜನತೆಯ ಸಹಕಾರ-ಸಹಾನುಭೂತಿಗಳಿಲ್ಲದೆ, ಏಕಲವ್ಯನಂತೆ, ಕರ್ನಾಟಕದ ನೆಲವನ್ನು ತುಳಿದು, ಕಂಡ ಕಂಡ ಕಲ್ಲುಗಳನ್ನು ನೋಡಿ, ಸಾರಸ್ವತರಿಗೆ ಕರ್ನಾಟಕ ಇತಿಹಾಸದ ಬಾಗಿಲನ್ನು ತೆರೆದು ತೋರಿಸಿದ ಕೆಲವೇ ಸವ್ಯಸಾಚಿಗಳಲ್ಲಿ ರಾಜಪುರೋಹಿತರು ಅಗ್ರತಾಂಬೂಲಕ್ಕೆ ಪಾತ್ರರು. ರಾಜಪುರೋಹಿತರೇನೂ ಇತಿಹಾಸದ ಮೇಲೆ ಉದ್ಗ್ರಂಥಗಳನ್ನು ಬರೆಯಲಿಲ್ಲ. ರಾಷ್ಟ್ರೀಯ-ಅಂತಾರಾಷ್ಟ್ರೀಯ ಸಭೆ-

ಇತಿಹಾಸ ಸಂಶೋಧಕ

ನಾ. ಶ್ರೀ. ರಾಜಪುರೋಹಿತರು

ಸಂಕಿರಣಗಳಲ್ಲಿ ಪಾಲ್ಗೊಂಡು ಪ್ರಬಂಧಗಳ-ನ್ನೋದಿ ಬೆನ್ನು ತಟ್ಟಿಸಿಕೊಳ್ಳಲಿಲ್ಲ. ಆದರೆ ಅವರು ಶ್ರೀಸಾಮಾನ್ಯರಲ್ಲಿ ಕರ್ನಾಟಕ ಇತಿ-ಹಾಸದ ಬಗ್ಗೆ ಮೂಡಿಸಿದ ಪ್ರಜ್ಞೆ, ಕನ್ನಡಿಗರ ಸಂಸ್ಕೃತಿಯ ಬಗ್ಗೆ ಹರಡಿದ ಅರಿವು ಅಸದೃಶ-ವಾದುದು.

ರಾಜಪುರೋಹಿತರು ೧೭-೭-೧೮೮೭ರಂದು ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಅಗಡಿಯಲ್ಲಿ ಜನ್ಮತಳೆದರು. ಇವರ ಪೂರ್ವಜರು ಅಗಡಿ ಸಂಸ್ಥಾನಿಕರ ಕುಲಪುರೋಹಿತರಾಗಿದ್ದ-ರಿಂದ, ಇವರು ರಾಜಪುರೋಹಿತರಾದರು. ಹುಟ್ಟಿದ ಹಳ್ಳಿಯಲ್ಲಿ ಪ್ರಾಥಮಿಕ ಹಂತದ ಶಿಕ್ಷಣ; ಧಾರವಾಡ ಜಿಲ್ಲೆಗೆ ಮುಲ್ಕಿ ಪರೀಕ್ಷೆ-ಯಲ್ಲಿ ಪ್ರಥಮ ಸ್ಥಾನ. ಮುಂದೆ ಧಾರವಾಡ ದಲ್ಲಿ ಮೂರು ವರುಷ ಶಿಕ್ಷಕ ತರಬೇತಿ ಕೇಂದ್ರ-ದಲ್ಲಿ ಶಿಕ್ಷಣ. ಶಿಕ್ಷಣ ಮುಗಿದೊಡನೆ ಸರಕಾರ-ದಲ್ಲಿ ಶಿಕ್ಷಕವೃತ್ತಿ. ಆಗ ದೇಶದಲ್ಲಿ ರಾಜಕೀಯ ಜಾಗ್ರತಿಯ ಗಾಳಿ ಬೀಸುತ್ತಿದ್ದ ಕಾಲ. ಸರಕಾರೀ ಶಿಕ್ಷಕ ವೃತ್ತಿಗೆ ಶರಣು. ಆದರೆ ಶಿಕ್ಷಕ ವೃತ್ತಿಯನ್ನು ಬಿಡಲು ಮನಸ್ಸು ಒಪ್ಪದು. ನೇರವಾಗಿ ಕರ್ನಾಟಕ ಕುಲಪುರೋಹಿತ ಆಲೂರ ವೆಂಕಟರಾಯರು ಧಾರವಾಡದಲ್ಲಿ ನಡೆಸುತ್ತಿದ್ದ ರಾಷ್ಟ್ರೀಯ ಶಾಲೆಗೆ ಬಂದರು. ವೆಂಕಟರಾಯರ ಶಿಕ್ಷೆಗೆ ಹೋದರು. "ಏನು ಕ್ಲಾಸಿಗೆ ಸೇರಲು ಬಂದೆಯಾ?" ಎಂದು, ವೆಂಕಟರಾಯರ ಪ್ರಶ್ನೆ: ಅಂಥ ವಾಮನಮೂರ್ತಿ ರಾಜಪುರೋಹಿತರು.

"...ಅಹುದು, ಆದರೆ ಕಲಿಯಲಿಕ್ಕಲ್ಲ... ಕಲಿಸಲಿಕ್ಕೆ..." ರಾಜಪುರೋಹಿತರ ಉತ್ತರ. ರಾಷ್ಟ್ರೀಯ ಶಾಲೆಯನ್ನು ಸೇರಿದರು. ಅಲ್ಲಿ ಕವಿ ದ. ರಾ. ಬೇಂದ್ರೆ ವಿದ್ಯಾರ್ಥಿ. ಬೇಂದ್ರೆಯವರ ಹೊಟ್ಟೆಯಲ್ಲಿ ಎರಡಕ್ಷರಗಳನ್ನು ಹಾಕಿದ ಶ್ರೇಯಸ್ಸು ಇವರದು. ಅಂದು ಆಲೂರ ವೆಂಕಟರಾಯರೊಂದಿಗೆ ಬೆಸಗೊಂಡ ಸ್ನೇಹ, ಅವರಿಬ್ಬರ ಜೀವನದುದ್ದಕ್ಕೂ ಬೆಳೆದು

ಗೋವಿಂದಮೂರ್ತಿ ದೇಸಾಯಿ

ಬಂದಿತು. ಅವರೊಂದಿಗೆ ನಾಡುನುಡಿ, ಕರ್ನಾಟಕ ಇತಿಹಾಸ-ಸಂಸ್ಕೃತಿಗಳ ಬಗ್ಗೆ ಕೂಡಿ ದುಡಿಯುವ ಭಾಗ್ಯ ರಾಜಪುರೋಹಿತರದಾಯಿತು. ಇವರ ಸ್ನೇಹ ಪಡೆದ ವೆಂಕಟರಾಯರೂ ಧನ್ಯರಾದರು.

ಅಗಡಿ ಒಂದು ಸಾಮಾನ್ಯ ಹಳ್ಳಿ. ಆದರೆ ಶೇಷಾಚಲ ಮಹಾಸ್ವಾಮಿಗಳ ಸನ್ನಿಧಾನದಿಂದ ಆ ಹಳ್ಳಿಯಲ್ಲಿ ಧಾರ್ಮಿಕ ಜಾಗ್ರತಿಯಾಗಿತ್ತು. 'ಸದ್ಬೋಧಚಂದ್ರಿಕೆ' ಎಂಬ ಪತ್ರಿಕೆ ಹಾಗೂ ಗಳಗನಾಥರ ಕಾದಂಬರಿಗಳಿಂದ ಆಗಲೇ ಕರ್ನಾ-ಟಕಕ್ಕೆ ಜ್ಞಾನದ ಕಿಂಡಿಯನ್ನು ತೆರೆದು ತೋರಿ-

ಸಿತ್ತು. ಈ ಧಾರ್ಮಿಕ ಮತ್ತು ಜ್ಞಾನದ ಪ್ರಭಾವ ರಾಜಪುರೋಹಿತರ ಮೇಲೆ ಅದೆಷ್ಟಾಗಿತ್ತೆಂದರೆ, ತಾವೇಕೆ ಸಂನ್ಯಾಸಿ ಆಗ ಬಾರದು ಎಂದು ಅಂದುಕೊಳ್ಳುವಂತಾಯಿತು! ಉತ್ತರ ಭಾರತದ ಪ್ರವಾಸಕ್ಕೆ ಹೋದರು. ಕಾಶಿಯಲ್ಲಿ ಒಂದೆರಡು ವರುಷ ನಿಂತು ಸಂಸ್ಕೃತ ಅಭ್ಯಾಸವನ್ನು ಮಾಡಿ ಬಂದರು. ಅಲ್ಲಿಂದ ಬಂದ ಮೇಲೆ ಸಂನ್ಯಾಸ ಮತ್ತು ಸಂಸಾರ-ಗ್ರಹಣಗಳ ಮಧ್ಯೆ ಇವರ ಮನಸ್ಸು ಹೊಯ್ದಾಡಹತ್ತಿತ್ತು. ಇತಿಹಾಸ ಸಂಶೋ-ಧನೆಯನ್ನೇ ಮುಂದುವರಿಸಬೇಕು ಅನ್ನುವ ಛಲದಿಂದ ಒಂದು ನಿರ್ಧಾರಕ್ಕೆ ಬಂದರು. ಅದಕ್ಕಾಗಿ ಮದುವೆಯಾಗಿ ಒಂದೆಡೆ ನಿಲ್ಲಲು ಯೋಚಿಸಿದರು. ಆಗ ಅವರಿಗೆ ಇಪ್ಪತ್ತೇಳು ವರುಷ. ಶಿವಮೊಗ್ಗಾ ಜಿಲ್ಲೆ, ಸೊರಬ ತಾಲೂಕಿನ ನೆಗವಾಡಿ ಗ್ರಾಮದ ಶಾನು-ಭೋಗರ ಮಗಳ ಕೈ ಹಿಡಿದರು. ವಿವಾಹವಾದ ಮೇಲೆ ಶ್ವಶುರಗೃಹದಲ್ಲಿ ನಿಂತರು. ಅಲ್ಲಿಯ ಶ್ಯಾನುಭೋಗಿಕೆಯನ್ನು ಮಾಡಹತ್ತಿದರು. ಅಲ್ಲಿಗೆ ಒಮ್ಮೆ ಸೊರಬ ತಾಲೂಕಿನ ಶಿಕ್ಷಣಾಧಿಕಾರಿ ಬಂದರು. ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜಪುರೋಹಿತರು ವಿವೇಕಾನಂದರ ಧರ್ಮಬೋಧೆ ಕುರಿತು ಮಾತನಾಡಿದರು. ಆ ಶಿಕ್ಷಣಾಧಿಕಾರಿಗೆ ಭಾಷಣ ತುಂಬಾ ಹಿಡಿಸಿತು. ಅವರು ಸರಕಾರಕ್ಕೆ 'ರಾಜಪುರೋಹಿತರಿಗೆ ವಿದ್ಯಾ ಇಲಾಖೆಯಲ್ಲಿ ಒಂದು ನೌಕರಿ ಕೊಡ ಬೇಕು' ಎಂದು ಶಿಫಾರಸು ಮಾಡಿದರು. ಮೋಕ್ಷಗುಂಡಮ್ ವಿಶ್ವೇಶ್ವರಯ್ಯನವರು ದಿವಾಣರಿದ್ದ ಕಾಲ. ತಕ್ಷಣವೇ ಸಂಚಾರಿ ಉಪನ್ಯಾಸಕರು ಎಂಬ ವೃತ್ತಿ ಸಿಕ್ಕಿತು. ಅದರೆ ಅದು ಬಹು ಕಾಲ ಇವರ ಕೈಯನ್ನು ಹಿಡಿಯ-ಲಿಲ್ಲ. ಮೂರೇ ವರುಷಗಳಲ್ಲಿ ನೆಗವಾಡಿ ಬೇಸರವನ್ನು ತಂದಿತು. ಮಾವನ ಮನೆ ಹಿತ-ವೆನಿಸಿದರೂ, ಅದು ತಮ್ಮ ಮನೆ ಅಲ್ಲ ಎಂದೆನಿ-ಸಿತು. ಅಗಡಿ ತಮ್ಮೂರು; ಅಲ್ಲಿ ಎಲ್ಲವೂ ಇದೆ ಎನಿಸಿತು. ಅಲ್ಲಿಂದ ನೇರವಾಗಿ ಧಾರವಾಡಕ್ಕೆ ಬಂದರು. ಇತಿಹಾಸ ಸಂಶೋಧನೆ ಕೈಮಾಡಿ ಕರೆಯುತ್ತಲಿತ್ತು. ಅಂದು ಧಾರವಾಡವನ್ನು ತಮ್ಮ ಮನೆಯನ್ನಾಗಿ ಮಾಡಿಕೊಂಡವರು ಮುಂದೆಂದೂ ಅಲ್ಲಿಂದ ಕದಲಲಿಲ್ಲ.

ಧಾರವಾಡದಲ್ಲಿಯೂ, ಪುಣೆಯಲ್ಲಿದ್ದಂತೆ ಒಂದು ಇತಿಹಾಸ ಸಂಶೋಧನ ಮಂಡಳವನ್ನು ಸ್ಥಾಪಿಸಬೇಕೆಂದು ಆಲೂರ ವೆಂಕಟರಾಯರ ತಲೆಯಲ್ಲಿ ಸುತ್ತುತ್ತಿತ್ತು. ಸರಿ, ಕೆಲ ಸ್ನೇಹಿತ ರನ್ನು ಕೂಡಿಸಿ, ಸಮಾಲೋಚಿಸಿದರು. ೧೯೧೪ ರಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಳ' ಜನ್ಮ ತಾಳಿತು. ಅದರ ಸಂಸ್ಥಾಪಕ ರಲ್ಲಿ ರಾಜಪುರೋಹಿತರೂ ಒಬ್ಬ ಪಾಲುದಾರ ರಾದರು. ಪಾಲುದಾರರು ಆದರಷ್ಟೇ ಅಲ್ಲ, ಅದಕ್ಕಾಗಿ ತಮ್ಮ ಸರ್ವಶಕ್ತಿಯನ್ನೂ ವ್ಯಯಿ ಸಿದರು. ಅಲ್ಲಿ ಈಗಿರುವ ಪ್ರಾಚ್ಯ ವಸ್ತುಗಳಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಸಂಗ್ರಹಿಸಿದವರೇ ರಾಜಪುರೋಹಿತರು!

ಕರ್ನಾಟಕತ್ವದ ಬಗ್ಗೆ ಜನರಲ್ಲಿ ಜಾಗ್ರತಿ ಮೂಡಿಸಲು, ಧಾರವಾಡದಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಒಂದು ದೊಡ್ಡ ಗುಂಪು ಕಾರ್ಯ ಮಾಡುತ್ತಿತ್ತು. ಅದರಲ್ಲಿ ಒಂದು ಸಪ್ತರ್ಷಿಗಳ ಮಂಡಲ. ಆಲೂರ ವೆಂಕಟರಾಯರು, ಮುದ ವೀಡು ವೆಂಕಟರಾಯರು, ಕಡಪಾ ರಾಘವೇಂದ್ರ ರಾಯರು, ಮುದವೀಡು ಕೃಷ್ಣರಾಯರು, ನರ ಗುಂದಕರ ರಾಮರಾಯರು, ರಾಜಪುರೋಹಿತ ನಾರಾಯಣರಾಯರು, ದೇಶಪಾಂಡೆ ನಾರಾ ಯಣರಾಯರು ಈ ಸಪ್ತರ್ಷಿಗಳ ಸಾಲಿನಲ್ಲಿ ದ್ದವರು. ಕೆಲವರು ಕನ್ನಡದ ಕಾರ್ಯವನ್ನು ಕೈಕೊಂಡರು. ಕೆಲವರು ಇತಿಹಾಸ ಸಂಶೋ ಧನೆಗೆ ಟೊಂಕ ಕಟ್ಟಿದರು. ಅದರ ವಿರಡನ್ನೂ ಮಾಡಿದವರು ರಾಜಪುರೋಹಿತರು. ಹಳ್ಳಿಹಳ್ಳಿಗೆ ಅಲೆದಾಡಿ, ಅಲ್ಲಲ್ಲಿ ಬಿದ್ದ ಕಲ್ಲುಗಳನ್ನೆತ್ತಿಕೊಂಡು ಬಂದು ಅಥವಾ ಅವುಗಳ ಪ್ರತಿಮಾಡಿಕೊಂಡು ಬಂದು, ಅವುಗಳನ್ನು ಓದಿ, ಹೊಸ ವರ್ಣ ಮಾಲೆಯಲ್ಲಿ ಬರೆಯುವುದು ರಾಜಪುರೋಹಿತರ ಕಾರ್ಯವಾಯಿತು. ಅದಕ್ಕೆ ನೆರವು ಕೊಟ್ಟವರು ದೇಶಪಾಂಡೆ ನಾರಾಯಣರಾಯರು. ಹಳ್ಳಿಗಳಿಗೆ ಹೋದಾಗ ರಾಜಪುರೋಹಿತರ ಕಣ್ಣು ಕುಳ್ಳು ತಟ್ಟುವ ಕಲ್ಲಿನ ಮೇಲೆ ಅಥವಾ ಹಾಳು ಗುಡಿಯ ಸುತ್ತುಮುತ್ತಲಿನ ಕಲ್ಲುಗಳ ಮೇಲೆ

ನೆಟ್ಟಿರುತ್ತಿತ್ತು. ಯಾವುದಾದರೂ ಹಿತ್ತಲಕ್ಕೆ ಕೈತೊಳೆಯಲು ಹೋದರೆ, ಹಿತ್ತಲ ಸುತ್ತಲೂ ಕಣ್ಣಾಡಿಸುತ್ತಿದ್ದರು. ಅಲ್ಲಿ ಏನಾದರೂ ಶಿಲಾ ಲೇಖಗಳಿವೆಯೇನೋ ಎಂದು ನೋಡುತ್ತಿದ್ದರು. ಶಿಲಾಲಿಪಿಗಳನ್ನು ಪತ್ತೆ ಹಚ್ಚುವುದು ಅವರ ಒಂದು ಹವ್ಯಾಸವಾಯಿತು.

"ನಾಲ್ಕೇ ದಿವಸಗಳಲ್ಲಿ ಮರಳಿ ಬರುತ್ತೇನೆ. ಹೋದಕೂಡಲೇ ಪತ್ರ ಹಾಕುತ್ತೇನೆ" ಎಂದು ಊರಿಗೆ ಹೋಗುವಾಗ ಹೇಳಿ ಹೋಗುತ್ತಿದ್ದ ರಾಜಪುರೋಹಿತರು, ತಿಂಗಳು ತಿಂಗಳು ಮನೆಗೆ ಬರುತ್ತಲೇ ಇರಲಿಲ್ಲ. ಪತ್ರದ ಸುದ್ದಿಯೂ ಇಲ್ಲ. ಸಂಶೋಧನೆಯ ಬಗ್ಗೆ ಅಷ್ಟು ಗೀಳು ಅವರಿಗೆ. ಅವರ ಮನೆಯಲ್ಲಿ ನಿತ್ಯವೂ ದಿನಾಂಕ, ವಾರಗಳನ್ನು ಬದಲಿಸುವ ಕಾಲನೇಮಿ-ಯೊಂದಿತ್ತು. ಅವರು ಊರಲ್ಲಿ ಇರುವಾಗ ನಿತ್ಯವೂ ಅದನ್ನು ಬದಲಿಸುತ್ತಿದ್ದರು. ಊರಿಗೆ ಹೋಗುವ ಮುಂದೆ ಆ ಕೆಲಸವನ್ನು ಅವರ ಮಗನು ಮಾಡಬೇಕಿತ್ತು. ಒಂದು ಸಲ ಊರಿಗೆ ಹೋಗಿ ಬಂದಾಗ ಆ ಕ್ಯಾಲೆಂಡರ್ ಹಾಗೆಯೇ ಇತ್ತು. ಮಗನನ್ನು ಕರೆದು ಕೇಳಿದರು. ಮಗನು "ದೊಡ್ಡಣ ...ನೀವು ಧಾರವಾಡದಿಂದ ಎಂದು ಊರಿಗೆ ಹೋದಿರಿ ಎಂದು ನೆನಪು ಮಾಡಿ ಕೊಡಲು ಅದನ್ನು ಬದಲಿಸಲಿಲ್ಲ" ಎಂದು ನಕ್ಕ-ನಂತೆ. ತಂದೆಗೂ ನಗೆ. ಆದರದು ವಿಷಾದದ ನಗೆ. ಕಾರಣ, ಮನೆ ತುಂಬಾ ದಟ್ಟವಾದ ದಾರಿದ್ರ್ಯ. ಇಷ್ಟು ದಿವಸ ಹೆಂಡತಿ-ಮಕ್ಕಳು ಹೇಗೆ ಸಂಸಾರ ಮಾಡಿದರೆಂದು ನೆನಪಾದೊಡನೆ ಅವರ ಕರುಳು ಕಿತ್ತಿ ಬರುತ್ತಿತ್ತು! ರಾಜ ಪುರೋಹಿತರನ್ನು ಸಮೀಪದಿಂದ ಕಂಡ ಕವಿ ವಿನಾಯಕ ಕೃಷ್ಣ ಗೋಕಾಕರು, 'ಬಾಳ ದೇಗುಲದಲ್ಲಿ' ಎಂಬ ಕವನ ಸಂಗ್ರಹದಲ್ಲಿ 'ಜ್ಞಾನಿ' ಎಂದು ರಾಜಪುರೋಹಿತರನ್ನು ಸಂಬೋಧಿಸಿ:

ಮಗುವೊಂದು ವಿಷಮಜ್ವರದಿಂದೊರಲಿ
ಮಲಗಿರಲು,
ತಾಳಿಕೋಟೆಯ ಯುದ್ಧವಾದ ತಡಿಗೆ
ಎಸಗಿತೆಂಬುದರ ನಿರ್ಧಾರಕ್ಕೆ ನೀ ನಡೆದೆ
ಬಿಸಿಲಿನಲಿ ಬೆಳವಲದ ನಾಡ ಗಡಿಗೆ
ನಿನಗಿಲ್ಲ ಮೆಟ್ಟಲಿಕೆ ಕೆರ-ವೊಚ್ಚೆಗಳ ಜೋಡು
ಪುಲಿಕೇಶಿ ಎಂಥ ಪಾದತ್ರಾಣವ
ತುಳಿದನೆಂಬುದನು ತಿಳಿಯಬಯಸಿ ನೀ ಪರಿಕಿಸಿದೆ
ಬಾದಾಮಿ ಬಸದಿಗಳಿಹ ಮೇಣವ

ಎಂದು ಬರೆದಿದ್ದಾರೆ. ಬಡತನದಲ್ಲಿ ಹುಟ್ಟಿ, ಅದ ರಲ್ಲಿ ಹೋದವರು ರಾಜಪುರೋಹಿತರು. ೧೯೪೭ ರಲ್ಲಿ ಅವರಿಗೆ ಸತ್ಕಾರಮಾಡಿ, ಹಮ್ಮಿಣಿಯನ್ನರ್ಪಿಸ ಬೇಕೆಂದು ಆಲೂರ ವೆಂಕಟರಾಯರು ಶ್ರಮಿ ಸಿದರು. ಆ ಹಣ ಕೂಡಿಸಲು ರಾಜಪುರೋ ಹಿತರೂ ಶ್ರಮಿಸಿದರು. ತಮ್ಮ ಸತ್ಕಾರದ ಪಾವತಿ ಪುಸ್ತಕಕ್ಕೆ ತಾವೇ ಸಹಿಮಾಡಿ ಕೊಟ್ಟರು. ಆದರೆ ಕೂಡಿದ ಹಣ ಕೇವಲ ಒಂದೂವರೆ ಸಾವಿರ. ರಾಜಪುರೋಹಿತರು ದುರ್ದೈವಿಯಲ್ಲದೆ ಮತ್ತೇನು?

ವಿಜಯನಗರ ತನ್ನ ಕೊನೆಯನ್ನು ಕಂಡ ೧೫೬೫ ರ ಯುದ್ಧ ತಾಳಿಕೋಟೆಯಲ್ಲಿ ನಡೆಯಿ ತೆಂದು ಸಾವಿರದಾ ಒಂಬತ್ತನೂರ ಇಪ್ಪ ತ್ತರವರೆಗೂ ಸಂಶೋಧಕರ ಅಭಿಪ್ರಾಯ ವಾಗಿತ್ತು. ಆದರೆ ವಿಜಾಪುರದ ಅದಿಲ್‌ಶಹಾ ಅಳಿಯ ರಾಮರಾಯನ ಜ್ಞಾಪಕಾರ್ಥ ಕಟ್ಟಿದ ಕಟ್ಟೆಯ ಸುಳಿವು ಹರಿಕಾರೆಯ ಬಯ್ಯರಿನಲ್ಲಿ ಸಿಕ್ಕೊಡನೆ ರಾಜಪುರೋಹಿತರು ಆ ಕಟ್ಟೆಯನ್ನು ಶೋಧಿಸಲು ಉತ್ಖನನವನ್ನು ಕೈಕೊಂಡರು. ಅಲ್ಲಿ ಕಂಡ ವೀರಗಲ್ಲುಗಳನ್ನು ಮತ್ತು ರಕ್ಕಸ ತಂಗಡಗಿ ಬಳಿಯಿದ್ದ ನಲವತ್ತಾಡಿನಲ್ಲಿ ದೊರೆತ ರಣಸ್ತಂಭಗಳಿಂದಲೂ, ಆ ಯುದ್ಧ ರಕ್ಕಸತಂಗ ಡಗಿ ಮತ್ತು ನಾಲವತ್ವಾಡಗಳ ಮಧ್ಯದಲ್ಲಿ ನಡೆದಿರಬೇಕೆಂದು ಸಾಧಾರ ಸಿದ್ಧಪಡಿಸಿದರು. ಎಲ್ಲರೂ ಈ ಸಂಶೋಧನೆಯನ್ನು ಒಪ್ಪಿದರು. ತಿಂಗಳಾನು ತಿಂಗಳು ಶ್ರಮಿಸಿದ ರಾಜಪುರೋ ಹಿತರ ಈ ಮಹತ್ ಕಾರ್ಯ ಅವರ ಕಿರೀಟಕ್ಕೆ ಸಿರಪೇಚನ್ನು ಹಚ್ಚಿದಂತಾಯಿತು. ೧೯೨೯ರಲ್ಲಿ ಪುಣೆಯಲ್ಲಿ, ಭಾರತ ಇತಿಹಾಸ ಸಂಶೋಧನ ಮಂಡಳದ ಆಶ್ರಯದಲ್ಲಿ ನಡೆದ ಸಮ್ಮೇಳನದಲ್ಲಿ ರಾಜಪುರೋಹಿತರು ತಮ್ಮ ಪ್ರಬಂಧವನ್ನು ಮಂಡಿಸಿದರು. ಆಗ ಮಹಾರಾಷ್ಟ್ರದ ಇತಿಹಾಸ ಕಾರರಾದ ಕೇಳಕರ, ಪಟವರ್ಧನ, ಮೊದಲಾದ ವರು ತಲೆಯನ್ನು ತಗ್ಗಿಸಬೇಕಾಯಿತು. ಕಾರಣ,

ಅವರೆಲ್ಲರೂ ಆ ವಿಜಯನಗರದ ಅಂತಿಮ ಯುದ್ಧ ನಡೆದದ್ದು ತಾಳಿಕೋಟೆಯೆಂದೇ ನಿರ್ಣಯಿಸಿದ್ದರು! ಬ್ರಿಟಿಶ್ ಸರಕಾರ ಕೂಡ, ದಕ್ಷಿಣ ಹಿಂದೂಸ್ಥಾನದ ಇತಿಹಾಸವನ್ನೇ ಬದಲಿಸಿದ ಆ ಯುದ್ಧದ ಜ್ಞಾಪಕಾರ್ಥ ತಾಳಿಕೋಟೆಯಲ್ಲಿ ಸೂಕ್ತ ಸ್ಮಾರಕವನ್ನು ಕಟ್ಟಲು ನಿರ್ಧರಿಸಿತ್ತು. ಅಂತಹ ಒಂದು ಸ್ಮಾರಕ ರಕ್ಕಸತಂಗಡಗಿಯಲ್ಲಿ ಆಗಬೇಕೆಂದು ರಾಜಪುರೋಹಿತರು ಹಂಬಲಿಸಿ ಸತ್ತರು.

'ಮಹಾರಾಷ್ಟ್ರ ವ ಕರ್ನಾಟಕ' ಎಂಬ ಮರಾಠಿ ಲೇಖವನ್ನು ಪುಣೆಯಲ್ಲಿ ಪ್ರಸಿದ್ಧವಾಗುತ್ತಿದ್ದ ಲೋಕಮಾನ್ಯ ಟಿಳಕರ ಪತ್ರಿಕೆ 'ಕೇಸರಿ'ಯಲ್ಲಿ ಬರೆದರು. ಹತ್ತು-ಹನ್ನೆರಡು ಲೇಖನಗಳನ್ನು 'ಕೇಸರಿ'ಗೆ ಬರೆದರು. ಯಾವುದು ಮಹಾರಾಷ್ಟ್ರವೋ ಅಲ್ಲಿ ಕರ್ನಾಟಕದ ಪ್ರಭುತ್ವವಿತ್ತೆಂದು ತೋರಿಸಿದರು. ಕೆಲವರು ಹುಬ್ಬೇರಿಸಿದರು. ಆದರೆ ಐತಿಹಾಸಿಕ ಆಧಾರಗಳನ್ನಿತ್ತು ಬರೆದಿದ್ದರಿಂದ ಯಾರೂ ಇವರನ್ನು ವಿರೋಧಿಸುವ ಗೋಜಿಗೆ ಹೋಗಲಿಲ್ಲ. ಮಹಾರಾಷ್ಟ್ರದ ಕುಲದೈವವಾದ 'ವಿಠ್ಠಲ' ಕರ್ನಾಟಕದವನೆಂದು ಮೊದಲು ಹೇಳಿದವರು ರಾಜಪುರೋಹಿತರು. 'ಪಂಢರಪುರ ಚ ವಿಠ್ಠಲ ಭಕ್ತಿ' ಎಂಬ ತಮ್ಮ ಮರಾಠಿ ಲೇಖನದಲ್ಲಿ ಶ್ರೀ ರಾಜಪುರೋಹಿತರು 'ಪಾಂಡುರಂಗ' ಇದು ಗ್ರಾಮ್ಯ ಶಬ್ದ. 'ಪಂಡರಿಗೆ' ಅನ್ನುವ ಕನ್ನಡ ಶಬ್ದದ ಮೇಲಿಂದ ಅಲ್ಲಿಯ ದೇವರು ಪಾಂಡುರಂಗನಾದನು. ೧೩ ನೇ ಶತಮಾನದ ಕನ್ನಡ 'ಅಭಿನವ ದಶಕುಮಾರಚರಿತ್ರೆ'ಯಲ್ಲಿ ಪಂಢರಪುರಕ್ಕೆ 'ಪಾಂಡುರಂಗಪುರ' ಎಂಬ ಹೆಸರಿದ್ದುದು ತಿಳಿದು ಬರುತ್ತದೆ. ಪಂಢರಪುರವನ್ನು ಅವನು 'ಪಾಂಡುರಂಗ', 'ಪಂಡರೀಪುರ' ಎಂದು ಉಲ್ಲೇಖಿಸಿದ್ದಾನೆ......ಹದಿಮೂರನೇ ಶತಮಾನದ ಅಂತ್ಯದಲ್ಲಿ 'ಪಾಂಡುರಂಗ'ನೆಂಬ ಹೆಸರನ್ನು ದೇವರಿಗೆ ಹಾಗು 'ಪಂಡರಪುರ' ಎಬ ಹೆಸರನ್ನು ಆ ಊರಿಗೆ ಕೊಟ್ಟಿರಬೇಕು, ಎಂದು ಅಭಿಪ್ರಾಯಪಟ್ಟಿದ್ದಾರೆ. ೧೯೧೪ರಷ್ಟು ಹಿಂದೆ ಪ್ರಕಟವಾದ ಈ ಲೇಖನವನ್ನು ಮೊನ್ನೆ ಡಾಕ್ಟರ್ ರಾಮಚಂದ್ರ ಚಿಂತಾಮಣಿ ಢೇರೆ ಅನ್ನುವ ಸುಪ್ರಸಿದ್ಧ ಮರಾಠಿ ಲೇಖಕರು ತಮ್ಮ ೪೨೨ ಪುಟಗಳ 'ಶ್ರೀ ವಿಠ್ಠಲ: ಏಕ ಮಹಾಸಮನ್ವಯ' ಎಂಬ ಸಂಶೋಧನಾತ್ಮಕ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೆ ಅವರು ರಾಜಪುರೋಹಿತರ ವಿಚಾರಗಳನ್ನು ಮನ್ನಿಸಿದ್ದಾರೆ. ವಿಕ್ರಮಶಕದ ಪ್ರಾರಂಭದ ದಿನವನ್ನು ನಿರ್ಧರಿಸಿದ ಸಂಶೋಧನಾ ಕಾರ್ಯವನ್ನು ರಾಜಪುರೋಹಿತರು ಮಾಡಿ ಮಾರ್ಗದರ್ಶನ ಮಾಡಿದ್ದಾರೆ. ಅವರ ತಿಮ್ಮಮ್ಮನ ಚರಿತ್ರೆಯ ಲೇಖ ಉಲ್ಲೇಖನೀಯವಾದದ್ದು. ಕನ್ನಡ ಕವಿಗಳಾದ ಹರಿಹರ, ರನ್ನ, ನಾಗವರ್ಮ, ರತ್ನಾಕರವರ್ಣಿ, ನೃಪತುಂಗ, ಮೊದಲಾದವರ ಕಾಲ ಮತ್ತು ಮತ ನಿರ್ಣಯಗಳಲ್ಲಿ ಸಾಕಷ್ಟು ಅಂಶಗಳನ್ನು ಕಲೆಹಾಕಿದ್ದಾರೆ. ಅವರ ಪ್ರಕಟಿತ ಕೃತಿಗಳು ೧) ದಾನ-ಧರ್ಮ ಪದ್ಧತಿ (೧೯೧೦), ೨) ಶ್ರೀಮತ್ಸುರೇಶ್ವರಾಚಾರ್ಯರ ಚರಿತ್ರೆ (೧೯೨೨), ೩) ಕರ್ನಾಟಕದ ಇತಿಹಾಸವೂ ಅದರ ವರ್ಣನೆಯೂ (೧೯೩೦), ೪) ಶ್ರೀಮನ್ಮಧ್ವಾಚಾರ್ಯರು ಹಾಗು ಶ್ರೀ ಮಜ್ಜಯತೀರ್ಥರ ಚರಿತ್ರೆ (೧೯೩೬), ೫) ಶ್ರೀ ಯಾಜ್ಞವಲ್ಕ್ಯ ಮಹಾಮುನಿಗಳ ಚರಿತ್ರೆ (೧೯೩೯).

ರಾಜಪುರೋಹಿತರು ಇತಿಹಾಸದಷ್ಟೇ ಧಾರ್ಮಿಕ ಗ್ರಂಥಗಳ ಅಭ್ಯಾಸದಲ್ಲೂ ಮುಂದಿದ್ದರು. ರಾಜಪುರೋಹಿತರು ಸ್ವಲ್ಪ ವಿವಾದಾತ್ಮಕ ವ್ಯಕ್ತಿ. ತಾವು ಹೇಳಿದ್ದೆ ಸರಿ ಅನ್ನುವ ಅಭಿಪ್ರಾಯದವರಿದ್ದರು. ಅವರ ಮಧ್ವಾಚಾರ್ಯರ ಚರಿತ್ರೆ ಸಾಕಷ್ಟು ವಿವಾದಕ್ಕೆ ಎಡೆ ಮಾಡಿ ಕೊಟ್ಟಿತ್ತು. ಉತ್ತರಾದಿಮಠದ ಶ್ರೀಗಳ ವರೆಗೂ ಆ ವಾದ ವಿವಾದ ಹೋಯಿತು. ಶ್ರೀ ರಾಜಪುರೋಹಿತರಿಗೆ ದ್ವೈತ ಪಂಡಿತರನ್ನು ಎದುರಿಸುವುದು ಆಗಲಿಲ್ಲ. ಆದರೂ ಅವರು ತಮ್ಮ ಅಭಿಪ್ರಾಯವನ್ನು ಬದಲಿಸಲಿಲ್ಲ. ಅವರ ಯಾಜ್ಞವಲ್ಕ್ಯ ಚರಿತ್ರೆ ಒಂದು ಅಪೂರ್ವವಾದ ಗ್ರಂಥ. ಸಂಪ್ರದಾಯಬದ್ಧ ಕಥೆಗಳಿಗೆ ಸರಿಯಾದ ಅರ್ಥವನ್ನು ಮಾಡಿ, ಯಜುರ್ವೇದವನ್ನು ಹೊಸ ದೃಷ್ಟಿಯಲ್ಲಿ ಕಂಡಿದ್ದಾರೆ. ಹಲವಾರು ಪ್ರಾಚ್ಯ ಶಾಖೆಗಳ ಅಭ್ಯಾಸಮಾಡಿ, ಪ್ರಬಂಧಗಳನ್ನು ಮಂಡಿಸಿ, ಕರ್ನಾಟಕ ಮತ್ತು ಮಹಾರಾಷ್ಟ್ರ-

ಗಳಲ್ಲಿ ಹೆಸರು ಗಳಿಸಿದರು.

೧೯೩೫ರಲ್ಲಿ ಮುಂಬೈಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ 'ಸಂಶೋಧನಾ ಗೋಷ್ಠಿ'ಗೆ ರಾಜಪುರೋಹಿತರು ಅಧ್ಯಕ್ಷರಾಗಿದ್ದರು. ೧೯೩೭ ರಲ್ಲಿ ಬಿ. ಎಂ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಇವರನ್ನು ಬೆಂಗಳೂರಲ್ಲಿ ಸನ್ಮಾನಿಸಲಾಯಿತು. ಕಾಣ್ವ ಶಾಖೆಯ ಶುಕ್ಲಯಜುರ್ವೇದ ಸಂಸ್ಥೆಯವರೂ ರಾಜಪುರೋಹಿತರನ್ನು ಗೌರವಿಸಿದ್ದಾರೆ. ರಾಜಪುರೊಹೀತರು ಬಹುಶ್ರುತರು. ಇತಿಹಾಸ, ಧರ್ಮ, ಸಂಸ್ಕೃತಿಗಳಿಗೆ ಸಂಬಂಧಿಸಿದ ಅವರ ಹಲವಾರು ವಿದ್ವತ್ಪೂರ್ಣ ಲೇಖಗಳು ವಾಗ್ಭೂಷಣ, ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ, ಪ್ರಾಚೀನ ಕರ್ನಾಟಕ (ಕರ್ನಾಟಕ ಇತಿಹಾಸ ಸಂಶೋಧನ ಮಂಡಳದ ಪತ್ರಿಕೆ) ಕರ್ಮವೀರ, ಕೇಸರಿ (ಮರಾಠಿ), ಸಹ್ಯಾದ್ರಿ (ಮರಾಠಿ) ಹಾಗೂ ಕಾವ್ಯಪತ್ರಿಕೆ(ಮರಾಠಿ)ಗಳಲ್ಲಿ ಪ್ರಕಟಗೊಂಡಿವೆ. ಒಂದು ನಿಮಿಷವನ್ನು ಕೂಡ ರಾಜಪುರೋಹಿತರು ವ್ಯರ್ಥ ಕಳೆಯುತ್ತಿರಲಿಲ್ಲ. ಈ ಚಿಂತನದಿಂದಲೇ ಅವರು ತಮ್ಮ ಬಡತನದ ಚಿಂತೆಯನ್ನು ಮರೆಯುತ್ತಿದ್ದರೋ ಏನೋ!

ಕಂದಿಹೋದ ಕೋಲು ಮುಖ, ಮಾಸಿ ಹೋದ ಬಟ್ಟೆಗಳು, ಧೂಳ ತುಂಬಿದ ಬರಿ ಪಾದ, ಬಾಗಿದ ಬೆನ್ನು, ಕೈಯಲ್ಲಿ ಒಂದು ಕೋಲನ್ನೋ ಛತ್ರಿಯನ್ನೋ ಹಿಡಕೊಂಡೇ ಧಾರವಾಡದ ಗಟಾರ ದಂಡೆಯನ್ನು ಹಿಡಿದು ಹೋಗುತ್ತಿದ್ದುದನ್ನು ಕಂಡವರಲ್ಲಿ ನಾನೊಬ್ಬ. ತಲೆಯಲ್ಲಿ ಏನೋ ಗುಂಗು. ಯಾವುದೋ ಶಬ್ದದ ಬಗ್ಗೆ ವಿಚಾರಮಂಥನ. ಸೌಜನ್ಯದ ಮೂರ್ತಿ. ಮಾತಿನಲ್ಲಿ ಮೃದು. ಆದರೆ ಖಂಡಿಸುವಾಗ ಅವರ ಲೆಕ್ಕಣಿಕೆ ಖಡ್ಗವಾಗುತ್ತಿತ್ತು! ವಿಚಾರ ಭಾರದಿಂದ ಅವರ ಬೆನ್ನು ಬಗ್ಗಿತ್ತೇನೋ! ಅವರ ಬಡಿಗೆಯೆಂದರೆ ರಾಜದಂಡವಿದ್ದಂತೆ. ಅದರಲ್ಲಿ ವಿದ್ವತ್ತಿನ ಶಕ್ತಿಯನ್ನು ತುಂಬುತ್ತಿದ್ದರೇನೋ! ಬೆಟಗೇರಿ ಕೃಷ್ಣಶರ್ಮರಲ್ಲಿ ಬರುತ್ತಿದ್ದರು. ಬೆಟಗೇರಿಯವರೂ ತಾವು ಓದಿದ ಅಂಶವನ್ನು ಬಿಟ್ಟುಕೊಡುತ್ತಿರಲಿಲ್ಲ. ಕೊನೆಗೆ ಬೆಟಗೇರಿಯವರೇ ಸೋತು 'ಅಗಲಿ ಇನ್ನೊಮ್ಮೆ ವಿಚಾರಿಸುವೆ' ಎಂದು ವಿವಾದಕ್ಕೆ ಪೂರ್ಣವಿರಾಮವನ್ನು ಕೊಡುತ್ತಿದ್ದರು.

ಸಾಧನೆ, ಸಲಕರಣೆ, ಸಹಾಯ, ಅದಿರಲಿ ಸಹಾನುಭೂತಿ ಇರದಾಗ ಕೂಡ ಸಂಶೋಧನೆಯನ್ನು ಮುಂದುವರೆಸಿಕೊಂಡುಹೋಗಿ ರಾಜಪುರೋಹಿತರು ಮಾಡಿದ ಕಾರ್ಯ ಅಪೂರ್ವವಾದದ್ದು. ಅವರೊಮ್ಮೆ ಸಭೆಗೆ ಹೋದಾಗ ಧಾರವಾಡದ ಟ್ರೇನಿಂಗ್ ಕಾಲೇಜಿನವರು ರಾಜಪುರೋಹಿತರನ್ನು ಟಾಂಗಾದಲ್ಲಿ ಕೂಡಿಸಿ ಮನೆಗೆ ಕಳಿಸಿದರಂತೆ. ಅದಕ್ಕೆ ಇವರಿಗಾದ ತೃಪ್ತಿ ಅಪಾರ. ಅದನ್ನು ದಿನಚರಿಯಲ್ಲಿ ಬರೆದಿಟ್ಟಿದ್ದಾರೆ. ಇವರು ಸಾಯುವ ಮುನ್ನ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಮೊಹರೆ ಹಣಮಂತರಾಯರು ಒಂದು ನೂರು ರೂಪಾಯಿ ಕಳಿಸಿ 'ಈ ಹಣವನ್ನು ಮರಳಿಸುವದು ಬೇಡ. ಕರ್ನಾಟಕ ಇತಿಹಾಸದ ಮೇಲೆ ಲೇಖ ಬರೆದು ಕಳಿಸಿದರೆ ಸಾಕು' ಎಂದಿದ್ದರು, ಅದರಿಂದ ಇವರಿಗೆ ತುಂಬಾ ಸಂತೋಷ. ಒಂದು ರೂಪಾಯಿ ಎಂಟಾಣೆ ಸಾಲಕ್ಕಾಗಿ ಪರದಾಡಿದ ವ್ಯಕ್ತಿ! ಕೊಟ್ಟ ಸಾಲವನ್ನು ಮರಳಿ ಕೊಡಬೇಕೆಂದು ವಿಶ್ವಪ್ರಯತ್ನ ಮಾಡಿದ ಪ್ರಾಮಾಣಿಕ ಮನುಷ್ಯ!! ಸಾಯುವ ಮುಂದೆ ಸರಕಾರದ ಸಹಾಯ ಬರುವುದೆಂದು ಕಾದು ಕಾದು ಹಣ್ಣಾದರು. ಮುಂಬೈ ಸರಕಾರದ ಸಹಾಯಕ್ಕಾಗಿ, ಶ್ರೀ ರಾ. ಶ್ರೀ. ಹುಕ್ಕೇರಿಕರರು ಪ್ರಯತ್ನಿಸಿದ್ದರಿಂದ ಅದು ಖಂಡಿತ ಬರುವುದೆಂದು ಆಶೆಯನ್ನಿಟ್ಟುಕೊಂಡು ಹೆಂಡತಿ-ಮಕ್ಕಳಿಗೆ ಹೇಳುತ್ತಿದ್ದರು. ಸರಕಾರದ ವಿಲಂಬೀಕರಣದಿಂದ ಅವರು ಸತ್ತ ಮೂರನೇ ದಿವಸ ಸರಕಾರದ ಪತ್ರ ಬಂದಿತು. ಅದು ಹಣ ಮಂಜೂರಾದದ್ದಲ್ಲ, ಮಂಜೂರಾಗಲು ಬೇಕಾಗಿದ್ದ ಕೆಲ ವಿವರಗಳನ್ನು ಕೇಳಿದ ಪತ್ರ. ರಾಜಪುರೋಹಿತರು ನಿಜಕ್ಕೂ ದುರ್ದೈವಿ. ಅವರು ತಮ್ಮನ್ನೇ ತಾವು 'ಕರ್ತವ್ಯಾನಂದರು' ಎಂದು ಕರೆದುಕೊಳ್ಳುತ್ತಿದ್ದರು. ಅವರು ಮಾಡಬೇಕೆಂದಿದ್ದ ಕಾರ್ಯ ವಿಪುಲವಿತ್ತು. ಆದರೆ ಅವರು ೨೪-೮-೧೯೫೩ ರಂದು ಆ ಮನೆಗೆ ಹೊರಟು ಹೋದರು!

– ೧೦೩ –

ಬಳಿಗಳ ಬಳ್ಳಿ

ಬಳುವಳಿಯಾಗಿ ಬಂದ ಒಡವೆ ಎನ್ನುವುದರ ಅರ್ಥವೇನೆಂದು ನಮಗೆ ಗೊತ್ತು—ಹಿಂದಿನವರಿಂದ ಮುಂದಿನವರಿಗೆ ಪಾರಂಪರ್ಯದಿಂದ ಬಂದ ಸೊತ್ತು ಬಳುವಳಿ. ಈ ಶಬ್ದದ ಪ್ರಾಚೀನ ರೂಪ ಬೞಿವೞಿ. ಬೞಿ ಎಂದರೆ ಮೂಲತಃ ದಾರಿ, ಮೂಲ; ಅರ್ಥವಿಸ್ತಾರದಿಂದ ಹಿಂದಿನವರ ದಾರಿಯಿಂದ ಮುಂದಿನವರ ಬರವು; ಆದ್ದರಿಂದ ವಂಶ. ಬೞಿಕ (ಆಮೇಲೆ) ಎಂಬ ಪ್ರಚಲಿತ ಶಬ್ದ ಕೂಡ ಬೞಿಯದೇ ವಿಕಲ್ಪ. ಒಂದರ ಹಿಂದೆ ಇನ್ನೊಂದು ಬರುವಂಥ ಕಾಲದ ಘಟನೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲೆಲ್ಲ ಇರುವ ಈ ಪದದ ತಮಿಳು ರೂಪವಾದ ವೞಿಗೆ ಅನೇಕ ಅರ್ಥಗಳಿವೆ. ವರ, ದಾನ ಇತ್ಯಾದಿಗಳೂ ಹೆಜ್ಜೆ, ನಡೆ, ಸಂಪ್ರದಾಯ ಇತ್ಯಾದಿಗಳೂ ತಮಿಳಲ್ಲಿ ಕಾಣಿಸುತ್ತವೆ. ಹೀಗೆ ಬೞಿವೞಿಯೆಂದರೆ ಬೞಿ(ವಂಶ)ಯ ಮೂಲಕ ಬಂದ ಬೞಿ (ದಾಯ, ದಾನ). ಕ್ರಮಾಗತವಾಗಿ ಬಂದ ಧನ. ತವರು ಮನೆಯವರು ಮದುಮಗಳಿಗೆ ಕೊಟ್ಟು ಕಳಿಸುವ ವಸ್ತುಗಳೂ ಬೞಿವೞಿ.

ಉಂಬಳಿ ಎಂಬ ಇನ್ನೊಂದು ಶಬ್ದವಿದೆ. ದೇವಸ್ಥಾನದ ಸೇವೆಗಾಗಿ ಬಿಟ್ಟ ಉಂಬಳಿಗಳ ಸುದ್ದಿ ಕಾಣಿಸುತ್ತದೆ. ಹೆಚ್ಚಾಗಿ ಇಂಥವು ಗದ್ದೆ ಹೊಲ ಮೊದಲಾದ ರೂಪದ ಶಾಶ್ವತವಾಗಿ ಬಿಟ್ಟ ಅರ್ಥಮೂಲವಾಗಿರುತ್ತಿದ್ದವು. ಇದು ಹಳೇ ರೂಪದಲ್ಲಿ **ಉಣ್** + ಬೞಿ. ಉಣ್ಣಲು ಬಿಟ್ಟ ಬೞಿ (ದಾನ, ವೃತ್ತಿ)ವಂಶ ಪಾರಂಪರ್ಯವಾಗಿ ಬಂದ ಸೇವಾವೃತ್ತಿಗೆ ವಂಶಪಾರಂಪರ್ಯವಾಗಿ ಭೋಗಿಸಲು ಬಿಟ್ಟದ್ದು.

ಶಾಸ್ತ್ರಿಯವರು ಬಳುವಳಿಯ ಮೂಲವನ್ನು ತಮಿಳು ವರುಂಬಡಿ (ಬರುವ ಪಡಿ, ಆದಾಯ) ಎಂದು ಸೂಚಿಸಿದ್ದು ಪ್ರಶ್ನಾರ್ಹವಾಗಿದೆ. ಹಾಗೆಯೆ ಉಂಬಳಿಯನ್ನು ಅವರು ಉಣ್ + ಪಡಿಯೆಂದೇ ವಿಂಗಡಿಸಿದ್ದಾರೆ. ಬರುವ ಎನ್ನುವುದನ್ನು ಒಪ್ಪುವುದಕ್ಕೆ ಬೞಿ ವಿಕಾರ ಅಡ್ಡಬರುತ್ತದೆ. ಪಡಿಯೆಂದರೆ ಅಳೆದು ಕೊಡುವ ದೈನಿಕ ಭತ್ಯ (ದಾನರೂಪದ್ದು). ಪರಂಪರಾಗತ ಅನುಭೋಗದ ಕಲ್ಪನೆ ಪಡಿಯಲ್ಲಿ ಇಲ್ಲ. ಪಡಿ ಎಂದರೆ ಧಾನ್ಯದ ಒಂದು ಅಳತೆ. ತಮಿಳು, ಕನ್ನಡ, ತುಳು, ತೆಲುಗು, ತೊದವ ಮೊದಲಾದ ಭಾಷೆಗಳಲ್ಲೆಲ್ಲ ಈ ಶಬ್ದ ಈ ಅರ್ಥದಲ್ಲಿ. ಪಡಿಗೆ ತುಳುವಿನಲ್ಲಿ ದೈನಂದಿನ ಧಾನ್ಯ ಭತ್ಯವೆಂದಲ್ಲದೆ ಭಿಕ್ಷೆಯೆಂದೂ ಅರ್ಥವಿದೆ.

ಸಂಬಳ ಈಗ ನಿಶ್ಚಿತ ಅವಧಿಗಾಗಿ (ತಿಂಗಳು, ವಾರ) ಕೆಲಸಕ್ಕೆ ಕೊಡುವ ಪ್ರತಿಫಲವೆಂಬ ಗಟ್ಟಿ ಅರ್ಥ ಪಡೆದಿದೆ. ಇದು ಸಂಸ್ಕೃತದಲ್ಲಿ ಇದನ್ನು ಬಹುತರವಾಗಿ ಶಂಬಲ ಎಂದೂ ಒಮ್ಮೊಮ್ಮೆ ಸಂಬಲವೆಂದೂ ಬರೆಯುವುದುಂಟು. ಇದರ ಅರ್ಥ ಪ್ರಯಾಣ ಕಾಲದಲ್ಲಿ ಉಪಯೋಗಕ್ಕೆ ಬೇಕಾದ ಸರಕುಗಳು, ಸಾಮಗ್ರಿಗಳು, ಸರಂಜಾಮು, ಬುತ್ತಿ. ಈ ಶಬ್ದದ ಮೂಲ ಕೋಶಗಳಲ್ಲಿ ವಿದಿತವಾಗಿಲ್ಲ. ಭೃ (ಧರಿಸು, ಹೊರು, ಹೊರೆ ಸಾಕು)ವಿನಿಂದ ಹುಟ್ಟಿದ ಭರ, ಭರಣ

(ಉದರಂ-ಭರಣ ವಿಚಾರಿಸಿ.) ಕ್ಕೆ ಸಂ ಉಪಸರ್ಗ ತಗಲಿಸಿ, 'ರ' ವನ್ನು 'ಲ' ಕ್ಕೆ ತಿರುಗಿಸಿದರೆ ಸಂಭಲ ಸಂಭಾರದ ಅರ್ಥಕ್ಕೆ ಸಮೀಪವಾಗುತ್ತದೆ. ಸಂಭಾಳಿಸು ಸಂಬಾಳಿಸು ಅಂದರೆ ನಿರ್ವಹಿಸು; ಹಿಂದಿ ಸಮ್ಭಾಲನಾ ಹಾಗೆಯೇ ಸಂಬಳ ಕೂಡ ನಿರ್ವಾಹದ ವೆಚ್ಚ ತಾನೆ? ಪ್ರಯಾಣ ಕಾಲದ ಸಾಮಗ್ರಿ ಎಂಬುದರಿಂದ ಅವಧಿ ಬದ್ಧವಾಗಿ ಕೊಡುವ ಸೇವಾ ಪ್ರತಿಫಲ ಎಂಬರ್ಥಕ್ಕೆ ಸಂಬಲ, ಶಂಬ್ಯ ತಿರುಗಿತು. ಇಂಥ ಅರ್ಥಾಂತರ ಅಸಾಮಾನ್ಯವಲ್ಲ. ಇಂಗ್ಲೀಷಿನ Salary (= ಸಂಬಳ) ತೆಗೆದುಕೊಳ್ಳಿ. ಇದು ಲ್ಯಾಟಿನ್ Sal ನಿಂದ ಹುಟ್ಟಿದ ಶಬ್ದ. ಅದರ ಅರ್ಥ ಉಪ್ಪು. (ಇಂಗ್ಲೀಷಿನಲ್ಲಿ Salt) Salarium ಅಂದರೆ ಉಪ್ಪಿನ ಖರ್ಚು. ಉಪ್ಪಿನ ಖರ್ಚಿಗೆ ಕೊಡುವ ಹಣವೇ ಸ್ಯಾಲರಿ. ಆಗ ಉಪ್ಪು ಬಹಳ ಬೆಲೆ ಬಾಳುವ ಪದಾರ್ಥ. ದೂರದಿಂದ ಆಮದಾಗತಕ್ಕದ್ದು. ನಗದು ಹಣ ಕೊಟ್ಟೇ ಕೊಳ್ಳಬೇಕಾದ್ದು. ಹಾಗೆ ಉಪ್ಪಿನ ಖರ್ಚೇ ಸಂಬಳ ಎನಿಸಿತು.

ಸಂಬಳದ ಕಥೆ ಹೀಗಾದರೆ "ಗಿಂಬಳ" ಎಂದು ಹೇಳುವ ಲಂಚದ ಕಥೆ ಬೇರೆ. ಈ ಶಬ್ದ ನಿಖರವಾಗಿ ಹೇಗೆ ಹುಟ್ಟಿತೆಂದು ಗೊತ್ತಿಲ್ಲ. ಹಿಂದಿಯಲ್ಲಿಯೂ ಈ ಪದ (ಲಾಂಚ್) ಇದೆ. ಸಂಸ್ಕೃತದಲ್ಲಿ ಲಂಚಾ ಎಂದಿದೆ. ಆದರೆ ಸಂಸ್ಕೃತದಲ್ಲಿ ಇದು ತಡವಾಗಿ (೧೬ನೇ ಶತಮಾನ?) ಪ್ರವೇಶಿಸಿದಂತೆ ಕಾಣುತ್ತದೆ. ಅದಕ್ಕಿಂತ ಹಿಂದೆಯೇ ಕನ್ನಡದಲ್ಲಿ ಇತ್ತೆಂದು ಮಂಗರಸನ "ಅಭಿನವಾಭಿಧಾನ"ದಿಂದ ತಿಳಿಯುತ್ತದೆ. ಲಂಚಕ್ಕೆ ಪ್ರಾಚೀನ ಸಂಸ್ಕೃತ ಪದ ಉತ್ಕೋಚ. ಅದು ಮನು, ಯಾಜ್ಞವಲ್ಕ್ಯರ ಧರ್ಮಶಾಸ್ತ್ರಗಳಲ್ಲೇ ಇದೆ. ಚಾಣಕ್ಯನಂತೂ ಅದರ ಬಗ್ಗೆ ಸಾಕಷ್ಟು ಹೇಳಿದ್ದಾನೆ. ಈ ಶಬ್ದದ ಅರ್ಥ ಬಿಚ್ಚುವುದು ಎಂದು. ಸರಕಾರಿ ಅಧಿಕಾರಿಯು ಬಿಗುಮಾನವನ್ನು ಬಿಚ್ಚಲು ಇದು ಸಲ್ಲಬೇಕೆಂಬರ್ಥವೋ ಏನೋ.

ಇಂಗ್ಲೀಷಿನಲ್ಲಿ ಲಂಚಕ್ಕೆ Bribe (ಬ್ರೈಬ್) ಎನ್ನುತ್ತಾರೆ. ಆ ಶಬ್ದ ಮೂಲತಃ ಎಲ್ಲಿ-ದ್ದೆಂದು ಗೊತ್ತಿಲ್ಲ. ಆದರೆ ಹಳೇ ಫ್ರೆಂಚಿನಲ್ಲಿ ಆ ಶಬ್ದಕ್ಕೆ ರೊಟ್ಟಿ ತುಣಕು ಎಂದರ್ಥವಿತ್ತು. "ರೊಟ್ಟೀ ಚೂರು ಒಗೆದು ಚೋರನ್ನಾದರೂ ಒಳಗು ಮಾಡಿಕೊಳ್ಳುವುದು" ಲಂಚದ ಬಗ್ಗೆ ಆ ಜನರ ತುಚ್ಛೀಕಾರವನ್ನು ತೋರಿಸುತ್ತದೆ. ವಿಚಿತ್ರವೆಂದರೆ ಸಂಸ್ಕೃತದಲ್ಲಿ ಲಂಚಕ್ಕೆ ಆಮಿಷ ಎಂಬ ಇನ್ನೊಂದು ಪದವಿದೆ. ಆಮಿಷ ಎಂದರೆ ಮಾಂಸ, ಮಾಂಸದ ಚೂರು, ಮೀನು ಹಿಡಿ-ಯಲು ಗಾಳದ ಕೊಕ್ಕಿಗೆ ತಗಲಿಸುವ ಮಾಂಸದ ತುಣಕು. ರೊಟ್ಟಿಯ ಚೂರಿಗೂ ಆಮಿಷಕ್ಕೂ ತಾತ್ಪರ್ಯದಲ್ಲಿ ಸಾಮ್ಯವಿದೆಯಲ್ಲವೆ?

ವ್ಯಾಪಾರದಲ್ಲಿ, ಹಣಕಾಸಿನ ವ್ಯವಹಾರದಲ್ಲಿ ಈಗ ಕಮಿಶನ್ ಎಂದು ಪ್ರಸಿದ್ಧವಾದ ಅಂಶಕ್ಕೆ ನಮ್ಮಲ್ಲಿ ವಟ್ಟ ಎಂಬ ಪದ ಬಳಕೆಯಲ್ಲಿತ್ತು. ನೂರಕ್ಕೆ ಇಂತಿಷ್ಟು ವಟ್ಟ ಕೊಡಬೇಕು. ಇತ್ಯಾದಿ ಮಂಡಿ ವರ್ತಕರು ವಟ್ಟ ತಗೆದುಕೊಂಡು ರೈತರ ಉತ್ಪಾದನೆಯನ್ನು ಮಾರಿಸುತ್ತಾರೆ. ಈ ಶಬ್ದ ತಮಿಳಿನಿಂದ ಬಂತೆಂದು ಹೇಳಿ ಮಾಸ್ತಿಯವರು ಕೊಡುವ ವಿವರಣೆ ಸ್ವಾರಸ್ಯವಾಗಿದೆ. **ವಟ್ಟ** ಎಂದರೆ ಸಂಸ್ಕೃತದ ವೃತ್ತದ ತದ್ಭವ. ವರ್ತಕರು ತಮ್ಮ ಅಂಶವನ್ನು ನಾಣ್ಯದ ಸುತ್ತಲೂ ವೃತ್ತಾಕಾರವಾಗಿ ಕತ್ತರಿಸಿ ತೆಗೆದು ಕೊಳ್ಳುತ್ತಿದ್ದರೆಂದು ಅದಕ್ಕೆ ವಟ್ಟವೆಂಬ ಹೆಸರಂತೆ. ಇದು ಎಷ್ಟು ವಾಸ್ತವವೋ ಗೊತ್ತಿಲ್ಲ. ಬಹುಶಃ ವರ್ತಕನ ಅಂಶವಾದ್ದರಿಂದ ಅದು ವರ್ತ, ವಟ್ಟ ಆಗಿರಬಹುದು. ವರ್ತನ ಶಬ್ದಕ್ಕೆ ಇತರ ಅರ್ಥಗಳೊಡನೆ ಜೀವನೋಪಾಯ, ಆದಾಯ ಸಂಬಳ ಇತ್ಯಾದಿ ಅರ್ಥಗಳು "ಕಥಾಸರಿತ್ಸಾಗರ"ದಂಥ ಪ್ರಾಚೀನ ಗ್ರಂಥಗಳಲ್ಲೇ ಇವೆ. - **ಪಾವೆಂ.**

ಬೃಹನ್ನಕ್ಷತ್ರದ ಮಹಾನಿರ್ಯಾಣ- ಸೂಪರ್‌ನೋವಾ

ಜಿ. ಟಿ. ನಾರಾಯಣರಾವ್

ಚಿತ್ರಗಳು: ಕೆ. ಮುರಲೀಧರರಾವ್

ಕಬ್ಬಿಣ ನಕ್ಷತ್ರ

ಸೌರರಾಶಿಯ ಹಲವು ಮಡಿ ರಾಶಿ ಇರುವ ನಕ್ಷತ್ರಗಳಿಗೆ ಬೃಹನ್ನನಕ್ಷತ್ರಗಳೆಂದು ಹೆಸರು. ೮ರಿಂದ ೨೦ ಮಡಿ ವರೆಗೂ ರಾಶಿ ಇರುವ ಬಿಡಿ ತಾರೆಗಳನ್ನು ಗುರುತಿಸಲಾಗಿದೆ. ಬೃಹನ್ನಕ್ಷತ್ರವೊಂದರ ಬದುಕರ ಇತರ ಸಾಧಾರಣ ನಕ್ಷತ್ರಗಳ ತೆರದಲ್ಲಿಯೇ ಆರಂಭವಾಗುತ್ತದೆ: ಸ್ವಂತ ಗುರುತ್ವ ಇದನ್ನು ಒಳಜಗ್ಗುತ್ತದೆ; ಆಗ ಕೇಂದ್ರದಲ್ಲಿ ಅಪಾರ ಸಂಮರ್ದ ಮತ್ತು ಉಷ್ಣತೆ ಉದ್ಭವಿಸಿ ಶಾಖ ಬೈಜಿಕ ಕ್ರಿಯೆಗಳು (thermonuclear reactions) ಕುದುರುತ್ತವೆ. ಇವುಗಳಿಗೆ ಇಂಧನ ಹೈಡ್ರೊಜನ್. ಇಲ್ಲಿಯ ದಹನಫಲ ವಿಕಿರಣ (radiation), ಶೇಷ ಹೀಲಿಯುಮ್. ಇಲ್ಲಿ ಬಳಕೆ ಆಗುವ ಇಂಧನ ಹೈಡ್ರೊಜನ್ ಆಗಿರುವುದರಿಂದ ಈ ನಕ್ಷತ್ರಕ್ಕೆ ಹೈಡ್ರೊಜನ್ ನಕ್ಷತ್ರವೆಂದು ಹೆಸರು.

ಗುರುತ್ವ ಎಂಬ ಗಾಣ ಆಯಾ ನಕ್ಷತ್ರದಲ್ಲಿ ಒದಗುವ ವಸ್ತುವನ್ನು ಹಿಂಡಿ ವಿಕಿರಣವನ್ನು ಬಸಿಯುತ್ತದೆ ಮತ್ತು ಬೇರೆ ಒಂದು ವಸ್ತುವನ್ನು ಚರಟವಾಗಿ ಎಸೆಯುತ್ತದೆ. ಇದು ನಕ್ಷತ್ರ ಜೀವನದ ಸೂತ್ರ. ಮೇಲಿನ ಉದಾಹರಣೆಯಲ್ಲಿ ಗುರುತ್ವ ಗಾಣಕ್ಕೆ ಒದಗಿದ ಗ್ರಾಸ ಹೈಡ್ರೊಜನ್, ಅದು ಉಚ್ಚಾಟಿಸಿದ ಚರಟ ಹೀಲಿಯುಮ್.

ಬೃಹನ್ನಕ್ಷತ್ರದ ಬದುಕಿನ ಎರಡನೆಯ ಹಂತ ಹೀಲಿಯುಮ್ ನಕ್ಷತ್ರ. ಮುಂದಿನವು ಕ್ರಮಾಗತವಾಗಿ ಕಾರ್ಬನ್, ನೀಯಾನ್, ಆಕ್ಸಿಜನ್, ಸಿಲಿಕಾನ್ ಮತ್ತು ಕಬ್ಬಿಣ. ಅಂದರೆ ಸಿಲಿಕಾನ್ ನಕ್ಷತ್ರದ ಭಸ್ಮದಿಂದ ಕಬ್ಬಿಣ ನಕ್ಷತ್ರ ಮೈದಳೆಯುತ್ತದೆ — ತಮ್ಮ ಬೂದಿಯಿಂದ ಮರುವುಟ್ಟು ಪಡೆದೆದ್ದ ಸಗರಪುತ್ರರಂತೆ.

ಹಲವು ಕೋಟಿ ವರ್ಷಗಳಲ್ಲಿ ಸಂಭವಿಸುವ ಪರಿವರ್ತನೆಗಳಿವು.

ಕಬ್ಬಿಣ ನಕ್ಷತ್ರ ಹಲವಾರು ಕವಚಗಳಿಂದ ಆವೃತವಾಗಿದೆ – ನೀರುಳ್ಳಿಯಂತೆ: ತಿರುಳಿನಲ್ಲಿ ಕಬ್ಬಿಣ, ಮುಂದೆ ಕ್ರಮಾಗತವಾಗಿ ಸಿಲಿಕಾನ್ ಮತ್ತು ಸಲ್ಫರ್ ಕವಚ, ಆಕ್ಸಿಜನ್ ಮತ್ತು ನೀಯಾನ್ ಕವಚ, ಕಾರ್ಬನ್ ಮತ್ತು ಆಕ್ಸಿಜನ್ ಕವಚ. ಹೀಲಿಯಮ್ ಕವಚ, ಮತ್ತು ತೀರ ಹೊರಗಿನಿಂದ ಹೈಡ್ರೊಜನ್ ಕವಚ.

ಗುರುತ್ವ ತಿರುಡಿ

ವಿಶ್ವದ ಸಾರ್ವಕಾಲಿಕ ಸಾರ್ವಭೌಮ ಬಲವೆಂದರೆ ಗುರುತ್ವ. ಮಹಾ ಬಾಜಣೆಯಿಂದ (big bang) ವಿಶ್ವ ಆರಂಭವಾಯಿತು. ಇದರ

ಪ್ರೇರಕ ಬಲ ಗುರುತ್ವ. ನೀಹಾರಿಕೆಗಳಲ್ಲಿ (nebulae) ಆದಿ ನಕ್ಷತ್ರಗಳು ರೂಪುಗೊಂಡವು. ಇಲ್ಲಿಯ ಕ್ರಿಯಾಪ್ರೇರಕ ಗುರುತ್ವ. ನಕ್ಷತ್ರಗಳ ಜೀವಾಳ ಶಾಖಬೈಜಿಕ ಕ್ರಿಯೆಗಳು. ಇಲ್ಲಿ ಗುರುತ್ವದ್ದೇ ಪೌರೋಹಿತ್ಯ. ಇನ್ನೂ ಮುಂದೆ ಸಾಗಿದರೆ ನಕ್ಷತ್ರಗಳ ಅಂತ್ಯವನ್ನೂ ವಿಶ್ವದ ಮರಣವನ್ನೂ ನಿರ್ಣಯಿಸುವ ಕಾಲಪುರುಷನೇ ಗುರುತ್ವ ಎಂದು ತಿಳಿಯುತ್ತದೆ.


ಇದೊಂದು ಸಂಕೋಚನಶೀಲ ಬಲ. ಕಾಯದ ಗಾತ್ರವನ್ನು ಕುಗ್ಗಿಸುವುದು ಅಥವಾ ಹಿಂಡುವುದು ಇದರ ಧರ್ಮ– ತಿರುಡಿಯಂತೆ (vise). ವಿಕಿರಣ ಇದರ ಎದುರಾಳಿ. ಇದೊಂದು ವ್ಯಾಕೋಚನಶೀಲ ಬಲ. ಕಾಯದ ಗಾತ್ರವನ್ನು ಹಿಗ್ಗಿಸುವುದು ಅಥವಾ ಉಬ್ಬಿಸುವುದು ಇದರ ಧರ್ಮ— ವಾಯುರೇಚಕದಂತೆ (air pump.)

ಕಬ್ಬಿಣ ನಕ್ಷತ್ರದಲ್ಲಿಯೂ ಗುರುತ್ವ ತಿರುಡಿ ಕ್ರಿಯಾಶೀಲವಾಗಿರುತ್ತದೆ. ಪರಿಣಾಮವಾಗಿ ಇದು ಕುಗ್ಗುತ್ತದೆ. ಆಗ ಗರ್ಭದಲ್ಲಿ ಸಂಮರ್ದ ಮತ್ತು ಉಷ್ಣತೆ ಅಗಾಧವಾಗಿ ಏರುತ್ತವೆ. ಆದರೆ ತಿರುಳಿನಲ್ಲಿರುವ ಕಬ್ಬಿಣ, ಅದರ ರಚನೆಯ ಕಾರಣವಾಗಿ, ಶಾಖಬೈಜಿಕ ಕ್ರಿಯೆಗಳಿಗೆ ಇಂಧನವಾಗುವುದಿಲ್ಲ. ಹೀಗಾಗಿ ಹೊರ ಕವಚಗಳಲ್ಲಿ ಇವು ನಡೆದು ಶೇಷವಸ್ತು ಕಬ್ಬಿಣ ಅಧಿಕಾಧಿಕ ಪ್ರಮಾಣದಲ್ಲಿ ಕೇಂದ್ರಕ್ಕೆ ಜಮೆಯಾಗುತ್ತದೆ.

ಇತ್ತ ಗುರುತ್ವ ತಿರುಡಿಯ ಅಮರಿಕೆ ಕ್ರಿಯೆ ಅವ್ಯಾಹತವಾಗಿ ಮುಂದುವರಿಯುತ್ತದೆ. ಕಬ್ಬಿಣ ತಿರುಳು ಅದನ್ನು ಅಪ್ರತಿಮ ದೃಢತೆಯಿಂದ ವಿರೋಧಿಸುತ್ತದೆ. ಇಲ್ಲಿ ಕಟ್ಟುಗಳುಂಟೇ? ಕಟ್ಟಲೆಯುಂಟೇ? ಕೊನೆಯುಂಟೇ ?

ಸೂಪರ್‌ನೋವಾ

ಉಂಟು. ಆ ಪ್ರಳಯ ಮುಹೂರ್ತ,




ಚಿತ್ರ ೧

ಸೂರ್ಯನ ೨೫ ಮಡಿ ರಾಶಿ ಇರುವ ಕಬ್ಬಿಣ ನಕ್ಷತ್ರದ ನೀರುಳ್ಳಿ ಪದರ ರಚನೆ. ತಿರುಳಿನಲ್ಲಿ ಕಬ್ಬಿಣವಿದೆ— ಸೂರ್ಯನ ೧.೬ ಮಡಿ ರಾಶಿ. ಹೊರ ಪದರದಲ್ಲಿ ಹೈಡ್ರೊಜನ್ ಇದೆ — ಸೂರ್ಯನ ೧೫.೪ ಮಡಿ ರಾಶಿ.

ಸರ್ವನಾಶ ಸನ್ನಿವೇಶ, ಆತ್ಮಹತ್ಯಾಪ್ರಕರಣ ಎದುರಾಗಿಯೇ ಆಗುವುದು. ಆಗ—

ತಿರುಳು ನುಚ್ಚುನುರಿ ಆಗುತ್ತದೆ. ಗರಿಷ್ಠ ಬಾಹ್ಯ ಸಂಮರ್ದವನ್ನು ಭರಿಸುವ ಸಲುವಾಗಿ ಇದು ಕನಿಷ್ಠ ಗಾತ್ರಕ್ಕೆ ಸಂಕೋಚಿಸುತ್ತದೆ. ಮುಂದೆ ಸಂಧಿಸ್ಥ ಮಿತಿ ಭೇದಿಸಲ್ಪಡುತ್ತದೆ — ಗಡಿ ಉಲ್ಲಂಘನೆ. ಆ ಕ್ಷಣದಲ್ಲಿ ಕಬ್ಬಿಣ ತಿರುಳು, ಅಮರಿಸಿ ಹಿಡಿದ ರಬ್ಬರ್ ಚಂಡನ್ನು ಹಠಾತ್ತನೆ ಕೈ ಬಿಟ್ಟಾಗ ಅದು ಉಬ್ಬಿ ನೆಗೆಯುವಂತೆ, ಸುತ್ತಲೂ ಮೈ ಒದರಿ ಹೊರ ಝಾಡಿಸುತ್ತದೆ. ಇದೊಂದು ವಿಪರ್ಯಯ ಕ್ರಿಯೆ (reverse reaction) — ಘಾತಕ್ಕೆ ಪ್ರತಿಘಾತ. ಆಗ ತೀವ್ರ ಧಕ್ಕಾ ತರಂಗಗಳು (shock waves) ಉದ್ಭವಿಸುತ್ತವೆ. ವಾಸ್ತವವಾಗಿ ಈ ಎಲ್ಲ ಘಟನೆಗಳು — ತಿರುಳಿನ ಕುಸಿತದಿಂದ ಹಿಡಿದು ಧಕ್ಕಾ ತರಂಗಗಳ ಘಾತದ



ಚಿತ್ರ ೨

ಸೂಪರ್‌ನೋವಾ ಪೂರ್ವಹಂತದಿಂದ ಕೃಷ್ಣವಿವರದ ವರೆಗೆ ಬೃಹನ್ನಕ್ಷತ್ರದ ವಿಕಾಸ ಚಿತ್ರ.

೧ ಅಂತಃಸ್ಫೋಟದ ಆರಂಭ. C ತಿರುಳು.

೨ ಅಂತಃಸ್ಫೋಟದ ಅತಿ ತೀವ್ರಘಟ್ಟ

೩ ಧಕ್ಕಾ ತರಂಗಗಳ ಉದ್ಭವ — ಹೊರಕ್ಕೆ ಚಾಚಿರುವ ವಂಕಿ ಬಾಣಗಳು ಈ ತರಂಗಗಳನ್ನು ಸೂಚಿಸುತ್ತವೆ.

೪ ಸೂಪರ್‌ನೋವಾಸ್ಫೋಟನೆ. ತಿರುಳು C ನ್ಯೂಟ್ರಾನ್ ನಕ್ಷತ್ರವಾಗಿ ಉಳಿಯುತ್ತದೆ.

೫ ಗುರುತ್ವಾತ್ಮಕ ಕುಸಿತಕ್ಕೆ ಬಲಿಯಾಗಿರುವ ನ್ಯೂಟ್ರಾನ್ ನಕ್ಷತ್ರ. ಡೊಂಕು ಗೆರೆಗಳು ವಿಕಿರಣದ ಚಲನದದಿಕೆಗಳನ್ನು ಸೂಚಿಸುತ್ತವೆ.

೬ ಕೃಷ್ಣವಿವರ C. ಇದರಿಂದ ಹೊರಟ ವಿಕಿರಣ H ವೃತ್ತದಿಂದ ಹೊರಕ್ಕೆ ಸಾಗಲಾರದೆ ಹಿಂದೆ ಬರುತ್ತದೆ. H ಪರಿಧಿಗೆ ಕೃಷ್ಣವಿವರದ ಶ್ವಾರ್ಟ್ಸ್‌ಚೈಲ್ಡ್ ಪ್ರತಿಬಂಧಕ ಎಂದು ಹೆಸರು

ವರೆಗಿನವು — ಕೇವಲ ಮಿಲಿಸೆಕೆಂಡುಗಳಲ್ಲಿ (೧ ಸೆಕೆಂಡ್ = ೧೦೦೦ ಮಿಲಿಸೆಕೆಂಡುಗಳು) ಜರಗಿ ಹೋಗುತ್ತವೆ.

ಧಕ್ಕಾ ತರಂಗಗಳು ಸೆಕೆಂಡಿಗೆ ೩೦,೦೦೦ — ೫೦,೦೦೦ ಕಿಲೊಮೀಟರ್ ವೇಗದಲ್ಲಿ ಹೊರಟು ನಕ್ಷತ್ರ ಪದರಗಳನ್ನು ಭೇದಿಸುತ್ತ ಹೊರಧಾವಿಸುತ್ತವೆ — ವಡವಾನಲದ ಸರ್ವಾಪ್ಪೋಶಕ ಮತ್ತು ಸರ್ವನಾಶಕ ವಿಲಯ ತಾಂಡವದಂತೆ. ತರುವಾಯದ ಕೆಲವೇ ದಿನಗಳಲ್ಲಿ ನಕ್ಷತ್ರ ಮಹಾಸ್ಫೋಟನೆಗೆ ಬಲಿಯಾಗಿರುತ್ತದೆ.

ಆಸ್ಫೋಟನೆಯ ಫಲವಾಗಿ ಇಡೀ ನಕ್ಷತ್ರವಲ್ಲದಿದ್ದರೆ ಅದರ ಅಧಿಕಾಂಶ ಬಾಹ್ಯ ಕವಚಗಳು ಉತ್ಪಾಟನೆಗೊಂಡಿರುತ್ತವೆ. ಕಬ್ಬಿಣ ನಕ್ಷತ್ರದ ಈ ಹಠಾತ್ ಹರಾಕಿರಿ ನಕ್ಷತ್ರಭಿತ್ತಿಯ ಪ್ರಶಾಂತ ಏಕತಾನತೆಯಲ್ಲಿ, ವಿಸ್ತಾರ ಶೂನ್ಯದಲ್ಲಿ ಹಾಗೂ ಗಭೀರ ಪಾರದರ್ಶಕತೆಯಲ್ಲಿ ಪೂರ್ವಸೂಚನೆ ಇಲ್ಲದೆ ಬೆಳಕಿನ (ವ್ಯಾಪಕವಾಗಿ ವಿಕಿರಣದ) ಮಹಾಪೂರವನ್ನೇ ಹರಿಸುತ್ತದೆ — ಕೋಟಿ ಭಾನುಗಳು ಏಕಕ್ಷಣದಲ್ಲಿ ಒಂದೆಡೆ ಪ್ರಜ್ವಲಿಸಿದಂತೆ; 'ಅರಿಯದು ಅಳವು ತಿಳಿಯದು ಮನವು ಕಾಣ,ದೋ ಬಣ್ಣ ... ಇದು — ಬರಿ ಬೆಳಗಲ್ಲೋ ಅಣ್ಣಾ.' ಅತಿ ದೂರದ ನಮಗೆ ಕಾಣುವ ದೃಶ್ಯವಿದು.

ಇದೇ ಸೂಪರ್‌ನೋವಾ — ಬೈಜಿಕ ಇಂಧನ

- ಸೂಪರ್‌ನೋವಾಗಳು ವಿರಳ ದೃಶ್ಯಗಳು. ಅಂದ ಮಾತ್ರಕ್ಕೆ ಅವು ವಿರಳ ಘಟನೆಗಳಾಗಬೇಕಾಗಿಲ್ಲ.
- ದೃಗ್ಗೋಚರ ಸೂಪರ್‌ನೋವಾಗಳು ವಿರಳಾತಿವಿರಳ ದೃಶ್ಯಗಳು — ಪ್ರಾಯಶಃ ಶತಮಾನಗಳ ಅವಧಿಯಲ್ಲಿ ಪ್ರಕಟವಾಗುವ ವೈಭವಗಳು.
- ಆಧುನಿಕ ಯಂತ್ರ ಸಲಕರಣೆಗಳಿಂದ ಸಜ್ಜಾಗಿರುವ ವೇಧಶಾಲೆಗಳಲ್ಲಿ ಈಗ ವಾರ್ಷಿಕವಾಗಿ ೧೦ ಅಥವಾ ಹೆಚ್ಚು ಸೂಪರ್‌ನೋವಾಗಳನ್ನು ಪತ್ತೆ ಹಚ್ಚಲಾಗುತ್ತಿದೆ. ಆದರೆ ಇವೆಲ್ಲವೂ ದೃಗ್ಗೋಚರಗಳಾಗಬೇಕಾಗಿಲ್ಲ.
- ಸೂಪರ್‌ನೋವಾಗಳ ಆಧುನಿಕ ವೈಜ್ಞಾನಿಕ ಅಧ್ಯಯನವನ್ನು ಆರಂಭಿಸಿದವರು ಅಮೆರಿಕದ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಫ್ರಿಟ್ಸ್ ರಿಝ್ವಿಕ್ಕೀ (೧೮೯೮-೧೯೭೪)—೧೯೩೦ರ ದಶಕದಲ್ಲಿ.
- ಈ ಕುರಿತ ಮೊದಲ ಸಿದ್ಧಾಂತ ಮಂಡಿಸಿದವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಫ್ರೆಡ್ ಹಾಯ್ಲ್ (೧೯೧೫). ಮುಂದೆ ಜಿಯೋಫ್ರೀ ಮತ್ತು ಮಾರ್ಗರೆಟ್ ಬರ್ಬಿಜ್, ವಿಲಿಯಮ್ ಫೌಲರ್ ಮತ್ತು ಫ್ರೆಡ್ ಹಾಯ್ಲ್ ಈ ಸಿದ್ಧಾಂತವನ್ನು ಪರಿಷ್ಕರಿಸಿ ಸೂಪರ್ ನೋವಾಗಳ ಗತಿವೃತ್ತಾಂತ (dynamics) ಕುರಿತಂತೆ ಮೂಲಭೂತ ಪ್ರಬಂಧ ಮಂಡಿಸಿದರು (೧೯೫೭).
- ಆಕಾಶದಲ್ಲಿ ಪ್ರಕಟವಾದ ಪ್ರತಿಯೊಂದು ಪ್ರರೂಪಾತೀತ — ಅಂದರೆ ಮಾಮೂಲಿ ಚಿತ್ರಕ್ಕಿಂತ ಹೊರಗಿನ — ಘಟನೆಯೂ ಆಯಾ ಕಾಲದ ಮಾನವನ ಚಿಂತನೆ ಕಲ್ಪನೆಗಳಿಗೆ ಸಮೃದ್ಧಗ್ರಾಸ ಒದಗಿಸಿದೆ. ಚಿಂತನೆಯ ಪ್ರಧಾನ ಫಲ ವಿಜ್ಞಾನ, ಕಲ್ಪನೆಯದು ಸಾಹಿತ್ಯ. ಸೂಪರ್‌ನೋವಾ ಕುರಿತ ವಿಜ್ಞಾನ ವೃತ್ತಾಂತ ಏನಿದ್ದರೂ ಅದು ಪ್ರಸಕ್ತ ಶತಮಾನದ ಸೃಷ್ಟಿ. ಅಂದಮೇಲೆ ಗತ ಶತಮಾನಗಳಲ್ಲಿ ಸೂಪರ್‌ನೋವಾ ಮಾನವನಲ್ಲಿ ಏನು ಭಾವನೆಗಳನ್ನು ಸ್ಫುರಿಸಿರಬಹುದೆಂಬುದನ್ನು ತಿಳಿಯಲು ಪ್ರಾಚೀನ ನಾಗರಿಕತೆಗಳ, ಮುಖ್ಯ

(nuclear fuel) ತೀರಿದ ಕಬ್ಬಿಣ ನಕ್ಷತ್ರ ಗುರುತ್ವಕ್ಕೆ ಪೂರ್ತಿ ಶರಣಾಗುವ ಘಟನೆ, ವಿಶ್ವ ಜನನಕ್ಕೆ ಕಾರಣವಾದ ಮಹಾ ಬಾಜಣೆಯ ಅನಂತರ ಘಟಿಸಿದ ಸಮಸ್ತ ಆಸ್ಫೋಟನೆಗಳ ಪೈಕಿ ಅತ್ಯಂತ ಬಲಿಷ್ಠವಾದ ಶಕ್ತಿಹ್ರಾಸ.

ಆಸ್ಫೋಟನೆಯ ವಿವರಗಳು

ಇದು ಮೊದಲು ಅಂತಃಸ್ಫೋಟವಾಗಿ (implosion ಸುರಂಗದ ಗೋಡೆಗಳು ಕೇಂದ್ರಾಭಿಮುಖವಾಗಿ ಕುಸಿಯುವ ವಿದ್ಯಮಾನ) ಆರಂಭವಾಗುತ್ತದೆ. ಮುಂದೆ ಇದರ ವಿಪರ್ಯಾಯ ಕ್ರಿಯೆಯಾಗಿ ಧಕ್ಕಾ ತರಂಗಗಳು ಉಗಮಿಸಿ ಹೊರಹೊಮ್ಮಿದಾಗ ಬಹಿಃಸ್ಫೋಟವಾಗಿ (explosion ಬಾಂಬ್ ಸಿಡಿತದ ವಿದ್ಯಮಾನ) ಪ್ರಕಟವಾಗುತ್ತದೆ.

ಅಂತಃಸ್ಫೋಟ ಘಟ್ಟದಲ್ಲಿ ತಿರುಳಿನ ಸಾಂದ್ರತೆ ಅಗಾಧವಾಗಿ ಏರಿ ಎಲೆಕ್ಟ್ರಾನ್ ಬಂಧನ ಕ್ರಿಯೆ (electron capture) ಆರಂಭವಾಗುತ್ತದೆ: ಋಣ ವಿದ್ಯುದಾವಿಷ್ಟ ಕಣ ಎಲೆಕ್ಟ್ರಾನ್ ಮತ್ತು ಧನ ವಿದ್ಯುದಾವಿಷ್ಟ ಕಣ ಪ್ರೋಟಾನ್ ಆಗ ಬಲಾತ್ಕಾರವಾಗಿ ಬಂಧಿಸಲ್ಪಡುತ್ತವೆ. ಇವು ಪ್ರಾಥಮಿಕ ಕಣಗಳು, ಯಾವುದೇ ಧಾತುವಿನ (element) ಪರಮಾಣುವಿನ ಅತಿ ಮುಖ್ಯ ಘಟಕಗಳು. ಇವುಗಳ ವಿದ್ಯುದಾವೇಶಗಳು

ವಾಗಿ, ಸಾಂಸ್ಕೃತಿಕ ಧಾರ್ಮಿಕ ಹಾಗೂ ಐತಿಹಾಸಿಕ ದಾಖಲೆಗಳನ್ನು ಪರಿಶೀಲಿಸುವುದೊಂದೇ ಹಾದಿ. ಕಡಲು ಸೋಸಿ ಸೂಜಿ ಹೆಕ್ಕುವ ಕೆಲಸವಿದು. ಆಸಕ್ತ ಸಂಶೋಧಕರು ಇದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಏಳು ಐತಿಹಾಸಿಕ ಸೂಪರ್‌ನೋವಾಗಳನ್ನು ಖಚಿತವಾಗಿ ಗುರುತಿಸಲಾಗಿದೆ. ಇವು ಪ್ರಕಟವಾದ ಸ್ಥಳಗಳಲ್ಲಿ ಇಂದಿಗೂ ಅವಶೇಷಗಳು (ನ್ಯೂಟ್ರಾನ್ ನಕ್ಷತ್ರ, ವಿಕಿರಣ ಮೇಘ ಇತ್ಯಾದಿ) ವೀಕ್ಷಣೆಗೆ ದೊರೆಯುತ್ತವೆ.

ಗೋಚರ ವರ್ಷ (ಕ್ರಿ.ಶ.)	ನಕ್ಷತ್ರಪುಂಜದ ಹೆಸರು	ಗೋಚರಾವಧಿ	ದಾಖಲೆಗಳ ಮೂಲ
೧೮೫	ಕಿನ್ನರ (ಸೆಂಟಾರಸ್)	೨೦ ತಿಂಗಳು	ಚೀನೀ ಮೂಲಗಳು
೩೯೩	ವೃಶ್ಚಿಕ (ಸ್ಕಾರ್ಪಿಯಸ್)	೮ ತಿಂಗಳು	ಚೀನೀ ಮೂಲಗಳು
೧೦೦೬	ವೃಕ (ಲೂಪಸ್)	ಅನೇಕ ವರ್ಷ	ಚೀನೀ, ಜಪಾನೀ, ಯೂರೋಪಿಯನ್ ಮತ್ತು ಅರ್‍ಯಾಬಿಕ್ ಮೂಲಗಳು
೧೦೫೪	ವೃಷಭ (ಟೌರಸ್)	೨೨ ತಿಂಗಳು	ಚೀನೀ, ಜಪಾನೀ ಮೂಲಗಳು
೧೧೮೧	ಕುಂತೀ (ಕೆಸೀಯೊಪೀಯಾ)	೬ ತಿಂಗಳು	ಚೀನೀ, ಜಪಾನೀ ಮೂಲಗಳು
೧೫೭೨	ಕುಂತೀ (ಕೆಸೀಯೊಪೀಯಾ)	೧೮ ತಿಂಗಳು	ಚೀನೀ, ಕೊರಿಯನ್, ಯೂರೋಪಿಯನ್ ಮೂಲಗಳು
೧೬೦೪	ಉರಗಧರ (ಅಫೀಯೂಕಸ್)	೧೨ ತಿಂಗಳು	ಚೀನೀ, ಕೊರಿಯನ್, ಯೂರೋಪಿಯನ್ ಮೂಲಗಳು

(electric charges) ಸಮ ಮತ್ತು ವಿರುದ್ಧ (೧ ಮತ್ತು – ೧ರಂತೆ). ಪ್ರೋಟಾನಿನ ರಾಶಿ ಎಲೆಕ್ಟ್ರಾನಿನದರ ಸುಮಾರು ೧೮೪೦ ಮಡಿ ದೊಡ್ಡದು.

ಬಂಧನ ಕ್ರಿಯೆಯ ಫಲವಾಗಿ ಪ್ರತಿಯೊಂದು ಎಲೆಕ್ಟ್ರಾನ್–ಪ್ರೋಟಾನ್ ಜೋಡಿಯೂ ಒಂದು ಜೊತೆ ನ್ಯೂಟ್ರಾನ್ ಮತ್ತು ನ್ಯೂಟ್ರಿನೊ ಕಣಗಳನ್ನು ಕೊಡುತ್ತದೆ. ಇವೆರಡೂ ವಿದ್ಯುದಾವೇಶರಹಿತ ಕಣಗಳು. ಆದರೆ ನ್ಯೂಟ್ರಾನಿನ ರಾಶಿ ಪ್ರೋಟಾನಿನದಕ್ಕಿಂತ ತುಸು ಜಾಸ್ತಿ, ನ್ಯೂಟ್ರಿನೋದ ರಾಶಿಯಾದರೊ ಎಲೆಕ್ಟ್ರಾನಿನದಕ್ಕೆ ಸಮ.

ನ್ಯೂಟ್ರಿನೊ ಕೂಡ ಫೋಟಾನಿನಂತೆ (ಬೆಳಕಿನ ಕಣ) ಅತಿ ಚಟುಲ ಕಣ. ವೇಗ ಎರಡರದೂ ಒಂದೇ—ಸೆಕೆಂಡಿಗೆ ೩೦೦,೦೦೦ ಕಿಲೊಮೀಟರ್. ಇವೆರಡೂ ಶಾಖಬೈಜಿಕ ಕ್ರಿಯೆಗಳ ಏಕಕಾಲಿಕ ಉತ್ಪನ್ನಗಳಾದರೂ ಫೋಟಾನ್ ಮಾತ್ರ ನಕ್ಷತ್ರ ಪದರಗಳನ್ನು ಒಡನೆ ಭೇದಿಸಿ ಹೊರನೆಗೆಯಲಾರದು. ಅದು ಇತರ ವಸ್ತುಗಳ ಜೊತೆ ಅಂತರಕ್ರಿಯೆಗೆ ಒಳಗಾಗುವುದು. (ಕಾಗದದಂಥ ಅಪಾರದರ್ಶಕ ವಸ್ತುವಿನ ಮೇಲೆ ಬಿದ್ದ ಫೋಟಾನ್, ಅಂದರೆ ಬೆಳಕು, ಮುಂದಕ್ಕೆ ಸಾಗುವುದಿಲ್ಲವಷ್ಟೆ, ಹಾಗೆ.) ಈ ಹೋರಾಟದ ವೇಳೆ ಸಾಕಷ್ಟು ಕಾಲ ಹ್ರಾಸವಾಗಿರುತ್ತದೆ. ನ್ಯೂಟ್ರಿನೊ ಸಂದರ್ಭದಲ್ಲಿ ಹೀಗಲ್ಲ. ಇದರ ಜೊತೆ ಅಂತರಕ್ರಿಯೆ ಎಸಗಬಲ್ಲ ದ್ರವ್ಯ, ಅಂದರೆ ಇದರ ರಭಸ ಗಮನ ತಡೆಯಬಲ್ಲ ವಸ್ತು, ವಿಶ್ವದಲ್ಲೇ ವಿರಳಾತಿವಿರಳ. ಉತ್ಪಾದನ ಕೇಂದ್ರದಿಂದ ಬೆಳಕಿನ ವೇಗದಲ್ಲಿ ಧಾವಿಸುತ್ತ ಪಥಮಧ್ಯ ಅಭ್ಯಂತರಗಳನ್ನು ತನ್ನ ಚಲನ ವೇಗದಲ್ಲಿ ಒಂದಿನಿತೂ ಕೊರೆ ಬರದಂತೆ ಲೀಲಾಜಾಲವಾಗಿ ಅಡ್ಡ ಹಾಯುತ್ತ, ವಿಶ್ವಸಂಚಾರಿಯಾಗಿರುವುದು ಇದರ ಧರ್ಮ. ಉದಾಹರಣೆಗೆ ಭೂಮಿಯ (ನಮ್ಮೆಲ್ಲರ ದೇಹಗಳೂ ಇದರಲ್ಲಿ ಸೇರಿವೆ) ಅಡ್ಡಕೊಯ್ತದ ಪ್ರತಿ ಚದರ ಸೆಂಟಿಮೀಟರ್ ಮೂಲಕ ಪ್ರತಿ ಸೆಕೆಂಡಿನಲ್ಲಿ ಸುಮಾರು ೧೦,೦೦೦,೦೦೦,೦೦೦ ನ್ಯೂಟ್ರಿನೋಗಳು ನಿರಾತಂಕವಾಗಿಯೂ ನಿರಾಳವಾಗಿಯೂ ಹರಿದು ಹೋಗುತ್ತವೆ – ಯಾವ ಪರಿಣಾಮವನ್ನೂ ಮಾಡದೆ! ಗಮನಿಸಬೇಕಾದ ಅಂಶವಿದು: ಉತ್ಪಾದನ ಕೇಂದ್ರದಿಂದ ಹೊರ ಧಾವಿಸುವ ವಿಕಿರಣದ ಘಟಕಗಳ ಪೈಕಿ ನ್ಯೂಟ್ರಿನೋಗಳು ಒಂದಿಷ್ಟೂ ಕಾಲಹರಣ ಮಾಡದೆ ಬೆಳಕಿನ ವೇಗದಿಂದ ವಿಶ್ವಸಂಚಾರಿಗಳಾಗುತ್ತವೆ; ಉಳಿದವು ಪಥಮಧ್ಯದ ಅಡಚಣೆಗಳಿಂದ ಪಾರಾಗಿ ಬರಲು (ಬಂದರೆ) ಕಾಲಾವಕಾಶ ತೆಗೆದುಕೊಳ್ಳುತ್ತವೆ.

ಸೂಪರ್‌ನೋವಾ ೧೯೮೭A

೨೩ ಫೆಬ್ರುವರಿ ೧೯೮೭. ದಕ್ಷಿಣ ಅಮೆರಿಕದ ಚಿಲೀಯಲ್ಲಿಯ ಒಂದು ವೇಧಶಾಲೆ. ಇಯಾನ್ ಶೆಲ್ಟನ್ ಎಂಬ ಖಗೋಳವಿಜ್ಞಾನಿ ಎಲ್‌ಎಂಸಿಯ (Large Magellanic Cloud 'ಕಸ್ತೂರಿ' ಜುಲೈ ೧೯೮೭ ಸಂಚಿಕೆ ನೋಡಿ) ಛಾಯಾಚಿತ್ರ ತೆಗೆದು ಸಂಸ್ಕರಿಸಿ ಅದನ್ನು ಅಭ್ಯಸಿಸುತ್ತಿದ್ದರು. ಅಲ್ಲಿಯ ಚಿರಪರಿಚಿತ ನಕ್ಷತ್ರ ಪ್ರರೂಪಗಳ (star patterns) ಜೊತೆಗೆ ಹೊಸತೊಂದು ನಕ್ಷತ್ರ ಪ್ರತಿಬಿಂಬವೂ ಪಡಿಮೂಡಿತ್ತು–ನೂತನ ತಾರೆಯ ಸುಲಿಖಿತ ಬೆರಳೊತ್ತು.

ನಮ್ಮಿಂದ ಸುಮಾರು ೨೦೦,೦೦೦ ಜ್ಯೋತಿರ್ವರ್ಷ ದೂರದಲ್ಲಿರುವ ಮತ್ತು ಸುಮಾರು ೧೦,೦೦೦,೦೦೦,೦೦೦ ನಕ್ಷತ್ರಗಳ ತಾಣವಾಗಿರುವ ಮಂದ ಮಿನುಗಿನ ಮಚ್ಚೆ ಎಲ್‌ಎಂಸಿ. ಇದನ್ನು ರೂಪಿಸಿರುವ ಬಿಡಿ ತಾರೆಗಳ ವಿವಿಕ್ತ ಚಿತ್ರ ಪಡೆಯುವುದು ಅತಿ ದುಸ್ತರ. ಹೀಗಿರುವಾಗ ಈ ತನಕ ಖಾಲಿ ಜಾಗ – ನಕ್ಷತ್ರರಹಿತ ಎಂಬ ಅರ್ಥದಲ್ಲಿ– ಎಂದು ಭಾವಿಸಿದ್ದಲ್ಲಿ ಈಗ ಉಜ್ವಲ ನವ ತಾರೆ! ಇದು ಸೂಪರ್‌ನೋವಾವೇ ಆಗಿರಬೇಕು, ಬೇರೆ ಯಾವುದೂ ಅಲ್ಲ ಎಂದು ಶೆಲ್ಟನ್ ತೀರ್ಮಾನಿಸಿದರು — ನಾಲ್ಕು ಶತಮಾನಾನಂತರ ಬರಿಗಣ್ಣಿಗೆ ಗೋಚರವಾದ (ಛಾಯಾಚಿತ್ರಫಲಕದಲ್ಲಿ ಬರಿಗಣ್ಣಿಗೆ ಕಂಡ ಎಂಬುದು ಇಂಗಿತ) ಸೂಪರ್‌ನೋವಾ ಎಂಬ ಗಗನ ವೈಭವ.

ಈ ದೃಗ್ಗೋಚರ ಗಗನ ವಾರ್ತೆಯನ್ನು–ಶತಮಾನದ ಸುದ್ದಿಯನ್ನು– ಅವರು ಒಡನೆ ಪ್ರಕಟಿಸಿದರು. ಅಮೆರಿಕ ಸಂಯುಕ್ತ ಸಂಸ್ಥಾನ

ಈಗ ನೀವು ವರದಕ್ಷಿಣೆ ನಿರ್ಮೂಲನ ತ್ವರಿತಗೊಳಿಸಬಹುದು

ವರದಕ್ಷಿಣೆ ನಿಷೇಧ (ತಿದ್ದುಪಡಿ) ಕಾಯಿದೆ, ೧೯೮೪, ಅಕ್ಟೋಬರ್ ೨, ೧೯೮೫ ರಿಂದ ಜಾರಿಗೆ ಬಂದಿದೆ.

ಹೌದು, ಈಗ ವರದಕ್ಷಿಣೆಯನ್ನು ನಿರ್ಮೂಲಗೊಳಿಸುವಂತಹ ಅವಕಾಶವನ್ನು ಕಲ್ಪಿಸಲಾಗಿದೆ. ವರದಕ್ಷಿಣೆ ನಿಷೇಧ ಕಾಯಿದೆಯ ಹೊಸ ತಿದ್ದುಪಡಿ ಈಗ ಜಾರಿಗೆ ಬಂದಿದೆ. ಈ ಕಾನೂನು ಉಲ್ಲಂಘಿಸುವವರು ಯಾವುದೇ ಧರ್ಮಕ್ಕೆ ಸೇರಿದವರಾದರೂ ಅವರ ಮೇಲೆ ಪರಿಣಾಮಕಾರಿಯಾಗಿ ಕಾನೂನು ಕ್ರಮ ತೆಗೆದುಕೊಳ್ಳಬಹುದಾಗಿದೆ.

ಈ ಹೊಸ ತಿದ್ದುಪಡಿಯ ವಿಶೇಷ ಅಂಶಗಳು :—

ಮದುವೆಗೆ ಸಂಬಂಧಿಸಿದಂತೆ ವಧುವಿಗೆ ಅಥವಾ ವರನಿಗೆ ಅಥವಾ ಇತರ ಯಾವುದೇ ವ್ಯಕ್ತಿಗೆ ಕೊಡುವ ಅಥವಾ ಕೊಡುವುದಾಗಿ ಹೇಳುವ ಯಾವುದೇ ಆಸ್ತಿ ಅಥವಾ ಬೆಲೆಬಾಳುವ ವಸ್ತುಗಳನ್ನು ವರದಕ್ಷಿಣೆ ಎಂದು ಪರಿಗಣಿಸಲಾಗುವುದು.

ವಧು ಅಥವಾ ವರನ ತಂದೆ ತಾಯಿಗಳು, ಸಂಬಂಧಿಕರು ಅಥವಾ ಪೋಷಕರು ನೇರವಾಗಿ ಅಥವಾ ಬೇರೆಯವರ ಮೂಲಕ ವರದಕ್ಷಿಣೆ ಬೇಕೆಂದು ಕೇಳುವುದು, ತೆಗೆದುಕೊಳ್ಳುವುದು, ಕೊಡುವುದು ಅಥವಾ ಒತ್ತಾಯಿಸುವುದು ಶಿಕ್ಷಾರ್ಹ ಅಪರಾಧ. ಈ ಅಪರಾಧಕ್ಕೆ ಆರು ತಿಂಗಳಿನಿಂದ ಎರಡು ವರ್ಷಗಳವರೆಗಿನ ಸೆರೆವಾಸ ಮತ್ತು ೧೦,೦೦೦ ರೂ. ಗಳವರೆಗೆ ಅಥವಾ ವರದಕ್ಷಿಣೆ ಬೆಲೆಯಷ್ಟು – ಯಾವುದು ಹೆಚ್ಚೋ ಅಷ್ಟು ಮೊತ್ತದವರೆಗಿನ ಜುಲ್ಮಾನೆ.

ವಿವಾಹದ ಸಂದರ್ಭದಲ್ಲಿ ವಧು ಹಾಗೂ ವರನಿಗೆ ನೀಡುವ ಉಡುಗೊರೆಗಳು ಯಾವುದೇ ಬಗೆಯ ಒತ್ತಾಯವಿಲ್ಲದೆ, ಸಾಂಪ್ರದಾಯಿಕ ರೀತಿಯಲ್ಲಿದ್ದು ನಿಬಂಧನೆಗಳಂತೆ ಪಟ್ಟಿ ಮಾಡಿದ್ದಲ್ಲಿ ಶಿಕ್ಷೆ ಇಲ್ಲ. ಲಿಖಿತ ರೂಪದ ಈ ಪಟ್ಟಿಯನ್ನು ವಧು–ವರ ಇಬ್ಬರೂ ಇಟ್ಟುಕೊಳ್ಳಬೇಕು. ಪಟ್ಟಿಯಲ್ಲಿ ಉಡುಗೊರೆಯ ವಿವರಣೆ, ಅದರ ಅಂದಾಜು ಬೆಲೆ, ಉಡುಗೊರೆ ನೀಡಿದ ವ್ಯಕ್ತಿಯ ಹೆಸರು, ಆ ವ್ಯಕ್ತಿಗೂ ವಧು–ವರರಿಗಿರುವ ಸಂಬಂಧ ಮುಂತಾದವುಗಳನ್ನು ಬರೆದಿಡಬೇಕು. ಅಕ್ಷರ ಬಾರದವರು ಇಂತಹ ಪಟ್ಟಿಯನ್ನು ಬರೆಸಿ, ಓದಿ ಹೇಳಿದ ನಂತರ ಹೆಬ್ಬೆಟ್ಟು ಗುರುತನ್ನು ಹಾಕಬೇಕು.

ಉಡುಗೊರೆ ತೆಗೆದುಕೊಂಡ ವಸ್ತುಗಳ ಇಂತಹ ಪಟ್ಟಿಯನ್ನು ಬರೆದಿರದಿದ್ದಲ್ಲಿ ಅಥವಾ ಮದುವೆಯ ಸಂದರ್ಭದಲ್ಲಿ ತೆಗೆದುಕೊಳ್ಳಲಾದ ಯಾವುದಾದರೂ ಉಡುಗೊರೆಯನ್ನು ಆ ಪಟ್ಟಿಯಲ್ಲಿ ಸೇರಿಸದಿದ್ದಲ್ಲಿ ಉಡುಗೊರೆ ಅಥವಾ ಉಡುಗೊರೆಗಳನ್ನು ಪಡೆಯುವ ಮತ್ತು ನೀಡುವ ವ್ಯಕ್ತಿ ಹಾಗೂ ವ್ಯಕ್ತಿಗಳನ್ನು ಶಿಕ್ಷೆಗೆ ಗುರಿಪಡಿಸಬಹುದಾಗಿದೆ.

ಒಬ್ಬ ಮಹಿಳೆಯ ಮದುವೆಯಲ್ಲಿ ನೀಡಲಾದ ವರದಕ್ಷಿಣೆಯನ್ನು ಆ ಮಹಿಳೆಯಲ್ಲದೆ ಬೇರೆ ಯಾರಾದರೂ ಸ್ವೀಕರಿಸಿದರೆ, ಅವರು ಮೂರು ತಿಂಗಳ ಒಳಗಾಗಿ ಆ ಮಹಿಳೆಗೇ ಹಿಂತಿರುಗಿಸಬೇಕು. ಹಾಗೆ ತಲುಪಿಸದಿದ್ದಲ್ಲಿ ಆ ವ್ಯಕ್ತಿ ಆರು ತಿಂಗಳಿಂದ ಎರಡು ವರ್ಷದ ವರೆಗೆ ಸೆರೆವಾಸ ಅಥವಾ ೧೦,೦೦೦ ರೂ. ದಂಡ ಇಲ್ಲವೇ, ಎರಡೂ ಶಿಕ್ಷೆಗಳಿಗೆ ಒಳಗಾಗುತ್ತಾನೆ.

ಈ ನಿಯಮಗಳನ್ನು ಮೀರಿದ ಸಂದರ್ಭಗಳಲ್ಲಿ ನೊಂದ ವ್ಯಕ್ತಿ, ಆ ವ್ಯಕ್ತಿಯ ತಂದೆ ತಾಯಿ, ಆ ವ್ಯಕ್ತಿಯ ಸಂಬಂಧಿ, ಪೋಲೀಸರು ಅಥವಾ ಸರ್ಕಾರದಿಂದ ಮಾನ್ಯತೆ ಹೊಂದಿದ ಸಮಾಜ ಕಲ್ಯಾಣ ಸಂಸ್ಥೆ — ಇವರಲ್ಲಿ ಯಾರು ಬೇಕಾದರೂ ದೂರು ಸಲ್ಲಿಸಬಹುದು. ವರದಕ್ಷಿಣೆಯ ನಿರ್ಮೂಲನಕ್ಕಾಗಿ ಧಾರ್ಮಿಕ ನಾಯಕರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಬೆಂಬಲವನ್ನು ಸರ್ಕಾರ ಬಟ್ಟು ಗೂಡಿಸುತ್ತಿದೆ ನೊಂದ ವ್ಯಕ್ತಿಗೆ ಪೋಲೀಸರು ರಕ್ಷಣೆ ನೀಡುವರು.

ಕರ್ನಾಟಕ ಕಾನೂನು ನೆರವು ಮಂಡಲಿ ಉಚಿತ ಕಾನೂನು ನೆರವನ್ನೂ ನೀಡುವುದು.

ನೀವು ಮನಸ್ಸು ಮಾಡಿದರೆ ಈಗ ವರದಕ್ಷಿಣೆಯ ಪಿಡುಗನ್ನು ನಿರ್ಮೂಲಗೊಳಿಸಬಹುದು.

ಹಾಗೂ ಜಪಾನ್ ದೇಶಗಳಲ್ಲಿಯ ವೇಧಶಾಲೆಗಳಲ್ಲಿ ತತ್ಸಂಬಂಧವಾದ ದಾಖಲೆಗಳನ್ನು ಪರಿಶೀಲಿಸಿದಾಗ ದೃಗ್ವಾರ್ತೆ (ಅಂದರೆ ಫೋಟಾನುಗಳು ಹೊತ್ತು ತಂದ ಮಾಹಿತಿ) ಛಾಯಾಚಿತ್ರ ಫಲಕದ ಮೇಲೆ ಅಚ್ಚಾಗುವ ಕೆಲವು ಗಂಟೆಗಳ ಮೊದಲೇ ನ್ಯೂಟ್ರಿನೊ ಹೊನಲು ಅತಿಶಯ ಸಾಂದ್ರತೆಯಿಂದ ಹರಿದಿದ್ದುದು ತಿಳಿಯಿತು. ಸೂಪರ್‌ನೋವಾ ಘಟನೆ ಸಂಭವಿಸಿದಾಗ ಅಲ್ಲಿಂದ ಜಿಗಿದ ನ್ಯೂಟ್ರಿನೋಗಳು (ನಿರೀಕ್ಷಿಸಿದಂತೆ) ಫೋಟಾನುಗಳಿಗಿಂತ ಮೊದಲೇ ಭೂಮಿ ತಲಪಿದ್ದುವು. ಶೆಲ್ಟನ್ ಅವರ ತೀರ್ಮಾನ ಸರಿ ಎಂದು ಇತರ ವಿಜ್ಞಾನಿಗಳು ಒಪ್ಪಿದರು. ತದನಂತರ, ಭಾರತದ ಕಾವಲೂರಿನಲ್ಲಿಯ (ತಮಿಳುನಾಡು) ವೈನು ಬಪ್ಪು ವೇಧಶಾಲೆಯೂ ಸೇರಿದಂತೆ ಪ್ರಪಂಚದ ಬೇರೆ ಬೇರೆ ವೇಧಶಾಲೆಗಳಿಂದ ಈ ಸೂಪರ್‌ನೋವಾವನ್ನು ವೀಕ್ಷಿಸಿ ಇದರ ಇರವನ್ನು ಸ್ಥಿರೀಕರಿಸಲಾಗಿದೆ. ಇದು ೧೯೮೭ನೇ ಇಸವಿಯ ಮೊದಲ ಸೂಪರ್‌ನೋವಾ. ಎಂದೇ ಇದರ ಹೆಸರು ಸೂಪರ್‌ನೋವಾ ೧೯೮೭A. ಇನ್ನೊಂದೇನಾದರೂ ಇದೇ ವರ್ಷ ಪತ್ತೆಯಾದರೆ ಅದರ ಹೆಸರು ಸೂಪರ್‌ನೋವಾ ೧೯೮೭B ಎಂದಿರುವುದು.

ಸೂಪರ್‌ನೋವಾ ೧೯೮೭A ನಮಗೆ ವರ್ತಮಾನ ವಾರ್ತೆ, ಪ್ರಸಕ್ತ ಸಾಲಿನ ಅದ್ಭುತ ರೋಮಾಂಚಕ ದೃಶ್ಯ ಎಲ್ಲ ಸರಿ. ಆದರೆ ಅದು ವಾಸ್ತವವಾಗಿ ಘಟಿಸಿದ್ದು ೧೬೫,೦೦೦ ವರ್ಷಗಳ ಹಿಂದೆ. ವಿಕಿರಣಕ್ಕೆ ಅಲ್ಲಿಂದ (ಎಲ್‌ಎಂಸಿ) ಇಲ್ಲಿಗೆ ಬರಲು ಇಷ್ಟು ಕಾಲ ಬೇಕಾದದ್ದೇ ಇದರ ಕಾರಣ. ವಿಕಿರಣದ ವೇಗಕ್ಕಿಂತ (ಸೆಕೆಂಡಿಗೆ ೩ ಲಕ್ಷ ಕಿಲೋಮೀಟರ್) ಅಧಿಕ ವೇಗದಲ್ಲಿ ಚಲಿಸಬಲ್ಲ ಯಾವ ವಾರ್ತಾಪರಿಕಾರನೂ ವಿಶ್ವದಲ್ಲಿಲ್ಲ. ಅಂದ ಮೇಲೆ ವಿಶ್ವದ ಯಾವುದೋ ಮೂಲೆಯಲ್ಲಿಯ 'ಸದ್ಯ' ನಮ್ಮ 'ವರ್ತಮಾನ' ಆಗಲು ಅದರ ದೂರ ಹಾಗೂ ವಿಕಿರಣದ ವೇಗ ಅನುಸರಿಸಿ ಅಷ್ಟು ಕಾಲ ಕಾದಿರುವುದೊಂದೇ ಹಾದಿ — ಶಬರಿಯಂತೆ.

"ಹಾಗಾದರೆ ಸೂಪರ್‌ನೋವಾ ೧೯೮೭A ಯ ಈಗಿನ — ಸೆಪ್ಟೆಂಬರ್ ೧೯೮೭ — ಪರಿಸ್ಥಿತಿ ಏನು?"

"ಇನ್ನೂ ಸುಮಾರು ೧೬೫,೦೦೦ ವರ್ಷ ಸಹನೆಯಿಂದ ಕಾದು ನೋಡಿ!"

ನಕ್ಷತ್ರದ ಹಂಸಗೀತೆ

ಹೀಗೆ ಅಂತಃಸ್ಫೋಟ ಬಹಿಃಸ್ಫೋಟಗಳಿಂದ ಅಂತರಂಗ, ಬಹಿರಂಗ ಶುದ್ಧಿಗಳಿಗೆ ಒಳಗಾಗುವ ನಕ್ಷತ್ರ ಸೂಪರ್‌ನೋವಾ ಘಟ್ಟದ ಅಗ್ನಿ ಪರೀಕ್ಷೆಯಲ್ಲಿ ಪೂರ್ತಿ ನಾಶವಾಗಿ ಹೋಗಬಹುದು. ಹೀಗಲ್ಲದೆ, ಅತಿ ಬೃಹನ್ನಕ್ಷತ್ರಗಳಲ್ಲಿ ಕಂಡುಬರುವಂತೆ, ಆಸ್ಫೋಟನಾನಂತರವೂ ಅದರ ಗಟ್ಟಿ ತಿರುಳಿನ ಅಲ್ಪ ಭಾಗ ಉಳಿದಿರಬಹುದು. ಆದೀಗ ನ್ಯೂಟ್ರಾನ್ ಕಣಗಳ ಅತಿ ಸಾಂದ್ರ ಉಂಡೆ. ಆದ್ದರಿಂದ ನ್ಯೂಟ್ರಾನ್ ನಕ್ಷತ್ರ. ಇದರ ಬಗೆಗಿನ ವಿವರಗಳನ್ನು ೧೯೮೭ ಏಪ್ರಿಲ್ ಸಂಚಿಕೆಯಲ್ಲಿ ಬರೆದಿದೆ.

ನ್ಯೂಟ್ರಾನ್ ನಕ್ಷತ್ರಕ್ಕೂ ಗುರುತ್ವಾಲಿಂಗನ ಸೌಖ್ಯದಿಂದ (?) ಮುಕ್ತಿ ಇಲ್ಲ. ಗುರುತ್ವದ ಸಂಕೋಚನ ಬಲವನ್ನು ಎದುರಿಸುವ ಯಾವ ಬಲವೂ ಇದರಲ್ಲಿಲ್ಲವಾಗಿ ಈ ನಕ್ಷತ್ರ ಸಂತತ ಗುರುತ್ವಾತ್ಮಕ ಕುಸಿತಕ್ಕೆ ಬಲಿಯಾಗುತ್ತದೆ. ಒಂದು ಘಟ್ಟದಲ್ಲಿ ಇದರ ವಿಮೋಚನ ವೇಗ ಸಾಕ್ಷಾತ್ ವಿಕಿರಣದ ವೇಗವನ್ನೇ ಮೀರಿರುತ್ತದೆ. ಅಲ್ಲಿಂದ ಮುಂದಕ್ಕೆ ಈ ನಕ್ಷತ್ರದಿಂದ ವಿಶ್ವಕ್ಕೆ ಯಾವ ಮಾಹಿತಿಯೂ — ಬೆಳಕು, ಶಾಖ ಮುಂತಾದ ವಿಕಿರಣ ರೂಪಗಳು — ಹರಿಯದು. ಹೀಗೆ ಬಾಹ್ಯ ವಿಶ್ವ ಕುರಿತಂತೆ ಶಾಶ್ವತ ಮೂಕತ್ವಕ್ಕೆ ಕೆಡೆಯುವ ಈ ನಕ್ಷತ್ರ ವೈಚಿತ್ರ್ಯಕ್ಕೆ ಕೃಷ್ಣ ವಿವರ (black hole) ಎಂದು ಹೆಸರು. (೧೯೮೭ ಮೇ 'ಕಸ್ತೂರಿ' ನೋಡಿ.)

ಇಲ್ಲಿಗೆ ಬೃಹನ್ನಕ್ಷತ್ರದ ಮಹಾ ನಿರ್ಯಾಣದ ಕಥೆ ಸಮಾಪ್ತಿ. ✡

ನಂಬಲಾಗದ ಕಥೆ

ನೆನೆದೊಡನೆ ಎಲ್ಲಾದರೂ ಸಣ್ಣ ಪಿಕ್‌ನಿಕ್ ಹೊರಡಬೇಕೆಂಬುದು ಆಫೀಸಿನಲ್ಲಿ ಒಂದು ಹವ್ಯಾಸ. ಮಹಾಬಲಿಪುರಂ, ಕಾಂಚಿಪುರಂ, ವೇಟತಾಂಗಳ್, ಇತ್ಯಾದಿ. ಕಳೆದ ಬಾರಿ ವಳ್ಳಕ್ಕೋಟೆಗೆ ಹೋಗಿ ಬಂದೆವು.

ನಂತರ ತಿರುತ್ತಣಿಗೆ ಹೋಗಿ ಬರುವಾ ಎಂದು ತೀರ್ಮಾನಿಸಿದೆವು. "ಮೊದಲನೇ ದಿನ ಸಾಯಂಕಾಲವೇ ಹೊರಟುಬಿಡಬೇಕು. ರಾತ್ರಿ ರೂಮು ಮಾಡಿಕೊಂಡು ಉಳಿದುಕೊಳ್ಳಬೇಕು. ಬೆಳಗಿನ ಜಾವದ ದರ್ಶನ ತುಂಬಾ ವಿಶೇಷ. ಬೆಳಿಗ್ಗೆ ಎದ್ದು ಸ್ನಾನಮಾಡಿ ದರ್ಶನ ಪಡೆದನಂತರ ಮಧ್ಯಾಹ್ನಕ್ಕೆ ಹಿಂತಿರುಗಿ ಬಿಡಬಹುದು." ಹಿರಿಯರಾದ (ಗುರು) ಷಣ್ಮುಗರಾಮು ಹೇಳಿದರು. ಅವರ ಮಾತಿಗೆ ಎದುರು ಹೇಳುವವರು ಯಾರೂ ಇಲ್ಲ. "ಸರಿ" ಎಂದು ಎಲ್ಲರೂ ತಲೆ ಆಡಿಸಿದೆವು.

ನಾವು ಗಂಡಸರು ಒಟ್ಟು ಆರು ಜನ. ಕೇಶವ, ಅವನ ಹೆಂಡತಿ ಯಶೋದಾ ಇಬ್ಬರೂ ನಮ್ಮ ಆಫೀಸಿನಲ್ಲೇ ಕೆಲಸಮಾಡುವವರು. ಕಾರ್ತಿಕ ಹೊಸದಾಗಿ ಮದುವೆಯಾದವನು. ತನ್ನ ಹೆಂಡತಿಯೂ ಟ್ರಿಪ್ಪಿಗೆ ಬರಲಿಕ್ಕೆ ಆಶೆ ಪಡ್ತಿದ್ದಾಳೆ ಅಂದನಾತ. "ಲೆಟ್ ಹರ್ ಎಂಜಾಯ್" ಎಂದರು ನಮ್ಮ ಗುರು.

ಸ್ಟೆನೋ ಶೋಭಾ ಬಹಳ ಪಿಂಜು ಮನಸ್ಸಿನವಳು. ಪೈಸೆಯನ್ನೂ ಕೈ ಬಿಟ್ಟು ಖರ್ಚು ಮಾಡೋಳಲ್ಲ. ಈ ಬಾರಿ ತಾನೂ ಕಂಪನಿ ಕೊಡುವುದಾಗಿ ಅವಳು ಹೇಳಿದಳು. ಸಂತೋಷವಾದಂತಿತ್ತು. ಹಾಗೆ ಹೆಂಗಸರಲ್ಲಿ ಮೂರು ಜನ ಮಾತ್ರ.

ಸಂಜೆ ತುಸು ಸಾವಕಾಶವಾಗಿಯೇ ಹೊರಟೆವು. ಅಲ್ಲಿ ಹೋಗಿ ಸೇರುವಾಗ ಒಂಬತ್ತು ಗಂಟೆ ಇರಬಹುದು. ದೇವಾಲಯದ ಕ್ಯಾಂಟೀನಿನಲ್ಲಿ ರಾತ್ರಿಯ ಊಟ ಮುಗಿಸಿ ಎದುರಿಗಿದ್ದ ಛತ್ರಕ್ಕೆ ಹೋದೆವು.

ಮೂಲ : ಪುನಿದನ್

ಕನ್ನಡಕ್ಕೆ : ಕರುಣಾಕರ ಕೋವರ್‌ಕೊಲ್ಲಿ

ಬುಕ್ಕಿಂಗ್ ಆಫೀಸಿನ ಬಾಗಿಲಲ್ಲಿ ನಮ್ಮೆದುರಿಗೆ ಏಳೆಂಟು ಜನ ಕಾದುಕೊಂಡಿದ್ದರು. ನಮ್ಮ ಗುರು ಷಣ್ಮುಗರಾಮು ಹೋಗಿ ವಿಚಾರಿ

ದೊಡನೆ ವೇಗವಾಗಿ ಹಿಂತಿರುಗಿ ಬಂದು, "ಗಮನಿಸದೆ ಹೋದೆವು. ನಾಳೆ ಷಷ್ಠಿಯಂತೆ, ಎಲ್ಲಾ ರೂಂ ಬುಕ್ಕಾಗಿ ಹೋಗಿವೆ" ಎಂದರು.

"ಸ್ವಲ್ಪ ಹೊತ್ತು ಕಾದು ನೋಡುವಾ ಯಾವುದಾದರೂ ಖಾಲಿ ಆದರೂ ಆಗಬಹುದು." ರಾತ್ರಿ ಹತ್ತು ಗಂಟೆಯಾಗಿ ಹೋಗಿತ್ತು. ಬುಕ್ಕಿಂಗ್ ಗುಮಾಸ್ತ ಟೀ ಕುಡಿಯಲು ಹೊರಗಡೆ ಬಂದರು. ಆತನನ್ನು ಗಮನಿಸಿದ ಷಣ್ಮುಗ ರಾಮನ್ ಹಿಂಬಾಲಿಸಿದರು.

"ಸಾರ್, ಗಂಡಸರ ಬಗ್ಗೆ ನಮಗೆ ಚಿಂತೆ ಇಲ್ಲ. ಹೆಂಗಸರು ಮೂರು ಜನ ಬಂದಿದ್ದಾರೆ. ಅವರಿಗಾದ್ರೂ ಒಂದು ರೂಮನ್ನು ಅಡ್ಜಸ್ಟ್ ಮಾಡಿ ಕೊಡ್ಲಿಕ್ಕಾಗುತ್ತಾ ನೋಡಿ ಸ್ವಾಮಿ."

ಆತ ಗದ್ದವನ್ನು ಸವರಿಕೊಂಡು ತುಸು ಆಲೋಚಿಸಿದಾಗ ನಮ್ಮೆಲ್ಲರಿಗೆ ಸ್ವಲ್ಪ ಭರವಸೆ ಉಂಟಾಯಿತು.

"ಒಬ್ಬರು ಸಿಂಗಲ್ ರೂಂ ಒಂದನ್ನುಸ ರಿಸರ್ವ್ ಮಾಡಿದ್ದಾರೆ. ಸಂಜೆ ಬರಬೇಕಾಗಿದ್ದವರು ಈ ವರೆಗೂ ಬರಲಿಲ್ಲ. ನಿಮಗಾಗಿ ರಿಸ್ಕ್ ತೆಗೆದುಕೊಂಡು ಕೊಡ್ತಾ ಇದ್ದೇನೆ. ಅಪ್ಪಿ ತಪ್ಪಿ ಎಲ್ಲಾದರೂ ಅವರು ಬಂದರೆ ಖಾಲಿ ಮಾಡ್ಬೇಕಾಗುತ್ತೆ. ಸರೀನಾ?" ಎಂದು ಕೇಳಿದ.

ಸಿಕ್ಕಿದ್ದೇ ಲಾಭ ಎಂದು ಎಲ್ಲರೂ ಒಪ್ಪಿಕೊಂಡೆವು.

ಹೆಂಗಸರಿಗೆ ರೂಮು ಸಿಕ್ಕಿದ್ದು ನೆನೆದು ತುಂಬಾ ಸಂತೋಷವಾಗಿತ್ತು. ರೂಮಿನ ಹೊರಗಡೆ ವಿಶಾಲವಾದ ಒಂದು ವರಾಂಡ, ನಾವೆಲ್ಲ ಗಂಡಸರು ಅದರಲ್ಲಿ ಮಲಗಿದೆವು.

ಆಫೀಸು ವಿಷಯ, ರಾಜಕೀಯ, ಸಿನೆಮ ಹೀಗೆಲ್ಲಾ ಲೋಕಾಭಿರಾಮವಾಗಿ ಮಾತನಾಡಿಕೊಂಡಿದ್ದೆವು. ಆದರೆ ನಮ್ಮ ಗುರು ಷಣ್ಮುಗರಾಮ ಮಾತ್ರ ನಮ್ಮ ಯಾವ ತಲೆಹರಟೆ ವಿಷಯಗಳಿಗೆ ಕಿವಿಗೊಡದೆ ತಮ್ಮದೇ ಆದ ಯಾವುದೋ ಯೋಚನೆಯಲ್ಲಿದ್ದರು.

"ಏನು ಗುರು, ನಿದ್ರೆ ಬಂದು ಬಿಡ್ತಾ ?" ಮುನಿರತ್ನ ಕೆದಕಿದರು. "ಇಲ್ಲ," ಎಂದು ಮತ್ತೆ ಮುಂದುವರಿಸಿದರು.

"ಎರಡು ತಿಂಗಳ ಮುಂಚೆ ನಾನು ತಿರುತ್ತಣಿಗೆ ಬಂದಾಗ ಏರ್ಪಟ್ಟ ಒಂದು ಶೋಧನೆಯ ಬಗ್ಗೆ ಜ್ಞಾಪಿಸಿಕೊಂಡಿದ್ದೆ. ಆದರೆ ಆ ಅನುಭವವನ್ನು ಜ್ಞಾಪಿಸಿಕೊಂಡರೆ ನನ್ನ ಶರೀರ ರೋಮಾಂಚನವಾಗುತ್ತದೆ. ಅದನ್ನ ಹೇಳಿದರೆ ಯಾರೂ ನಂಬಲಾರರು," ಎಂದು ಹೇಳಲು ತೊಡಗಿದರು.

"ಎರಡು ತಿಂಗಳ ಹಿಂದೆ ನಾನು ಆಫೀಸು ವಿಷಯವಾಗಿ ಬೊಂಬಾಯಿಗೆ ಹೋಗಿದ್ದು ನಿಮಗೆ ನೆನಪಿರಬೇಕೂಂತ ಅನಿಸುತ್ತೆ.

"ಬೊಂಬಾಯಿ ಮೇಲಿನಲ್ಲಿ ಹಿಂತಿರುಗಿ ಬರುತ್ತಿದ್ದೆ. ರಾತ್ರಿ ಸುಮಾರು ಎರಡು ಮೂರು ಗಂಟೆ ಇರಬೇಕು. ಕಣ್ತೆರೆದು ನೋಡುವಾಗ ಈ ತಿರುತ್ತಣಿ ಸ್ಟೇಷನ್ನಿನಲ್ಲಿ ನಿಂತುಕೊಂಡಿತ್ತು.

"ನನಗೆ ಮನಸ್ಸಿನೊಳಗೆ ಒಂದು ಆವೇಶ. ಮುಂಜಾನೆ ದರ್ಶನ ಪಡೆದು ಹೋಗಬೇಕೆಂದು ಅನಿಸಿತು. ಗಾಡಿಯಿಂದ ಕೆಳಗಿಳಿದೆ.

"ರೂಮು ಮಾಡಿಕೊಂಡು, ಹೆಚ್ಚು ಕಡಿಮೆ ಒಂದೆರಡು ಗಂಟೆಯಾದರೂ ವಿಶ್ರಾಂತಿ ಪಡೆದು ಬೆಳಿಗ್ಗೆ ಸ್ನಾನ ಮುಗಿಸಿ ಮತ್ತೆ ಬೆಟ್ಟಕ್ಕೆ ಹೋಗಬಹುದೆಂದು ಛತ್ರಕ್ಕೆ ಬಂದೆ.

"ಅಂದು ಸಹ ಒಂದೂ ರೂಮೂ ಖಾಲಿ ಇರಲಿಲ್ಲ. ಅದೋ ಆ ಬುಕ್ಕಿಂಗ್ ಆಫೀಸಿನ ಹೊರಗೆ ಬೆಂಚು ಹಾಕಿದ್ದಾರೆ ನೋಡು, ಅದರಲ್ಲಿ ಕುಳಿತುಕೊಂಡು ಸ್ವಲ್ಪ ಹೊತ್ತು ತೂಕಡಿಸಿದೆ.

"ಸ್ವಲ್ಪ ಸಮಯದಲ್ಲಿ ಒಂದು ಕಾರು ಬಂದು ನಿಂತ ಶಬ್ದ ಕೇಳಿಸಿತು.

"'ಹೆ! ಇದು ನಮ್ಮ ಮೂರ್ತಿಯ ಕಾರಲ್ವೇ!' ಎಂದುಕೊಂಡೆ. ಮೂರ್ತಿ ನಿಮಗೂ ಗೊತ್ತಿದೆಯಲ್ಲ. ತೆಳ್ಳಗೆ ಬೆಳ್ಳಗೆ ಯಾವಾಗ್ಲೂ ತಮಾಷೆ ಮಾತಾಡ್ಕೊಂಡಿರ್ತಾನೆ. ಕೆಲವು ಸಾರಿ ನನ್ನ ನೋಡ್ಲಿಕ್ಕೂ ಬರ್ತಾನೆ. ಇನ್ನೂ ಯಂಗ್. ಹೌಸಿಂಗ್ ಬೋರ್ಡಿನಲ್ಲಿ ಇಂಜಿನಿಯರ್ ಆಗಿದ್ದಾನೆ. ಅವನೊಡನೆ ಅವನ ಸ್ನೇಹಿತರೂ ಇದ್ದರು.

"ನನ್ನನ್ನ ನೋಡಿದೊಡನೆ ಅವನಿಗೂ ಅಚ್ಚರಿ.

"'ಷಣ್ಮುಗರಾಮ ಸಾರಲ್ವಾ! ಮದರಾಸಿನಲ್ಲಿ ನಿಮ್ಮನ್ನು ಕಾಣಲಿಕ್ಕೇ ಸಿಗೋದಿಲ್ಲಾ. ಆದ್ರಿಂದ ತಿರುತ್ತಣಿ ಒಂದು ಮಾಡಿದೆ ನೋಡಿ,' ಎಂದು ಕೈ ಕುಲುಕಿದ.

"'ಸುಮ್ನೆ ಜ್ಞಾಪಿಸಿಕೊಂಡು ಬಂದೆ. ರೂಮು ಸಿಗೋದಿಲ್ಲಾ ಅಂದ್ರು. ಅದನ್ನೇ ಕಾದುಕೊಂಡಿದ್ದೇನೆ. ಸರಿ, ನೀನು ಏನಪ್ಪ ಈ ಹೊತ್ನಲ್ಲಿ?'

"'ರಾಣಿಗುಂಟಾದಲ್ಲಿ ಒಂದು ಕೆಲಸ. ನೈಟ್ ಜರ್ನಿ ಸಮಾಧಾನವಾಗಿರುತ್ತೆ ಅಂತ ಫ್ರೆಂಡ್ಸ್ ಹೇಳಿದ್ರು. ತಿರುತ್ತಣಿ ಹೇಗೂ ಮಾರ್ಗದಲ್ಲೇ ಸಿಗುತ್ತೆ. ಸ್ವಲ್ಪ ರೆಸ್ಟ್ ತಗೊಂಡು ದರ್ಶನ ಪಡೆದು ಹೋಗುವಾ ಅಂತ ಬಂದೆ. ರೂಂ ಸಿಗೋದಿಲ್ವಾ?'

"'ಅದೇ ಕಂಪೆನಿ ಸಿಕ್ಕಿದೆಯಲ್ಲ. ಹೀಗೇ ಕಾರಿನಲ್ಲಿ ಕೂತ್ಕೊಂಡು ಮಾತನಾಡಿ ಕೊಂಡಿದ್ದರಾಯ್ತು' ಎಂದ ಒಬ್ಬ ಸ್ನೇಹಿತ.

"ಹೇಗೂ ಕಾರು ಇದೆ. ಒಳ್ಳೆಯ ಅನುಕೂಲ ಎಂದು ನನ್ನ ಯೋಜನೆಯನ್ನು ಅವರ



ಮುಂದೆ ಇಟ್ಟೆ. 'ಈಗಾಗಲೇ ಗಂಟೆ ಮೂರುವರೆ ಆಯ್ತು. ಸಮೀಪದಲ್ಲೇ ವಳ್ಳಿಮಲೆ ಇದೆ. ಅಲ್ಲಿವರೆಗೆ ಹೋಗಿಬರಬಹುದಲ್ಲ!'

"ನನ್ನ ಯೋಚನೆಯ ಅಭಿಪ್ರಾಯಕ್ಕೆ ಅವರು ಸಹ ಉತ್ಸಾಹದಿಂದ ಒಪ್ಪಿಕೊಂಡರು.

"'ನಿಮಗೆ ರೂಟ್ ಗೊತ್ತಿದ್ದರೆ ಸರಿ ಹೋಗುವಾ' ಎಂದರು.

"'ಹೇ, ಸಾರು ಚೆನ್ನಾಗಿ ಕೂತ್ಕೊಳ್ಳಿ-ಕಣ್ಣೋ ನೀನು ಮುಂದುಗಡೆ ಸೀಟಿಗೆ ಬಾ' ಎಂದು ಹಿಂದಿನ ಸೀಟನ್ನು ನನಗೊಬ್ಬನಿಗೆ ಬಿಟ್ಟುಕೊಟ್ಟು ಮೂವರೂ ಮುಂದಿನ ಸೀಟಿಗೆ ಹೋದರು.

"'ಇದೇ ರೋಡು ತಾನೆ ನೆಟ್ಟಗೆ ಹೋದ್ರೆ ಆಯ್ತಲ್ಲ' ಎಂದು ಹಾದಿಯನ್ನು ತೋರಿಸುತ್ತಾ ಕೇಳಿದ.

"'ಹೌದು. ಒಂದೇ ರೋಡು ನೆಟ್ಟಗೆ ಹೋದರೆ ಆಯ್ತು' ಎಂದು ಹಿಂದಿನ ಸೀಟಿನಲ್ಲಿ ಒರಗಿ ಕುಳಿತುಕೊಂಡೆ.

"ಮಳೆ ಬಂದು ನಿಂತ ಸಮಯ. ಕಪ್ಪೆಗಳ ಕೂಗು ಮಾತ್ರ ಕೇಳಿಕೊಂಡಿತ್ತು. ಗಗನದ ನಕ್ಷತ್ರಗಳ ಬೆಳಕೊಂದಲ್ಲದೆ ಬೇರಾವ ಬೆಳಕೂ ಹೊರಗೆ ಇರಲಿಲ್ಲ.

"ಕಾರು ಒಂದೇ ವೇಗವಾಗಿ ಸಾಗತೊಡಗಿತು. ನನಗೆ ಅರಿವಿಲ್ಲದಂತೆ ಕಣ್ಣೆವೆಗಳು ಮೆಲ್ಲನೆ ಮುಚ್ಚತೊಡಗಿದ್ದುವು. ಕ್ಷಣದಲ್ಲಿ ತಟ್ಟನೆ ಒಂದೇ ಸಮನೆ ಕಾರು ಅಲುಗಾಡುತ್ತಾ ನಿಂತಿತು.

"'ಮೂರ್ತಿ! ಏನೋ ಆಯ್ತು?' ಸ್ನೇಹಿತ ಕೇಳಿದ.

"'ಗೊತ್ತಿಲ್ಲವಲ್ಲ. ಗಾಡಿ ಮುಂದೆ ಹೋಗ್ತಾ ಇಲ್ಲ' ಎನ್ನುತ್ತಾ ಡ್ರೈವಿಂಗ್ ಸೀಟಿನ ಬದಿಯಿಂದಲೇ ಬಾಗಿಲು ತೆಗೆದು ಕೆಳಗೆ ಇಳಿದ ಮೂರ್ತಿ.

"ಗಾಡಿ ಸ್ವಲ್ಪ ಎಡಗಡೆ ವಾಲಿತ್ತು. ಜೇಬಿನಲ್ಲಿ ಟಾರ್ಚ್ ಇಟ್ಟುಕೊಂಡಿದ್ದೆ. ಅದನ್ನು ತೆಗೆದುಕೊಂಡು ಎಡಗಡೆ ಬೆಳಕು ಬಿಟ್ಟು ನೋಡಿದವನು ತನ್ನ ಸ್ನೇಹಿತನನ್ನು ಎಳೆದು ಹಿಡಿದುಕೊಂಡು— 'ತೆಗೆಯಬೇಡ!' ಎಂದು ಬೊಬ್ಬಿಟ್ಟ.

"ಮಾರ್ಗದಲ್ಲಿ ಯಾವುದೋ ಒಂದು ಸಣ್ಣ ದಾವ ಹಳೆಯ ಸೇತುವೆ ಇತ್ತು. ಅದರ ಎಡಬದಿಯಲ್ಲಿ ಸ್ವಲ್ಪ ಭಾಗದ ಹಲಗೆ ಕಿತ್ತು ಹೋಗಿದುವರಿಂದ ಆ ಸಂದಿನಿಂದ ಕಾರಿನ ಚಕ್ರಗಳೆರಡೂ ಕೆಳಕ್ಕೆ ಇಳಿದು ಹೋಗಿದ್ದವು. ಹಿಂದಿನ ಎರಡು ಚಕ್ರಗಳೂ ಮೇಲಕ್ಕೆ ಎತ್ತಲ್ಪಟ್ಟಿದ್ದವು. ಯಾವ ಗಳಿಗೆಯಲ್ಲೂ ಉರುಳಿ ಪ್ರಪಾತಕ್ಕೆ ಬೀಳಬಹುದಾಗಿತ್ತು. ಬಹಳ ಕಡಿದಾದ ಗುಂಡಿ.

"'ಎಲ್ಲರೂ ಬಲಗಡೆಯಿಂದ ಮೆಲ್ಲನೆ ಇಳಿಯಿರಿ' ಎಂದು ಹೇಳಿಕೊಂಡೇ ಮೆಲ್ಲಗೆ ಹೊರಗಡೆ ಇಳಿದೆ.

"ಮೂವರ ಮುಖದಲ್ಲೂ ನಿರ್ಜೀವ ಕಳೆ.

"'ಮುರುಗಾ! ಎಂಥ ಒಂದು ಆಪತ್ತಿನಿಂದ ನಮ್ಮನ್ನು ಕಾಪಾಡಿದ್ದೀಯಾ ಎಂದು' ಮನಸಾರೆ ದೇವರನ್ನು ನೆನೆದೆ.

"ದಟ್ಟ ಕಾಡು ಪ್ರದೇಶದ ತಾಣ. ಸಮೀಪದಲ್ಲಿ ಒಂದು ಮನೆಯೂ ಇಲ್ಲ. ಕಣ್ಣೆತ್ತುವವರೆಗೆ ಒಂದು ಮಿಣುಕು ಬೆಳಕೂ ಇಲ್ಲ. ನನ್ನ ಟಾರ್ಚಿನ ಬೆಳಕಿನಲ್ಲೇ ಕಾರನ್ನು ನೋಡಬೇಕಿತ್ತು.

"ಈಗ ಕಾರನ್ನು ಎತ್ತುವುದು ಹೇಗೆ? ಆಚೆ ಈಚೆ ಎಲ್ಲಾದರೂ ಹೆಚ್ಚು ಕಡಿಮೆ ಆದರೆ ಕಾರು ಪ್ರಪಾತಕ್ಕೆ! ಮೈ ಒಮ್ಮೆ ಜುಂ ಎಂದಿತು.

"ತಲೆಗೆ ತಲೆ ವಿಪರೀತ ಯೋಚನೆಯಿಂದ ನಾವು ಮೆದುವಾಗಿ ಅಲ್ಲಾಡಿಸಿ ನೋಡಿದೆವು. ಸುಮ್ಮನೆ ಇದ್ದವರನ್ನು ವಳ್ಳಿಮಲೆಗೆ ಹೋಗುವಾ ಎಂದು ಕರೆದು ಈ ಅನಾವಶ್ಯಕವಾಗಿ ಆಪತ್ತಿನಲ್ಲಿ ಸಿಕ್ಕಿ ಬೀಳಿಸಿದನಲ್ಲವೇ ಎಂದು ನನಗೆ ಮನಸ್ಸು ವಿಪರೀತ ಬೇಸರವಾಯಿತು.

"'ನನ್ನನ್ನು ಕ್ಷಮಿಸಿ ಬಿಡಿ ಅಪ್ಪ' ಎಂದೆ ಅನ್ಯ ಮಾರ್ಗವಿಲ್ಲದೆ.

"'ಏನು ಸರ್ ನೀವು? ಟೇಕ್ ಇಟ್ ಈಜಿ. ನಾನು ಜಾಗ್ರತೆಯಿಂದ ಓಡಿಸಿದ್ದರೆ ಹೀಗೆ ಆಗ್ತಿರಲಿಲ್ಲ; ತಪ್ಪು ನನ್ನದೆ' ಎಂದು ಮೂರ್ತಿ ಹೇಳಿದಾಗ ಅವನ ಬಗ್ಗೆ ಅನುಕಂಪ ಉಂಟಾಯಿತು.

"'ಗಂಟೆ ನಾಲ್ಕುವರೆ. ಸ್ವಲ್ಪ ಕಾದರೆ ಇನ್ನೇನು

ಬೆಳಗಾಗುತ್ತೆ. ಸಮೀಪಕ್ಕೆ ಹೋಗಿ ಯಾರಾದರೂ ಸ್ವಲ್ಪ ಜನರನ್ನು ಕರೆದುಕೊಂಡು ಬಂದು ಕಾರನ್ನು ಎತ್ತಬಹುದು' ನಂಬಿಕೆಯೊಡನೆ ಹೇಳಿದ ಒಬ್ಬ ಸ್ನೇಹಿತ.

"ಮಾರ್ಗದ ಮುಂಭಾಗದಿಂದ ಮಿಣುಕು ಮಿಣುಕಾದ ಬೆಳಕೊಂದು ಗೋಚರಿಸಿತು. ಯಾರೋ ಸೈಕಲ್ಲಿನಲ್ಲಿ ಬರುವಂತೆ ಅನಿಸಿತು. ಸೇತುವೆಯ ಸಮೀಪ ಬಂದೊಡನೆ ಸೈಕಲ್ಲನ್ನು ನಿಲ್ಲಿಸಿದ. ಹಿಂದಿನ ಸೀಟಿನಲ್ಲಿ ಅವನ ಹೆಂಡತಿಯನ್ನು ಕೂರಿಸಿಕೊಂಡು ಬಂದಿದ್ದ. ಎಳೆಯ ವಯಸ್ಸಿನ ಹೆಂಡತಿ. ತಾರುಣ್ಯದ ಚೆಲುವಾದ ಒಡಲು. ಹೊಸ ಸೀರೆ ಉಟ್ಟು ಬಾಯಿ ತುಂಬಾ ತಾಂಬೂಲ ತಿಂದು ಲಕ್ಷಣವಾಗಿದ್ದಳು ನೋಡಲು. 'ಒಳ್ಳೆಯ ಜೋಡಿ' ಎಂದುಕೊಂಡೆ ಮನಸ್ಸಿನಲ್ಲೇ.

"ಆತ ಸೇತುವೆಯ ಸಮೀಪಕ್ಕೆ ಬಂದು ವಾಲಿದ ಕಾರನ್ನು ನೋಡುತ್ತಾ 'ಏನಾಯ್ತು? ಏನು ಮಾಡ್ಕೊಂಡಿದ್ದೀರಿ?' ಎಂದು ಕೇಳಿದ.

"ಆತ ಕೇಳಿದ ಲೇವಡಿತನದ ಪ್ರಶ್ನೆ ಮೂರ್ತಿಗೆ ಕೋಪ ಬಂದಂತೆನಿಸಿ,

"'ಹೂಂ-ಕಾರು ಅರ್ಧದಲ್ಲಿ ಜೋತುಕೊಂಡಿದೆ, ಪೂರ್ತಿ ಹೇಗೆ ಕೆಳಗೆ ಉರುಳಿಸೋದೂಂತ ಯೋಚ್ನೆ ಮಾಡ್ಕೊಂಡಿದ್ದೇವೆ. ಹೋಗಯ್ಯ ನಿನ್ನ ಕೆಲ್ಸ ನೋಡ್ಕೊಂಡು,' ಎಂದು ವೇಗವಾಗಿ ನುಡಿದ.

"ಬಂದಾತ ಆತನ ಕೋಪವನ್ನು ಲಕ್ಷ್ಯದಲ್ಲಿಡಲಿಲ್ಲ. ಸೈಕಲ್ಲಿನಲ್ಲಿ ಕಟ್ಟಿದ ಬೆಳಕನ್ನು ಬಿಚ್ಚಿಕೊಂಡು ಕಾರಿನ ಹಿಂಬದಿಯನ್ನು ಮುಂಬದಿಯನ್ನೊಮ್ಮೆ ನೋಡಿದ ನಂತರ ಮೂರ್ತಿಯ ಬಳಿಗೆ ಬಂದು—

"'ಈಗ ಈ ಕಾರಿನ ಚಕ್ರಗಳನ್ನು ಬಿಡಿಸಿಕೊಂಡು ಗಾಡಿನ್ನ ಅತ್ತ ತೇಗಿಬೇಕು ಅಷ್ಟೆ ಅಲ್ವೆ? ನಾನು ಹೇಳಿದ ಹಾಗೆ ಮಾಡಿದ್ರೆ ಕಾರನ್ನು ಎಬ್ಬಿಸಬಹುದು ಮಾಡ್ತೀಯಾ?' ಎಂದು ಕೇಳಿದ.

"ಮೂರ್ತಿಯ ರೋಷ ಇನ್ನೂ ಇಳಿದಿರಲಿಲ್ಲ.

"'ಹೌದು ಇವನು ದೊಡ್ಡ ಪೈಲ್ವಾನ. ನಮಗೆ ತಿಳಿಯದ ಯೋಚನೆಯನ್ನು ಹೇಳಲಿಕ್ಕೆ ಬಂದಿದ್ದಾನೆ. ಅಯ್ಯೋ ಹೋಗಯ್ಯ ಒಂದು ಸಾರಿ' ಎಂದುಸುರಿ ಮುಖ ತಿರುಗಿಸಿದ.

"ಈಗ ಆ ಹೆಣ್ಣು ರೋಷದಿಂದ ಮೂರ್ತಿಯ ಎದುರಿಗೆ ಬಂದು ನಿಂತಳು.

"'ಅದ್ಯಾಕಯ್ಯ ನಿಂಗೆ ಮೂಗಿನ ತುದೀಲಿ ಇಷ್ಟೊಂದು ಕೋಪ? ಅವರು ಹೇಳೋದು ಏನೂಂತ ಸರಿಯಾಗಿ ಕೇಳು. ಇಷ್ಟವಾದರೆ ಮಾಡಿಸು ಇಲ್ಲವಾದರೆ ಬಿಟ್ಟುಬಿಡು' ಎಂದು ಸವಾಲು ಹಾಕುವಂತೆ ಆಕೆ ಹೇಳುವಾಗ ನನ್ನಿಂದ ಅದನ್ನು ನಿರಾಕರಿಸಲು ಆಗಲಿಲ್ಲ.

"'ಕಾರು ರಾತ್ರಿ ಹೊತ್ನಲ್ಲಿ ಹೀಗೆ ಆಯ್ತಲ್ಲ ಅಂತ ಬೇಸರ ಪಟ್ಟುಕೊಂಡಿದ್ದೇವೆ. ಅದ ರೂಪಕ್ಕೆ ನೋಡುವವರಿಗೆ ಒಳ್ಳೆ ಯೋಚನೆ ಬರುತ್ತದೆ. ಅವರು ಹೇಳಿದಾಗೆ ಮಾಡ್ಲಿ ಅಪ್ಪ' ಎಂದೆ ಸಮಾಧಾನದಿಂದ.

"ಮೂರ್ತಿಯೂ ತಲೆ ಆಡಿಸಿದ.

"'ಡ್ರೈವರ್ ಸೀಟಿನಲ್ಲಿ ಕಾರು ಓಡಿಸುವವರು ಕೂತುಕೊಳ್ಳಿ. ನಾನು ಎಡಗಡೆ ತೋಳು ಕೊಟ್ಟು ಎತ್ತುತ್ತೇನೆ. ಆಗ ಗಾಡಿಯನ್ನು ಸ್ಟಾರ್ಟ್ ಮಾಡಿ ಆಚೆ ಮುಂದೆ ಹೋಗುತ್ತೆ' ಎಂದ.

"ಆತ ಒಂದು ನಂಬಿಕೆಯಿಂದ ಹೇಳಿದ ಮಾತು ಮೂರ್ತಿಗೆ ಧೈರ್ಯ ನೀಡಿರಬೇಕು.

"ಮೂರ್ತಿ ಸೀಟಿನಲ್ಲಿ ಹೋಗಿ ಕುಳಿತುಕೊಂಡ. ಆ ಹಾಲಿನವನು ವಾಲಿರುವ ಕಾರಿನ ಎಡಬದಿಯ ಸೇತುವೆಯ ಬದಿಯಲ್ಲಿ ತುಸು ಇಳಿದು 'ಐಲೇಸಾ' ಎಂಬ ರೀತಿಯಲ್ಲಿ ಹೇಳಿಕೊಂಡು–

"'ಈಗ ಓಡಿಸು' ಎಂದ.

"ಕ್ಷಣದಲ್ಲಿ ಕಾರು ಯಾವ ತೊಂದರೆ ಇಲ್ಲದೆ ದುರಂತದ ಅಂಚಿನಿಂದ ಸರಿದು ಅಷ್ಟು ದೂರ ಹೋಗಿ ನಿಂತಿತು.

"ಮೂರ್ತಿ ಹರ್ಷದಿಂದ ನೋಟವೊಂದನ್ನು ಬೀರಿದ—

"'ತುಂಬಾ ಥ್ಯಾಂಕ್ಸ್ ಇದನ್ನು ಇಟ್ಟುಕೋ' ಎಂದು ಆತನ ಎದುರು ಕೈ ನೀಡಿದ.

"ಆತ ಆ ಕೈಯನ್ನು ಆತನೆಡೆಗೆ ತಳ್ಳಿ 'ಇದೇ-ನಯ್ಯ ದೊಡ್ಡ ಸಂಗತಿ' ಹೋಗು ಹೋಗು. ಮನುಷ್ಯರು ಇರೋದೇ ಪರಸ್ಪರ ಸಹಕಾರ ಕ್ಕಾಗಿ' ಎಂದು ಅಲಕ್ಷ್ಯದಿಂದ ತಿರುಗಿದವನು–'ನೀನು ವಳ್ಳಿಮಲೆಗೆ ತಾನೇ ಹೋಗ್ತಿಯಾ? ಇವಳ್ನ ಜೊತೆಗೆ ಕರೆದುಕೊಂಡ್ಹೋಗಿ ಅಲ್ಲೇ ಬಿಟ್ಟುಬಿಡು. ಇದಾ, ನೀನು ಹೋಗು ಅವರ ಜೊತೆ' ಎಂದು ಆ ಚೆಂದುಳ್ಳಿ ಹೆಂಡತಿಯನ್ನು ನಮ್ಮೊಡನೆ ಕಳುಹಿಸಿದ.

"'ಕತ್ತಲಿದೆ. ಚೆಲುವೆಯಾದ ಹೆಣ್ಣು ಹೆದರಿಕೋ ಬೇಡ,' ಎಂದ ಒಬ್ಬ ಸ್ನೇಹಿತ. ನನಗೆ ತುಸು ಮುಜುಗರವಾದಂತಿತ್ತು. ಅಷ್ಟರಲ್ಲಿ ಆ ಗಂಡಸು ನಸುನಗುತ್ತಾ 'ಸ್ವಂತ ಊರಾಯ್ತಲ್ಲ ಅವಳಿಗೇನು ಭಯ?' –ಎನ್ನುತ್ತಾ ಸೈಕಲ್ಲನ್ನು ಏರಿ ಹೋಗಿ ಬಿಟ್ಟ.

"ಆ ಹೆಣ್ಣು ಹಿಂದಿನ ಸೀಟಿನಲ್ಲಿ ಹತ್ತಿ ಕುಳಿತಳು. ಸೊಂಟದ ತಾಂಬೂಲ ಚೀಲವನ್ನು ತೆಗೆದುಕೊಂಡು ಅದರಿಂದ ಎಲೆ ಅಡಿಕೆಯನ್ನು ಬಾಯಿಗೆ ಹಾಕಿ ಜಗಿಯುತ್ತಾ ಹೊರಗೆ ಉಗಿದಳು.

"'ಹೇಗೆ ನಮ್ಮ ಊರು?' ಎಂದು ತುಸು ಹಾಸ್ಯದಿಂದ ನನ್ನನ್ನು ತರಾಟೆಗೆ ತೆಗೆದುಕೊಂಡಳು.

"ನನಗೆ ಬಾಯಿಯಿಂದ ಮಾತೇ ಹೊರಡಲಿಲ್ಲ.

"ವಳ್ಳಿಮಲೆಗೆ ಸ್ವಲ್ಪ ಹಿಂದೆಯೇ ಆಕೆ ಕಾರನ್ನು ನಿಲ್ಲಿಸಿ ಇಳಿದುಬಿಟ್ಟಳು.

"ವಳ್ಳಿಮಲೆಯನ್ನು ಸೇರಿದಾಗ ಚೆನ್ನಾಗಿ ಬೆಳಕಾಯಿತು. ನಮಗಾಗಿಯೇ ಕಾದು ಕುಳಿತುಕೊಂಡಿರುವಂತೆ ಅರ್ಚಕರು ನಮ್ಮನ್ನು ಸ್ವಾಗತಿಸಿದರು. ಅವರು ಮುಂದೆ ಹೋಗುತ್ತಿದ್ದಂ-ತೆಯೇ–

"'ಏನು ಸರ್ ಕಾರು ಪಾಲದ ಬಡಿಯಲ್ಲಿ ಸಿಕ್ಕಿ ಹಾಕಿಕೊಂಡಿತ್ತೆ?' ಎಂದು ಕೇಳಿದಾಗ ನಾವು ಅಚ್ಚರಿಪಡದೇ ಇರಲಿಲ್ಲ.

"ಎಲ್ಲೋ ನಮ್ಮ ಕಾರು ಸಿಕ್ಕಿ ಹಾಕಿಕೊಂಡು ಸ್ತಬ್ಧವಾದ ಸಂಗತಿ ಇವರಿಗೆ ಹೇಗೆ ಗೊತ್ತಾಯಿತು?

"'ಮೂರ್ತಿ ನಮ್ಮ ಆಪತ್ತಿನ ಸಮಯದಲ್ಲಿ ನಮ್ಮ ಸಹಾಯಕ್ಕೆ ಬಂದವರು ಬೇರೆ ಯಾರೂ ಅಲ್ಲ, ವಳ್ಳಿ ಮತ್ತು ಮುರುಗನೇ... ಇದರಲ್ಲಿ ಸಂದೇಹವೇ ಇಲ್ಲ. ಅವರ ಕಾಲಿಗೆ ನಾವು ಬೀಳದೇ ಹೋದೆವು!' ಎಂದ ಸ್ನೇಹಿತರಲ್ಲಿ ಒಬ್ಬ.

"ಇದನ್ನು ಇಲ್ಲಿ ಮಾತ್ರ ಹೇಳ್ತಾ ಇದ್ದೇನೆ. ಹೊರಗಡೆ ಹೇಳಿದ್ರೆ ಇವನೇನು ತಮಾಷೆ ಮಾಡ್ತಾನೆ ಅಂತ ಹೇಳ್ತಾರೆ. ಯಾರೂ ನಂಬೋದಿಲ್ಲ. ಆದರೆ ಇಲ್ಲಿ ಹೇಳದೆ ವಿಧಿ ಇಲ್ಲ."

ಷಣ್ಮುಗರಾಮ ಹೇಳಿ ಮುಗಿಸಿದರು.

ಬೆಳಗಿನ ಕಲರವದೊಡನೆ ಅವರವರು ಬೆಟ್ಟಕ್ಕೆ ಹೊರಡುವ ಸಡಗರದಲ್ಲಿದ್ದರು.

ಒಂದು ಕೊಠಡಿ ಸಿಕ್ಕು ತುಂಬಾ ಸೌಕರ್ಯ-ವಾಯ್ತು. ಹೆಂಗಸರು ಸ್ನಾನ ಮುಗಿಸಿ ಉಡುಪು ಬದಲಾಯಿಸಿಕೊಂಡು ಬಳಿಕ ನಮಗೆ ದಾರಿ ಮಾಡಿಕೊಟ್ಟರು. ಉಳಿದವರು ಎಲ್ಲರೂ ಸ್ನಾನ ಮುಗಿಸಿ ಅಣಿಯಾದರು. ನಾನೇ ಕೊನೆಯವ-ನಾಗಬೇಕಾಯಿತು.

ಬೆಟ್ಟಕ್ಕೆ ಹೊರಡಬೇಕಾಗಿದ್ದ ವ್ಯಾನು ಹೊರಗಡೆ ಕಾದುಕೊಂಡಿತ್ತು.

"ರೂಮಿನ ಬೀಗ ಕೊಟ್ಟು ನೀವು ಹೊರಡಿ. ನಾನು ಹಿಂದೆ ಬಂದು ನಿಮ್ಮೊಡನೆ ಸೇರಿಕೊಳ್ತೀನೆ" ಎಂದು ಅವರನ್ನು ಕಳುಹಿಸಿಕೊಟ್ಟೆ.

ನಾನು ಇಳಿದು ಬರುವಾಗ ವ್ಯಾನು ಹೊರಟು ಹೋಗಿತ್ತು. ಅದು ಹಿಂತಿರುಗಿ ಬರುವುದನ್ನು ಕಾದುಕೊಂಡಿದ್ದೆ.

"ಹಲ್ಲೋ" ಎಂದು ಸಮೀಪದಿಂದ ಧ್ವನಿ ಕೇಳಿ ದೆಡೆಗೆ ತಿರುಗಿ ನೋಡಿದೆ.

ಶೋಭಾ!

"ಏನು ಶೋಭಾ, ನೀನು ಹೋಗಲಿಲ್ವಾ?" ಎಂದು ಕೇಳಿದೆ.

"ನಾನು ಹೂವು ತೆಗೆದುಕೊಂಡು ಬರ್ತೇನೆ ಎಂದು ಹೋಗಿದ್ದೆ. ಹತ್ತು ನಿಮಿಷದೊಳಗೆ ಬಂದುಬಿಡು ಅಂದರು. ಹಿಂತಿರುಗಿ ಬರುವಷ್ಟರೊಳಗೆ ವ್ಯಾನು ಹೋಗಿತ್ತು" ಎಂದಳು.

"ರಾತ್ರಿ ಚೆನ್ನಾಗಿ ನಿದ್ರೆ ಬಂತಾ?"

ಆಕೆ ಮುಗುಳ್ನಗೆಯೊಡನೆ ಉತ್ತರಿಸಿದಳು,

"ಸ್ಥಳ ಬದಲಾಗಿದ್ದು ನೋಡಿ, ಷಣ್ಮುಗರಾಮರ ವಿಚಿತ್ರ ಕತೆ ಚೆನ್ನಾಗಿತ್ತಲ್ಲವೆ?"—ಎಂದಳು ಚೇಷ್ಟೆಗಾಗಿ.

"ಹೌದು, ಅದ್ನ ನೀನು ಹೇಗೆ ಕೇಳಿದೆ?"

"ನಮ್ಮ ರೂಮಿನ ಹೊರಗಡೆ ತಾನೆ ನೀವು ಮಾತನಾಡಿಕೊಂಡಿದ್ದು. ಹೊಸ ಜಾಗದಲ್ಲಿ ನನಗೆ ನಿದ್ರೆ ಬರೋದಿಲ್ಲ. ಕಿಟಕಿಯ ಬದಿಯಿಂದ ನೀವು ಹೇಳಿದ್ದೆಲ್ಲವನ್ನು ಚೆನ್ನಾಗಿ ಕೇಳಿದೆ. ಕಥೆಯಲ್ಲಿ ಆ ಕಾರು ಸಿಕ್ಕಿ ಹಾಕಿಕೊಂಡ ಜಾಗದ ಸನ್ನಿವೇಶ ಒಳ್ಳೆ ಸಸ್ಪೆನ್ಸ್."

"ನನಗೆ ಕೂಡ ಭಯ ಆಯ್ತು. ಒಳ್ಳೆ ಸಮಯ, ಅದು ಪ್ರಪಾತಕ್ಕೆ ಉರುಳಲಿಲ್ಲವಲ್ಲ ಸದ್ಯ."

"ಅದು ಸರಿ, ಆ ಪಾಲದಲ್ಲಿ ಕಾರು ಒಂದು ಬದಿ ವಾಲಿಕೊಂಡು ಜೋಲುತ್ತಿತು. ನಂತರ ಸೂಪರ್‌ಮೆನ್ ಬಂದು ತೋಳು ಕೊಟ್ಟು ಎತ್ತಿ ಸರಿ ಮಾಡಿದರೆಂದು ಹೇಳಿದರಲ್ಲ. ಸರಿ, ಅದು ಇಕ್ಕಟ್ಟಾದ ಪಾಲ, ಆತ ಹೇಗೆ ತೋಳು ಕೊಟ್ಟು ಅಷ್ಟು ಬೇಗನೆ ಎತ್ತಿ ಕೊಡಲು ಸಾಧ್ಯ? ಅದೂ ಅಲ್ಲಿದ್ದವರೆಲ್ಲ ಮೂಕರಾಗಿ ನಿಂತಿದ್ದರಂತೆ. ಆತನೊಬ್ಬನೇ ಕಾರನ್ನು ಎತ್ತಿ ಇಟ್ಟನಂತೆ!"

ನನಗೆ ಆಕೆಯ ಪ್ರಶ್ನೆಗೆ ಏನು ಹೇಳಬೇಕೆಂದು ತೋಚಲಿಲ್ಲ. ಶೋಭಾ ಹಂತಹಂತವಾಗಿ ವಿಮರ್ಶಿಸಿ, ಕೊನೆಯದಾಗಿ ಮತ್ತೊಂದು ಅಭಿಪ್ರಾಯವನ್ನು ಹೇಳಿದಳು.

"ನೋಡಿ—ಅರ್ಚಕರು ಇವರನ್ನು ನೋಡಿದೊಡನೆ 'ದಾರಿಯಲ್ಲಿ ಏನಾದರೂ ಅಪಘಟನೆಯೇ?' ಎಂದು ಕೇಳಿದಾಗ ಅವರು, 'ಎಲ್ಲಿಯೋ ನಡೆದದ್ದು ಇವರಿಗೆ ಹೇಗೆ ತಿಳಿಯಿತು?' ಎಂದು ದಿಗ್ಭ್ರಮೆಗೊಂಡರಂತೆ. ಯಾಕಾಗಿ ದಿಗ್ಭ್ರಮೆ ಪಡಬೇಕು? ಆ ಅರ್ಚಕನನ್ನೇ 'ನಿಮಗೆ ಆ ವಿಷಯ ಹೇಗೆ ಸ್ವಾಮಿ ತಿಳೀತು?' ಎಂದು ಕೇಳೋದು ತಾನೆ. ಯಾಕೆ ಕೇಳಲಿಲ್ಲ?" ಅವಳು ನಕ್ಕಳು.

"ಹಾಗಾದ್ರೆ ನೀನು ಅದನ್ನ ನಂಬೋದಿಲ್ವಾ?"

"ನೀವು ಮಾತ್ರ ನಂಬಿಬಿಟ್ಟಿರೇನು? ನೀವು ಬಾಯಾರೆ ಹೇಳಿದಿರಲ್ಲ; ನೀವು ನಂಬಿದ ಹಾಗೆ... ಹೂವಿನ ಅಂಗಡಿಯಲ್ಲಿ ಹೂವು ಕಟ್ಟಿ ಮುಗಿದಿರ ಬಹುದು. ಅದನ್ನು ತೆಗೆದುಕೊಂಡು ಬಂದು ಬಿಡ್ತೇನೆ" ಎನ್ನುತ್ತ ಅವಳು ಹೊರಗಡೆ ಹೋದಳು.

ಅಷ್ಟರಲ್ಲಿ ವ್ಯಾನು ಹಿಂತಿರುಗಿತು.

ಸ್ನೇಹಿತರು ಕೆಳಗೆ ಇಳಿದು ಬಂದರು. ಮೊದಲು ಇಳಿದ ಷಣ್ಮುಗರಾಮು—

"ಟಿಕೆಟ್ ತೆಗೆದುಕೊಳ್ಳಲಿಲ್ವಾ! ಬೇಗ ಹತ್ತಿ ಕುಳಿತುಕೊಳ್ಳಿ, ನಾನು ತೆಗೆದುಕೊಂಡು ಬರ್ತೇನೆ" ಎಂದು ಅವಸರಪಡಿಸಿದರು.

"ಶೋಭಾಳಿಗೂ ಒಂದನ್ನು ತಗೋಳ್ಳಿ. ಅವ್ಳು ಹೂವು ತೆಗೆದುಕೊಂಡು ಬರ್ಲಿಕ್ಕೆ ಹೋಗಿದ್ದಾಳೆ, ಇನ್ನೇನು ಬಂದುಬಿಡ್ತಾಳೆ."

"ಶೋಭಾಳ! ಏನು ಹೇಳ್ತಾ ಇದ್ದೀರಿ? ಅವಳು ನಮ್ಮೊಡನೆ ಬಂದಳಲ್ಲ... ಶೋಭಾ... ಶೋಭಾ..." ವ್ಯಾನಿನೊಳಗೆ ಮುಖ ಮಾಡಿ ಒಳಗೆ ಕರೆದರು ಷಣ್ಮುಗರಾಮು.

"ಇವಾ, ಬಂದುಬಿಟ್ಟೆ, ಸಾರ್!" ಎಂದು ಇಳಿದು ಕೊಂಡಿದ್ದಳು ಶೋಭಾ. ಹಾಗಿದ್ದರೆ ಈವರೆಗೆ ನನ್ನೊಡನೆ ಮಾತಾಡಿಕೊಂಡಿದ್ದ ಶೋಭಾ? ನನಗೆ ರೋಮಾಂಚನವಾಗತೊಡಗಿತು.

"ನಾಯಿಗಳಿವೆ ಎಚ್ಚರಿಕೆ"

ನಾಯಿಗಳಿವೆ ಎಚ್ಚರಿಕೆ" ಎಂದು ನಾಮಫಲಕವು ಶ್ರೀಮಂತರ ಮನೆಗಳ ಮುಂದೆ ಗೇಟಿನಲ್ಲಿ ನೇತಾಡುತ್ತಿರುತ್ತದೆ. ಎಲ್ಲ ಪ್ರಾಣಿಗಳಲ್ಲಿ ಶ್ರೇಷ್ಠವಾದ ಈ ಮಾನವ ಪ್ರಾಣಿಗಿಂತಲೂ ವಿಶ್ವಾಸಾರ್ಹ ಮತ್ತು ಉಪಯುಕ್ತವಾದ ಈ ಪ್ರಾಣಿ ಎಲ್ಲ ಮನೆಯ ಸಾಕು ಪ್ರಾಣಿ ನಿಜ. ಆದರೆ ಕೆಲವೊಂದು ಸಲ ಇದೇ ನಾಯಿಯು ನಿರ್ಗತಿಕವೂ ಆಗುತ್ತದೆ. ಏನೇ ಇದ್ದರೂ ನಾವು-ನೀವು ಈ ನಾಯಿಗಳಿಂದ ದೂರಾಗಿ ಇರುವ ಕಾಲ ಬಂದಿದೆ. ನಾಯಿಯು ಮನುಷ್ಯನ ಮಿತ್ರನೇನೋ ನಿಜ. ಆದರೆ ಕೆಲವು ಸಂದರ್ಭಗಳಲ್ಲಿ ಅದು ಮನುಷ್ಯನ ಭಯಂಕರ ಶತ್ರುವೂ ಆಗಿರುತ್ತದೆ. ಮನುಷ್ಯನ ಶರೀರವನ್ನೇ ಹಾಳು ಮಾಡುವಂಥ ಭಯಂಕರ ರೋಗಗಳಾದ ಫೆಕರ್, ಹಿಪಟೈಟಿಸ್, ಕಣ್ಣು ನೋವು, ಅಸ್ತಮಾ, ಪೋಲಿಯೋ ಇತ್ಯಾದಿ ಈ ಭಯಂಕರ ರೋಗಗಳು ಈ ನಾಯಿಗಳಿಂದಲೇ ಪ್ರಸಾರಗೊಳ್ಳಬಹುದು. ಕೆಲವು ತಜ್ಞರ ಪ್ರಕಾರ ನಾಯಿಯ ಶರೀರದಲ್ಲಿ 'ಟೋಕ್ಸೊಕ್ಯಾಟ್‌ಕ್ಯಾನಿಸ್' ಎಂಬ ಅತ್ಯಂತ ಭಯಾನಕ ರೋಗಜಂತುಗಳ ವಸಾಹತು ಇರುತ್ತದೆ. ಈ ರೋಗಜಂತುಗಳು ಮಾನವ ಕಣ್ಣುಗಳ ಮುಖಾಂತರ ಶರೀರದಲ್ಲಿ ಪ್ರವೇಶಿಸುತ್ತವೆ. ಮುಂದೆ ಈ ರೋಗ ಜಂತುಗಳು ಪುಪ್ಪುಸ, ಯಕೃತ್ತು, ಮತ್ತು ಮಿದುಳುಗಳಲ್ಲಿ ಸೇರಿ ಶರೀರಕ್ಕೆ ಹಾನಿಯನ್ನುಂಟುಮಾಡುತ್ತವೆ. ಹೀಗೆ ಸೇರಿದ ರೋಗ ಜಂತುಗಳ ಕಾರಣದಿಂದ ಸುಮಾರು ನೂರಕ್ಕೆ ನಲ್ವತ್ತರಂತೆ ಜನರು ನಾನಾ ಬಗೆಯ ಕಣ್ಣು ಬೇನೆಗಳಿಂದ ಬಳಲುತ್ತಿದ್ದಾರೆಂದು ವೈದ್ಯಕೀಯ ತಜ್ಞರು ಹೇಳುತ್ತಾರೆ. ಹೀಗಿರುವಾಗ "ನಾಯಿಗಳಿವೆ ಎಚ್ಚರಿಕೆ" ಎಂದು ಅನ್ನುವ ಬದಲು ನಾಯಿಗಳಿಂದ ನಾವೇ ಎಚ್ಚರವಾಗಿರುವುದು ಒಳ್ಳೆಯದಲ್ಲವೇ?

—ಎಂ. ವಿ. ಮಾಲಬಾವಡಿ

ಶತಮಾನದ ಕೃತಿನೂರು

- ಮಂಕುತಿಮ್ಮನ ಕಗ್ಗ
- ಗೋಕುಲ ನಿರ್ಗಮನ
- ಸಂಸ್ಕಾರ

ದೇಶಪಾಂಡೆ ಸುಬ್ಬರಾಯ

೨೮

ಡಿ.ವಿ.ಜಿ./ಮಂಕುತಿಮ್ಮನ ಕಗ್ಗ

೧) ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆ
ಯಾಗು।
ಕಲ್ಲಾಗು ಕಷ್ಟಗಳ ಮಳೆಯು ವಿಧಿ ಸುರಿಯೆ॥
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ।
ಎಲ್ಲರೊಳಗೊಂದಾಗು—ಮಂಕುತಿಮ್ಮ॥

೨) ಅನ್ನವುಣುವಂದು ಕೇಳ್: ಅದನು
ಬೇಯಿಸಿದ ನೀರ್।
ನಿನ್ನ ದುಡಿತದ ಬೆವರೊ, ಪೆರರ
ಕಣ್ಣೀರೋ?॥
ತಿನ್ನು ನೀಂ ಜಗಕೆ ತಿನಲಿತ್ತನಿತ; ಮಿಕ್ಕೂಟ।
ಜೀರ್ಣಿಸದ ಋಣಶೇಷ—ಮಂಕುತಿಮ್ಮ॥

೩) ಬದುಕು ಜಟಕಾ ಬಂಡಿ ವಿಧಿಯವರ
ಸಾಹೇಬ।
ಕುದುರೆ ನೀನ್, ಅವನು ಪೇಳ್ದಂತೆ ಪಯಣಿ
ಗರು॥
ಮದುವೆಗೋ ಮಸಣಕೋ ಹೋಗೆಂದ
ಕಡೆಗೋಡು।
ಪದಕುಸಿಯೆ ನೆಲವಿಹುದು—ಮಂಕುತಿಮ್ಮ॥

೪) ಮುಂದೇನೋ ಮತ್ತೇನೋ, ಇಂದಿಗಾ
ಮಾತೇಕೆ?।
ಸಂದರ್ಭ ಬರಲಿ ಬಂದಾಗಳಾ ಚಿಂತೆ॥
ಹೊಂದಿಸುವನಾರೊ, ನಿನ್ನಾಳಲ್ಲ ಬೇರಿಹನು।
ಇಂದಿಗಿಂದಿನ ಬದುಕು—ಮಂಕುತಿಮ್ಮ॥

ಡಿ. ವಿ. ಜಿ. ಅವರ 'ಮಂಕುತಿಮ್ಮನ ಕಗ್ಗ' ಎಂದೊಡನೆಯೇ ಫಕ್ಕನೇ ಹೊಳೆದುಕೊಳ್ಳುವ ಸೂಕ್ತಿಶ್ರೇಷ್ಠಗಳಲ್ಲಿ ಕೆಲವು ಮಾತ್ರ ಇವು. ಗೈಯ ಬೇಕಾದುದನ್ನು ಕುರಿತು ನಿಷ್ಠೆಯಿಂದಿದ್ದು ಗೈಯುತ್ತ ಸಾಗುವುದಷ್ಟೇ ನಮ್ಮ ಕರ್ತವ್ಯವೆಂಬ

ನಂಬಿಕೆಯ ಹಿನ್ನಲೆಯಲ್ಲೇ ಆಗಲಿ; ತನ್ನ ಜಿವರಿತ್ತ ಅನ್ನಕ್ಕೆ ಮಾತ್ರವೇ ತಾನು ಬಾಧ್ಯಸ್ಥನೆಂದು ಸಾರುವ ದುಡಿಮೆ ಪ್ರಜ್ಞೆಯ ಪಾರ್ಶ್ವದಲ್ಲೇ ಆಗಲಿ; ಸರ್ವರ ಸುಖದುಃಖಗಳಲ್ಲಿ ಸಮಭಾಗಿಯಾಗಿ ಜೀವಿಸುವ ಸಮಷ್ಟಿ ಸಿದ್ಧಾಂತವನ್ನು ಆತುಕೊಂಡೇ ಆಗಲಿ; 'ಕಗ್ಗ'ದಲ್ಲಿಯ ಒಂದೊಂದು ನುಡಿಯೂ ಕೇಳುಗನನ್ನು ಬರಿದೇ ಸೆಳೆದುಕೊಳ್ಳುವದಿಲ್ಲ, ಆತನನ್ನು ಒಳಗೊಳ್ಳುತ್ತದೆ. ಬರಿದೇ ಹೇಳಿದವನ ಬಗೆಗಲ್ಲ, ಬದುಕಿನ ಬಗ್ಗೇ ಒಂದು ಗೌರವವನ್ನು ಅರಳಿಸುತ್ತದೆ. ಬದುಕಿನ ವಿರಾಟ್ ಸ್ವರೂಪದ ಬಗೆಗೆ, ಜೀವ ನಿರಂತರತೆಯ ಬಗೆಗೆ, ಪಾಪ-ಪುಣ್ಯ, ಸಮತೆ-ಪ್ರಗತಿ, ಸಾಧನೆ-ಸಮನ್ವಯ, ಪ್ರೀತಿ-ಕ್ಷಮೆ, ಸುಖ-ಶಾಂತಿ, ವ್ಯಷ್ಟಿ-ಸಮಷ್ಟಿ, ಜೀವ-ಕಾವ್ಯ, ಭಕ್ತಿ-ಭಾವ, ವಿಧಿ-ವಿಚಾರ ಹೀಗೆ ಬದುಕಿನ ಸಾವಿರ ಮುಖಗಳ ಬಗೆಗೆ ಸಾವಿರ ಮಾರ್ಗಗಳ ಬಗೆಗೆ, ಒಟ್ಟಾರೆಯ ಒಂದು ಕರ್ತವ್ಯಪ್ರಜ್ಞೆಯ ಬಗೆಗೆ, ನಿಸ್ಪೃಹ ನಿರ್ವಹಣೆಯ ಬಗೆಗೆ ಒಂದು ಬಗೆಯ ಪ್ರೀತಿಯನ್ನು, ಆದರವನ್ನು, ವಿವೇಚನೆಯನ್ನು, ಧೀಮಂತಿಕೆಯನ್ನು ಹುಟ್ಟಿಸುತ್ತದೆ. ಮತ್ತು ಕೆಲವಾದರೂ ನೆಲೆಗಳಲ್ಲಿ ಇಲ್ಲಿಯ ಜೀವನ ವಿವೇಕವನ್ನು 'ಜೀವನ ಧರ್ಮ'ವಾಗಿ ಸ್ವೀಕರಿಸಲು ಪ್ರೇರೇಪಿಸುತ್ತದೆ. ಇದು ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಒಂದು ದೊಡ್ಡ ಯಶಸ್ಸು.

ಇಲ್ಲಿ, 'ಕಗ್ಗ'ದ ಮುಖೇನ ಡಿ. ವಿ. ಜಿ. ಸಾಧಿಸಿರುವ ಯಶಸ್ಸು ಒಂದು ದೃಷ್ಟಿಯಿಂದ ಒಬ್ಬ ಸಾಧಕನ ಯಶಸ್ಸು. ಏಕೆಂದರೆ, ಈ ಯಶಸ್ಸಿನ ಹಿಂದೆ, ಒಂದು ಜ್ವಲಂತ ಜೀವನ ನಿಷ್ಠೆ ಇದೆ. ನಂಬಿಕೆ ಇದೆ. ನಿಷ್ಠೆಗಳನ್ನು ನಂಬಿ ನಡೆಯುವ ನಿರ್ವಂಚಕ ಬದುಕು ಇದೆ. ಆ ಕುರಿತು, ಪ್ರೀತಿ, ಗೌರವ, ಆತ್ಮೀಯ ಅಂತಃಕರಣಗಳಿವೆ. ಕರ್ತವ್ಯ ಪ್ರಜ್ಞೆ ಇದೆ. ಬದುಕಿನ ಗಾಢತೆಯನ್ನು ಕುರಿತು, ಗೂಢತೆಯನ್ನು ಕುರಿತು ಅರಿವು ಇದೆ. ಎಂತಲೇ ಒಬ್ಬ ಸಂತನ ಮನಸ್ಸನ್ನೂ ಹೊಂದಿದ ಈ ಕವಿ, 'ಕಗ್ಗ'ದಲ್ಲಿ ಸಾಧಕನ 'ಸಿದ್ಧಿ'ಯನ್ನು ಪಡೆಯುವುದು ಸ್ವಾಭಾವಿಕ.

'ಕಗ್ಗ'ದಲ್ಲಿ ಪ್ರತಿಪಾದಿತವಾಗುವ ವಿವೇಕವನ್ನು, ವಿವೇಚನೆಯನ್ನು, ಜೀವನದ ಜೀವಂತ ಮೌಲ್ಯಗಳನ್ನು, 'ಕಗ್ಗ' ಪ್ರತಿಪಾದಿಸುವ 'ಜೀವನ ಧರ್ಮ' ಎನ್ನಬಹುದು. ಆದರೆ ಇಲ್ಲಿಯ 'ಧರ್ಮ' ಎಂದರೆ, ಕೆಲ ಜಾತಿಯಾದಿಗಳನ್ನು ಒಳಗೊಂಡ ಒಂದು ವಿಶಿಷ್ಟ ಪಂಗಡವಲ್ಲ. ಇಲ್ಲಿಯ 'ಧರ್ಮ' ಬದುಕು. ನಿಸ್ಪೃಹ ಬದುಕು. ಪ್ರಾಮಾಣಿಕ ಬದುಕು. ಕರ್ತವ್ಯನಿಷ್ಠ ಬದುಕು. ನಂಬಿಕೆಯ, ದುಡಿಮೆಯ, ಪ್ರೀತಿಯ, ಅಭಿಮಾನದ, ಆಹ್ಲಾದದ ಸಾರ್ಥಕ್ಯದ ಸ್ವಾಭಾವಿಕ ಬದುಕು. ಆದ್ದರಿಂದ ಇದು ಹರ್ಷವನ್ನು, ಅಭಿಮಾನವನ್ನು, ಆರೋಗ್ಯವನ್ನು ಪ್ರತಿಪಾದಿಸುವ ಧರ್ಮ. "ನಗುವು ಸಹಜದ ಧರ್ಮ; ನಗಿಸುವದು ಪರ ಧರ್ಮ ನಗುವ ಕೇಳುತ ನಗುವ ತಿಳಿಯದ ಧರ್ಮ॥ ನಗುತ ನಗಿಸುತ ನಗಿಸಿ ನಗುತ ಬಾಳುವ ವರವ। ಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ." ಈ ಇಡಿಯ 'ಕಗ್ಗ'ದ ಮೌಲ್ಯಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಇಲ್ಲಿ ಪ್ರತಿಪಾದಿತವಾಗುವ 'ನಗು' ಕೇವಲ ತುಟಿ ಮುಖ ಚಲನೆಗಳ ಮುಖೇನ ಹೊರಬೀಳುವ ಕ್ರಿಯೆ ಮಾತ್ರವೆನಿಸದೆ, ಇಡಿಯ ಬದುಕು ಹೊರಸೂಸುವ ಅಂತಃಕರಣ ಆತ್ಮೀಯತೆ ಇತ್ಯಾದಿ ಆರ್ದ್ರ ಭಾವಗಳ ಸಮಗ್ರ ಭಾವ ಸಂಚಾರ ಮತ್ತು ಭಾವವಿನಿಮಯವೆನಿಸುತ್ತದೆ. ಆದ್ದರಿಂದ ಇದು ಆರೋಗ್ಯಪೂರ್ಣ ಬದುಕುಗಳ ವಿನಿಮಯವೂ ಹೌದು. ಆದ್ದರಿಂದ ಆತ್ಮೀಯ ಸಹಜೀವನದ ಪ್ರತಿಪಾದನೆಯೂ ಹೌದು ಎನಿಸುತ್ತದೆ.

'ಕಗ್ಗ'ದಲ್ಲಿ ಏನಿಲ್ಲ? ಇಲ್ಲಿ ಬೋಧನೆ ಇದೆ. ವಿವೇಕವಿದೆ. ವಿವೇಚನೆ ಇದೆ. ಬದುಕಿನ ಒಳಗುಟ್ಟನ್ನು ವಿವರಿಸುವ ವಿಶ್ಲೇಷಣೆ ಇದೆ. ಆರೋಗ್ಯಕರ ನಿರ್ವಹಣೆ ಕುರಿತು ಚಿಂತನೆ ಇದೆ. ಅರ್ಥಪೂರ್ಣ ಗುರಿಯೆಡೆಗೆ ನಿರ್ದೇಶನವಿದೆ. ಆದ್ದರಿಂದ ಹೃದಯದಿಂದ ಹೃದಯಕ್ಕೆ ಸ್ಪಂದಿಸುವ ಒಂದು ಆತ್ಮೀಯವಾದ ಮೌಲ್ಯಾತ್ಮಕ ಸಂವಾದವೇ ಇಲ್ಲಿದೆ.

'ಮಂಕುತಿಮ್ಮನ ಕಗ್ಗ'ದ ರಚನೆಗಳ ಆಕೃತಿಗೆ ಸಂಬಂಧಿಸಿದಂತೆ ಕೂಡ ಆಗೀಗ ಕೇಳಲಾಗುತ್ತಿರುವ ಒಂದು ಪ್ರಶ್ನೆಗೆ ಇಲ್ಲಿ ಉತ್ತರವೀಯಬಹುದೇನೋ. 'ಕಗ್ಗ'ದ ವಿಮರ್ಶೆಯ ಇತಿ-

ಹಾಸದ ಅನೇಕ ಹಂತಗಳಲ್ಲಿ ಆಗೀಗ ಕೇಳಿ ಬರುವ ಒಂದು ಮುಖ್ಯ ಪ್ರಶ್ನೆ: 'ಕಗ್ಗ' ಒಂದು 'ಕಾವ್ಯವೆ?' ಇಂತಹ ಪ್ರಶ್ನೆಗಳು ಉದ್ಭವಿಸಿದಾಗೆಲ್ಲ ಸಂಭವಿಸುವಂತೆ, ಅನೇಕ ನಿಲುವುಗಳ ಮಧ್ಯ, ಎರಡು ಅತಿರೇಕಗಳು ಹುಟ್ಟಿಕೊಂಡವು. ಇದು ಕಾವ್ಯವೇ ಅಲ್ಲ ಎಂದರು ಕೆಲವರು. ಇದು ನಿಜಕ್ಕೂ ಶ್ರೇಷ್ಠ ಕಾವ್ಯ ಎಂದರು ಇನ್ನಿತರರು.

ಇದಕ್ಕೆ ಉತ್ತರ ರೂಪವಾಗಿ, ಸಂಗ್ರಹದಲ್ಲಿ ಇಷ್ಟು ಮಾತ್ರ ಹೇಳಬಹುದೇನೋ.

ಯಾವುದೇ ಶ್ರೇಷ್ಠ ಮಟ್ಟದ ಸೃಜನಶೀಲ ಬರಹಗಾರನೊಬ್ಬ, ತನ್ನ ಮಾತುಗಳನ್ನು ಆದಷ್ಟು ಖಚಿತವಾಗಿ ನಿಖರವಾಗಿ ಹೇಳಲು ಒಂದು ನಿರ್ದಿಷ್ಟವಾದ ಅಭಿವ್ಯಕ್ತಿಯ ಪ್ರಕಾರವನ್ನಾಯ್ದುಕೊಳ್ಳುತ್ತಾನೆ. ಅಷ್ಟೇ ಅಲ್ಲ, ಅದನ್ನು ತನ್ನ ಇಷ್ಟಗಳಿಗೆ ಅನುಗುಣವಾಗಿ ಅಭಿವ್ಯಕ್ತಿಯ ನಿಶಿತತೆಯ ದೃಷ್ಟಿಯಿಂದ ತನ್ನದೇ ಆದ ಆಕಾರಕ್ಕೆ ಬದಲಾಯಿಸಿಕೊಳ್ಳುತ್ತಾನೆ. ಹೀಗೆ ಬದಲಾಯಿಸಿಕೊಳ್ಳುವಾಗ ಉಳಿದ ಪ್ರಕಾರಗಳ, ಬೇಕಾದ ಅಂಶಗಳನ್ನು ಎತ್ತಿಕೊಂಡು ತನ್ನ 'ಇಷ್ಟದೇವತಾ ವಿಗ್ರಹಕ್ಕೊಗ್ಗುವ' ಆಕಾರಕ್ಕೆ ತಕ್ಕಂತೆ ಕಟ್ಟಿಕೊಳ್ಳುತ್ತಾನೆ. ಹೀಗೆ, ಗದ್ಯದ ಅನೇಕ ಅತ್ಯುತ್ತಮ ಅಂಶ ಮತ್ತು ಪದ್ಯದ ಅಷ್ಟೇ ಅತ್ಯುತ್ತಮ ಅಂಶಗಳನ್ನು ಅಷ್ಟೇ ಉತ್ತಮ ರೂಪದಲ್ಲಿ ಅಳವಡಿಸಿಕೊಳ್ಳಲಾದ ಒಂದು ಆಕೃತಿ 'ಮಂಕುತಿಮ್ಮನ ಕಗ್ಗ'. ಹೀಗಾಗಿ ಈ ಆಕೃತಿಗೆ ಅದರದೇ ಆದ ಒಂದು ವೈಶಿಷ್ಟ್ಯ ಬಂದೊದಗಿದೆ.

ಇಲ್ಲಿ, 'ಕಗ್ಗ'ದಲ್ಲಿ ಬಳಕೆಯಾಗಿರುವ ಪರಿಕರಗಳ ಜಗತ್ತು ಕೂಡ ಬಹು ವಿಶಾಲವಾದದು. ಇಲ್ಲಿ ನಮ್ಮ ಪುರಾಣಗಳಿವೆ, ಪಾಶ್ಚಾತ್ಯ ಪುರಾಣಗಳಿವೆ. ರಾಮಾಯಣ ಮಹಾಭಾರತಗಳಿವೆ. ಶ್ರುತಿಸ್ಮೃತಿಗಳಿವೆ. ಇತಿಹಾಸ ಭೂಗೋಲಗಳಿವೆ. ನಮ್ಮ ಐತಿಹ್ಯಗಳತ್ತ, ಆಖ್ಯಾಯಿಕೆಗಳತ್ತ, ಜಾನಪದ ಕಥಾನಕಗಳತ್ತ, ದಾಟಿಕೊಳ್ಳುತ್ತ ಬಂದ ನಂಬುಗೆಗಳತ್ತ ಪರಿಸರಗಳಿವೆ. ಪಾತ್ರಗಳಿವೆ. ಪ್ರಚಲಿತ ಜನಜೀವನದ ದಾಂಗುಡಿಗಳಿವೆ. ಯೇಸುವಿನಿಂದ ಮೊದಲ್ಗೊಂಡು ಡಯೋಜಿನಿಯುಸ್, ಶೇಕ್ಸ್‌ಪಿಯರ್, ಸರ್ ಫಿಲಿಪ್ ಸಿಡ್ನಿ, ಅಬ್ರಹಾಂ ಲಿಂಕನ್ ಮೊದಲಾದ ವರಕೀಯರ ನೇರ ಪರೋಕ್ಷ ಮುಖಗಳಿವೆ.

ಹೀಗೆ, ಇಡಿಕಿರಿಯುವಷ್ಟು ಪರಿಕರಗಳನ್ನು ಬಳಸಿ, ಜಗದ ತೆಕ್ಕೆಯಲ್ಲಿಯ ಸಮಗ್ರ ಬದುಕನ್ನು ಭಟ್ಟಿ ಇಳಿಸಿ. ತಮ್ಮ ವಿಶಾಲ ಮನಸ್ಸು ಮತ್ತು ವಿಸ್ತೃತ ವಿವೇಚನೆಗಳ ಹಿನ್ನೆಲೆಯಲ್ಲಿ ಮಾಪನಕ್ಕಿಳಿಸಿ, ಒಂದು ಆತ್ಮೀಯ ಪರಿಸರದಲ್ಲಿ, ಮಂಡಿಸಲಾದ ಒಂದು ಆದರ್ಶಮಯ ಜೀವನ ಧರ್ಮದ ಅಪೂರ್ವ ಪ್ರತಿಪಾದನೆ, ಡಿ. ವಿ. ಜಿ. ಅವರ 'ಮಂಕುತಿಮ್ಮನ ಕಗ್ಗ'.

೨೯

ಪು. ತಿ. ನರಸಿಂಹಾಚಾರ್/ ಗೋಕುಲ ನಿರ್ಗಮನ

ಕೃಷ್ಣನ ಬದುಕಿನಲ್ಲಿಯ ಮುಖ-ಮುಖ್ಯಗಳನ್ನು ಧ್ವನಿಮಾತ್ರದಿಂದ ನಮಗೆ ತಿಳಿಸುವ ಘಟ್ಟಗಳು ಮುಖ್ಯವಾಗಿ ಎರಡು: ಒಂದು, ಆತನ ಬದುಕಿನ ಆರಂಭದ ಕೊಳಲಿನ ಜಗತ್ತು; ಎರಡು, ಆತನ ನಂತರದ ಬದುಕಿನ ಪಾಂಚಜನ್ಯ ಜಗತ್ತು ಒಂದೊಂದೂ ಇನ್ನೊಂದಕ್ಕಿಂತ ಭಿನ್ನ, ಎಷ್ಟೋ ಸಲ ವಿರುದ್ಧ ಕೂಡ. ನವುರು ಮಾರ್ದವತೆ, ತುಂಟ ಸಾಹಸ, ಪ್ರೇಮಪೂರ ಇತ್ಯಾದಿಗಳು ಕೊಳಲಿನ ಜಗತ್ತನ್ನು ಕಳೆಗಟ್ಟಿದರೆ; ರಾಜಕಾರಣಮಾಟ, ದುಷ್ಟಸಂಹಾರ, ಶಿಷ್ಟಪರಿಪಾಲನ, ಗೀತಾಘನತೆ ಇತ್ಯಾದಿಗಳು ಪಾಂಚಜನ್ಯದ ಲೋಕವನ್ನು ಪ್ರತಿಪಾದಿಸುವ ಮುಖ್ಯ 'ಮುಖ'ಗಳು.

ಪುತಿನ ಅವರಂತಹ ಸಾಂಪ್ರದಾಯಿಕ 'ರಸ ಸರಸ್ಸಿ'ನ ಕವಿಗೆ, ನವುರನ್ನೇ ನೆಮ್ಮಿಕೊಂಡ ಭಾವ ಪ್ರಧಾನ ಕವಿಯನ್ನು ಸ್ವಾಭಾವಿಕವಾಗಿಯೆ ಕೃಷ್ಣನ ಕೊಳಲಿನ ಜಗತ್ತು ಕೈ ಬೀಸಿ ಕರೆದಿದೆ. ಅದರ ಫಲವೇ ಪು. ತಿ. ನರಸಿಂಹಾಚಾರ್ ಅವರ

'ಗೋಕುಲ ನಿರ್ಗಮನ'. ಸಂಪೂರ್ಣ ಕ್ಯಾಲಿಕೊ ಪ್ರತಿಯಾಗಿ ೧೯೪೫ ರಲ್ಲಿ, ಮೈಸೂರಿನ ಕಾವ್ಯಾಲಯದಿಂದ ಪ್ರಕಟವಾದ ಈ ಕೃತಿಯ ಅಂದಿನ ಬೆಲೆ ಒಂದು ರೂಪಾಯಿ.*

ತನ್ನ ಕೊಳಲಿನ ನವುರಿನ, ಜಗತ್ತಾದ ಬೃಂದಾವನವನ್ನು ತೊರೆದು, ಮುಂದಿನ ಪಾಂಚಜನ್ಯದ ಪ್ರಚಂಡ ಜಗತ್ತಾದ ಮಧುರೆಗೆ ಕೃಷ್ಣ ತೆರಳುವ ಕ್ಷಣಗಳು ಪ್ರಧಾನವಾದ ಸಂದರ್ಭ, ಈ ರೂಪಕದ ವಸ್ತು. ಇನ್ನಷ್ಟು ಸ್ಪಷ್ಟವಾಗುವುದಾದರೆ ಕೃಷ್ಣನ ಗೋಕುಲ ನಿರ್ಗಮನದಿಂದ, ಗೋಕುಲಗರಿಗಾಗುವ, ದುರ್ಭರ ಅಗಲುವಿಕೆಯ ದುಮ್ಮಾನಗಳು, ದಾಟಲಾಗದ ದುಗುಂಡಗಳು, ಆ ವರೆಗಿನ ಮಾಧುರ್ಯದ ಕೊಂಡಿಗಳು ಕಳಚಿ ಬೀಳುವ ತಳಮಳಗಳು ಇಲ್ಲಿಯ ಮುಖ್ಯ ಭೂಮಿಕೆಗಳು. (ಇನ್ನಿತರ ಮಾರ್ದವ ಭಾವ ಕೆಲವು ಇಲ್ಲಿ ಇಂಬು ಪಡೆದಿದ್ದರೂ, ಸ್ಥಳಾಭಾವದಿಂದ ಮುಖ್ಯ ಆಶಯಕ್ಕೆ ಮಾತ್ರವೇ ನಾನು ಒತ್ತನ್ನೀಯುತ್ತಿದ್ದೇನೆ.)

ವಿಯೋಗದ ಅಂತಿಮ ಕ್ಷಣಗಳ ಉತ್ಕಟತೆಯನ್ನೇ ತೆಕ್ಕೆಯಲ್ಲಿ ಹಿಡಿಯುವ ಉದ್ದೇಶ ಅಭಿವ್ಯಕ್ತಿಗಿರುವುದರಿಂದ, ರೂಪಕದ ಮುಖ್ಯ ಕಾಲಮಿತಿಯನ್ನು ಒಂದು ರಾತ್ರಿಯ ಮಟ್ಟಿಗೆ ಇಳಿಸಿಕೊಳ್ಳಲಾಗಿದೆ. ಹೀಗಾಗಿ ಕಾಲದ ಮಿತಿ ಕಿರಿದಾದಷ್ಟೂ ಕ್ರಿಯೆಯ ಸರಣಿಗಳಿಗೆ, ಹೆಚ್ಚಿನ ಒತ್ತು, ಜೋಡಣೆ ಮತ್ತು ರಭಸಗಳು ಬಿದ್ದು, ರೂಪಕದ ಕೊನೆಯ ಕ್ಷಣಗಳಿಗೆ ಪ್ರೇಕ್ಷಕ ಹೆಚ್ಚು ಸಮೀಪವಾಗಿ ಬಿಡುತ್ತಾನೆ.

ಆದರೆ, ಹೀಗೆ, ಒಂದು ಚಿಕ್ಕದಾದ ಕಾಲಮಿತಿಯ ಚೌಕಟ್ಟನ್ನು ಹಾಕಿಕೊಂಡಿದ್ದರೂ, ಕೃಷ್ಣನ ಗೋಕುಲ ವಾಸ್ತವ್ಯದ ಸಮಸ್ತ ಅಂಶಗಳೂ ಸಂಗ್ರಹವಾಗಿ ಒಡಮೂಡಿಕೊಂಡಿದ್ದು, ಇಲ್ಲಿಯ ತಾಂತ್ರಿಕ ಜಾಣ್ಮೆಯ ಒಂದು ಜಯುವೆನಿಸಿದೆ.

ಈ ಹಿನ್ನೆಲೆಯಲ್ಲಿ ಗಮನಿಸಿದಾಗ, ಕವಿಗಳು ಒತ್ತನ್ನೀಯಬಯಸುವ, ರಾಧಾ ಮಾಧವರ ಪ್ರೇಮ ಇಲ್ಲಿ "ನನ್ನೊಳು ನಾ ನಿನ್ನೊಳು ನೀ/ ಒಲವಿನ ಮುಂತಿಂತೆ ನಾ ನೀ,ನಿನ್ನೊಳಂ ನಾ ನನ್ನೊಳು ನೀ/ಒಲಿದ ಮೇಲಿಂತೆ ನಾ ನೀ/ಇದೆ ಒಲವಿನ ಸರಿಗಮಪದನೀ।।" ಎಂದು ಅರಳಿ ನಿಂತಿದೆ. ಕೃಷ್ಣನ ಕೊಳಲಿನ ಕರೆಯನ್ನು ಆಲಿಸುತ್ತಲೇ, "ತೊಟ್ಟಿಲಿನ ಹಸಗೂಸ ಮರೆ ಮರೆ/ ಪಕ್ಕದಾ ಗಂಡನಾ ತೊರೆ ತೊರೆ/ಬೃಂದಾವನಕೆ ತ್ವರೆ ತ್ವರೆ" ಎಂಬ ಗೋಪಿಯ ಆತುರವಿದೆ.

ಈ ಕೃಷ್ಣನ ಕೊಳಲ ದನಿ ಕೇವಲ ರಾಧೆ ಗೋಪಿಯರಿಗೆ ಮಾತ್ರವಲ್ಲ, ಹಿರಿಯರಿಗೂ ಅಷ್ಟೇ ಬೇಕು. ಏಕೆಂದರೆ, ಅವರ ಅಪೇಕ್ಷಿಸುವ ಅನೇಕ ಆಶೆಗಳನ್ನು ನುಡಿಸುವ ಧ್ವನಿಯೂ ಕೃಷ್ಣನ ಕೊಳಲಿಗಿದೆ: "ದಿನದಿನಕ್ಕೂ ಬೆಳೆವ ಘೋರ ಕಾಲ ಬೆನ್ನು ಬಾಗ ಭಾರ/ನಿನ್ನ ಕೊಳಲ ಮಂತ್ರಕವನು/ಹೆದರಿ ಹೆಗಲನಿಳಿವ ತೆರದಿ।। ಕೊಳಲನೂದು ಗೋವಿಂದ ,ಮುಪ್ಪಿಗಾಗಲಾನಂದ।।" ಇದರೊಟ್ಟಿಗೇ, "ಪರಿಕಿಸ ಬಾ–ಹೋಯಿತು ಮಾನ/ಹಾಳಾಗಲಿ ಇವರೀ ಸುಮ್ಮಾನ" ಎಂಬ ಸುದಾಸ ಮತ್ತು ಸುಬಲರ ಕೊಂಕು, ಅಸಡ್ಡೆಗಳೂ ಇವೆ.

ಅಷ್ಟೇ ಏಕೆ, ಕೃಷ್ಣನ ಗೋಕುಲ ವಾಸ ಕೇವಲ ಸರಸ ಮಾತ್ರವಲ್ಲ, ಶೌರ್ಯದಲ್ಲೂ ಅರಳಿಕೊಂಡಿತ್ತು ಎನ್ನುವುದಕ್ಕೆ, "ಒಲ್ಮೆಯ ನಲ್ಮೆಗೆ ಹಾಡಿನ ದಾನ/ವೈರ ರಾಜೆಗೆ ತೋಳ್ಬಲವನುಪಾನ/ಮರ್ದಿಸಿದಾ ಕಾಳಿಂಗನ ಮಣಿಸೆ/ ಕಾಲಿನ ತಾಳಕೆ ಹೆಡೆಗಳ ಕುಣಿಸೆ/" ಎಂಬ ಸಾಕ್ಷಿಯೂ ಇದೆ.

ಹೀಗೆ ಕೃಷ್ಣನ ಗೋಕುಲ ವಾಸದ ಮುಖ್ಯ ಸಮಗ್ರಗಳೂ ಇಲ್ಲಿ ಸರಳ ಸ್ವಾಭಾವಿಕವಾಗಿ, ಅಷ್ಟೇ ಸಹಜ ಸುಂದರವಾಗಿ ಚಿತ್ರಿತವಾಗಿವೆ. ಆದರೆ ಕೊನೆಗೂ ಈ ರೂಪಕದಲ್ಲಿ ಒತ್ತು ಬೀಳುವುದು ಕೃಷ್ಣನ 'ಗೋಕುಲ ನಿರ್ಗಮನ'ಕ್ಕೆ ಈ ನಿರ್ಗಮನ ಅರಳಿಸುವ, ಮುದುಡಿಸುವ

---

* ನನ್ನ ಕೈಯಲ್ಲಿರುವ ಪ್ರಸ್ತುತ ಪುಸ್ತಕದ ಪ್ರತಿ ಕೂಡ ಒಂದು ದೃಷ್ಟಿಯಿಂದ ಐತಿಹಾಸಿಕ ವಾದದ್ದೇ. ಕವಿ ಪುತಿನ ಅವರು ತಮ್ಮ ಸ್ವಂತ ಹಸ್ತಾಕ್ಷರಗಳಲ್ಲಿ "ಗುರುವರ್ಯ ಪ್ರೊ. ಬಿ. ಎಂ. ಶ್ರೀಕಂಠಯ್ಯ ಅವರ ಸಮಕ್ಷಮಕ್ಕೆ ಅರ್ಪಣ ಪುರಸ್ಸರ ಸಮರ್ಪಣೆ"ಯಾಗಿ ನೀಡಿದ ವಿಶಿಷ್ಟ ಪ್ರತಿ ಇದು.

ಭಾವ ಸಾವಿರಗಳಿವೆ. ಈ ಹಿನ್ನೆಲೆಯಲ್ಲಿ ರೂಪಕದ ಕೊನೆಯ ಕ್ಷಣಗಳನ್ನು ನೋಡಬಹುದು.

ಕೃಷ್ಣನನ್ನು ಮಧುರೆಗೆ ಕರೆದೊಯ್ಯಲು ಅಕ್ರೂರ ಈಗಾಗಲೇ ಬಂದಿರುವ ಸನ್ನಿವೇಶ. ಆದರೆ ಆತನೊಂದಿಗೆ ಹೋಗಲೊಲ್ಲದ ಕೃಷ್ಣ, ತನ್ನ ರಾಧೆ, ಗೋಪ ಗೋಪಿಯರೊಂದಿಗೆ, ಅನೇಕ ನಾಟಕೀಯ ಸರಸ ಸಂದರ್ಭದಲ್ಲಿದ್ದಾಗ, ಮಧ್ಯ, ಅಕ್ರೂರನೊಂದಿಗೆ ಬಲರಾಮ ಪ್ರವೇಶಿಸುತ್ತಾನೆ. ಕೃಷ್ಣನನ್ನು ಅಕ್ರೂರನೊಂದಿಗೆ ತೆರಳಲು ಕೇಳಿಕೊಳ್ಳುತ್ತಾನೆ. ಎಷ್ಟೇ ಹೇಳಿದರೂ ಕೇಳದೆ, ತನ್ನ ಕೊಳಲಿಗೇ, ಎಂದರೆ ತನ್ನ ರಸ ಭಾವದಲ್ಲೇ ಕೃಷ್ಣ ಮುಂದುವರೆದಾಗ, ಆತನ ಕೊಳಲನ್ನೇ ಕಿತ್ತೆಸೆಯುತ್ತಾನೆ ಬಲರಾಮ. ಇದು, ರೂಪಕ ಒಂದು ಬಂದು ನಿಂತ ಒಂದು ಪರಾಕಾಷ್ಠೆಯ ಸಂದರ್ಭ.

ಬೃಂದಾವನದ ಈ ಅಂದದ ಬದುಕಿನಿಂದ ತನ್ನನ್ನು ವಿಮುಖಗೊಳಿಸಲು, ಬಲರಾಮ ಬಲ ಪ್ರಯೋಗಿಸಿದ. ತನ್ನ ಕೊಳಲನ್ನು ಕಿತ್ತೆಸೆದಾಗ, "ನನ್ನಂಗವೊಂದ ಚಿಪ್ಪುಟಿ ತೆಗೆದಪ್ಪೊಲು,ಕೊಳಲ ಕಿತ್ತೊಗೆದೆಯಣ್ಣ" ಎಂದು ಹೇಳುತ್ತಾನೆ ಕೃಷ್ಣ. ಆದರೆ, ಈ ಮಾತಿನಲ್ಲಿ, "ನಮ್ಮ ಹೃದಯ ಚಿಪ್ಪುಟಿ ತೆಗೆದಪ್ಪೊಲು/ಕೊಳಲ ಕಿತ್ತೊಗೆದೆಯಣ್ಣ" ಎಂದು ಸಮಸ್ತ ಗೋಕುಲಗರೂ ಹೇಳಬಹುದಾದ ಮಾತಿನ ತಣ್ಣನೆಯ ಕಂದಿಯೇ ಇಲ್ಲಿ ಎದ್ದು ಕಾಣಿಸುತ್ತದೆ. ಇದು ಕವಿಯ ನಾಟಕೀಯ ಗೆಲುವು.

ಆದರೆ ಈಗ ಗೆಲವು ಗರಿಯಾಗುವುದು, ಕೃಷ್ಣ ಬೃಂದಾವನ ತೊರೆಯುವ ಮಾತುಗಳಲ್ಲಿ. "ಎನ್ನ ವಂಶವೇ ಉತ್ತಮದಂಶವೇ/ನಿನ್ನ ಭವದಿ ಬಿಡುವೆ/ಆದೊಡದೆಯೊಳಿಡುವೆ/ನೆನೆವೆ ಹಕ್ಕಿ ಹಾಡೆ/ಇರುಳು ಚುಕ್ಕಿಸೂಡೆ/ಹೊನಲು ದನಿಗೈಯೆ ಹಲವು ಮರ್ಮರಿಸೆ/ಸುಗ್ಗಿ ಗಾಳಿಯಾಡೆ/ಏಕೋ ಓಗ್ಗು ಮೂಡೆ/ಕೊಳಲು ಬನ ದೊಳಿರಲಿ – ನಾ/ಹೋಗಿ ಬರುವ ಮುರಲೀ//."

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಕೃಷ್ಣ ಹೋಗಿ ಬರುವೆ, 'ಗೋಕುಲ/ಬೃಂದಾವನ' ಎನ್ನದೆ "ಹೋಗಿ ಬರುವೆ ಮುರಲೀ" ಎನ್ನುವುದೇ ಮುಖ್ಯವಾದದ್ದು ಎನ್ನವುದು. ಏಕೆಂದರೆ, ಇಲ್ಲಿಯ ಕೊಳಲು ಧ್ವನಿ ಕೇವಲ ಕೃಷ್ಣನ ಕೊರಳ ಧ್ವನಿ ಮಾತ್ರವಾಗಿರದೆ, ಗೋಕುಲ ಪರಿಸರದ ರಸ ಸಮಷ್ಟಿಗಳಿಂದಲೂ ಹೀರಿಕೊಂಡ ಹೃದಯದ ಸಾರವಾಗಿದೆ. ಎಂತಲೇ, ಇಲ್ಲಿ ಕೃಷ್ಣ, ಕಳೆದುಕೊಳ್ಳುವುದು ಕೇವಲ ಕೊಳಲನ್ನಲ್ಲ, ತನ್ನ ಹೃದಯದ ಒಂದು ಭಾಗವನ್ನೇ. ಆದ್ದರಿಂದ ಇಲ್ಲಿಯ 'ಹೋಗಿ ಬರುವೆ ಮುರಲೀ' ಎಂಬುದು ತನ್ನನ್ನು ಎಷ್ಟೆಷ್ಟೋ ಪಾಲು ಮಿಕ್ಕಿದ ಒಂದು ಬಹು ದೊಡ್ಡ ವಿದಾಯ ಕೋರಿಕೆಯ ಸಂಕೇತವಾಗಿಬಿಡುತ್ತದೆ.

ಆದರೆ, ಹೀಗೆ ಗರಿಯಾದ ಗೆಲುವು, ಗರಿಮೆಯಾಗಿ ಬಿಡುವುದು ರಾಧೆಯ ಅಂತಿಮ ಮಾತುಗಳಲ್ಲಿ. ಕೃಷ್ಣನ ನಿರ್ಗಮನದ ನಂತರ, ಸ್ವರ ಹೀನವಾಗಿ ಬಿದ್ದ ಮುರಲಿಯನ್ನುದ್ದೇಶಿಸಿ ಆಕೆ ಹೇಳುವ ನುಡಿಗಳಲ್ಲಿ. "ಕೃಷ್ಣನ ಉಸಿರಿಲ್ಲದಿಂತು ನೀ ಬಿದಿರಾಗಿ/ಹೆಂಗಳ ಸುಯ್ಯಲೊಣಗುವ ಕೊಳಲೇ/ಅವನಳಿಯೆ ಬರಿದಾದ ಬೃಂದಾವನದಂತೆ,ನನ್ನಂತೆ ನಿಮ್ಮಂತೆ–ನೀನಾದೆ ಕೊಳಲೇ/"

ಇಲ್ಲಿ ನಾಟಕದ ಆರಂಭದಲ್ಲಿ ಬರುವ, "ಎನ್ನೀ ಕೊಳಲಿದು ಕಾಡಿನ ಬಿದಿರು/ ಈ ಮುಲು ಕಡ್ಡಿಗೆ ಎನಿತೋ ಚದುರು" ಎಂಬ ಮಾತುಗಳನ್ನು ನೆನೆದುಕೊಂಡಾಗ, ರಾಧೆಯ ಮೇಲಿನ ಮಾತುಗಳಿಗೆ ಒಂದು ವಿಶೇಷವಾದ ಅರ್ಥವೇ ಬಂದು ಬಿಡುತ್ತದೆ.

ಕೃಷ್ಣನಿದ್ದಾಗ, ಗೋಕುಲದಲ್ಲಿ ಚದುರಿದ್ದು, ಗರಿಗದರಿದ್ದು, ಸ್ವರ ಮೆರೆದದ್ದು, ಪ್ರಾಣವೊಳೆದದ್ದು ಕೇವಲ ಒಂದು ಬಿದಿರು ಮಾತ್ರವಲ್ಲ, (ಆ ಚದುರಿದ ಬಿದಿರು ಮುಖೇನ) ಬೃಂದಾವನದ ಸಮಸ್ತ ಜೀವರಾಶಿಯೂ ಹೌದು. ಎಂತಲೇ, ಹೇಗೆ ಈ ಮುರಲಿ, ಕೃಷ್ಣನ ಸಂಗ ಕಳೆದುಕೊಂಡು ಮತ್ತೆ ಬರಿಯ ಮೂಲದ ಬಿದಿರು ಮಾತ್ರವಾಯಿತೊ, ಹಾಗೆಯೇ ಬೃಂದಾವನದ ಸಮಸ್ತರೂ/ಸಕಲವೂ, ಕೃಷ್ಣನನ್ನು ಕಳೆದುಕೊಂಡು ಬರಿದಾದವು,ಬರಡಾದವು ಎನ್ನುವ ಅರ್ಥಕ್ಕೆ ಇಲ್ಲಿ ವಿಶೇಷತೆ ಬಂದುಬಿಡುತ್ತದೆ. ನಾಟಕದ ವಸ್ತುವಿನ ವರ್ತುಲ, ಅರ್ಥ ಪೂರ್ಣವಾಗಿ ಸುತ್ತಿ ಅರ್ಥಪೂರ್ಣವಾಗಿ ಕೊನೆಗೊಳ್ಳುತ್ತದೆ.

ಕೊನೆಯದಾಗಿ, ಈ ಇಡಿಯ ರೂಪಕದ


ಹಿನ್ನೆಲೆಯಲ್ಲಿ ಗಮನಿಸಲೇಬೇಕಾದ ಒಂದು ಮುಖ್ಯ ಅಂಶವಿದೆ. ಅದೆಂದರೆ, ಒಮ್ಮೆ ತನ್ನ 'ಕೊಳಲಿನ ಜಗತ್ತಿನಿಂದ' ನಿರ್ಗಮಿಸಿ 'ಪಾಂಚ ಜನ್ಯದ ಜಗತ್ತನ್ನು' ಪ್ರವೇಶಿಸುವ ಕೃಷ್ಣ, ತನ್ನ ಮುಂದಿನ ಬದುಕಿನಲ್ಲಿ, ಮತ್ತೆ ಒಮ್ಮೆಯಾದರೂ ಎಂದೂ ಆ ಬೃಂದಾವನದ 'ಕೊಳಲಿನ ಜಗತ್ತಿಗೆ' ಹಿಂತಿರುಗವುದೇ ಇಲ್ಲ ಎಂಬುದು. ಎಂತಲೇ ಇಲ್ಲಿ ಮೂಡುವ ಅಗಲಿಕೆಗಳಲ್ಲಿ, ಬೀಳ್ಕೊಡುಗೆ-ಗಳಲ್ಲಿ, ಎಲ್ಲರ ಎಲ್ಲ ಬಗೆಯ ವಿಷಾದದ ವಿದಾಯಗಳಲ್ಲಿ, ಎಂದೂ ಮರೆಯಲಾಗದ, ಮಾಯವಾಗಲಾರದ, ತೀವ್ರವಾದ ತಳಮಳದ ಕಲಕು ಹರಳುಗಟ್ಟಿಕೊಂಡು ಬಿಡುತ್ತದೆ. ಇಂತಹ ಒಂದು ಹೃದಯಂಗಮವಾದ, ಹರಳು ಗಟ್ಟುವ ಹಳಹಳಿಯ ಸನ್ನಿವೇಶವನ್ನು, ಮಿನುಗು ವಷ್ಟು, ಜಿನುಗಾಗಿ, ಆತ್ಮೀಯವಾಗಿ ಚಿತ್ರಿ-ಸಿರುವ ಶ್ರೀಮಂತಿಕೆಯೇ ಪುತಿನ ಅವರ 'ಗೋಕುಲ ನಿರ್ಗಮನ'ದ ಯಸಸ್ಸಿಗೆ ಕಾರಣ ಎಂದು ಹೇಳಬಹುದೇನೋ.

೩೦

ಅನಂತಮೂರ್ತಿ/ ಸಂಸ್ಕಾರ

೧೯೬೭ ಮೇ ತಿಂಗಳಲ್ಲಿ ಪ್ರಕಟವಾದ 'ಸಂಸ್ಕಾರ' ಸಾಹಿತ್ಯ ಮಾಧ್ಯಮದಲ್ಲಿ ಎಷ್ಟೋ ಅಷ್ಟೇ ಮಟ್ಟಿಗೆ ಇತರ ಮಾಧ್ಯಮಗಳಲ್ಲೂ ಎತ್ತರದ ಹೆಸರು ಗಳಿಸಿದ ಕೃತಿ. ಒಂದು ಕಾದಂ-ಬರಿಯಾಗಿ ಪಡೆದ ಅನನ್ಯತೆಯನ್ನೇ 'ಸಂಸ್ಕಾರ' ಒಂದು ಚಲನಚಿತ್ರವಾಗಿ, ಒಂದು ರಂಗಕೃತಿ ಯಾಗಿಯೂ ಪಡೆದಿದೆ.

ಜನ್ಮತಃ ಬ್ರಾಹ್ಮಣ ನಾರಾಣಪ್ಪ. ಆದರೆ ಬದುಕಿನುದ್ದಕ್ಕೂ ಚಂದ್ರಿಯಂತಹ ಸೂಳೆಯ-ರೊಂದಿಗೆ ಸಹವಾಸ ಮಾಡಿದವ. ಈ ನಾರಾ ಣಪ್ಪ ಮದ್ಯ ಮಾಂಸಾದಿಗಳನ್ನು ಭಕ್ಷಿಸಿದವನೂ ಹೌದು. ಈತ ಸಾಲಿಗ್ರಾಮವನ್ನು ಎತ್ತಿ ನದಿಗೆ ಎಸೆದು ಬಿಟ್ಟವನು. ಅಗ್ರಹಾರದ ತರುಣ ಬ್ರಾಹ್ಮಣರನ್ನು ಅಡ್ಡ ಹಾದಿಗೆ ಎಳೆದವನೂ ಈ ನಾರಣಪ್ಪ. ಇಂಥ ನಾರಣಪ್ಪ ಸತ್ತು ಬಿದ್ದ ಬಿಂದುವಿನಲ್ಲಿ ಆರಂಭವಾಗುವ ಕಥೆ ಅನೇಕ ಪ್ರಶ್ನೆಗಳನ್ನು ಎದುರಿಗೆ ಇಟ್ಟುಕೊಳ್ಳುತ್ತದೆ. ಮೊದಲ ಪ್ರಶ್ನೆ: ಈತನ ಸಂಸ್ಕಾರ, ಅಪರ ಕರ್ಮಾದಿಗಳನ್ನು ಯಾರು ಮಾಡಬೇಕು? ಎರಡ ನೆಯ ಪ್ರಶ್ನೆ: ಬದುಕಿನುದ್ದಕ್ಕೂ ಬ್ರಾಹ್ಮಣ ಧರ್ಮಕ್ಕೆ ವಿರೋಧವಾಗಿ ನಡೆದುಕೊಂಡ ಈತ ಬ್ರಾಹ್ಮಣನೆ? ಮೂರನೆಯ ಪ್ರಶ್ನೆ: ಬ್ರಾಹ್ಮಣ್ಯ ತೊರೆದಿದ್ದರೂ, ಬಹಿಷ್ಕೃತನಾಗದೇ ಇದ್ದುದ ರಿಂದ, ಇನ್ನೂ ಬ್ರಾಹ್ಮಣನಾಗಿಯೇ ಇರುವ ಸಾಧ್ಯತೆಯು ಈತನ ಶವವನ್ನು ಇತರ ಜಾತಿ



ಯುವರಿಗೆ ಮುಟ್ಟಲು ಬಿಡುವುದಾದರೂ ಹೇಗೆ? ಕೊನೆಯ ಪ್ರಶ್ನೆ: ಅಗ್ರಹಾರದಲ್ಲಿ ಒಂದು ಹೆಣ ಇರುವ ವರೆಗೂ ಸ್ನಾನ ಸಂಧ್ಯಾವಂದನೆ ದೇವ ಪೂಜೆ ಊಟೋಪಚಾರ ಇತ್ಯಾದಿ ನಡೆಯುವಂತಿಲ್ಲವಾದ್ದರಿಂದ, ಈ ಹೆಣವನ್ನು ಹೀಗೆಯೇ ಇಟ್ಟುಕೊಳ್ಳುವುದಾದರೂ ಹೇಗೆ?

ಇವು ಹೊರ ನೋಟಕ್ಕೆ ಹೊಳೆಯುವ ತೀರ ಸರಳೀಕೃತ, ಸಾಂದರ್ಭಿಕವಾದ ಪ್ರಶ್ನೆಗಳಾದರೂ, ಈ ಪ್ರಶ್ನೆಗಳ ಹಿಂದೆ, ಭಯದಿಂದ ಅಸಹ್ಯದ ವರೆಗೆ ಹರಡಿಕೊಳ್ಳಬಹುದಾದ ಉಪ ಪ್ರಶ್ನೆಗಳಿವೆ. ಅದಕ್ಕೂ ಮುಖ್ಯವಾಗಿ ವಿಚಿತ್ರ ಸಮಸ್ಯೆಗಳಿವೆ. ಕೊಳೆತ ಕಗ್ಗಂಟುಗಳಿವೆ. ದಾರಿ ತಪ್ಪಿಸುವ ತಿರುವುಗಳಿವೆ. ಬೆಳಕೇ ತೋರದ ಕತ್ತಲೆಗಳಿವೆ. ಮುಖ್ಯವಾಗಿ, ಒಂದು ವ್ಯವಸ್ಥೆಯೇ, ಅನೇಕ ಮುಖಗಳಲ್ಲಿ ಕೊಳೆತು ಹೋಗುತ್ತಿರುವ ಚಿತ್ರ ಇಲ್ಲಿದೆ. ಮಾನವೀಯ ಮೂಲದ ಹೊಸ ಗಾಳಿಯ ಹರಿದಾಟ ಇಲ್ಲಿ ಎಷ್ಟು ಅಗತ್ಯ ಎಂದು ಸೂಕ್ಷ್ಮವಾಗಿ ಪ್ರತಿಪಾದಿಸುವ, ನೋವು ಮೂಲದ ಚಡಪಡಿಕೆ ಇಲ್ಲಿದೆ. ಎಂತಲೇ, ಒಂದು ಹೊರ ನೋಟಕ್ಕಿಂತ ಎಷ್ಟೋ ಎತ್ತರಕ್ಕೆ ಬೆಳೆದು ನಿಲ್ಲುವ ಶಕ್ತಿ ಈ ಕಾದಂಬರಿಗೆ ಬಂದಿದೆ.

ಮೂರು ಮಜಲುಗಳಲ್ಲಿ ಈ 'ಕಥೆ' ನಡೆಯುತ್ತದೆ, ಒಂದು: ವ್ಯವಹಾರದ ಮಜಲು. ಎರಡು: ಧಾರ್ಮಿಕ ಮಜಲು. ಮೂರು: ಮಾನವೀಯ ಮಜಲು.

ಒಂದು ವ್ಯವಹಾರ ಎಂದೊಡನೆ ಏಳುವ ಮೊದಲ ಪ್ರಶ್ನೆ ಕೊಡುಕೊಳ್ಳುವ ಕ್ರಿಯೆಯದು. ಎಂದರೆ ಲಾಭ-ಹಾನಿಯದು. ನಾರಣಪ್ಪನ 'ಸಂಸ್ಕಾರ'ದ ಸಮಸ್ಯೆ ಕೂಡ ಇದಕ್ಕೆ ಹೊರತಾಗುವದಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಿಸಿದಂತೆ, ಸಂಬಂಧಿಸಿದ ಪ್ರತಿಯೊಬ್ಬರೂ ವ್ಯಾವಹಾರಿಕವಾಗಿ ತೂಗುವುದು, ಈ ಸಂಸ್ಕಾರದಿಂದಾಗಬಹುದಾದ ಎಲ್ಲ ಬಗೆಯ ವ್ಯಾವಹಾರಿಕ ಲಾಭ ಹಾನಿಯನ್ನೇ ಕುರಿತದ್ದು, ಈ ದಿಕ್ಕಿನಲ್ಲಿ ಒಂದು ದೊಡ್ಡ (ಆಕರ್ಷಕ?) ಸವಾಲನ್ನೇ ಒಡ್ಡಿಬಿಡುವದು, ಚಂದ್ರಿ ಎತ್ತಿಕೊಟ್ಟ ಬಂಗಾರ. ಧರ್ಮಾಧರ್ಮ ಸೂಕ್ಷ್ಮಗಳ ಮುಸುಕಿನಲ್ಲಿಯ ವ್ಯವಹಾರ ಬುದ್ಧಿಗೆ, ಇದರಿಂದಾಗಿ, ಹತ್ತು ಬಗೆಯ ಕವಲುಗಳೇ ಒಡೆದು ಬಿಟ್ಟು (ವ್ಯಾವಹಾರಿಕವಾಗಿಯೂ) ನಾರಣಪ್ಪನ ಸಂಸ್ಕಾರ ಒಂದು ರೇಜಿಗೆಯ ಸಮಸ್ಯೆಯಾಗಿ ಬಿಡುವುದು ಇಲ್ಲಿಯ ಒಂದು ಚೋದ್ಯ. ಆದರೆ, ಎಲ್ಲ ಬಗೆಯ ಕೊಡುಕೊಳ್ಳುವಿಕೆಗಳಲ್ಲಿ ಅತ್ಯಂತ ಕೆಳ ದರ್ಜೆಯದಾದ 'ವ್ಯಾವಹಾರಿಕತೆ' ಮನುಷ್ಯನನ್ನು, ಎಷ್ಟೊಂದು ಹೇಯ ಮಟ್ಟದ ಕಾಸಿನ ಕ್ರಿಮಿಯನ್ನಾಗಿ ಮಾಡಿಬಿಡುತ್ತದೆ ಎಂಬುದಕ್ಕೆ ಈ ಮಜಲು ಬೆಳಕು ಹಿಡಿಯಬಲ್ಲದು. ನಾರಣಪ್ಪನ ಸಮಸ್ತ ಆಸ್ತಿ, ಧನಕನಕಾದಿಗಳು ಮಠಕ್ಕೆ ಸೇರಬೇಕೆಂಬ ಮಠಾಧಿಪತಿಗಳ ಆಜ್ಞೆ ಒಂದಕ್ಕೊಂದು ಪರಾಕಾಷ್ಠೆ.

'ಧರ್ಮ' ಒಂದು ಬಗೆಯ ಅನುಕೂಲ ಸಿಂಧು. ಎಲ್ಲ ವ್ಯವಸ್ಥೆಗಳಂತೆ ಧರ್ಮಕ್ಕೂ ಒಂದು ವ್ಯಾವಹಾರಿಕ ಮುಖ ಇದ್ದೇ ಇರುತ್ತದೆ. ನಾರಣಪ್ಪನ 'ಸಂಸ್ಕಾರ'ಕ್ಕೆ ಸಂಬಂಧಿಸಿದಂತೆ ಕೂಡ, ಇಂಥ ವ್ಯಾವಹಾರಿಕ ಮುಖ, ತನಗೆ ಅನುಕೂಲಕರವಾದ ವ್ಯಾವಹಾರಿಕ ತರ್ಕವನ್ನು ಹುಡುಕಿಯೇ ಬಿಡುತ್ತದೆ "ಆತ ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣ್ಯ ಆತನನ್ನು ಬಿಡುವುದಿಲ್ಲ" ಎಂಬುದೇ ಅಂಥ ಒಂದು ತರ್ಕ.

ಬದುಕಿನುದ್ದಕ್ಕೂ ತನ್ನ ಮೈ ಮನ ಮಾರಿಕೊಂಡು ಗಳಿಸಿದ ಬಂಗಾರವನ್ನು, ನಾರಾಣಪ್ಪನ 'ಸಂಸ್ಕಾರ'ದ ಖರ್ಚಿಗೆ ಎಂದು ಎತ್ತಿ ಕೊಡುವ ಮುಖಾಂತರ ತನ್ನಲ್ಲಿಯ ವ್ಯಕ್ತಿತ್ವ ಮತ್ತು ಮಾನವೀಯತೆಯನ್ನು ಚಂದ್ರಿ, ಎತ್ತಿ ಮೆರೆದರೆ, ಅದೇ ಬಂಗಾರಕ್ಕಾಗಿ ಲಕ್ಷ್ಮಣಾಚಾರ್ಯ ಮತ್ತು ಗರುಡಾಚಾರ್ಯ, ಹೀನತೆಯ ಪರಮಾವಧಿಗಿಳಿದುಬಿಡುತ್ತಾರೆ. (ಹೀಗಾಗಿ 'ಸಂಸ್ಕಾರ'ಗೊಳ್ಳಬೇಕಾದ ಇಲ್ಲಿಯ ಅನೇಕ ಸಂಗತಿಗಳಲ್ಲಿ ಇವರ ಇಂಥ 'ಅಮಾನವೀಯತೆಯೂ' ಒಂದು ಎಂಬುದು ಗಮನಿಸಬೇಕಾದ ಸಂಗತಿ.)

ಒಬ್ಬ ಮನುಷ್ಯ ಸತ್ತಾಗ, ಇನ್ನೊಬ್ಬ ಮನುಷ್ಯ ಏನು ಮಾಡಬೇಕು ಎನ್ನುವುದಕ್ಕೆ ಯಾವ ಉತ್ತರವನ್ನು ಅಹ್ಮದ್ ಬ್ಯಾರಿ ತತ್‌ಕ್ಷಣವೇ ಕಂಡರೆ, ಅದೇ ಉತ್ತರವನ್ನು ಕಂಡುಕೊಳ್ಳಲು ಅತ್ತ ದ್ರಾವಿಡ ಪ್ರಾಣಾಯಮ-

ಗಳನ್ನೇ ಮಾಡುತ್ತಾರೆ ಪ್ರಾಣೇಶಾಚಾರ್ಯರು. ಗುಡ್ಡ ಸುತ್ತಿ ಮೈಲಾರಕ್ಕೆ ಬರುತ್ತಾರೆ.

ಎಂತಲೇ ಈ ಹಿನ್ನೆಲೆಗಳೆಲ್ಲಿ ಇಲ್ಲಿ ಸತ್ತವನು ನಾರಣಪ್ಪನಲ್ಲವೇ ಅಲ್ಲ. ಸತ್ತದ್ದು ಒಂದು ಕೊಳೆತುಹೋದ ವ್ಯವಸ್ಥೆಯ ಒಂದು ಅಂಗ. ಹೀಗಾಗಿ ಅನಾರೋಗ್ಯಕ್ಕೀಡಾಗುವುದರೊಂದಿಗೆ ಅಪಾಂಗವೂ ಆಗಿರುವ ಒಂದು ವ್ಯವಸ್ಥೆಯ ಮುಗ್ಗರಿಸಿದ ಚಲನೆಯ ಒಂದು ಅತ್ಯಂತ ಸಮಕಾಲೀನ ಚಿತ್ರವೂ ಆಗುತ್ತದೆ, ಈ ಕಾದಂಬರಿ.

ಮನುಷ್ಯನ ಆರು ಶತ್ರುಗಳಲ್ಲಿ ಮೊದಲನೆಯದೂ ಪ್ರಬಲವೂ ಆದ ಕಾಮದ ಪಾತ್ರ (ಅದರ ಜೀವಂತ ಪಾತ್ರ) ಬದುಕಲು ಎಷ್ಟು ಗಾಢವಾದದ್ದು ಎಂದು ಪ್ರತಿಪಾದಿಸುವ ಒಂದು ಮಜಲು ಕೂಡ ಈ ಕಾದಂಬರಿಗಿದೆ. (ಪ್ರಾಯಶಃ ಸಾವಿನಷ್ಟೇ ಗಾಢ ಮತ್ತು ಗೂಢ ಕಾಮ.) ಒಬ್ಬ ಬ್ರಾಹ್ಮಣ ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣ್ಯ ಆತನನ್ನು ಬಿಡುವುದಿಲ್ಲ ಎಂಬ ಒಂದು ಘೋಷಿತ ತರ್ಕ ಶುದ್ಧ ಪೊಳ್ಳು ಎಂದು ಎಷ್ಟು ಸತ್ಯಪೂರ್ಣವಾಗಿ ಇಲ್ಲಿ ಪ್ರಕಟವಾಗುತ್ತದೋ ಅಷ್ಟೇ ಸತ್ಯಪೂರ್ಣವಾಗಿ ಪ್ರಕಟವಾಗುತ್ತದೆ, ಒಬ್ಬ ಮನುಷ್ಯ (ಬುದ್ಧಿಪೂರ್ವಕವಾಗಿ) ಕಾಮವನ್ನು ತ್ಯಜಿಸಿದರೂ ಕಾಮ ಆತನನ್ನು ತ್ಯಜಿಸುವುದಿಲ್ಲ ಎಂಬ ಅಘೋಷಿತ ತರ್ಕ. ನಾರಾಣಪ್ಪನ ಕೊನೆಯ ಗಳಿಗೆಯಲ್ಲಿಯ ದೇವರ ನಾಮಸ್ಮರಣೆಯ ಬಡಬಡಿಕೆ ಆತನ 'ಸಂಸ್ಕಾರ' (ವಾತಾವರಣ ಕಲಿಕೆ) ಮಾತ್ರದಿಂದ ಬಂದದ್ದಾಗಿದ್ದರೆ, ಪ್ರಾಣೇಶಾಚಾರ್ಯರ ಪರಿವರ್ತನದ ಮುಖ್ಯ ತಿರುವಿನ ಘಟನೆಯಾದ ಚಂದ್ರಿಯೊಂದಿಗಿನ ಸಮಾಗಮ ಮನುಷ್ಯನ ಅತ್ಯಂತ ಮೂಲಭೂತವಾದ ಒಂದು ಮುಖ್ಯ ಪ್ರವೃತ್ತಿಮಾತ್ರದಿಂದಲೇ ಬಂದದ್ದಾಗಿದೆ* ಎಂತಲೇ ಇಲ್ಲಿಯ ಈ ಸಂದರ್ಭ ಅತ್ಯಂತ ವಾಸ್ತವವಾದದ್ದಾಗಿದೆ.

ಎಂತಲೇ ಈ ಎಲ್ಲ ಹಿನ್ನೆಲೆಗಳಲ್ಲ ಕೊನೆಯ ಭಾಗದಲ್ಲಿ ಒಬ್ಬ 'ವೇದಾಂತ' ಶಿರೋಮಣಿಯಾಗಿದ್ದ ಪ್ರಾಣೇಶಾಚಾರ್ಯರು ಒಂದು ಐಡೆಂಟಿಟಿಯೇ ಇಲ್ಲದಂತಹ ತೀರ ಸಾಮಾನ್ಯ ವ್ಯಕ್ತಿಯಂತೆ ಕಾಣುತ್ತ ಹತ್ತರಲ್ಲಿ ಹನ್ನೊಂದನೆಯವರಾಗಿ, 'ಸಮಷ್ಟಿ'ಯಲ್ಲಿ ಒಬ್ಬರಾಗಿ ಕಾಣುತ್ತ ಹೋಗುವುದೇ ಒಂದು ಬಹು ದೊಡ್ಡ ವಿಶೇಷವಾಗಿ ಬಿಡುತ್ತದೆ. ಎಲ್ಲರಲ್ಲಿ ಒಂದಾಗಿ, ಎಲ್ಲರಂತಿದ್ದು, ಎಲ್ಲವನ್ನೂ ಎಲ್ಲರೊಂದಿಗೆ ಎದುರಿಸುವುದೇ ನಿಜವಾದ ಬದುಕಿನ ಧರ್ಮ. ಎಂತಲೇ, ಇಂಥ ಒಂದು ಹೊಸ ಅರಿವಿನೊಂದಿಗೆ ಹೊಸ ಬದುಕನ್ನೆದುರಿಸಲು ಪ್ರಾಣೇಶಾ-ಚಾರ್ಯರು ಸಿದ್ಧರಾಗುವಲ್ಲಿಗೆ ಕಾದಂಬರಿ ಮುಕ್ತಾಯವಾಗುವದು, ಅದು ಸೂಚಿಸುವ ಒಂದು ಹೊಸ ಬೆಳಕಿಗೂ ಸೂಚನೆಯಾಗುತ್ತದೆ. ಏಕೆಂದರೆ, ಅಗ್ರಹಾರದಲ್ಲಿ ಕೊಳೆತು ನಾರುತ್ತಿರುವ ಕ್ರಿಯೆ ಶತಮಾನಗಳ ಹಿಂದೆಯೇ ಆರಂಭವಾಗಿದೆ. ಆದರೆ, ಈ ಕೊಳೆಯುವ ವಾಸನೆಗೆ ಒಂದು ಸ್ಪಷ್ಟವಾದ ಮೂಗು ಒದಗಿದ್ದು ನಾರಾಣಪ್ಪ ಎಂಬವನ ಸಾವು ಎಂಬ ಒಂದು ಬಾಹ್ಯ ಘಟನೆಯಿಂದ ಮಾತ್ರ. ಆದರೆ ನಿಜಕ್ಕೂ ಕೊಳೆತು ನಾರುತ್ತಿರುವವರು, ನಾರಣಪ್ಪನ ಮರಣೋತ್ತರದಲ್ಲೂ ಓಡಾಡಿಕೊಂಡಿದ್ದ ಬ್ರಾಹ್ಮಣರೇ ವಿನಾ ನಾರಣಪ್ಪನಲ್ಲ. ಮುಖ್ಯವಾಗಿ, ಒಂದು ದೃಷ್ಟಿಯಿಂದ ಈ ಕೊಳೆಯುವ ಕ್ರಿಯೆಗೆ ತಮಗರಿವಿಲ್ಲದೆ ಹವಿಸ್ಸು ನೀಡುತ್ತಿದ್ದವರೂ ಪ್ರಾಣೇಶಾಚಾರ್ಯರೆ. ಹೀಗಾಗಿ, ಅವರ ಒಂದು ಹಳೆಯ ವ್ಯಕ್ತಿತ್ವ 'ಸಂಸ್ಕಾರ'ಗೊಂಡು, ಅವರ ವ್ಯಕ್ತಿತ್ವಕ್ಕೆ ಹೊಸದೇ ಆದ 'ಸಂಸ್ಕಾರ' ಒಂದು ಒದಗುವುದೂ 'ಸಂಸ್ಕಾರ' ಕಾದಂಬರಿಯ ಮುಖ್ಯ ತಿಳಲುಗಳಲ್ಲಿ ಒಂದಾಗಿದೆ. ❁

---

* ಕಾಮ ಎಷ್ಟೇ ಪ್ರಬಲ ಪ್ರವೃತ್ತಿ ಎನಿಸಿದರೂ ದೂರದ ಸಂಬಂಧಿಯೂ ಆದ ನಾರಾಣಪ್ಪನ ಶವವಿನ್ನೂ ಸಂಸ್ಕಾರಗೊಳ್ಳದೇ, ಹಾಗೇ ಬಿದ್ದಿರುವಾಗ, ಪ್ರಾಣೇಶಾಚಾರ್ಯರಂಥವರಿಂದ ಇಂಥ ಕೃತ್ಯ (ಆ ಘಳಿಗೆಯಲ್ಲಿ) ಸಾಧ್ಯವೇ ಎಂದು ಕೆಲ ವಿಮರ್ಶಕರ ಪ್ರಶ್ನೆ. ಲಂಬಿಸುವ ಉದ್ದೇಶವಿಲ್ಲವಾದ್ದರಿಂದ, ಓದುಗರ ಕ್ಷಮೆ ಕೋರಿ ಒಂದು ಚಿಕ್ಕ ಉತ್ತರ. ತನ್ನ ತಂದೆ ತೀರಿಕೊಂಡ ಗಳಿಗೆಯಲ್ಲಿಯೇ ಗಾಂಧೀಜಿ ಏನು ಮಾಡುತ್ತಿದ್ದರು? ಉತ್ತರ ಅವರ 'ಆತ್ಮ ಚರಿತ್ರೆ' ಯಲ್ಲೇ ಇದೆ.

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

೧. ನಿರ್ವಿಣ್ಣ
(ಅ) ತಡೆಯಿಲ್ಲದಿರುವುದು (ಆ) ದುಃಖಿತ (ಇ) ಕತ್ತಲೆ (ಈ) ವಿರೋಧ

೨. ವ್ಯೋಮ
(ಅ) ಬೆಂಕಿ (ಆ) ಕಸರತ್ತು (ಇ) ಆಕಾಶ (ಈ) ಮಾದಕ ಪದಾರ್ಥ

೩. ನಶ್ವರ
(ಅ) ಶಕ್ತಿವಂತ (ಆ) ನಿಶ್ಶಕ್ತ (ಇ) ಬೆಳಕುಳ್ಳ (ಈ) ನಾಶವಾಗುವ

೪. ಹುದ್ದರಿ
(ಅ) ಆಟದಲ್ಲಿ ಪ್ರವೀಣ (ಆ) ಬೇಜವಾಬ್ದಾರಿ (ಇ) ಮುದುಡು (ಈ) ಹೊಸತನ

೫. ಕೂನು
(ಅ) ಕೊಲೆ (ಆ) ಮೂಲೆ (ಇ) ಗುಡ್ಡ (ಈ) ಬಾಗು

೬. ಚಾರ್ವಾಕ
(ಅ) ನಾಸ್ತಿಕ (ಆ) ವೈದ್ಯ (ಇ) ಕಾಲುವೆ (ಈ) ಸೇತುವೆ

೭. ಚಾಳಿ
(ಅ) ಬಹಳ ಮಾತಾಡುವುದು (ಆ) ಸಾಣೆಗೆ (ಇ) ದುರಭ್ಯಾಸ (ಈ) ಕಣ್ಣು

೮. ಒಡರಿಸು
(ಅ) ಸಿಕ್ಕಿಸಿಹಾಕು (ಆ) ಮಾಡು (ಇ) ಸೀಳು (ಈ) ವಿಘ್ನಮಾಡು

೯. ತರಲೆ
(ಅ) ಒಣ ಎಲೆ (ಆ) ಮೆದುತನ (ಇ) ನಾಟುವಿಕೆ (ಈ) ಚಾಡಿ

೧೦. ವಿಕೋಪ
(ಅ) ಸಿಟ್ಟು (ಆ) ಅತಿರೇಕಕ್ಕೇರುವಿಕೆ (ಇ) ಗೌಳಿಗರ ರಾಜ (ಈ) ಬೊಬ್ಬಾಟ

೧೧. ಶಿಥಿಲ
(ಅ) ಸಡಿಲು (ಆ) ತಂಪು (ಇ) ಸಿಡಿಲು (ಈ) ಬಿಳಿದು

೧೨. ಶಿಫಾರಸು
(ಅ) ಪುರುಷ ಗುಪ್ತಾಂಗ (ಆ) ಮೀನಿನ ಹಿಂಡು (ಇ) ಮೆಚ್ಚುಗೆ ಸೂಚನೆ (ಈ) ಶುಭಾಶಯ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

೧. **ನಿರ್ವಿಣ್ಣ** (ಅ) ದುಃಖಿತ, ನಿರಾಶೆಗೊಂಡ, ಮುಂಗಾಣದ. ಉದಾ:— ಬಂದ ಕಷ್ಟಗಳಿಂದ ನಿರ್ವಿಣ್ಣನಾಗಿ ಕುಳಿತ [ಸಂ.]

೨. **ವ್ಯೋಮ** (ಇ) ಆಕಾಶ, ಬಾನು, ಗಗನ; ವಾಯುಮಂಡಲ. ಉದಾ:— ವ್ಯೋಮ ಮಂಡಲ ನಕ್ಷತ್ರಮಯವಾಗಿತ್ತು. [ಸಂ.]

೩. **ನಶ್ವರ** (ಈ) ನಾಶವಾಗುವಂಥಾದ್ದು, ಬಹಳಕಾಲ ಉಳಿಯಲಾರದ್ದು; ಕ್ಷಣಿಕ. ಉದಾ:— ನಶ್ವರವಾದ ಸಂಪತ್ತು. [ಸಂ.]

೪. **ಹುದ್ದರಿ** (ಅ) ಆಟದಲ್ಲಿ ಪ್ರವೀಣ, ಉತ್ಸಾಹದಿಂದ ಸ್ಪರ್ಧಿಸುವವನು; ಸ್ಪರ್ಧಾಳು, ಹುರಿಯಾಳು. ಉದಾ:— ಚುನಾವಣೆಯಲ್ಲಿ ಇದ್ದವರು ಎರಡೇ ಹುದ್ದರಿಗಳು [?]

೫. **ಕೂನು** (ಈ) ಬಾಗು, ಉಬ್ಬು; ಬಾಗಿರುವಿಕೆ, ಉಬ್ಬಿರುವಿಕೆ; ವಕ್ರತೆ; (ಬೆನ್ನಿನ) ಡೂಗು. ಉದಾ:— ದಿಬ್ಬದ ಕೂನು [ದೇಶ್ಯ]

೬. **ಚಾರ್ವಾಕ** (ಅ) ನಾಸ್ತಿಕ; ದೇವರಿಲ್ಲ, ಪರಲೋಕವಿಲ್ಲ ಎಂದು ವಾದಿಸಿದ ಒಬ್ಬ ಪುರಾತನ ತತ್ವಜ್ಞಾನಿ. ಉದಾ:— ನಿನ್ನ ಚಾರ್ವಾಕತನ ಬಿಡು. [ಸಂ.]

೭. **ಚಾಳಿ** (ಇ) ದುರಭ್ಯಾಸ, ಕೆಟ್ಟ ನಡತೆ, ಚಟ. ಉದಾ:— ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ. [ಪಾರಸೀಕ–ಚಾಲ್ = ನಡತೆ]

೮. **ಒಡರಿಸು** (ಆ) ಮಾಡು, ತಯಾರಿಸು, ರಚಿಸು; ಒದಗಿಸು; ತೊಡಗು. ಉದಾ:— ಎಲ್ಲವನ್ನೂ ಒಡರಿಸಿದ ಸಾಹಸಿ. [ದೇಶ್ಯ, ಒಡರ್ = ಮಾಡು, ಆಗು]

೯. **ತರಲೆ** (ಈ) ಬಾಡಿ, ತಂಟೆ, ಉಪದ್ರವ. ಉದಾ:— ಬಹಳ ತರಲೆ ಮನುಷ್ಯ. [ತುಳು = ತರಳೆ]

೧೦. **ವಿಕೋಪ** (ಅ) ಅತಿರೇಕಕ್ಕೇರುವುದು, ಅತಿಯಾದ ಕೆರಳಿಕೆ, ಉದಾ:— ಮನಸ್ತಾಪ ವಿಕೋಪಕ್ಕೆ ಹೋಯಿತು. [ಸಂ.]


೧೧. **ಶಿಥಿಲ** (ಅ) ಸಡಿಲಾದದ್ದು, ಬಿಗಿಯಿಲ್ಲದ್ದು, ಬಲಹೀನ. ಉದಾ:— ನೀತಿ ಶಿಥಿಲವಾಯಿತು. [ಸಂ.]

೧೨. **ಶಿಫಾರಸು** (ಇ) ಮೆಚ್ಚುಗೆ ಸೂಚಿಸುವಿಕೆ, ಯೋಗ್ಯತೆಯನ್ನು ಮೆಚ್ಚಿ ಹೇಳುವ ಮಾತು, ಪ್ರಶಂಸೆ. ಉದಾ:— ಶಿಫಾರಸು ಪತ್ರ ಕೊಟ್ಟನು. [ಪಾರಸೀಕ—ಶಿಫಾರಿಶ್]

ನಿಮ್ಮ ಶಬ್ದ ಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆಗಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ

೬–೮ ಸರಿಯಿದ್ದರೆ	...	ಸಾಧಾರಣ
೯–೧೦ ,,	...	ಉತ್ತಮ
೧೧–೧೨ ,,	...	ಅತ್ಯುತ್ತಮ



ಮೂಲ : **ಮ್ಯಾಸಿಮೊ ಬೊಂಟೆಂಪಲ್ಲಿ**
ಕನ್ನಡಕ್ಕೆ : **ರಾ. ಕ. ನಾಯಕ**

ನನ್ನ ಕೊರಗೇನೆಂದು ।
ತಿಳಿಯೆ ನೀನೆಂದೆಂದು ॥

ಗಾಡಿ ಚಲಿಸುತ್ತಿತ್ತು. ಎದುರು ಬದುರಾಗಿ ಕುಳಿತಿದ್ದರು ಇಬ್ಬರು ಪ್ರಯಾಣಿಕರು. ಒಬ್ಬಳು ತರುಣಿ, ಇನ್ನೊಬ್ಬ ಹನ್ನೊಂದರ ಹೈದ. ಪರಸ್ಪರ ಪರಿಚಯವಿಲ್ಲ. ಇಬ್ಬರ ನೋಟಗಳೂ ಒಂದಾಗಿಲ್ಲ. ಕಾರಣ ಅವಳ ಮನವನ್ನಾವರಿಸಿದ ಚಿಂತೆ. ಇವನಿಗೆ ತಾನಿನ್ನೂ ಚಿಕ್ಕವನೆಂಬ ಲಜ್ಜೆ.

ಅಂತೆಯೇ ಇಬ್ಬರ ಕಣ್ಣೂ ನೆಟ್ಟದ್ದು ದೂರದವರೆಗೆ ಹರಡಿದ್ದ ಸಾಲುಮರಗಳ ಕಾಡಿನಲ್ಲಿ. ಕಿಟಕಿ ತೆರೆದಿದ್ದವು. ಹುಲ್ಲುಗಾವಲಲ್ಲಿ ಸೂಸಿ ಬರುವ ಗಾಳಿ ಚುರುಕಾಗಿತ್ತು. ದೂರದಲ್ಲಿ ಕುದುರೆ ಹಿಂಡು ಆಗೊಮ್ಮೆ ಈಗೊಮ್ಮೆ ಕಾಣಿಸಿ ಮರೆಯಾಗುವುದನ್ನು ಮಾರ್ಸೆಲೊ ನೋಡುತ್ತಿದ್ದ. ಒಮ್ಮೊಮ್ಮೆ ಗೂಳಿಯೊಂದು ಕಾಣುತ್ತಿತ್ತು. ಈ ದೃಶ್ಯವೈವಿಧ್ಯ ಸ್ವಲ್ಪಮಟ್ಟಿಗೆ ಪ್ರಯಾಣ ಪ್ರಾರಂಭದಿಂದ ಅವನ ಮನವನ್ನಾವರಿಸಿದ್ದ ನೋವನ್ನು ಮರೆಸುತ್ತಿತ್ತು. ಆಗಾಗ ಹೊಲಗಳನ್ನು ಕೊರೆದು ಹೋಗುವ ಕೊಳಚೆಗಳನ್ನು ಮುಂದಕ್ಕೆ ಬಾಗಿ ನೋಡೋಣ ಎಂದರೆ ತಾನು ಹಾಗೆ ಮಾಡುವಷ್ಟು ಚಿಕ್ಕವನಲ್ಲ ಎಂಬ ಅರಿವಿನಿಂದ ಹಿಂದೆಗೆಯುತ್ತಿದ್ದ. ಮಹಿಳೆಯ ಚಲನೆಯಿಂದ ಆಕರ್ಷಿತನಾಗಿ ಅತ್ತ ನೋಡಿದ. ಆಕೆ ನಿಂತಿದ್ದಳು.

ಅವಳ ಮುಖದ ಮೇಲಿನ ಅವಗುಂಠನ ಅವನ ಮನ ಸೆಳೆಯಿತು. ಆದರೆ ಆಕೆ ತಿರುಗಿದಳು. ತನ್ನ ಸೂಟ್‌ಕೇಸ್ ಸರಿಸಿ ಜಾಳಿಗೆ ಚೀಲದೊಳಗಿನ ಬಗೆಬಗೆಯ ವಸ್ತುಗಳಲ್ಲಿ ಕೈಯಾಡಿಸಿದಳು. ಒಂದು ಪುಸ್ತಕ ಮತ್ತು ಒಂದು ಸಚಿತ್ರ ಪತ್ರಿಕೆಯನ್ನು ಹೊರದೆಗೆದು ತನ್ನ ಆಸನದ ಮೇಲೆ ಚೆಲ್ಲಿದಳು. ಸೂಟ್‌ಕೇಸ್ ಪಕ್ಕದಲ್ಲೆ ಒಂದು ಕೈ ಚೀಲ. ಎರಡು ಮೂರು ಸಲ ಅದನ್ನು ತೆರೆದಳು, ಮುಚ್ಚಿದಳು. ಆಮೇಲೊಂದು ಕಾಗದದ ಪೊಟ್ಟಣ ಎತ್ತಿದಳು. ಮರುಕ್ಷಣವೆ ಮತ್ತೆ ಅದನ್ನು ತುರುಕಿದಳು. ತೋಳು ಎತ್ತಿ ನಿಂತಳು. ಅದನ್ನು ಮಾರ್ಸೆಲೊ ಮೆಚ್ಚುಗೆಯಿಂದ ಅವಲೋಕಿಸಿದ. ಆಕೆ ತನ್ನ ಚಲನವಲನಗಳನ್ನು ಮುಗಿಸಿ ಹೊರಗಿನ ದೃಶ್ಯ ನೋಡತೊಡಗಿದಳು.

ಇನ್ನೂ ನಿಂತೇ ಇದ್ದಳು. ಒಂದು ಮೊಣಕಾಲನ್ನು ತನ್ನ ಆಸನದ ಮೇಲೆ ಊರಿದ್ದಳು.

ಆ ಭಂಗಿ ಮಾರ್ಸೆಲೊನನ್ನು ಬೆರಗುಗೊಳಿಸಿತು. ಅವಳಂತೆ ತಾನೂ ನಿಲ್ಲಬಹುದಾಗಿತ್ತು. ಆದರೆ ಆತ ಅವಳ ಕುರಿತು ಒಂದು ನಿರ್ಧಾರದ ಯೋಚನೆ ಮಾಡುತ್ತಿದ್ದ.

ಆಕೆ ಅಷ್ಟು ನಿಟ್ಟಿಸಿ ಬಯಲನನ್ನು ನೋಡುವುದನ್ನು ಕಂಡು ಅಂಥದೇನಾದರೂ ಹೊಸ ಆಕರ್ಷಣೆ ಕಾಣಸಿಕೊಂಡಿದೆಯೆ ಎಂದು ತಾನೂ ಬಾಗಿ ಕಣ್ಣು ತಿರುಗಿಸಿದ. ಬಯಲು ಬಯಲಾಗಿತ್ತು. ಮಾರ್ಸೆಲೊ ವ್ಯಸ್ತನಾದ. ಮೂಲೆಯಲ್ಲಿ ತನ್ನ ಸ್ಥಳದಲ್ಲೆ ಮುದ್ದೆಯಾಗಿ ಕುಳಿತ. ಅವನ ದೃಷ್ಟಿ ಬಾಗಿತು. ತನ್ನ ಮನಸ್ಸನ್ನು ಕೊರೆಯುತ್ತಿದ್ದ ನೋವಿನ ಯೋಚನೆಯಲ್ಲಿ ಮುಳುಗಿದ. ಅವನ ಯೋಚನೆ ಹೀಗಿತ್ತು: ಆನೆಸ್ಟಿ ಎಂದು ಆಂಗ್ಲ ಭಾಷೆಯಲ್ಲಿ ಕರೆಯುವ ನೇರಲೆ ಬಣ್ಣದ ಹೂವಿನ ಪೊದೆ; ಅದರ ಮೋಹಕ ಎಲೆಗಳು–ಇಟಲಿಯಲ್ಲಿ ಕೆಲವು ಕಡೆ ಇವುಗಳನ್ನು ಪೋಪನ ಸಿಪಾಯಿಗಳೆನ್ನುವರು. ಇನ್ನು ಕೆಲವು ಕಡೆ ಇರುಳ ಸುಮಗಳೆನ್ನುವರು. ಸಸ್ಯಶಾಸ್ತ್ರದಲ್ಲಿ ಇವಕ್ಕೆ ಲ್ಯುನೆರಿಯಾ ಎಂದು ಹೆಸರು. ಒಂದು ಕಾಲಕ್ಕೆ ಗೃಹಿಣಿಯರು ಇದರ ಗೊಂಚಲುಗಳನ್ನು ತಂದು ಹೂದಾನಿಗಳಲ್ಲಿಟ್ಟು ಗೃಹಾಲಂಕಾರವನ್ನು ಮಾಡುತ್ತಿದ್ದರು. ಎಲೆಗಳೆಂದು ಇವನ್ನು ಕರೆವರಾದರೂ ವಸ್ತುತಃ ಇವು ಹೂಕಾಯಿ ಉದುರಿದ ತುಂಬಿನ ಅವಶೇಷಗಳು. ತೆಳುವಾದ ಕಡ್ಡಿಗಳ ತುದಿಗೆ ಸೊಪ್ಪೆಯಂತೆ ತೋರುವ ಬಿಚ್ಚಿದ ತುಂಬುಗಳು, ಪಾರದರ್ಶಕ ತಿಳಿಬಣ್ಣದ ನಾರಿನ ಎಳೆಗಳಂತಿರುವವು. ಲ್ಯಾಟಿನ್ ಶಬ್ದ ಸೂಚಿಸುವ ಅರ್ಥಕ್ಕೆ ತಕ್ಕಂತೆ ಅವು ಚಂದ್ರಬಿಂಬಗಳನ್ನೇ ಹೋಲುವವು. ಪ್ರತಿ ತುಂಬು ಕಡ್ಡಿ ಎತ್ತಿದ ಕಿರಿ ಬಟ್ಟಲು. ಅಲ್ಲಿಂದ ಎಳೆ ಮಗುವಿನ ನೆತ್ತಿಯ ಕಿರುಗೂದಲಿನಂತೆ ನಾರಿನ ಎಳೆಗಳ ಜಾಲ.

ಮಾರ್ಸೆಲೊನ ಮನೆಯಲ್ಲಿ ವಿರಾಮದ ಕೋಣೆಯಲ್ಲಿ ಒಂದು ಬೀರು ಇತ್ತು. ಅದರಲ್ಲಿ ಅವನ ತಾಯಿ ಎಷ್ಟೋ ವಸ್ತುಗಳನ್ನು ಸಂಗ್ರಹಿಸಿದ್ದಳು. ಅದರ ಮೇಲುಗಡೆ ಭಾವಚಿತ್ರಗಳಿದ್ದವು. ಅವುಗಳಲ್ಲೊಂದರ ಮುಂದೆ ಒಂದು ಚಾಚಿದ ಪಾತ್ರೆ. ಅದರಲ್ಲಿ ಸಿಕ್ಕಿಸಿದ್ದು ಒಂದೇ ಒಂದು ಚೆಂಬೂ ಟೊಂಗೆ. ಅದನ್ನಾತ ಎಷ್ಟೋ ಸಲ ನಿರೀಕ್ಷಿಸಿದ್ದ. ಅದಕ್ಕೆ ಎರಡು ಶಾಖೆಗಳಿದ್ದವು. ಒಂದೊಂದಕ್ಕೆ ಹಲವು ಕಡ್ಡಿಗಳು–ಕಡ್ಡಿಗೊಂದು ನಾರು ಗೊಂಚಲು ಸುರಿವ ತುಂಬು ಬಟ್ಟಲು. ಇಂಥ ಐದು ತುಂಬು ಬಟ್ಟಲುಗಳು ಒಟ್ಟಿಗೆ ಅಲ್ಲಿದ್ದವು. ಒಂದು ದಿನ ಆ ಟೊಂಗೆ ಕೆಳಗೆ ಬಿದ್ದು ಮುರಿದುಹೋಯಿತು.

ಅವನ ತಾಯಿ ಅದರಿಂದ ತುಂಬ ನೊಂದಿದ್ದಳು. ಅದೇನೋ ಅವಳ ಭಾವನೆಗಳು ಅದರೊಂದಿಗೆ ಹೆಣೆದುಕೊಂಡಿರಬೇಕು. ತಾನು ಅಂಥ ಒಂದು ಚೆಂಬೂ ಟೊಂಗೆಯನ್ನು ಪುನಃ ತಂದು ಅಲ್ಲಿ ಸಿಕ್ಕಿಸಬೇಕೆಂದುಕೊಂಡ. ನಾಲ್ಕು ತಿಂಗಳು ಅಲೆದರೂ ಆ ಸೀಮೆಯಲ್ಲಿ ಒಂದೂ ಚೆಂಬೂ ಪೊದೆ ಅವನಿಗೆ ನೋಡಸಿಗಲಿಲ್ಲ.

ಮುಂದೆ ರಜಾ ದಿನಗಳು ಬಂದವು. ಮಾರ್ಸೆಲೊನನ್ನು ಆಪ್ತರೊಬ್ಬರ ಕಡೆಗೆ ಒಂದು ವಾರ ಕಳೆದು ಬರಲು ದೊಡ್ಡ ಪಟ್ಟಣಕ್ಕೆ ಕಳಿಸಲಾಯಿತು. ಹೊರಡುವಾಗ ಚೆಂಬೂ ಟೊಂಗೆ ಹುಡುಕಿ ತರುವುದಾಗಿ ತಾಯಿಗೆ ನಿರ್ಧಾರದ ಮಾತುಕೊಟ್ಟು ಬಂದಿದ್ದ. ಆದರೆ ವಾರವಿಡೀ ಪುರಸೊತ್ತೇ ಸಿಕ್ಕಿರಲಿಲ್ಲ. ಗಾಡಿಯಲ್ಲಿ ಹತ್ತಿದೊಡನೆ ಪುನಃ ಆ ಟೊಂಗೆಯು ನೆನಪಾಗತೊಡಗಿತು. ಅತ್ತ ಬೀಳ್ಕೊಡಲು ಬಂದ ಗೆಳೆಯರು ಕಣ್ಮರೆಯಾಗತೊಡಗಿದರು.

ಚೆಂಬೂ ಟೊಂಗೆ ಇಲ್ಲದೆ ಹೊರಟ ಬಗ್ಗೆ ನೋವಿಗಿಂತ ಹೆಚ್ಚಾಗಿ ಅವನಿಗೆ ಸಿಟ್ಟು ಬಂತು; ಮತ್ತೆ ಅಳಿಯಿತು. ಅನುಭವಿಸಿದ ರಸನಿಮಿಷಗಳು ಮರೆವಾಗಿ ಕಳೆದ ವಾರವೆಲ್ಲ ಪಾಪಕೂಪದಂತೆ ಭಾಸವಾಗತೊಡಗಿತು. ಚೆಂಬೂ ಟೊಂಗೆ ಇಲ್ಲದ ಭಾವಚಿತ್ರದ ಮುಂದೆ ತಾಯಿ ನಿಟ್ಟ

ಸಿರು ಕರೆಯುವುದರ ಸ್ಮರಣೆಯಾಯಿತು. ಆಕೆ ನೀಡಿದ್ದ ಆಸೆಯ ನಿರೋಪ ನೆನಪಾಗಿ ತನ್ನ ಬಗ್ಗೆ ಹೇಸಿಕೆ ಎನಿಸಿತು. ಬೇಸರದಿಂದ ವ್ಯಗ್ರವಾದ ಚಿತ್ತ ಒಂದು ಕ್ಷಣ ಸ್ತಿಮಿತಕ್ಕೆ ಬಂತು. ಈ ನಡುವೆ ಯಾವಾಗಲೋ ಆತನ ಮನಸ್ಸು ಹೊರಗಿನ ನಿಸರ್ಗದಲ್ಲೂ ಸಹಪ್ರಯಾಣಿಕಳಲ್ಲೂ ತೊಡಗಿತು. ಆದರೆ ಈಗ ಪುನಃ ನೋವಿನ ಕೈಮೇಲಾಯಿತು. ಗ್ಲಾನಿ ಮರುಕಳಿಸಿತು.

ಮಹಿಳೆ ಕುಳಿತಳು. ಪುಸ್ತಕ ಬಿಚ್ಚಿ ಕೆಲವು ಪುಟ ಓದಿದಳು. ನಡುನಡುವೆ ಪುಸ್ತಕ ಎತ್ತುವಳು; ಅದರಿಂದ ಅದರ ಮೇಲಿನ ಕರಿ-ಕೆಂಪು ಅಕ್ಷರಗಳು ಕಾಣುವವು-ಓದುವಷ್ಟು ಸ್ಪಷ್ಟವಾಗಲಿಲ್ಲ. ಆಕೆ ಪುಸ್ತಕವನ್ನು ತೆರೆದೇ ಆಸನದ ಮೇಲಿಟ್ಟಳು. ಕೈಚೀಲ ಎತ್ತಿಕೊಂಡು ಸಿಗರೇಟ ಕೇಸ್ ಹೊರ ತೆಗೆದಳು. ಆ ಮೇಲೆ ಕಡ್ಡಿ ಪೊಟ್ಟಣ ತೆಗೆದಳು. ಕೊನೆಗೆ ಒಂದು ಸಿಗರೇಟನ್ನು ತೆಗೆದುಕೊಂಡಳು, ಆದರೆ ಸೇದಲಿಲ್ಲ. ಕೇಸು, ಸಿಗರೇಟು, ಕಡ್ಡಿ ಪೊಟ್ಟಣ-ಎಲ್ಲವನ್ನೂ ಹರವಿದ ಪುಸ್ತಕದ ಮೇಲೆ ಇಟ್ಟಳು, ಯಾಕೆ ಹೀಗೆ?

ನಿಧಾನವಾಗಿ ತನ್ನೆರಡೂ ಕೈಗಳಿಂದ ಹಗುರಾಗಿ ಅವಗುಂಠನವನ್ನು ಗದ್ದದಿಂದ ಕೆನ್ನೆಯ ಎಲುಬಿನವರೆಗೆ ಎತ್ತಿದಳು. ಅದರ ಕರಿ ಗೆರೆ ಅವಳ ಮುಖವನ್ನು ಇಬ್ಭಾಗ ಮಾಡಿದಂತಿತ್ತು. ಇನ್ನಾಕೆ ಸಿಗರೇಟು ಹೊತ್ತಿಸಬಹುದೆಂದುಕೊಂಡ. ಆದರೆ ಆಕೆ ಹಾಗೆ ಮಾಡದೆ ಕಾಗದದ ಪೊಟ್ಟಣ ಎತ್ತಿಕೊಂಡು ಅದನ್ನು ಪುಸ್ತಕ ಮತ್ತು ಕೈಚೀಲಗಳ ನಡುವಿಟ್ಟಳು. ಮತ್ತೆ ಕುಳಿತಳು. ಸಚಿತ್ರ ಪತ್ರಿಕೆಯನ್ನು ಬಿಚ್ಚಿ ತೊಡೆಯ ಮೇಲಿರಿಸಿಕೊಂಡಳು. ಸುಮ್ಮನೆ ಪುಟ ಮಗುಚ



ತೊಡಗಿದಳು.

ಒಂದು ಚಲಚಿತ್ರದ ದೃಶ್ಯ ನೋಡುತ್ತಿದ್ದಂತೆ ಮಾರ್ಸೆಲೊ ಪ್ರಭಾವಿತನಾದ. ತಾನು ಅವಳನ್ನು ವೀಕ್ಷಿಸುವುದು ಸರಿಯಲ್ಲವೇನೊ ಎನ್ನಿಸಿ ಸ್ವಲ್ಪ ಸಾವರಿಸಿಕೊಂಡ. ಅವಳು ತನ್ನದೇ ಗುಂಗಿನಲ್ಲಿ ಮುಗಿಲ ಕಡೆ ದೃಷ್ಟಿ ಇಟ್ಟಿದ್ದಳು. ಸೂರ್ಯ ಏರಿದಂತೆ ಭೂಮಿಗೂ ರಂಗು ಹರಡಿತ್ತು. ಮಾರ್ಸೆಲೊ ಎರಡು ಮೂರು ಸಲ ಬಾಗಿದ-ಕಣ್ಣು ರೆಪ್ಪೆ ಮುಚ್ಚಿದಂತಾಯಿತು. ಕಿಟಕಿಯ ಹೊರಗೆ ಸೃಷ್ಟಿಯು ತುಂಬೆಲ್ಲ ಚೆಂಬೂ ಟೊಂಗೆ-ಗಳೆ ತುಂಬಿಕೊಂಡಂತೆನಿಸಿತು. ಸಣ್ಣ ಶಬ್ದವಾಗಿ ಆತ ಎಚ್ಚರವಾದ.

ನೋಡುತ್ತಾನೆ, ಆ ಮಹಿಳೆ ಪೊಟ್ಟಣ ಬಿಚ್ಚು-ತ್ತಿದ್ದಳು, ನಿಟ್ಟಿಸಿದ. ಆಕೆ ಪೊಟ್ಟಣ ಪೂರ್ಣ ಬಿಚ್ಚಿದಳು. ಒಳಗೆ ದೊಡ್ಡದೊಂದು ಚೆಂಬೂ ಗೊಂಚಲು.

ಬೆರಗು-ಆನಂದದಿಂದ ಆತನಿಗೆ ಚೀರುವಂತಾ-ಯಿತು. ಇದೂ ಕನಸಾಗಿರಬಹುದೆ ಎಂದು ಒಂದು ನಿಮಿಷ ಭಾವಿಸಿದ. ಬಹುಶಃ ಐವತ್ತು ಟೊಂಗೆಗಳಿರಬಹುದು. ಹೇಗೆ ಎಣಿಸುವುದು? ಒಂದು ವಿಚಾರ ಹೊಳೆದು ಎದೆ ಬಡಿತ ವೇಗ-ವಾಯಿತು. ಒಂದು ಟೊಂಗೆ ಕೊಡೆಂದು ಅವ-ಳನ್ನು ಕೇಳಬೇಕೆಂದುಕೊಂಡ.

ಪುನಃ ಎದೆ ಬಡಿತ ನಿಧಾನಿಸಿತು. ಈಗ ವಿಚಾರ ನಿರ್ಧಾರದ ರೂಪಕ್ಕೆ ಬಂತು. ಆಕೆ ಆ ಗೊಂಚಲನ್ನು ಹಿಡಿದು ಹಗುರಾಗಿ ಅಲ್ಲಾಡಿ-ಸಿದಳು. ನೂರಾರು ಕಿರುಗಂಟೆನಿನದಿಸಿದಂತಾ-ಯಿತು. ಗಾಡಿ ಎಲ್ಲ ಭವ್ಯ ರಾತ್ರಿಯಾಗಿ ಮಾರ್ಪಟ್ಟಂತೆ ತೋರಿತು.

ಆಕೆ ಒಂದು ಕೈಯಲ್ಲಿ ಗೊಂಚಲು ಇನ್ನೊಂದು ಕೈಯಿಂದ ತನ್ನ ಅವಗುಂಠನ ಹಿಡಿದಿದ್ದಾಳೆ. ಹಿಂದಕ್ಕೆ ಒರಗಿದ್ದಾಳೆ; ಅನಂತದಲ್ಲಿ ದೃಷ್ಟಿ ಇಟ್ಟಿದ್ದಾಳೆ. ಅವಳ ವಿಚಾರಗಳು ಪೊಟ್ಟಣ ಬಿಚ್ಚುವುದನ್ನು ಮೀರಿ ದೂರ ಹೋಗಿದ್ದವು. ಅವಳೊಂದಿಗೆ ಮಾತು ಆರಂಭಿಸಬೇಕೆಂದು ಕೊಂಡ. "ಸಿನ್ಯೋರಾ" (ಶ್ರೀಮತಿಯವರೆ) ಎಂದು ಆರಂಭಿಸಬೇಕೆಂದ. ಅವಳಿಗೆ ನಡುವೆ ಮಾತಾಡಲಿಕ್ಕೆ ಬಿಡದೆ ಒಮ್ಮೆಲೆ ಒಂದು ಟೊಂಗೆ ಕೊಡೆಂದು ಕೇಳಬೇಕೆಂದುಕೊಂಡ. ಒಂದೇ ಒಂದು ಚೆಂಬೂ ಟೊಂಗೆ. ಅದೂ ತನ್ನ ತಾಯಿಯ ತೃಪ್ತಿಗಾಗಿ. ಅವಳು ಖಂಡಿತ ಇಲ್ಲ ಎನ್ನಲಾರಳು.

ಆದರೆ ಯಾವ ನಿಶ್ಚಿತ ಸಮಯಕ್ಕೆ ಮಾತು ಪ್ರಾರಂಭಿಸಬೇಕೆಂದು ತಿಳಿಯದೆ ಗಲಿಬಿಲಿ ಗೊಂಡ. ಆ ನಿಮಿಷ ಬರುತ್ತಲೇ 'ಸಿನ್ಯೋರಾ' ಅನ್ನುವುದು, ಆಕೆ ಹೊರಳಿ ಇವನನ್ನು ನೋಡು ತ್ತಾಳೆ, ಆಮೇಲೆ ಹೇಳಲಿಕ್ಕೆ ಅಗುತ್ತದೆ — ಆಕೆ ಆ ಗೊಂಚಲನ್ನು ವೀಕ್ಷಿಸುವುದನ್ನು ಮುಗಿಸಿ ತನ್ನತ್ತ ಹೊರಳುವುದನ್ನು ಕಾಯತೊಡಗಿದ. ಇಷ್ಟು ಹೊತ್ತು ಏನು ನೋಡುತ್ತಾಳೆ ಎಂದು ಆತುರನಾದ.

ಆಕೆ ಇವನ ವಿಚಾರಗಳಿಗೆ ಹೊಂದಿಕೊಳ್ಳು-ವಂತಾಗಿರಬೇಕು. ದೃಷ್ಟಿ ಕೆಳಗೆ ಹೊರಳಿಸಿದಳು. ಅವರ ಪ್ರವಾಣದಲ್ಲಿ ಈಗೊಂದು ನಿಮಿಷ ಅವಳ ದೃಷ್ಟಿ ಇವನ ದೃಷ್ಟಿಗೆ ತಾಗಬೇಕು. ಸಾಕು, ತನ್ನ ಕೆಲಸ ಆಗುವುದು. ಚಿಂತಿಸಬೇಕಾದ ಕಾರಣವಿಲ್ಲ. ಇನ್ನೇನು ಆ ನಿಮಿಷ ದೂರವಿಲ್ಲ. ಆದರೆ ಒಮ್ಮೆಲೆ ದೃಶ್ಯ ಬದಲಾಯಿತು. ಅವಳ ಕೈ ಬರಿದಾದವು. ಒಂದು ಮಗ್ಗಲಿಗೆ ಪೊಟ್ಟಣದ ಕಾಗದ ಇಟ್ಟಳು. ಇನ್ನೊಂದು ಕಡೆ ಗೊಂಚಲ-ನ್ನಿಟ್ಟಳು.

ಇವಳು ಸಿಗರೇಟನ್ನೇಕೆ ಸೇದಲಾರಳು? ಬರೆ ಕೂತಿದ್ದಳು. ಮಾರ್ಸೆಲೋನ ದೃಷ್ಟಿ ಚೆಂಬೂ ಗೊಂಚಲಲ್ಲೇ ನೆಟ್ಟಿತ್ತು. ಅಲ್ಲಿಂದ ದೃಷ್ಟಿ ಕಿತ್ತರೆ ತಕ್ಷಣ ಅದು ಮಾಯವಾದೀತೆಂದುಕೊಂಡು ಆದರೆ ಹೀಗೆ ನೆಟ್ಟ ನೋಟದಿಂದ ನೋಡುವುದು ತಪ್ಪೇನೋ ಎನ್ನಿಸಿ ಕೊಂಚ ಬೆದರಿದ. ಆದರೆ ಈಗಿನ ಮಾತು ಬೇರೆ ಇತ್ತು. ಇದರಿಂದ ಆಕೆ ಅವನ ಆಸಕ್ತಿಯನ್ನು ಅರ್ಥ ಮಾಡಿಕೊಂಡು ಸಹಾನುಭೂತಿಪರಳಾಗುವಳೆನಿಸಿತು. ಇನ್ನೇನು

ಸ್ವಲ್ಪ ಹೊತ್ತು ಕಾಯಬೇಕು ಅಷ್ಟೆ.

ಆ ಚೆಂಬೂಗಳನ್ನು ಜಾಳಿಗೆ ಚೀಲದಲ್ಲೋ ಸೂಟ್‌ಕೇಸಿನಲ್ಲೋ ಮರಳಿ ಇಡಬೇಕೆಂದುಕೊಂಡಳು. ಆದರೆ ಅವು ಬಹಳ ಇದ್ದವು. ತಾನು ನೆರವಾಗಲಿಕ್ಕೆ ಮುಂದಾಗಬೇಕು. ಒಂದೆರಡು ಟೊಂಗೆ ಹೊರಗೇ ಉಳಿಯುತ್ತವೆ. "ನಮ್ಮ ಸಹ ಪ್ರಯಾಣದ ಸವಿ ನೆನಪೆಂದು ಇವನ್ನು ಇಟ್ಟುಕೊ," ಎನ್ನುತ್ತಾಳೆ.

ಈ ಮನಃಸ್ಥಿತಿಯಲ್ಲಿ ಮಾರ್ಸೆಲೊ ಸಂತೋಷದಿಂದಿದ್ದ. ಕಲ್ಪನೆ ತನ್ನನ್ನು ಎಲ್ಲಿಗೆ ಒಯ್ಯುತ್ತಿದೆ ಎಂಬುದನ್ನು ಆತ ಅರಿಯದೆ ಹೋಗಿದ್ದ.

ಮಾರ್ಸೆಲೊ ಅಸ್ವಸ್ಥನಾದ. ಆಕೆ ಭಾವಲೋಕದಿಂದ ಇಳಿದಳು. ಈವರೆಗೆ ದಿಕ್ಕಿಲ್ಲದಂತೆ ಬಿದ್ದಿದ್ದ ಸಿಗರೇಟನ್ನು ಎತ್ತಿಕೊಂಡು ಕೈಗೆ ಕಡ್ಡಿ ತೆಗೆದುಕೊಂಡಳು. ಈಗ ಇವನ ಹತ್ತಿರ ಕಡ್ಡಿಪೊಟ್ಟಣವಿರಬೇಕಿತ್ತು. ವಯಸ್ಕರು ಇಂಥ ಪ್ರಸಂಗದಲ್ಲಿ ಸ್ತ್ರೀದಾಕ್ಷಿಣ್ಯ ತೋರಲು ಆತುರರಿರುತ್ತಾರೆ.

ಈಗ ಆಕೆ ತಾನೆ ತನ್ನ ಸಿಗರೇಟು ಹೊತ್ತಿಸಿಕೊಳ್ಳುತ್ತಿದ್ದಳು. ಬಹುಶಃ ಇದೇ ತಕ್ಕ ಸಮಯ. ಸಿಗರೇಟಿನ ನೀಲಿ ಹೊಗೆ ಇವನ ಮುಖಕ್ಕೆ ರಾಚಿದಂತೆ ಬಂದದ್ದು ಸ್ವರ್ಗೀಯ ಸುಗಂಧ ಎಂದುಕೊಂಡ. ಈಗ ತಕ್ಕ ಸಮಯ





ವೆಂದು ಮಾತಾಡಲು ಬಾಯಿ ತೆರೆದ-

"ಸಿನ್ಯೋರಾ" ಅವನ ಬಾಯಿಂದ ಶಬ್ದ ಹೊರ ಬಿತ್ತೋ ಅಥವಾ ಬರೆ ಎದೆಯಲ್ಲೇ ಮೂಡಿ ಮಾಯವಾಯಿತೊ ಅವನಿಗೆ ತಿಳಿಯಲಿಲ್ಲ. ಬಹುಶಃ ಧ್ವನಿ ಹೊರಬರಲಿಲ್ಲ. ಗಟ್ಟಿಯಾಗಿ ಮತ್ತೊಮ್ಮೆ ಹೇಳಬೇಕು: "ಸಿನ್ಯೋರಾ"— ಆದರೆ ಅಷ್ಟರಲ್ಲಿ ಆಕೆ ತಟ್ಟನೆ ತನ್ನ ಸಿಗರೇಟನ್ನು ಕಿಟಕಿಯಿಂದ ಬೀಸಾಕಿದಳು. ಅವಳ ಮುಖ ಮುದ್ರೆಯನ್ನು ನೋಡಿ ಗಾಬರಿಗೊಂಡ.

ಇವಳಿಗೇನಾಗಿದೆ? ಬಹುಶಃ ತಾನು ಮಾತಾಡಲು ಆಯ್ದ ಸಮಯ ಸರಿಯಾಗಿರಲಿಲ್ಲ. ಒಮ್ಮೆಲೆ ಆಕೆ ಎರಡೂ ಕೈಗಳಿಂದ ಮುಖ ಮುಚ್ಚಿಕೊಂಡಳು. ಅವಗುಂಠನವನ್ನು ಕಿತ್ತು ಆಸನದ ಮೇಲೆ ಇರಿಸಿದಳು. ನಿಟ್ಟುಸಿರುಬಿಟ್ಟಳು. ವಾತಾವರಣವು ಬಿರುಸಾಗಿತ್ತು.

ಆಕೆ ಹೂಗೊಂಚಲನ್ನು ಕೈಗೆತ್ತಿಕೊಂಡು ವೀಕ್ಷಿಸಿದಳು. ಅವು ಅವಳಿಗೆ ತುಂಬ ಪ್ರಿಯವಾಗಿರಬೇಕು. ಆದರೂ ಒಂದನ್ನು ಕೊಡದಿರಲಾರಳು. ಕೇಳುವದಷ್ಟೆ ಬಾಕಿ ಇತ್ತು. ಆಕೆ ತಲೆ ಎತ್ತಿದಳು. ಬಹುಶಃ ಅವಳೇ ಮಾತಾಡುವಳೆಂದು ಭಾವಿಸಿದ.

ಆದರೆ ಆಕೆ ಕೂಡಲೆ ಸಿಗರೇಟನ್ನು ಚೆಲ್ಲಿದಷ್ಟೆ ಲಗುಬಗೆಯಿಂದ ಹೂಗೊಂಚಲನ್ನು ಕಿಟಕಿಯಿಂದ ತೂರಿಬಿಟ್ಟಳು.

ಇದಾಗಿ ಬಹಳ ವರ್ಷ ಕಳೆದಿವೆ. ಅಂದಿನ ಈ ಕರುಣ ಪ್ರಸಂಗವನ್ನು ಕುರಿತು ಹೇಳುವಾಗ ಆತ ತಿಳಿದುಕೊಂಡ "ಸ್ತಂಭೀಭೂತ"ನಾಗುವದೆಂದರೆ ಏನೆಂಬುದನ್ನು ಆಗ ಅನುಭವಿಸಿದ್ದ. ಅದೇ ರೀತಿ ಸ್ತಂಭೀಭೂತನಾಗಿ ಆತ ಎಷ್ಟೊತ್ತು ಉಳಿದನೊ! ಎದೆಯಲ್ಲಿ ನೋವಿನ ಉರಿ ಎದ್ದಂತಾಯಿತು. ಬಿಕ್ಕತೊಡಗಿದ. ಆಗ ಆಕೆ ಇವನತ್ತ ನೋಡಿದಳು. ಬೆನ್ನು ನೇವರಿಸಿ ಮಮತೆಯಿಂದ ಅಂದಳು: "ಏನಾಯಿತಪ್ಪಾ? ಯಾಕೆ ಅಳುತ್ತಿರುವಿ?"

ಚಟ್ಟನೆ ಅಳು ನಿಲ್ಲಿಸಿದ. ಕ್ಷಣ ಕಾಲ ಸುಮ್ಮನಿದ್ದು ಒಂದು ಹೆಜ್ಜೆ ಹಿಂದೆ ಸರಿದು ನಾಟಕೀಯವಾಗಿ ಉತ್ತರಿಸಿದ: "ನಿಮಗದೆಂಮೂ ತಿಳಿಯಲಾರದು." ಇವನ ಗೂಢ ನುಡಿಯಿಂದಾಕೆ ಮೂಕ ವಿಸ್ಮಿತಳಾದಳು. ಗಾಡಿ ನಿಂತಾಗಲೇ ಅವಳಿಗೆ ಎಚ್ಚರ. ಗಾಡಿ ನಿಂತಿತು. ಬಾಗಿಲು ತೆರೆಯಿತು. ಯಾರೋ ಬಂದು ಹುಡುಗನನ್ನು ಪ್ರೀತಿಯಿಂದ ತಬ್ಬಿಕೊಂಡು, "ಮಾರ್ಸೆಲೊ, ಮಾರ್ಸೆಲೊ," ಎನ್ನುತ್ತಿದ್ದರು. ❁

ಇದರ ಸಾಧ್ಯತೆಗಳನ್ನು ಸಮಾಜಕಲ್ಯಾಣಕ್ಕಾಗಿ ಬಳಸಿಕೊಳ್ಳಬೇಕು.

ಸಿನಿಮಾ ಮಾಧ್ಯಮದ ಸಮಾಜ

ವಿಠ್ಠಲ ಕುಲಕರ್ಣಿ

ಇಂದು ಸಿನಿಮಾ ಅದ್ಭುತ ಸಮೂಹ ಮಾಧ್ಯಮವೆನಿಸಿದೆ. ಅದೊಂದು ಅತ್ಯಂತ ಪ್ರಭಾವಿ ಶಿಕ್ಷಣ ಮಾಧ್ಯಮವೆಂದೂ ಹೇಳುವವರಿದ್ದಾರೆ. ಆದರೆ ಸಿನಿಮಾ ನಿರ್ಮಿಸುವವರಾರೂ ಪಾಠ ಕಲಿಸಲು ಅದನ್ನು ತಯಾರು ಮಾಡುತ್ತಲೂ ಇಲ್ಲ, ಸಿನಿಮಾ ನೋಡುವವರು ಪಾಠ ಕಲಿಯಲೆಂದು ನೋಡುತ್ತಲೂ ಇಲ್ಲ. ಆದರೂ ಸಿನೆಮಾ ಮಾಧ್ಯಮದ ಶೈಕ್ಷಣಿಕ ಸಾಧ್ಯತೆಗಳ ಬಗ್ಗೆ ಪ್ರತಿಪಾದಿಸುವ ಧೀಮಂತರೂ ನಮ್ಮಲ್ಲಿ ಇದ್ದಾರೆ. ಸಿನಿಮಾ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಮಾಡುವ ಪರಿಣಾಮ ಅಷ್ಟಿಷ್ಟಲ್ಲ.

ಚಲನಚಿತ್ರ ಒಂದು ಅದ್ಭುತ ಶಕ್ತಿ ಪಡೆದ ಮಾಧ್ಯಮ. ಚಲನಚಿತ್ರಗಳ ಬೆಳವಣಿಗೆ ಈ ಶತಮಾನದ ಅತ್ಯಂತ ಪ್ರಭಾವಯುತ ವೈಜ್ಞಾನಿಕ ಸಾಧನೆಯಾಗಿದೆ. ಛಾಯಾಚಿತ್ರ-ಭಾವಚಿತ್ರ–ಚಲಿಸುವ ಚಿತ್ರ ಆ ಚಿತ್ರಗಳ ಜೊತೆಗೆ ಧ್ವನಿಸಂಯೋಜನೆ, ನೈಜತೆಯನ್ನು ಹೆಚ್ಚಿಸುವ ವರ್ಣಚಿತ್ರಗಳು ನೋಡುವ ಕಣ್ಣಿಗೆ ಹಿತವಾಗಿ ಭವ್ಯವಾಗಿ ಕಾಣುವ ನಿರ್ಮಾಣ ವಿನ್ಯಾಸಗಳು, ಕ್ರಮೇಣ ಚಲನಚಿತ್ರಗಳಿಗೆ ಅಪಾರ ಶಕ್ತಿಯನ್ನು ಒದಗಿಸಿವೆ. ಚಲನಚಿತ್ರ ಇಂದು ಮನೋರಂಜನಕ್ಕಾಗಿ ಒಂದು ಅದ್ಭುತ ಕಲಾ ಮಾಧ್ಯಮವೆನಿಸಿದೆ. ಸಾಮಾಜಿಕ ಆಗಹೋಗುಗಳ ಮೇಲೆ ಪ್ರಭಾವ ಬೀರುವ ಶಕ್ತಿಯನ್ನೂ ಪಡೆದಿದೆ. ಬೆಳ್ಳಿ ಪರದೆಯ ಮೇಲೆ ಮಾನವ ಜೀವನದ ಸಾಧನೆಗಳ ಚಿತ್ರ ಮೂಡುತ್ತಿದೆ.

ಪಾಠ ಕಲಿಯಲು ಯಾರೂ ಸಿನೆಮಾ ನೋಡಲು ಹೋಗುವದಿಲ್ಲವಾದರೂ, ಪಾಠ ಕಲಿಯುವ ಹುಡುಗರು ಶಾಲೆ ಕಾಲೇಜುಗಳನ್ನು ತಪ್ಪಿಸಿ—ತಂದೆ ತಾಯಿಗಳ ಕಣ್ಣು ತಪ್ಪಿಸಿ—ಸಿನಿಮಾ ನೋಡುತ್ತಿರುವುದೇ ಹೆಚ್ಚಾಗಿದೆ. ಇಂದಿನ ಶಿಕ್ಷಣ ಕ್ರಮದಲ್ಲಿ ಸಿನಿಮಾ ದೊಡ್ಡ ಆತಂಕವನ್ನುಂಟು ಮಾಡುತ್ತಿದೆಯೆಂದು ಅನೇಕ ಶಿಕ್ಷಕರು ದೂರುತ್ತಾರೆ. ಸಿನಿಮಾ ತಮ್ಮ ಶಿಕ್ಷಣರಂಗದ ಶಿಸ್ತನ್ನು ಪೂರ್ತಿಯಾಗಿ ಭಂಗಗೊಳಿಸಿದೆಯೆನ್ನುತ್ತಾರೆ. ಸಿನಿಮಾ ಮಾಧ್ಯಮ ಶಿಕ್ಷಣರಂಗವನ್ನು ಪ್ರವೇಶಿಸಿಲ್ಲವೆಂದೇ ಇದರರ್ಥವಲ್ಲವೇ? ಸಿನಿಮಾ ಮಾಡಿಸುವ ಪಾಠಗಳು ಶಿಕ್ಷಕರ ಅಸ್ತಿತ್ವಕ್ಕೇ ಧಕ್ಕೆ ತರಬಲ್ಲವು ಎಂಬುದು ಶಿಕ್ಷಕರನೇಕರಿಗೆ ತಿಳಿದಿಲ್ಲ. ಶಿಕ್ಷಕರು ಸಿನಿಮಾ ಶಕ್ತಿಯನ್ನು ಕ್ರಮೇಣ ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಳ್ಳುವುದೇ ಇಂದಿನ ಯುಗಧರ್ಮವಾಗಿದೆಯೆಂಬುದನ್ನೂ ಅನೇಕರು ತಿಳಿದಿರಲಿಕ್ಕಿಲ್ಲ. ಹಾಗೆ ನೋಡಿದರೆ, ಸಿನಿಮಾ ತೋರಿಸುವ-ನಿರ್ಮಿಸುವ ತಂತ್ರಗಳನ್ನೆಲ್ಲ ತಕ್ಕ ಪ್ರಮಾಣದಲ್ಲಿ ಶಿಕ್ಷಕರೂ ತಿಳಿದಿರಬೇಕಾದ ಅವಶ್ಯ

ಕತೆ ಇಂದು ಹೆಚ್ಚುತ್ತಿದೆ. ಆಧುನಿಕ ಧ್ವನಿ ಸುರುಳಿಗಳು ದರ್ಶನ ಸುರುಳಿಗಳೂ ಶೈಕ್ಷಣಿಕ ಕ್ರಾಂತಿಯನ್ನೇ ಉಂಟುಮಾಡಬಲ್ಲವು. ಧ್ವನಿ-ದೃಶ್ಯ ಮಾಧ್ಯಮಗಳ ಶಿಕ್ಷಣಕ್ಕೆ ಇಂದು ಮಹತ್ವವಿದೆಯೆಂದಾದರೆ, ಸಿನಿಮಾ ಇವೆರ-ಡನ್ನೂ ಅಳವಡಿಸಿಕೊಂಡ ಮಾಧ್ಯಮವಾದ್ದ-ರಿಂದ ಅದಕ್ಕೂ ಶಿಕ್ಷಣದಲ್ಲಿ ಮಹತ್ವದ ಪಾತ್ರ ವಿದೆ. ಆಧುನಿಕ ಸಲಕರಣೆಗಳು ಬೆಳೆಯುತ್ತಿರು ವಷ್ಟು ವೇಗದಿಂದ ನಮ್ಮ ಶಿಕ್ಷಣ ಪದ್ಧತಿಗಳೂ ಶಿಕ್ಷಕರ ದೃಷ್ಟಿಕೋನಗಳೂ ಬೆಳೆಯುತ್ತಿಲ್ಲವೆಂ-ಬುದೇ ಸಿನಿಮಾವನ್ನು ದೂರುತ್ತಿರುವುದಕ್ಕೆ ಕಾರಣವೆನ್ನಬಹುದು. ಮಾನವ ಪ್ರವೃತ್ತಿಗಳು ಬದಲಾಗುವುದಕ್ಕೆ ಯಾವಾಗಲೂ ಹೆಚ್ಚು ಕಾಲಾವಧಿ ಬೇಕು. ಆದರೆ ಹೊಸ ಸಲಕರಣೆಗಳು ಅದಕ್ಕೂ ಹೆಚ್ಚಿನ ವೇಗದಲ್ಲಿ ಬರುತ್ತಿವೆ.

ಇಂದು ನಗರದ ಪ್ರಗತಿಯನ್ನು ಸಿನಿಮಾ ಮಂದಿರಗಳ ಸಂಖ್ಯೆಯಿಂದಲೇ ಗುರುತಿಸಬಹುದಾಗಿದೆ. ಸಿನಿಮಾ ಮಂದಿರಗಳು ಹೆಚ್ಚಿದಷ್ಟೂ ನಗರ ಮುಂದುವರೆದಂತೆ! ಹಿಂದಿನ ನಾಟಕ ಕಂಪನಿಯವರು ಕ್ರಮೇಣ ಸಿನಿಮಾ ರಂಗವನ್ನು ಪ್ರವೇಶಿಸಿದಂತೆ, ಹಿಂದಿನ ನಾಟ್ಯಗೃಹಗಳು ಸಿನಿಮಾ ಮಂದಿರಗಳಾಗಿ ಕ್ರಮೇಣ ಮಾರ್ಪಾಟುಗೊಂಡವು. ಆ ಮಂದಿರಗಳೂ ಸಾಲದಾಗಿ ವಿಶಾಲವಾಗಿ ನವೀಕರಣ ಪಡೆದವು. ಇನ್ನೂ ಕೆಲ ಹೊಸ ಮಂದಿಗಳೂ ರೂಪಗೊಂಡವು. ೪೦೦–೫೦೦ ಜನರೆಂದರೆ ತುಂಬುತ್ತಿದ್ದ ಮಂದಿರಗಳು ಈಗ ಸಾಲದಂತಾಗಿ, ೧೦೦೦–೨೦೦೦ ಆಸನಗಳ ಮಂದಿರಗಳೂ ಕಿಕ್ಕಿರಿದು ತುಂಬಿಯೂ ಸಾಲದ ಪ್ರದರ್ಶನಗಳು (House-ful!) ಈಗ ನಿತ್ಯದ ಮಾತಾಗಿವೆ. ಸಿನಿಮಾ ಬಿಡುವ ಹೊತ್ತಿಗೆ ಸರಿಯಾಗಿ ಬಸ್ಸುಗಳ ವ್ಯವಸ್ಥೆ, ಇತರ ವಾಹನಗಳ ಓಡಾಟ, ಕಾರುಗಳ ತಂಗುದಾಣಗಳೂ ಇಂದಿನ ನಾಗರಿಕತೆಗೆ ಅವಶ್ಯವಾಗಿಬಿಟ್ಟಿವೆ. ಕೆಲ ನಗರಗಳಲ್ಲಿ ಸಿನಿಮಾ ಮಂದಿಗಳೇ ಅತಿ ಪ್ರತಿಷ್ಠಿತ ಕಟ್ಟಡಗಳೆನಿಸುತ್ತಿವೆ. ಇಂತಹ ಕಟ್ಟಡಗಳು ಸಾಂಸ್ಕೃತಿಕ ಕೇಂದ್ರಗಳೆಂದೂ ಶಿಕ್ಷಣ ಕೇಂದ್ರಗಳೆಂದೂ ಪ್ರಸಿದ್ಧಿ ಪಡೆಯುವ ಕಾಲವೂ ದೂರವಿಲ್ಲ. ದಿನದ ಪ್ರದರ್ಶನಗಳ ಸಂಖ್ಯೆಯೂ ಅಲ್ಲಿಯ ಜನರ ಕಲಾಪ್ರೇಮವನ್ನು ತೋರುತ್ತದೆ. ಪ್ರತಿ ಪ್ರದ-ರ್ಶನಕ್ಕೂ ನಿಂತಿರುವ ಸಾಲುಗಳು ಅಲ್ಲಿಯ ಜನರ ಶ್ರೀಮಂತಿಕೆಯನ್ನು ತೋರುತ್ತವೆ. ಜನಸಾಮಾನ್ಯರ ನಡುವಳಿಕೆ ಶಿಸ್ತನ್ನು ತೋರುತ್ತದೆ. ಸಿನಿಮಾ ಟಿಕೆಟ್ಟಿಗಾಗಿ ಹೆಚ್ಚು ಹಣ ಕೊಟ್ಟು ನೋಡುವ ಜನರೂ ನಗರದ ವಿವಿಧ ವಿಸ್ತರಣೆಗಳಲ್ಲಿಯೂ ಕಂಡುಬರುತ್ತಾರೆ. ತಿಕೀಟು ದೊರಕಿಸುವ ತೊಂದರೆ ಒಮ್ಮೊಮ್ಮೆ ಅತಿ ಬೇಸರದ್ದೂ-ಅತಿ ವೆಚ್ಚದ್ದೂ ಆಗುತ್ತಿದೆ. ಈ ಪ್ರವೃತ್ತಿ ನಗರಗಳಲ್ಲಿ ಹೊಸ ಉದ್ಯೋಗಗಳನ್ನು ಕಲ್ಪಿಸಿದೆ! ಸಿನಿಮಾ ಆಕರ್ಷಕ ಮನೋರಂಜನದ ಮಾಧ್ಯಮವಾಗಿರುವುದಕ್ಕೆ ಇದು ಮಹತ್ವದ ಸಾಕ್ಷಿಯಲ್ಲವೇ?

ಚಲನಚಿತ್ರ ತಯಾರಿಕೆಯು ಅತ್ಯಂತ ಮಹತ್ವದ ಕಲಾಕೃತಿಯೆನಿಸುತ್ತಿದೆ; ಅನೇಕ ಕಲಾಮಾಧ್ಯ-ಮಗಳಿಗೆ ಅವಕಾಶಕೊಟ್ಟು ಪ್ರೋತ್ಸಾಹಿಸುತ್ತಿದೆ; ನೃತ್ಯ, ಸಂಗೀತ, ಸಾಹಿತ್ಯ, ಚಿತ್ರಕಲೆಗಳ ಬೆಳವಣಿಗೆಗೆ ತುಂಬ ಅವಕಾಶ ಮಾಡಿಕೊಟ್ಟಿದೆ. ಸಿನಿಮಾದಿಂದ ಸಂಗೀತ ಹಾಳಾಯ್ತು ಎನ್ನುವವರಿದ್ದಾರೆ. ನಿಜವಾಗಿ ನೋಡಿದರೆ ಸಂಗೀತ ವೈವಿಧ್ಯದಲ್ಲಿ – ಬೆಳೆದದ್ದು ಸಿನಿಮಾದಿಂದಲೇ; ಜನಪ್ರಿಯತೆ ಪಡೆದದ್ದೂ ಸಿನಿಮಾದಿಂದಲೇ! ಅದರಂತೆ ನೃತ್ಯವೂ ಸಿನಿಮಾದಿಂದ ಪ್ರೋತ್ಸಾಹ ಪಡೆದದ್ದೇ ಹೆಚ್ಚು. ಸಾಹಿತ್ಯದ ಬಗ್ಗೆ ಹೇಳಬೇಕೇ? ಸಿನಿಮಾದಿಂದ ಸಾಹಿತ್ಯ ಬೆಳೆದಿದೆ. ಕತೆ ಕಾದಂಬರಿಗಳ ಪ್ರಚಾರ ಹೆಚ್ಚಾಗಿದೆ. ಹಾಡುಗಳು ಬೆಳೆದಿವೆ. ಸಿನಿಮಾಕ್ಕೆ ಬೇಕಾಗುವ ಸಾಹಿತ್ಯ ವೈಶಿಷ್ಟ್ಯಪೂರ್ಣವಾಗಿ ಬೆಳೆದಿದೆ. ಕವಿ ಕಲ್ಪನೆಯನ್ನು ದೃಶ್ಯರೂಪದಲ್ಲಿ ತೋರಿಸುವುದು ಸಿನಿಮಾದಿಂದಲೇ ಸಾಧ್ಯವಾಗಿದೆ. ಸಿನಿಮಾ ಗೀತಗಳು ಕಾವ್ಯವೆನಿಸಲಿಕ್ಕಿಲ್ಲವಾದರೂ, ಅವುಗಳದೇ ಒಂದು ವೈಶಿಷ್ಟ್ಯಪೂರ್ಣ ರೀತಿ ಜನಪ್ರಿಯವಾಗುತ್ತಿದೆ. ಚಿತ್ರಕಲೆಗೂ ದೊರಕಿದ ಉತ್ತೇಜನ ಅಷ್ಟಿಷ್ಟಲ್ಲ. ಸಿನಿಮಾಗಳ ಸಿದ್ಧತೆಯಲ್ಲಿ ಇಂಥ ಎಲ್ಲ ಕಲೆಗಳ ಸಂಯೋಜನೆಯನ್ನು ಕಾಣಬಹುದು. ಆಧುನಿಕವೆನಿಸುವ ಛಾಯಾಚಿತ್ರಗ್ರಾಹಕ ಯಂತ್ರಗಳು ಈ ಸಂಯೋಜನೆಯನ್ನು ಹೆಚ್ಚು ಆಕರ್ಷಕವಾಗಿಯೂ

ಕಲಾಪೂರ್ಣವಾಗಿಯೂ ಮಾಡಿವೆ. 'ಕ್ಯಾಮರಾ ಕಣ್ಣು' ಪ್ರಸಿದ್ಧಿ ಪಡೆದಿದೆ.

ಸಿನಿಮಾ ಇಂದು ಅತ್ಯಂತ ಜನಪ್ರಿಯ ಮಾಧ್ಯಮವಾಗಿದೆ. ಓದು ಬರೆಹ ಬಾರದವರೂ ಸಿನಿಮಾ ನೋಡಬಹುದು. ಐತಿಹಾಸಿಕ ಚಿತ್ರಗಳು ಹಿಂದಿನ ಜೀವನವನ್ನು ಕಣ್ಣೆದುರು ನಿಲ್ಲಿಸಬಹುದು. ದೂರ ದೂರದ ದೇಶಗಳ ವೈಶಿಷ್ಟ್ಯಗಳನ್ನು ನಮ್ಮ ನಗರಗಳ ಬೆಳ್ಳಿ ಪರದೆಯ ಮೇಲೆ ತೋರಿಸಬಹುದು. ವೈಜ್ಞಾನಿಕ ಸಾಧನೆಗಳನ್ನು ಮನೋಜ್ಞವಾಗಿ ತೋರಿಸಬಹುದು. ಇವುಗಳೆಲ್ಲ ಮಾನವನ ಮನಸ್ಸಿನ ವಿಕಾಸಕ್ಕೆ ಮಹತ್ವ ಪಡೆದವುಗಳೇ. ಯಾವುದೇ ವಾರ್ಷಿಕ ಉತ್ಸವಗಳಲ್ಲಿ ಇಂದು ಸಿನಿಮಾ ತೋರಿಸುವುದೇ ಒಂದು ಮಹತ್ವದ ಅಂಗವಾಗಿದೆ. ಗಣೇಶೋತ್ಸವ, ರಾಜ್ಯೋತ್ಸವ ಮೊದಲಾದ ಕಾರ್‍ಯಕ್ರಮಗಳಲ್ಲಿ ಸಿನಿಮಾ ಮರೆಯುವಹಾಗುವುದಿಲ್ಲ. ಸಿನಿಮಾಗಳಿಗೇ ಅತಿ ದೊಡ್ಡ ಬೇಡಿಕೆ. ಅವುಗಳನ್ನು ನೋಡುವುದಕ್ಕೇ ಹೆಚ್ಚಿನ ಜನಸಮುದಾಯ. ಸಿನಿಮಾ ಪ್ರಸಾರವೇ ದೂರದರ್ಶನದಲ್ಲಿ ಹೆಚ್ಚು ಜನಪ್ರಿಯ ಕಾರ್ಯಕ್ರಮವೆನಿಸಿದೆ. ವಯಸ್ಕರ ಶಿಕ್ಷಣಕ್ಕೆ ಸಿನಿಮಾದಂತಹ ಪ್ರಭಾವಿ ಮಾಧ್ಯಮವೇ ಬೇರೆ ಇಲ್ಲ. ಮುಕ್ತ ಲೈಂಗಿಕ ಜೀವನ, ಅಶ್ಲೀಲ ಚಿತ್ರಗಳೇ ಹೆಚ್ಚು ಆಕರ್ಷಣೆ ಪಡೆದಂತೆ ಕಂಡರೂ, ಅಂತಹ ಚಿತ್ರಗಳಲ್ಲಿ ಶಿಕ್ಷಣವಿದೆಯೇ? ವಯಸ್ಕರಿಗೆಂದೇ ಎನಿಸುವ ಚಿತ್ರಗಳು ಶಿಕ್ಷಣ ಪ್ರಧಾನವಾಗಿರಬೇಕು. ಮಧ್ಯವಯಸ್ಕರಿಗೂ ಶಿಕ್ಷಣದ ಅವಶ್ಯಕತೆ ಇದ್ದೇ ಇದೆ. ಭಾರತದಂತಹ ಬಹುಭಾಷಾ. ಬಹುಧರ್ಮಗಳ ದೇಶದಲ್ಲಿ ಇಂತಹ ಶಿಕ್ಷಣದ ಅವಶ್ಯಕತೆ ಹೆಚ್ಚು.

ಸಿನಿಮಾ ಒಂದು ಪ್ರಬಲ ಸಮೂಹ ಮಾಧ್ಯಮವೆಂದರೆ ಅದು ಇತರ ಸಮೂಹ ಮಾಧ್ಯಮಗಳನ್ನೂ ಆಕ್ರಮಿಸಿದೆ. ಪತ್ರಿಕೆಗಳು ಸಿನಿಮಾದ ಬಗ್ಗೆ ಬರೆಯದೆ-ಅವುಗಳ ಪ್ರಕಟಣೆಗಳಿಲ್ಲದೆ ಬದುಕುವುದೇ ಕಷ್ಟದ್ದಾಗಿದೆ. ದಿನಪತ್ರಿಕೆಗಳಲ್ಲಿ, ಸಾಪ್ತಾಹಿಕಗಳಲ್ಲಿ, ಮಾಸಪತ್ರಿಕೆಗಳಲ್ಲಿ ಸಾಮಾನ್ಯವಾಗಿ ಸಿನೆಮಾಕ್ಕಾಗಿಯೇ ಮೀಸಲಾದ ಪುಟಗಳಿರುತ್ತವೆ. ವೈವಿಧ್ಯಮಯ ಚಿತ್ರಗಳೂ ಇಂತಹ ಪತ್ರಿಕೆಗಳಿಗೆ ಆಕರ್ಷಣೆಯೊದಗಿಸಿವೆ. ಪತ್ರಿಕೆಗಳ ಮುಖಪುಟಗಳು ಹೆಚ್ಚಾಗಿ ಸಿನಿಮಾ ನಟ ನಟಿಯರಿಗೇ ಮೀಸಲಾಗಿವೆ. ಕೇವಲ ಸಿನೆಮಾಕ್ಕೆಂದೇ ಮೀಸಲಾದ ಪತ್ರಿಕೆಗಳೂ ನಮ್ಮ ದೇಶದಲ್ಲಿ ತುಂಬಿವೆ. ಸಿನೆಮಾಕ್ಕೆಂದು ಬರೆಯುವ ವಿಶೇಷ ಸಾಹಿತ್ಯ ಪ್ರಕಾರವೇ ಬೆಳೆಯುತ್ತಿದೆ. ಸಿನಿಮಾ ಗೀತೆಗಳನ್ನು ಬರೆಯುವವರದೇ ಒಂದು ವಿಶೇಷ ಕಲೆಯೆನ್ನಬಹುದು. ಸಾವಿರಾರು ಗೀತೆಗಳನ್ನು ಬರೆದ ಪ್ರತಿಭಾವಂತರೂ ಇದ್ದಾರೆ. ಅವರು ಕವಿಗಳೆಂದೆನಿಸಿಕೊಂಡಿರದಿದ್ದರೂ ಅನೇಕರ ಬಾಯಲ್ಲಿ ಗುಣಗುಣಿಸುವ ಗೀತೆಗಳನ್ನು ಒದಗಿಸಿದ್ದಾರೆ. ಸಿನಿಮಾ ಸಮಾಚಾರಗಳೇ ಅತಿ ಚರ್ಚಿತ ವಿಷಯಗಳಾಗಿವೆ. ನಟ ನಟಿಯರ ಸಂದರ್ಶನ ಲೇಖನಗಳು ಇಂದು ಅತಿ ಪ್ರಿಯ ವಿಷಯಗಳೆನಿಸಿವೆ. ಪತ್ರಿಕಾ ಪ್ರಪಂಚದಲ್ಲಿ ಸುಮಾರು ನೂರಕ್ಕೆ ೨೫ರಷ್ಟು ಸಮಯ, ಸಾಮಗ್ರಿ, ಕಲೆ, ಹಣ ಕೇವಲ ಸಿನಿಮಾಕ್ಕಾಗಿಯೇ ಇವೆ.

ಭಾರತ ಚಲನಚಿತ್ರಗಳನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಹೆಚ್ಚು ಭಾಷೆಗಳಲ್ಲಿ ನಿರ್ಮಾಣ ಮಾಡುತ್ತಿರುವ ದೇಶವೆನಿಸಿದೆ. ನಮ್ಮ ದೇಶದಲ್ಲಿ ಸುಮಾರು ೮೦೦ ಕ್ಕೂ ಚಿತ್ರಗಳು ಪ್ರತಿ ವರ್ಷ ಸಿದ್ಧಗೊಳ್ಳುತ್ತಿವೆಯಂತೆ. ೩೫–೪೦ ಭಾಷೆಗಳಲ್ಲಿ ಚಿತ್ರಗಳು ಸಿದ್ಧವಾಗುತ್ತಿವೆ. ಪ್ರತಿ ವಾರ ಸುಮಾರು ಆರೇಳು ಕೋಟಿ ಜನ ಸಿನೆಮಾ ನೋಡುತ್ತಾರಂತೆ. ಭಾರತದಲ್ಲಿ ೧೧,೦೦೦ಕ್ಕೂ ಮೇಲ್ಪಟ್ಟು ಸಿನಿಮಾ ಮಂದಿರಗಳಿವೆಯಂತೆ. ಬೆಂಗಳೂರು ನಗರದಲ್ಲೇ ೧೦೦ ಸಿನೆಮಾ ಮಂದಿರಗಳಿವೆ. ಇದು ಭಾರತದಲ್ಲೇ ಅತಿ ಹೆಚ್ಚು ಭಾಷೆಗಳ ಸಿನೆಮಾಗಳನ್ನು ಪ್ರದರ್ಶಿಸುವ ಖ್ಯಾತಿ ಪಡೆದಿರುವ ನಗರವಾಗಿದೆ. ಇಂತಹ ಪ್ರಚಂಡ ಸಮೂಹಮಾಧ್ಯಮ ಹಿಂದೆ ಇರಲಿಲ್ಲ. ಈಗಿನ ಪ್ರಮಾಣದ ದೊಡ್ಡ ಗಾತ್ರದ ಸಮೂಹವೂ ಇರಲಿಲ್ಲ. ಮಾಧ್ಯಮದ ಶಕ್ತಿ ಹೆಚ್ಚಿದಂತೆ ಸಮೂಹ ಶಕ್ತಿಯೂ ಬೆಳೆದಿದೆ, ಗಾತ್ರವೂ ಬೆಳೆದಿದೆ.

ಸಿನಿಮಾಗಳಿಗೆ ದೊರಕುವ ಪ್ರಚಾರ ಪತ್ರಿಕೆಗಳಿಂದಷ್ಟೇ ಅಲ್ಲ, ಯಾವ ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಕೇಳಬರುವ ಹಾಡುಗಳೆಲ್ಲ

ಸಿನಿಮಾ ಹಾಡುಗಳೇ! ಮದುವೆಯಲ್ಲೂ ಇಂದು ಸಿನಿಮಾ ಹಾಡುಗಳದೇ ಪ್ರಾಬಲ್ಯ. ಆಕಾಶವಾಣಿಯಲ್ಲಿಯೂ ಸಿನಿಮಾ ಹಾಡುಗಳದೇ ಆಕರ್ಷಣೆ. ದೂರದರ್ಶನದಲ್ಲಿಯೂ ಸಿನಿಮಾ ಹಾಡುಗಳ ಕಾರ್ಯಕ್ರಮಕ್ಕೆ ಹೆಚ್ಚಿನ ಬೇಡಿಕೆ. ಚುನಾವಣಾ ಪ್ರಚಾರದಲ್ಲಿಯೂ ಸಭೆಗಳಲ್ಲಿಯೂ ಸಿನಿಮಾ ಹಾಡುಗಳದ್ದೇ ಪ್ರಮುಖ ಆಕರ್ಷಣೆ. ಇಂದಿನ ಯುವಜನಾಂಗದಲ್ಲಿ ಬಹುಚರ್ಚಿತ ವಿಷಯಗಳೆಂದರೆ ಸಿನಿಮಾಕ್ಕೆ ಸಂಬಂಧಿಸಿದವು-ಗಳೇ! ನಟ ನಟಿಯರ ನಡತೆಗಳು ವೇಷಭೂಷ-ಗಳು, ಅವರ ಮಾತುಗಾರಿಕೆಯ ರೀತಿಗಳು ಪರೋಕ್ಷವಾಗಿ ಇಂದಿನ ಯುವಜನರ ಮೇಲೆ ಪ್ರಭಾವ ಬೀರಿವೆ, ಬೀರುತ್ತಿವೆ. ನಟ ನಟಿಯರ ಅಭಿಮಾನಿಗಳ ಪತ್ರವ್ಯವಹಾರವೇ ಭವ್ಯ ಗಾತ್ರವನ್ನು ಪಡೆದಿದೆ.

ಸಿನಿಮಾ ರಂಗದ ವ್ಯಕ್ತಿಗಳೇ ಇಂದು ಸಮಾ-ಜದ ಪ್ರಮುಖ ವ್ಯಕ್ತಿಗಳೆನಿಸುತ್ತಿದ್ದಾರೆ. ರಾಜ-ಕೀಯದಲ್ಲಿ ಅವರದೇ ಮೇಲುಗೈ. ಕೆಲ ರಾಜ್ಯಗಳಲ್ಲಿ ಸಿನಿಮಾ ರಂಗದವರೇ ರಾಜ್ಯಭಾರವನ್ನೂ ಹೊತ್ತಿದ್ದಾರೆ. ಜನಪ್ರಿಯತೆಯನ್ನು ಗಳಿಸಲೂ ಅದನ್ನು ಉಳಿಸಿಕೊಳ್ಳಲೂ ಸಿನಿಮಾ ಮಾಧ್ಯಮ-ವನ್ನು ನಂಬಿದ ರಾಜಕಾರಣಿಗಳಿಗೂ ಇಂದು ಕಡಿಮೆ ಇಲ್ಲ. ನಮ್ಮ ರಾಷ್ಟ್ರದ ಗಣ್ಯವ್ಯಕ್ತಿ-ಗಳೆಂದರೆ ಸಿನಿಮಾ ರಂಗದಲ್ಲಿ ಹೆಸರು ಮಾಡಿ-ದವರೇ ಎಂಬ ಕಾಲ ಬಂದಿದೆ. ಸಿನಿಮಾದಲ್ಲಿ ಸೇರಿದ ವ್ಯಕ್ತಿಗಳಿಗೆ ಇಂಥ ಗುರುತರ ಹೊಣೆಯ ಅರಿವು ಮೊದಲು ಇರಲಿಕ್ಕಿಲ್ಲ. ಇಂದು ದೇಶದ ಪ್ರಗತಿ-ಸುಧಾರಣೆಗಳಿಗೆಲ್ಲ ಸಿನಿಮಾವನ್ನೇ ಮೊರೆ ಹೋಗುವ ಕಾಲ ಬಂದಿದೆ. ಸಾಮಾಜಿಕ ಸುಧಾರಣೆಗಳಾಗಲಿ, ಜನಸಂಖ್ಯೆಯ ನಿಯಂತ್ರಣವಾಗಲಿ, ಸಿನಿಮಾ ಮೂಲಕ ಹೇಳಿದಾಗಲೇ ಪರಿಣಾಮಕಾರಿಯಾಗಿ ರೂಪುಗೊಂಡಾವು. ತಮ್ಮ ಕಾರ್ಯರಂಗದ ಪರಿಣಾಮವನ್ನು ಅರಿಯದ ಜನ ಸಿನಿಮಾ ನಿರ್ಮಿಸಿದ್ದಾರೆ. ಇನ್ನೂ ಕೆಲವರು ಒಂದು ವಿಶಿಷ್ಟ ಉದ್ದೇಶವನ್ನಿಟ್ಟುಕೊಂಡು ಸಿನಿಮಾ ತಯಾರಿಸಿ ಕೈಸುಟ್ಟುಕೊಂಡಿದ್ದಾರೆ. ಇಂತಹ ಸಿನಿಮಾಗಳಿಗೆ ಯಶಸ್ಸು ದೊರ-ಕುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ನಿಜವಾಗಿ ನೋಡಿದರೆ, ಸಿನಿಮಾ ತಯಾರಕರು ಮುಖ್ಯವಾಗಿ ಸಮಾಜ ಸುಧಾರಕರೇ ಆಗಿರಬೇಕು. ಅವರು ಸಮಾಜದ ವಿವಿಧ ರೀತಿಗಳನ್ನು ಅಭ್ಯಾಸ ಮಾಡಿದವರಿರಬೇಕು. ಅವರ ಮೇಲೆ ಸಾಮಾಜಿಕ ಸುಧಾರಣೆಯ ಬಹು ದೊಡ್ಡ ಹೊಣೆಯಿದೆ. ಇದನ್ನರಿತವರು ಸಾಮಾಜಿಕ ಪ್ರವೃತ್ತಿಗಳನ್ನು ಪರಿಣಾಮಕಾರಿಯಾಗಿ ಬದಲಿಸ ಬಲ್ಲರು. ನೇರವಾಗಿ ನೀತಿಯನ್ನು ಬೋಧಿಸಿದರೆ ಚಿಕ್ಕ ಮಗುವೂ ಮನಸ್ಸು ಕೊಡುವುದಿಲ್ಲ. ಪ್ರತ್ಯಕ್ಷ ದರ್ಶನದ ಮಾಧ್ಯಮದಲ್ಲಿ ಪರೋಕ್ಷ-ವಾಗಿ ಬಿಂಬಿಸುವ ರೀತಿ-ನೀತಿ ಮನಸ್ಸಿನಲ್ಲಿ ಸ್ಥಿರವಾಗಿ ಉಳಿಯುತ್ತದೆ. ಅದನ್ನು ಸಿನಿಮಾ ಬಹಳ ಪರಿಣಾಮಕಾರಿಯಾಗಿ ತೋರಿಸಬಹುದು.

ಹಾಗೆಯೇ ನೋಡಿದರೆ ಎಷ್ಟೋ ಸಿನಿಮಾ ನಿರ್ಮಾಪಕರು ಸಾಮಾಜಿಕ ದೃಷ್ಟಿಯಿಂದ ಬಹಳ ಹಿಂದುಳಿದವರು ಎನ್ನಬಹುದು. ಮುಂಬರುವ ಸಮಾಜದ ಕಲ್ಪನೆಯನ್ನು ಕಟ್ಟಲಾರದವರು ಸಿನಿಮಾ ತಯಾರಿಸುವುದರಲ್ಲಿ ಅರ್ಥವಿಲ್ಲ. ಇಂದಿನ ಸಿನೆಮಾಗಳಲ್ಲಿ ಅನೇಕರ ಭಾವನೆಗಳು ಭಾವೋದ್ದೀಪನೆಗಳು ನಮ್ಮ ಬಚ್ಚಲು ಮನೆ, ಮಲಗುವ ಮನೆಗಳನ್ನು ದಾಟಿಲ್ಲ! ನಮ್ಮ ದೇಶದಲ್ಲಿ ಬಚ್ಚಲು ಮನೆ, ಮಲಗುವ ಮನೆ-ಯೆಂಬ ಪ್ರತ್ಯೇಕ್ಷ ವ್ಯವಸ್ಥೆಯನ್ನೇ ಕಾಣದ ಕುಟುಂಬಗಳೇ ಹೆಚ್ಚು. ಇಂಥವರು ಬರಿ ಹಗಲು-ಗನಸು ಕಾಣಬೇಕೇನೋ! ಪ್ರೇಕ್ಷಕನು ತನ್ನ ಅಪೇಕ್ಷಾ ತಾದಾತ್ಮ್ಯ ಹೊಂದಿ ಹೊಂಗನಸು ಕಾಣುತ್ತಿರುವುದೇ ಹೆಚ್ಚು. ಇದರಲ್ಲಿ ವಾಸ್ತವತೆ-ಯೆಲ್ಲಿದೆ? ಸ್ನಾನದ ಮನೆಯ ನಗ್ನ ದೃಶ್ಯಗಳು ಅತಿ ರಂಜನೆಯ ಚಿತ್ರಗಳೆನಿಸುತ್ತವೆ. ನಮ್ಮ ಭಾವನೆಯ ದೃಷ್ಟಿ ಶಯನ ಗೃಹದ ಲೈಂಗಿಕ ಆಕರ್ಷಣೆಯನ್ನೇ ದಾಟಿಲ್ಲ. ಮಾನವನ ಜೀವನದ ಮೊದಲ ಹಂತದಲ್ಲಿಯೇ ಇನ್ನೂ ಸಿನಿಮಾ ಕಲೆ ರಂಜನೆ ಪಡೆಯುತ್ತದೆ. ಕೀಳು ಭಾವನೆಗಳನ್ನೇ ಕೆರಳಿಸುವ ಪ್ರಾಥಮಿಕಾವಸ್ಥೆಯಲ್ಲಿದೆ; ದುಡ್ಡು ಗಳಿಸುತ್ತಿದೆ ಅದು.

ಮಾನವನು ಸಮಾಜ ಜೀವಿ. ಸಮಾಜ ಶಾಂತಿಗೆ ವಿಕಾಸಕ್ಕೆ, ಪರಸ್ಪರ ಸೌಹಾರ್ದ ಜೀವ-ನಕ್ಕೆ ವಿವಿಧ ಅಂಗಗಳ ಭಾವೈಕ್ಯಕ್ಕೆ, ರಾಷ್ಟ್ರ

ಪ್ರಗತಿಗೆ, ಶೈಕ್ಷಣಿಕ ವಿಕಾಸಕ್ಕೆ ಈ ಸಿನಿಮಾ ಮಾಧ್ಯಮವನ್ನು ಉಪಯೋಗಿಸುವ ಬಹಳ ಮಹತ್ವದ ರಂಗಕ್ಕೆ ನಮ್ಮ ಸಿನಿಮಾ ನಿರ್ಮಾಪಕರು ಪ್ರವೇಶಿಸಿಯೇ ಇಲ್ಲವೆನ್ನಬಹುದು. ಅತ್ಯಾಚಾರ, ಅನಾಚಾರ, ಬಲಾತ್ಕಾರ, ವ್ಯಭಿಚಾರ, ಕೊಲೆ, ಸುಲಿಗೆಗಳನ್ನು ವಿವರವಾಗಿ ಸ್ಪಷ್ಟವಾಗಿ ತೋರಿಸುವುದು ವಾಸ್ತವತೆ ಎನಿಸಿತು; ರಂಜನೆಯೂ ಎನಿಸಿತು. ಆದರೆ ಆ ವಾಸ್ತವತೆಯ ಪರಿಣಾಮ ನೋಡುವವರ ಮೇಲೆ ಹೇಗೆ ಆಗಬಹುದೆಂಬುದನ್ನು ಊಹಿಸಲಾರದವರು — ಅಥವಾ ಊಹಿಸುವ ಆವಶ್ಯಕತೆಯನ್ನು ಕಾಣದವರು ಸಮಾಜಕ್ಕೆ ದೊಡ್ಡ ಅನ್ಯಾಯ ಮಾಡುತ್ತಿದ್ದಾರೆ. 'ವಯಸ್ಕರಿಗೆ ಮಾತ್ರ' ಎಂದು ಪಟ್ಟಿ ಹೊತ್ತ ಚಿತ್ರಗಳೂ ಅನವಶ್ಯ ವಿವರಣೆಗಳನ್ನು ಕೊಡುವುದರಲ್ಲೇ ತಮ್ಮ ಕಲೆಯನ್ನು ತೋರಿಸುತ್ತವೆ. ದುಂಡುಗಾರಿಕೆ, ಸೂಳೆಗಾರಿಕೆ, ವ್ಯಭಿಚಾರಗಳೇ ಪ್ರಮುಖ ವಿಷಯಗಳಾಗಿರಬೇಕೇ? ವಯಸ್ಕರನ್ನು ಪ್ರಬುದ್ಧರನ್ನಾಗಿ-ವಿವೇಕಿಗಳನ್ನಾಗಿಸುವ ದೃಷ್ಟಿಗೆ ಪ್ರಾಮುಖ್ಯ ಇರುತ್ತದೆಯೇ? ವಯಸ್ಕರಿಗೆ ಮಾತ್ರವೆಂಬುದು ಕೆಳ ದರ್ಜೆಯ ರಂಜನೆಯಷ್ಟೇ ಆಗಿರಬೇಕೇ? 'ವಯಸ್ಕರಿಗೆ ಮಾತ್ರ' ಚಿತ್ರಗಳು ಕಿರಿಯರನ್ನೂ ಆಕರ್ಷಿಸುವ ಲೈಂಗಿಕ ಪ್ರಾಧಾನ್ಯದ ಚಿತ್ರಗಳಾಗಬಾರದು; ಕಿರಿಯರಿಗೆ ಬೇಸರ ತರಿಸುವ ಸಾಮಾಜಿಕ ಸಮಸ್ಯೆಗಳ ಚರ್ಚೆ ಚಿತ್ರಗಳನ್ನು ಒಳಗೊಂಡಿರಬೇಕು! ಕಿರಿಯರು ಹಿರಿಯರ ಕಣ್ಣು ತಪ್ಪಿಸಿ ನುಸುಳಿಕೊಂಡು ನೋಡುವ ವಿಷಯಗಳನ್ನು ಪ್ರದರ್ಶಿಸುವುದಕ್ಕಿಂತ ಅವರಿಗೇ ಬೇಡವೆನಿಸುವಂತಿರಬೇಕು. ಅವರ ನಿರ್ಬಂಧಕ್ಕೆ ಕಾನೂನಿನ ಅವಶ್ಯಕತೆಯೆ ಇರಬಾರದು. ವಯಸ್ಕರಿಗೆ ಎಂಬ ಪಟ್ಟಿ ಹೊಣೆಗಾರಿಕೆಯನ್ನು ತೋರಿಸಬೇಕಲ್ಲದೆ ಲೈಂಗಿಕ ಸ್ವಚ್ಛಂದ ವೃತ್ತಿಯನ್ನಲ್ಲ. ವಯಸ್ಕರ ಮತದಾನ ಪದ್ಧತಿಯನ್ನನುಸರಿಸುವ ನಾವು 'ವಯಸ್ಕರ ಸಿನಿಮಾ'ದಲ್ಲಿ ಕೇವಲ ಲೈಂಗಿಕ ಕಾಮಪ್ರಚೋದಕ ದೃಶ್ಯಗಳನ್ನು ನಿರೀಕ್ಷಿಸುತ್ತಿರಬೇಕೇ? ಇವುಗಳೆಲ್ಲ ಸಿನಿಮಾದಂತಹ ಪ್ರಬಲ ಮಾಧ್ಯಮವನ್ನು ಸಾಮಾ



ಜಿಕ ಉನ್ನತಿಯ ಬದಲಾಗಿ ಅಧೋಗತಿಯತ್ತ ಕರೆದೊಯ್ಯುವ ಪ್ರಯತ್ನಗಳೆಂದೇ ಹೇಳಬೇಕಾಗುತ್ತದೆ. ಆದ್ದರಿಂದ ಸಿನಿಮಾ ನಿರ್ಮಾಪಕರ ಮೇಲೆ ಮಹತ್ತರವಾದ ಹೊಣೆಯಿದೆ. ಕೇವಲ ಮನೋರಂಜನ-ದುಡ್ಡು ಗಳಿಸುವುದು-ಸುಲಭ ಜನಪ್ರಿಯತೆ ಇವೇ ಸಿನಿಮಾದ ಗುರಿಗಳಾಗಬಾರದು. ಹಿಂದಿನ ಕಾಲದಲ್ಲಿ ನಾಟಕಗಳಲ್ಲಿ ಮನೋರಂಜ ಮಾತ್ರವಲ್ಲ ಸಾಮಾಜಿಕ ಹಿತದ ಬಗ್ಗೆ ಅವ್ಯಕ್ತ ರೀತಿಯ ನೀತಿಗಳು ಇರುತ್ತಿದ್ದವು. ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವ ನಾಟಕಗಳೂ ಇದ್ದವು. ಸಿನಿಮಾದಲ್ಲಿಯೂ ಸಚ್ಚಾರಿತ್ರ್ಯ, ಸದಾಚಾರ, ಸಮಾಜ ಕಲ್ಯಾಣ ಮೊದಲಾದ ಗುರಿಗಳನ್ನು ಹೆಚ್ಚು ಪ್ರಭಾವಯುತವಾಗಿ ತಲಪಬಹುದು. ಈ ಪ್ರಚಂಡ ಶಕ್ತಿಯನ್ನು ಉಪಯೋಗಿಸಬಲ್ಲ ಸಮರ್ಥ ಮಾನವಪ್ರೇಮಿಗಳ ಕೈಯಲ್ಲಿ — ಸಾಕಷ್ಟು ಪ್ರಮಾಣದಲ್ಲಿ ಇನ್ನೂ ಈ ಸಾಧನ ಸಿಕ್ಕಿಲ್ಲವೇನೋ! ಅಂಥ ಉದ್ದೇಶದ ನಿರ್ಮಾಪಕರು ನಮ್ಮ ನಾಡಿನಲ್ಲಿ ಬಹಳ ಕಡಿಮೆ ಎಂದು ತೋರುತ್ತದೆ. ಕೆಲ ಉತ್ತಮ ಚಿತ್ರಗಳು ವಿವಿಧ ಭಾಷೆಗಳಲ್ಲಿ ಬಂದಿವೆ. ಅವುಗಳು ಅಖಿಲ ಭಾರತದ ಮೆಚ್ಚುಗೆಯನ್ನೂ ಪಡೆದಿವೆ. ಆದರೆ ಅವು ದುಡ್ಡಿನ ದೃಷ್ಟಿಯಲ್ಲಿ ಅಷ್ಟೊಂದು ಯಶಸ್ವಿಯಾಗಿರಲಿಕ್ಕಿಲ್ಲ. ಇಂದು ಸಮೂಹ ಮಾಧ್ಯಮಗಳ ಶಕ್ತಿ ಬೆಳೆದಿದೆ. ಆದರೆ ಅದನ್ನು ಉಪಯೋಗಿಸುವ ಬುದ್ಧಿ ಅಷ್ಟೇ ಸಮರ್ಪಕವಾಗಿ ಬೆಳೆದಿಲ್ಲ. ಸುಲಭ ಗಳಿಕೆ, ಸುಲಭ ಜನಪ್ರಿಯತೆ ಇಂದಿನ ಮೂಲ ಉದ್ದೇಶಗಳಾಗಿವೆ.

ಸಿನಿಮಾ ಸಮಾಜದ, ಜೀವನದ – ಕೇವಲ ವಾಸ್ತವ ಚಿತ್ರಣವಲ್ಲ. ಸಮಾಜದ ಶಾಂತಿ— ಸುಧಾರಣೆಗಳನ್ನು ಹೊತ್ತು ಸಂದೇಶವನ್ನು ಪರೋಕ್ಷವಾಗಿ ಬೀರುವಂತಹದಿರಬೇಕು. ಸಿನಿಮಾ ಯಾವಾಗಲೂ ಒಂದು ಸಮಾಜವನ್ನು ಉದ್ದೇಶಿಸಿ ಚಿತ್ರಿಸಿದ್ದಾಗಿರಬೇಕು. ಒಂದು ಸಮಾಜಕ್ಕೆ ಹಿತ ವೆನಿಸಿದ್ದು—ಸರಿಯೆನಿಸಿದ್ದು— ಅವಶ್ಯವೆನಿಸಿದ್ದು ಇನ್ನೊಂದು ಸಮಾಜದಲ್ಲಿ ಅದೇ ಮಟ್ಟದಲ್ಲಿ ಗ್ರಾಹ್ಯವೆನಿಸಲಿಕ್ಕಿಲ್ಲ. ಉದಾಹರಣೆಗೆ, ಸಿನಿಮಾದಲ್ಲಿ ಚುಂಬನ ವಿಷಯ ಎಷ್ಟೇ ಆಕರ್ಷಕವೆನಿಸಿದರೂ, ಪ್ರೌಢರಲ್ಲಿ ಬಹಿರಂಗ ಚುಂಬನದ ಪದ್ಧತಿ ನಮ್ಮ ಸಮಾಜದಲ್ಲಿಲ್ಲ. ನಮ್ಮ ಸಿನಿಮಾ ರಂಗವೇ ಹೆಚ್ಚು ಅನುಕರಣೆಯ ರೂಪದಲ್ಲಿ ಬಂದದ್ದರಿಂದ ಪಾಶ್ಚಾತ್ಯರ ರೀತಿನೀತಿಗಳನ್ನು ನಮ್ಮ ನಾಡಿನ ಚಿತ್ರಗಳಲ್ಲಿಯೂ ಕಾಣುತ್ತಿದ್ದೇವೆ. ಪಾಶ್ಚಾತ್ಯರ ರೀತಿಯ ಮದ್ಯಪಾನ, ಗಂಡುಹೆಣ್ಣು ಜೊತೆ ನೃತ್ಯಗಳು ಹೆಣ್ಣಿನ ಸುತ್ತ ಸುಳಿಯುವ ಧೂಮಪಾನದ ದೃಶ್ಯಗಳು, ನಗ್ನ ನೃತ್ಯಗಳು ಸುದೀರ್ಘ ಹಾಡುಗಳ ಜೊತೆಗೆ ಅಸಹ್ಯ ವರ್ತನೆಗಳು, ನಮ್ಮ ಸಿನಿಮಾಗಳಿಗೆ ಅವಶ್ಯವೇ? ಮೇಜಿನ ಮೇಲಿನ ಊಟ, ಪಿಂಗಾಣಿ ತಟ್ಟೆಗಳು – ಅವುಗಳೆಲ್ಲ ಎತ್ತಿ ಎಸೆದು ಒಡೆದು ಹಾಕುವುದಕ್ಕೆ ಎಂಬುದನ್ನು ತೋರಿಸುವ ದೃಶ್ಯಗಳು ಅವಶ್ಯವೇ? ನಾಯಕ ನಟ ತನ್ನ ಮೇಲ್ಮೆಯನ್ನು ಪ್ರತಿಕ್ಷಣವೂ ತೋರುತ್ತಿರುವುದು ಸ್ವಾಭಾವಿಕವೇ? ವಾಸ್ತವ ಪ್ರಪಂಚದಲ್ಲಿ ಖಳ ನಾಯಕರೇ ಇಲ್ಲದಿದ್ದರೂ ಖಳನಟನ 'ಕ್ರೌರ್ಯ'ವನ್ನು ಉತ್ಪ್ರೇಕ್ಷಿಸಿ ತೋರಬೇಕೇ? ಕೋರ್ಟು— ಕಚೇರಿಗಳಲ್ಲಿ ಸ್ವಚ್ಛಂದದಿಂದ ಕೂಗಿ ಕೂಗಿ ಮಾತ ನಾಡುವ ನಟನ ರೀತಿ ಸ್ವಾಭಾವಿಕವಾದದ್ದೇ? ಇವೆಲ್ಲ ಕಲೆಯ ವೈಶಿಷ್ಟ್ಯಗಳಾಗಿರಬಹುದು.

ಇಂದಿನ ವಿಜ್ಞಾನಯುಗದಲ್ಲಿ ಪ್ರಚಂಡ ಪ್ರಸಾರ ಮಾಧ್ಯಮಗಳ ಪ್ರಭಾವದಲ್ಲಿ ಸಮಾಜದಲ್ಲಿಯ ಭೇದಗಳೂ ಕಡಿಮೆಯಾಗುತ್ತಿವೆ. ಕೆಲ ಭೇದಗಳು ಅಷ್ಟೊಂದು ಅಸಹ್ಯವೆನಿಸುತ್ತಿಲ್ಲ. ಕಾಲಾನುಕ್ರಮದಲ್ಲಿ ಈ ಭೇದಗಳೂ ಸಹ್ಯವೆನಿಸಿದರೂ ಆಶ್ಚರ್ಯವಲ್ಲ. ಭಾವಭೇದಗಳನ್ನು ಭಾಷಾಭೇದಗಳನ್ನು, ಪ್ರಾದೇಶಿಕ ಭೇದಗಳನ್ನು ಹೋಗಲಾಡಿಸುವುದರಲ್ಲಿ ಅಥವಾ ಭೇದಗಳ ತೀವ್ರತೆಯನ್ನು ಮಿತಗೊಳಿಸುವಲ್ಲಿ ಸಿನಿಮಾದ ಪ್ರಭಾವ ಹೆಚ್ಚು. ಪ್ರವಾಸೋದ್ಯಮದ ಬೆಳವಣಿಗೆಗೆ ಸಿನಿಮಾ ತುಂಬ ಸಹಾಯ ಮಾಡಿದೆ– ಮಾಡುತ್ತಿದೆಯೆನ್ನಬೇಕು. ತಿರುಪತಿಗೆ ಹೋಗಲಾರದವರು ಸಿನಿಮಾದಲ್ಲಿಯೇ ನೋಡಿ ನಮಸ್ಕಾರ ಮಾಡಿಯಾರು. ವೆಂಕಟೇಶ್ವರನ ದರ್ಶನ ಸಿನಿಮಾದಲ್ಲಿಯೇ ಸುಲಭ! ಕೇದಾರ, ಬದರಿ, ರಾಮೇಶ್ವರಗಳ ಯಾತ್ರೆಯ ಫಲವನ್ನು ಸಿನಿಮಾದಲ್ಲಿಯೇ ಅನುಭವಿಸುವವರು ಇದ್ದಾರೆ. ಛಾಯಾಚಿತ್ರ ಕೇವಲ ನೆರಳು ಎಂಬುದನ್ನು ಅರಿತವರೂ ಭಕ್ತಿಭಾವ ತೋರಿಸಬಹುದು.

ಭಾವನೆಯೇ ಮುಖ್ಯವಲ್ಲವೇ? ದೂರ ದೂರದ ರಮಣೀಯ ದೃಶ್ಯಗಳನ್ನು ಸಿನಿಮಾದಲ್ಲಿ ಅಳವಡಿಸಿ ನಮ್ಮ ದೇಶದ-ಜಗತ್ತಿನ ಪರಿಚಯ ಮಾಡಿಕೊಡುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಇವುಗಳು ತೆರೆಯ ಮೇಲೆ ಕಂಡರೂ ಎಷ್ಟೋ ಸಲ ಅನೇಕರಿಗೆ ಆ ಪ್ರದೇಶ ಯಾವುದೆಂಬುದೇ ತಿಳಿಯುವುದಿಲ್ಲ. ವಿಜಾಪುರದ ಗೋಲ ಗುಮ್ಮಟ, ಆಗ್ರಾದ ತಾಜಮಹಲು, ನೀಲಗಿರಿಯ ಸುಂದರ ಉಪವನಗಳು, ಕಾಶ್ಮೀರದ ರಮಣೀಯ ದೃಶ್ಯಗಳು ಇತ್ಯಾದಿಗಳೆಲ್ಲ ಸಿನಿಮಾದಲ್ಲಿ ಅನೇಕ ಸಲ ಕಂಡುಬಂದರೂ ಆ ದೃಶ್ಯಗಳ ಪರಿಚಯ ಎಲ್ಲರಿಗೂ ಗೊತ್ತಾಗುವಂತೆ ಸೂಕ್ತವಾಗಿ ಬರೆದು ತಿಳಿಸುವ ಪದ್ಧತಿ ರೂಢವಾಗಿಲ್ಲ.

ಸಿನಿಮಾ ಪ್ರಭಾವಕ್ಕೊಳಗಾದ ನಿರ್ಮಾಪಕರು ಹಣ ಗಳಿಸುವ ಉದ್ದೇಶಕ್ಕಾಗಿಯೇ ಅನೇಕ ಕಟ್ಟುನಿಟ್ಟಿನ ಸಿದ್ಧ ಮಾರ್ಗಗಳನ್ನು ಹಾಕಿಕೊಂಡಿದ್ದಾರೆ; 'ಫಾರ್ಮುಲಾ' ಗಳನ್ನು ಮಾಡಿಕೊಂಡಿದ್ದಾರೆ. ಇವುಗಳು ಸಮಾಜದ ಮೇಲೆ ಎಂತಹ ಪ್ರಭಾವ ಬೀರಬಹುದು ಎಂಬುದರ ಚಿಂತೆ ಅವರಿಗಿಲ್ಲ. ಸಿನೆಮಾ ತಯಾರಿಕೆಯಲ್ಲಿ ಅಕ್ರಮ ಹಣವೂ ತೊಡಗುತ್ತದೆ. ಅಕ್ರಮಗಳಿಕೆಯೂ ಬೆಳೆಯುತ್ತಿದೆ. ಆ ರಂಗದವರು ನಿರ್ಮಿಸಿಕೊಂಡ ಸಮಾಜವೇ ಬೇರೆ, ಅವರ ರೀತಿ-ನೀತಿಗಳೇ ಬೇರೆ. ಅವರ ಸುತ್ತಲೂ ಪರಿಭ್ರಮಿಸುವ ಚಿತ್ರಪ್ರೇಮಿಗಳೇ ಬೇರೆ. ತಾರಾಗಣಗಳ ಪರಿವಾರವೇ ಬೇರೆ. ಅವರ ಸುತ್ತಲೂ ಹಬ್ಬುವ ವದಂತಿಗಳದ್ದೇ ಒಂದು ವೈಶಿಷ್ಟ್ಯ. ಅವರದೇ ಒಂದು ಪ್ರತ್ಯೇಕ ಪರಿಸರ. ಜನಪ್ರಿಯತೆ ಹೆಚ್ಚಿದಷ್ಟು ಅವರನ್ನು ನೋಡುವ ಕಣ್ಣುಗಳು ಹೆಚ್ಚುತ್ತವೆ. ಅವರ ನಡತೆ ರೀತಿ ನೀತಿಗಳ ಬಗ್ಗೆ ಚರ್ಚಿಸುವ ಜನರೂ ಹೆಚ್ಚುತ್ತಾರೆ. ಇವುಗಳು ಕೂಡ ತಾರೆಯರ . ಜೀವನದಲ್ಲಿ ಕಟ್ಟುನಿಟ್ಟನ್ನು, ಶಿಸ್ತನ್ನು ಬೆಳೆಸಬಹುದಾಗಿದೆ. ಅವರ ವೈಯಕ್ತಿಕ ಜೀವನ ಬಾಹ್ಯ ಪ್ರಭಾವದಿಂದ ಅಚ್ಚುಕಟ್ಟುತನ ಪಡೆಯಬೇಕು. 'ಚರಿತ್ರ' ನಟ ನಟಿಯರ ಚಾರಿತ್ರ್ಯವೂ ಸುಧಾರಿಸಬೇಕು. ಜನಪ್ರಿಯತೆಯನ್ನು ಗಳಿಸುವುದಕ್ಕಿಂತ ಉಳಿಸಿಕೊಳ್ಳುವುದಕ್ಕೆ ಹೆಚ್ಚು ಪರಿಶ್ರಮ ಬೇಕು ಎಂಬುದರ ಅರಿವಾಗಬೇಕು.

ಸಿನಿಮಾ ಎಂದೊಡನೆ ನಮ್ಮ ಕಣ್ಣೆದುರು ನಟ ನಟಿಯರ ಇಲ್ಲವೆ ನಿರ್ದೇಶಕರ ಚಿತ್ರ ನಿಲ್ಲುತ್ತದೆ. ಆದರೆ ಅದರ ಅದ್ಭುತ ಶಕ್ತಿಯ ಪರಿಚಯವಾಗಲಿ, ಅದರ ಹಿಂದೆ ತೊಡಗಿರುವ ವೈಜ್ಞಾನಿಕ ಸಾಧನೆಗಳ ಪರಿಚಯವಾಗಲಿ ನಮ್ಮ ಕಣ್ಣೆದುರು ಬರುವುದಿಲ್ಲವಲ್ಲ!

ಸಿನಿಮಾ ನೋಡುವವರಲ್ಲಿ ಅಭ್ಯಾಸದಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚು. ವಿಕೃತ ಸ್ವಭಾವದವರೂ ಅಧಿಕ. ಮನೆಯ ವಿಷಮ ಪರಿಸ್ಥಿತಿಯನ್ನು ಮರೆಯುವುದಕ್ಕೆ ಹೋಗುವವರ ಸಂಖ್ಯೆಯೂ ದೊಡ್ಡದು. ಸಿನಿಮಾ ಇಂದು ಅತಿ ಮೆಚ್ಚಿಗೆಯ ವಿಹಾರ ಕ್ರಮವೆನಿಸಿದೆ. ನವದಂಪತಿಗಳಿಗೊಂದು ರೀತಿಯಲ್ಲಿ ಅವಶ್ಯವೆನಿಸಿದರೆ, ಹಳೆ ದಂಪತಿಗಳೂ ಸಿನಿಮಾ ಮಂದಿರಗಳ ಬಹಿರಂಗದಲ್ಲಿ ಒಮ್ಮೊಮ್ಮೆ ಏಕಾಂತವನ್ನು



ಕಂಡುಕೊಳ್ಳುತ್ತಾರೆ. ಭಾರತದಲ್ಲಿಯ ಸಮೂಹ ಮಾಧ್ಯಮಗಳಲ್ಲಿ ಸಿನಿಮಾ ಹೆಚ್ಚು ಜನಪ್ರಿಯ ವಾದದ್ದು, ಸಿನಿಮಾಗಳು ಮನೋರಂಜನಕ್ಕೆ ಮಹತ್ವ ಕೊಟ್ಟು ಸಿನಿಮಾದ್ದೆ ವಿಶಿಷ್ಟವೆನಿಸುವ ಕೃತಕ ಸಮಾಜದ ಚಿತ್ರವನ್ನು ಕಣ್ಣೆದುರು ಇಡು ತ್ತಿವೆ. ಇದು ಪಲಾಯನವಾದವಲ್ಲವೇ?

ಸಿನಿಮಾದ ಆಕರ್ಷಣೆ ಇತರ ಗಣ್ಯ ವ್ಯಕ್ತಿ ಗಳಿಗೂ ತಪ್ಪಿಲ್ಲ. ಪ್ರಸಿದ್ಧ ಗಾಯಕನಾದವನೂ ಒಮ್ಮೆ ಸಿನಿಮಾದಲ್ಲಿ ಕಾಣಿಸಿಕೊಳ್ಳಬೇಕೆನ್ನುತ್ತಾನೆ. ಪ್ರಸಿದ್ಧ ಸಾಹಿತಿಯೂ ತನಗೊಂದು ಸ್ಥಾನವನ್ನು ಸಿನಿಮಾದಲ್ಲಿ ಕಲ್ಪಿಸಿಕೊಳ್ಳುತ್ತಾನೆ. ಶಿಕ್ಷಣರಂಗದ ಶ್ರೇಷ್ಠರೂ ಒಮ್ಮೆ ಬೆಳ್ಳಿ ತೆರೆಯ ಮೇಲೆ ಬೆಳಗ ಬೇಕೆನ್ನುತ್ತಾರೆ. ರಾಜಕಾರಣಿಗಳಂತೂ ಸಿನಿಮಾ ಪ್ರವೇಶಿಸಲು ಸದಾಸಿದ್ಧರು. ಸಿನಿಮಾ ರಂಗದ ವರು ರಾಜಕಾರಣಕ್ಕೆ ಇಳಿದಿಲ್ಲವೇ? ಕ್ರೀಡಾಪಟು ಗಳೂ ಸಿನಿಮಾದಲ್ಲಿ ತಮ್ಮ ಕೈಚಳಕ ತೋರಿಸಿ ದ್ದನ್ನು ಅನೇಕರು ನೋಡಿರಬಹುದು. ಅನೇಕ ಮಠಗಳ ಸ್ವಾಮಿಗಳೂ ಸಿನಿಮಾದಲ್ಲಿ ತಮ್ಮ ಪ್ರಭಾವ ಬೀರಲು ಉತ್ಸುಕರಾಗಿರಬಹುದು. ಮಠ ಪ್ರಚಾರ, ಮತಪ್ರಚಾರ, ಸಮುದಾಯಗಳಿಗೆ ಸಿನಿಮಾ ಮಹತ್ವದ್ದೇ ಸರಿ. ಮಾನವೀಯತೆ ಯನ್ನು ಜನಸೌಹಾರ್ದವನ್ನು ಬೆಳೆಸುವುದಕ್ಕೆ ಸಿನಿಮಾದ ಉಪಯೋಗ ಆಗಬೇಕು. ಡಂಭಾ ಚಾರದ ಪ್ರಚಾರವನ್ನು ಸಮಾಜ ಒಪ್ಪಲಿಕ್ಕಿಲ್ಲ. ಗತಕಾಲದ ಸಂಕುಚಿತ ಮತಗಳ ಆಗಿನ ರೀತಿಗಳು ಬದಲಾಗುತ್ತಿರುವ ವೇಗದಿಂದ ಪರಿವರ್ತನೆ ಗೊಳ್ಳುತ್ತಿರುವ ಈ ಕಾಲದಲ್ಲಿ ಸೂಕ್ತವೆನಿಸ- ಲಿಕ್ಕಿಲ್ಲ. ಆದರೂ ಎಲ್ಲ ಧರ್ಮಗಳ ಮೂಲ ಸೂತ್ರಗಳು ಸಮಾಜಕಲ್ಯಾಣವನ್ನೇ ಮಾನವನ ಸಾಮಾಜಿಕ ಜೀವನವನ್ನೇ ಪುಷ್ಟಿಗೊಳಿಸುತ್ತಿರು ವುದರಿಂದ ಹಿತವಾದ ಅಭಿಪ್ರಾಯಗಳನ್ನೇ ಸಿನಿಮಾ ಬಿಂಬಿಸಬಹುದು. ವೃತ್ತಿ ಶಿಕ್ಷಣದಲ್ಲಿಯೂ, ಸಾಮಾಜಿಕ ಪ್ರವೃತ್ತಿಗಳನ್ನು ರೂಪಿಸುವಲ್ಲಿಯೂ ಸಿನಿಮಾ ಪಾತ್ರ ಬಹಳ ಮಹತ್ವದ್ದು.

ಸಿನಿಮಾದಿಂದ ಪಾಠ ಕಲಿತೆನೆಂದು ಯಾರೂ ಹೇಳಲಿಕ್ಕಿಲ್ಲ. ಆದರೆ ಅದು ಸಾಮೂಹಿಕವಾಗಿ ಅತ್ಯಂತ ಪರಿಣಾಮಕಾರಿಯಾಗಿ ಕಲಿಸುವ ಸಾಧನವಾಗಿದೆಯೆಂಬುದನ್ನು ಯಾರೂ ಮರೆಯ ಬಾರದು. ಇಂದಿನ ಭಾರತೀಯರಲ್ಲಿ ನೂರಕ್ಕೆ ೫೦ಕ್ಕಿಂತಲೂ ಹೆಚ್ಚು ಜನ ೨೫ ವರ್ಷಗಳ ಒಳಗಿನ ವರು. ಈ ಯುವಕರ ವೇಷ, ಕೇಶಾಲಂಕಾರ ಗಳೆಲ್ಲ ಸಿನಿಮಾದಿಂದ ಸಂಸ್ಕಾರ ಪಡೆದಿವೆಯೆಂಬು ದನ್ನು ನೋಡಬಹುದು. ಸಿನಿಮಾದ ಹೆಸರು ಪಡೆದ ಸೀರೆಗಳು ಪೇಟೆಯಲ್ಲಿ ಬರುತ್ತವೆ. ಪ್ರಗತಿ ಶೀಲ ರಾಷ್ಟ್ರಗಳು ಸಿನಿಮಾ ಶಕ್ತಿಯನ್ನು ಗುರು ತಿಸಬೇಕು. ಅನುಕರಣಗಳಿಗೇ ಪ್ರಾಧಾನ್ಯ ಕೊಟ್ಟು ಇತರ ದೇಶಗಳಲ್ಲಿರುವಂತೆ ಮನೋರಂಜ ನವೇ ಮುಖ್ಯವೆನಿಸಬಾರದು. ತಮ್ಮ ಸಮಾಜದ ವೈಶಿಷ್ಟ್ಯಗಳನ್ನು ಸಂಸ್ಕೃತಿ ವಿಶೇಷಗಳನ್ನು ಕಡೆ ಗಣಿಸಬಾರದು. ಅದರಲ್ಲೂ ಭಾರತದಂತಹ ಸಾವಿರಾರು ವರ್ಷಗಳ ಹಿಂದಿನ ಉಚ್ಚ ಸಂಸ್ಕೃತಿ ಪರಂಪರೆಯ ದೇಶ, ಪಾಶ್ಚಾತ್ಯರ ಅನುಕರಣೆ ಯಲ್ಲೇ ಸಿನಿಮಾವನ್ನು ಉಪಯೋಗಿಸುವುದು ಯೋಗ್ಯವಲ್ಲ. ಆಧುನಿಕ ರೀತಿಯ ಚಲನಚಿತ್ರ ಗಳನ್ನು ತಮ್ಮದೇ ರೀತಿಯಲ್ಲಿ ಸಮಾಜ ವಿಕಾಸದ ನೀತಿಯಲ್ಲಿ ಬೆಳೆಸಿಕೊಳ್ಳುವದವಶ್ಯವಾಗಿದೆ. ಭಾರತ ಸರಕಾರ ಸಿನಿಮಾ ಶಕ್ತಿಯನ್ನೂ ಗುರು ತಿಸಿ ಈಗ ಭಾವೈಕ್ಯವನ್ನು ಬೆಳೆಸುವ ಸಾಕ್ಷಿಚಿತ್ರ ಗಳಿಗೆ ಪ್ರಾಧಾನ್ಯ ಕೊಡುತ್ತಿದೆ. ಸರಕಾರ ಸಿನಿಮಾದಿಂದ ಇನ್ನೂ ಅನೇಕ ರೀತಿಗಳಲ್ಲಿ ಪ್ರಯೋಜನ ಪಡೆಯಬಹುದಾಗಿದೆ. ವಾರ್ತಾ ಚಿತ್ರಗಳಿಗೂ ದೇಶವನ್ನು ಒಂದುಗೂಡಿಸುವ ಶಕ್ತಿಯಿದೆ. ೫೦ ವರ್ಷಗಳಿಗಿಂತಲೂ ಹಳೆಯ ದಾದ ಭಾರತೀಯ ಸಿನೆಮಾ ರಂಗ ಹೊಸ ಹಾದಿಯನ್ನು ಹಿಡಿಯಬೇಕಾಗಿದೆ. ಭಾರತದ ಸಂಸ್ಕೃತಿಯನ್ನು ಬೆಳಸಿ ಪರದೇಶದಲ್ಲಿಯೂ ಅದರ ಪ್ರಕಾಶವನ್ನೂ ಬೀರಬೇಕಾಗಿದೆ. ಸಮಾಜ ಧರ್ಮವನ್ನು ಬೆಳೆಸಬೇಕಾಗಿದೆ. ಸಮಾಜ ಸುಧಾ ರಣೆಯಲ್ಲಿಯೂ ಸಿನಿಮಾದ ಪಾತ್ರ ಇನ್ನೂ ಬೆಳೆಯಬೇಕಾಗಿದೆ.

ಆ ಭಯಂಕರ ಗುಹೆಯ ರಹಸ್ಯ

"ಸವ್ಯಸಾಚಿ"

ಗುಹೆಯಿಂದ ಉಸಿರುಟ್ಟಿಗಸುವಂತಹ ಚೀತ್ಕಾರಗಳು ನಿರಂತರ ಕೇಳಿಸುತ್ತಿದ್ದವು. ಜೆಕ್ ಮತ್ತು ಜಿಮ್ ಜೀವದಾಸೆಯಿಂದ ಓಟ ಕಿತ್ತರು. ಹಾರೆ ಪಿಕಾಸಿಗಳು ಅವರ ಕೈ ತಪ್ಪಿ ಆಳವಾದ ಹೊಂಡದೊಳಗೆ ಬಿದ್ದವು. ತಮ್ಮ ಮೈಮೇಲೆ ಕೇವಲ ಚಡ್ಡಿ ಮಾತ್ರ ಇದೆಯೆಂದು ಅವರಿಗೆ ನೆನಪಾಗಲಿಲ್ಲ. ಅವರ ಅಂಗಿ, ಪ್ಯಾಂಟ್‌ಗಳು ಬೆಟ್ಟದ ಇಳಿಜಾರಿನಲ್ಲಿರುವ ಗುಹೆಯ ಹೊರಗೇ ಉಳಿದು ಹೋಗಿದ್ದವು. ಇಬ್ಬರೂ ವೇಗವಾಗಿ ಓಡುತ್ತಿದ್ದರು. ಅವರ ಹಿಂದೆ ವಿಚಿತ್ರ ಚೀತ್ಕಾರಗಳು ಇನ್ನಷ್ಟು ತೀವ್ರವಾಗಿ ಕೇಳಿ ಬರುತ್ತಿದ್ದವು. ಈಗ ಸಿಂಹದ ಗುರುಗುರು ಸದ್ದಿನಂತಹ ಧ್ವನಿ ಕೇಳಿಬರುತ್ತಿತ್ತು.

ಜಿಮ್ ಹಾಗೂ ಜೆಕ್ ಬೆಟ್ಟದ ಕಡಿದಾದ ಹಾದಿಯಲ್ಲಿ ಪ್ರಾಣಭಯದಿಂದ ಓಡುತ್ತಿದ್ದರು. ಆಗ ಅವರಿಗೆ ತಮ್ಮ ಕಾಲುಗಳು ಗಾಯಗೊಂಡಿರುವುದೂ ನೆನಪಾಗಲಿಲ್ಲ, ತಾವು ಅರ್ಧನಗ್ನರಾಗಿದ್ದೇವೆಂಬ ಭಾವನೆಯೂ ಉಂಟಾಗಲಿಲ್ಲ. ಅವರು ಎಂತಾದರೂ ಕ್ಲೇಟೌನನ್ನು ತಲಪ ಬಯಸಿದ್ದರು.

ಥಕ್ಕನೆ ಜೆಕ್ ಕಲ್ಲೆಡವಿ ಕೆಳಬಿದ್ದು ಇಳಿಜಾರಿನಲ್ಲಿ ಉರುಳುತ್ತ ಹೋದ. ಜಿಮ್ ಅವನನ್ನು ಹಿಡಿಯಲೆತ್ನಿಸಿದ. ಆದರೆ ಸಮತೋಲನ ಕಾಯ್ದುಕೊಳ್ಳಲಾರದೆ ಆತನೂ ಕೆಳಬಿದ್ದು ಉರುಳತೊಡಗಿದ.

೧೯೩೪ ರ ಎಪ್ರಿಲ್ ನಾಲ್ಕರಂದು ನಡೆದ ಘಟನೆಯಿದು. ಜೆಕ್ ಮತ್ತು ಜಿಮ್ ಎಂಬ ಇಬ್ಬರು ಗೆಳೆಯರು ಬಂಗಾರದ ಶೋಧದಲ್ಲಿ ಈ ರೀತಿ ಸಾವನ್ನಪ್ಪಿದರು.

ಆಗ ಅಮೇರಿಕ ತೀವ್ರ ಆರ್ಥಿಕ ಮುಗ್ಗಟ್ಟು ಹಾಗೂ ಹಣದುಬ್ಬರವನ್ನು ಎದುರಿಸುತ್ತಿತ್ತು. ಡಾಲರಿನ ಬೆಲೆ ದಿನದಿನಕ್ಕೆ ಇಳಿಯುತ್ತಿತ್ತು. ಹೊರ ದೇಶಗಳಿಗೆ ಅಮೇರಿಕನ್ ವಸ್ತುಗಳ ರಫ್ತು ತುಂಬ ಕಡಿಮೆಯಾಗಿತ್ತು. ಏಶಿಯನ್ ರಾಷ್ಟ್ರವಾದ ಜಪಾನ್ ಔದ್ಯೋಗಿಕ ಹಾಗೂ ವ್ಯಾಪಾರಿ ಸಾಮಗ್ರಿಗಳನ್ನು ಹೊರ ದೇಶಗಳಿಗೆ ಕಳುಹಿಸಿ ದಿನದಿನಕ್ಕೆ ಸಮೃದ್ಧವಾಗುತ್ತಿತ್ತು.

೧೯೩೪ ರ ಆರಂಭದಲ್ಲಿ ಬಂಗಾರದ ಬೆಲೆ ಆಕಾಶಕ್ಕೇರಿತು. ೧೯೩೮ ರಲ್ಲಿ ಔನ್ಸಿಗೆ ೧೮ ಡಾಲರಿನಂತೆ ಸಿಗುತ್ತಿದ್ದ ಬಂಗಾರ ಮರುವರ್ಷ ೩೭ ಡಾಲರಿಗೇರಿತು. ಸರಕಾರಿ ಖಜಾನೆಯಲ್ಲಿ ಬಂಗಾರದ ಸಂಗ್ರಹ ಮೆಲ್ಲಮೆಲ್ಲನೆ ಕರಗುತ್ತ ಹೋಯಿತು.

ಆಗ ರಿಪಬ್ಲಿಕನ್ ಸರಕಾರ ಪ್ರಾರಂಭದ ಎಚ್ಚರಿಕೆಯ ರೂಪದಲ್ಲಿ ಬಂಗಾರದ ಡಾಲರ್ ನಿರ್ಮಾಣವನ್ನು ನಿಲ್ಲಿಸಿಬಿಟ್ಟಿತು. ಈಗ ಯಹೂದಿ ವ್ಯಾಪಾರಿಗಳು ಕೋಲಾಹಲ ಎಬ್ಬಿಸಿದರು. ಏಕೆಂದರೆ, ಆ ಕಾಲಕ್ಕೆ ಅಮೇರಿಕದ

ಮಾರುಕಟ್ಟೆಯ ಮೇಲೆ ಅವರದೇ ಪ್ರಭುತ್ವ ವಿತ್ತು. ಹೆಚ್ಚಿನ ಬಂಗಾರದ ಡಾಲರ್‌ಗಳು ಅವರ ಬಳಿ ಇದ್ದವು. ಮೊದಲು ರಾಷ್ಟ್ರಪತಿ ರೂಸ್‌ವೆಲ್ಟ್ ಅವರ ವಿರೋಧವನ್ನು ಕಡೆಗಣಿಸಿದರು. ಆದರೆ ಯಹೂದಿಗಳು ರಾಜನೈತಿಕ ಅಸ್ತ್ರ ಬಳಸುತ್ತ "ಮುಂಬರುವ ಚುನಾವಣೆಯಲ್ಲಿ ಡೆಮೊಕ್ರೆಟಿಕ್ ಪಕ್ಷವನ್ನು ಬೆಂಬಲಿಸುತ್ತೇವೆ"— ಎಂದರು. ಈ ಬೆದರಿಕೆ ಫಲಕಾರಿಯಾಯಿತು. ಸರಕಾರ ಅವರಿಗೆ ಮಣಿದು, ಬಂಗಾರದ ನಾಣ್ಯ ನಿರ್ಮಾಣ ತಡೆಯುವ ಸುಗ್ರೀವಾಜ್ಞೆಯನ್ನು ಹಿಂದೆಗೆದುಕೊಂಡಿತು. ಕೂಡಲೇ ವ್ಯಾಪಾರಿಗಳು ತಮ್ಮ ಬಳಿಯಿದ್ದ ಎಲ್ಲ ಬಂಗಾರದ ನಾಣ್ಯಗಳನ್ನು ಮಾರಿ ಕೋಟ್ಯಂತರ ಡಾಲರ್ ಲಾಭ ಗಳಿಸಿದರು. ಆದರೆ ದೇಶದ ಜನಸಾಮಾನ್ಯರ ಸ್ಥಿತಿ ಮಾತ್ರ ದಿನದಿನಕ್ಕೆ ಕೆಡುತ್ತಲೇ ಇತ್ತು.

ಆ ದಿನಗಳಲ್ಲೇ ವಿಚಿತ್ರ ಘಟನೆಯೊಂದು ನಡೆಯಿತು. ಒಂದು ರಾತ್ರಿ ಅಮೇರಿಕದ ಲಾಸ್ ಏಂಜಲ್ಸ್ ನಗರದಸ ವೇಡಾ ಎಂಬ ಪ್ರದೇಶದ ಬಳಿಯಿದ್ದ ಒಂದು ಬೆಟ್ಟ ಭಯಂಕರ ಶಬ್ದದೊಂದಿಗೆ ವಿಸ್ಫೋಟಗೊಂಡಿತು. ನೆಲ ಸಿಡಿದು ಲಾವಾರಸ ಹೊಮ್ಮಿತು. ಈ ದುರ್ಘಟನೆಯಿಂದ ಕೆಲ ಮನೆಗಳು ನೆಲಸಮವಾದವು. ಆದರೆ ಲಾವಾರಸ ತಣ್ಣಗಾದಾಗ ಅದರೊಳಗೆ ಹೊಳೆಯುವ ತುಣುಕುಗಳು ಕಾಣಿಸಿದವು. ನೆರವು ತಂಡದ ಒಬ್ಬ ಕಾರ್ಯಕರ್ತ, ಲಾಸ್ ಏಂಜಲ್ಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ, ಮೈಕೆಲ್ ಕ್ರಾಫೋರ್ಡ್ ಆ ತುಣುಕುಗಳನ್ನೆತ್ತಿ ತಂಡಕ್ಕೆ ಒಪ್ಪಿಸಿದ. ಪರೀಕ್ಷಿಸಿದಾಗ ಅವು ಶುದ್ಧ ಬಂಗಾರವೆಂದು ತಿಳಿದುಬಂತು. ವಾಸ್ತವವಾಗಿ ಆ ಬೆಟ್ಟ ಬಂಗಾರದ ಗಣಿಯೇ ಆಗಿತ್ತು.

ಈ ಸುದ್ದಿ ಅಮೇರಿಕದ ಸರಕಾರಕ್ಕೆ ತುಂಬ ಸಂತೋಷವನ್ನುಂಟು ಮಾಡಿತು. ಸವೇಡಾದ ದೊಡ್ಡ ಪ್ರದೇಶವನ್ನು ಬರಿದುಗೊಳಿಸಿ ಅಲ್ಲಿಯ ಜನಕ್ಕೆ ಲಾಸ್ ಏಂಜಲ್ಸ್ ನಗರದಲ್ಲಿ ಭೂಮಿ ಹಾಗೂ ಮನೆ ಕೊಡಲಾಯಿತು. ನಷ್ಟಭರ್ತಿಗಾಗಿ ಸಾಕಷ್ಟು ಹಣ ಮಂಜೂರಾಯಿತು. ಈ ಕಾರ್ಯ ಮುಗಿದ ಬಳಿಕ ಸವೇಡಾದ ಬೆಟ್ಟವನ್ನು ಅಲ್ಲಲ್ಲಿ ಅಗೆಯಲಾಯಿತು. ಇದಕ್ಕಾಗಿ ಆಧುನಿಕ ಯಂತ್ರಗಳನ್ನು ಬಳಸಿದರು, ಬಹುಬೇಗ ಈ ಪ್ರಯತ್ನ ಸಫಲವಾಯಿತು. ಒಂದೆಡೆ ಬಂಗಾರದ ದೊಡ್ಡ ಗಣಿಯನ್ನು ಕಂಡುಹಿಡಿದರು. ಈ ಗಣಿಯಲ್ಲಿ ಸುಮಾರು ಒಂದೂವರೆ ಟನ್ ಬಂಗಾರ ಇದೆಯೆಂದು ಅಂದಾಜು ಮಾಡಲಾಗಿತ್ತು. ಅಲ್ಪಾವಧಿಯಲ್ಲೇ ಅಲ್ಲಿಯ ಬಂಗಾರವನ್ನು ತಗೆಯತೊಡಗಿದರು.

ಈ ರೀತಿ ಸರಕಾರೀ ಕಾರ್ಯಗಳು ವಿದ್ಯುದ್ವೇಗದಿಂದ ಸಾಗುತ್ತಿದ್ದಂತೆಯೇ ಕೆಲ ಸಾಹಸಿ ಯುವಕರೂ ಖಾಸಗಿಯಾಗಿ ಬಂಗಾರದ ಶೋಧ ಕೈಗೊಂಡರು, ಸರಕಾರದ ದೃಷ್ಟಿಯಲ್ಲಿ ಈ ಕೆಲಸ ಅಕ್ರಮವಾಗಿತ್ತು. ಆದರೆ 'ಈ ಭೂಮಿ ನಮ್ಮದು; ಇದು ಯಾರ ಸ್ವಂತ ಆಸ್ತಿಯೂ ಅಲ್ಲ. ಆದ್ದರಿಂದ ಇಲ್ಲಿ ಸಿಗುವ ಪ್ರಾಕೃತಿಕ ವಸ್ತುಗಳ ಮೇಲೆ ನಮಗೂ ಹಕ್ಕಿದೆ' ಎಂಬುದು ಈ ಯುವಕರ ವಾದ. ಹೀಗೆ ಮುಂದುವರಿದವರಲ್ಲಿ ಮೈಕೆಲ್ ಕ್ರಾಫೋರ್ಡ್ ಮೊದಲಿಗ. ಅವನಿಗೇ ಅಲ್ಲವೆ ಮೊಟ್ಟಮೊದಲು ಬಂಗಾರದ ತುಂಡು ಸಿಕ್ಕಿದುದು! ಕ್ರಾಫೋರ್ಡ್ ಆರು ನವಯುವಕರ ಒಂದು ತಂಡ ಕಟ್ಟಿಕೊಂಡ. ಜಿಮ್, ಜೆಕ್, ಹ್ಯಾರಿ, ಶೇಡ್ಲೀ, ಬೆರಿಂಗ್ಟನ್ ಹಾಗೂ ಸ್ವತಃ ಕ್ರಾಫೋರ್ಡ್—ಇವರೇ ಆ ಆರು ಜನ. ಕ್ರಾಫೋರ್ಡ್ ಒಬ್ಬನನ್ನು ಬಿಟ್ಟು ಉಳಿದವರೆಲ್ಲ ಲಾಸ್ ಏಂಜಲ್ಸ್ ವಿಶ್ವವಿದ್ಯಾಲಯದ ಭೂಗರ್ಭ ವಿಭಾಗದ ವಿದ್ಯಾರ್ಥಿಗಳು. ಅವರಿಗೆ ಭೂಗರ್ಭದಲ್ಲಿರುವ ನಿಧಿಗಳನ್ನು ಹುಡುಕುವ ಆಸಕ್ತಿ ಹಾಗೂ ಅನುಭವವಿತ್ತು. ಅವರು ಹಲವಾರು ಸ್ಥಾನಗಳನ್ನು ಅಗೆದು ಪರೀಕ್ಷಿಸಿದರು. ಕಟ್ಟಕಡೆಗೆ ಒಂದು ಜಾಗದ ಮಣ್ಣಿನಲ್ಲಿ ಬಂಗಾರ ಇರುವುದು ಪತ್ತೆಯಾಯಿತು. ಈಗ ಅವರು ತಮ್ಮ ಪ್ರಯತ್ನವನ್ನು ತೀವ್ರಗೊಳಿಸಿದರು.


ಒಂದು ಬೆಳಿಗ್ಗೆ ಅವರು ಬೆಟ್ಟದ ಬದಿಯಲ್ಲಿ

ಅಗೆಯುತ್ತಿದ್ದಾಗ ಪೋಲೀಸರು ಅವರನ್ನು ಸೆರೆ ಹಿಡಿದರು. ಆದರೆ ಯುವಕರು ಕಂಗೆಡಲಿಲ್ಲ. ಜಾಮೀನಿನ ಮೇಲೆ ಬಿಡುಗಡೆ ಹೊಂದಿದರು. ಅಲ್ಲದೆ ಅಮೇರಿಕದ ಜನಪ್ರಿಯ ಕಾಯ್ದೆತಜ್ಞ ಹಾಗೂ ಮಾಜಿ ಸೆನೆಟರ್ ಎಡ್ವರ್ಡ್ ವಿಲ್ಸನ್‌ರ ನೆರವು ಪಡೆದು, ಲಾಸ್ ಏಂಜಲ್ಸ್ ನ್ಯಾಯಾಲಯದಲ್ಲಿ ಸರಕಾರದ ವಿರುದ್ಧ ದಾವೆ ಹೂಡಿದರು.

೧೯೩೪ರ ಫೆಬ್ರುವರಿ ೨೭ರಂದು ನ್ಯಾಯಾಲಯ ಯುವಕರ ಪರವಾಗಿ ತೀರ್ಪು ನೀಡಿತು. ಈಗ ಇತರರಿಗೂ ಅವಕಾಶ ದೊರೆತಂತಾಯಿತು. ಇನ್ನೂ ಕೆಲವರು ಈ ಯುವಕರ ತಂಡ ಸೇರಿಕೊಂಡರು. ಕ್ರಾಫೋರ್ಡ್ ಅವರ ಮಾರ್ಗ-ದರ್ಶಕನಾದ.

ಸಂಪತ್ತು ಯಾವಾಗಲೂ ಜಗಳದ ಮೂಲವೆನ್ನುತ್ತಾರೆ. ಅದಕ್ಕೆ ಸಾಕ್ಷಿಯೆನ್ನುವಂತೆ ಕ್ರಾಫೋರ್ಡ್ ಹಾಗೂ ಅವನ ಸಂಗಾತಿಗಳ ನಡುವೆ ಬಹುಬೇಗನೆ ಮತಭೇದ ಆರಂಭ-ವಾಯಿತು. ಪರಿಣಾಮವಾಗಿ ಆ ತಂಡದಲ್ಲಿ ಹಲವು ಗುಂಪುಗಳಾದವು. ಈ ಜನ ಇಷ್ಟರೊಳಗೇ ಎಷ್ಟೋ ಪೌಂಡು ಬಂಗಾರ ಪಡೆದಿದ್ದರು. ಆದರೆ ಅವರಲ್ಲಿ ಹಣದಾಸೆ ಹೆಚ್ಚುತ್ತ ಹೋಯಿತು.

ಈ ವೇಳೆಯಲ್ಲೇ ಅದೊಂದು ದಿನ ಕ್ರಾಫೋರ್ಡ್ ಹಾಗೂ ಅವನ ಕೆಲ ಸಂಗಾತಿಗಳು ಬೆಟ್ಟದ ಒಂದು ಗುಹೆಯಲ್ಲಿ ಅಗೆತ ಕೈಗೊಂಡರು. ಅಲ್ಲಿ ಬಂಗಾರ ಖಂಡಿತ ಸಿಗುವುದೆಂದು ಅವರಿಗೆ ಮನವರಿಕೆಯಾಗಿತ್ತು. ಕ್ರಾಫೋರ್ಡ್ ಕೆಲ ಅಗತ್ಯದ ಸಾಮಗ್ರಿ ತರಲು ಲಾಸ್ ಏಂಜಲ್ಸ್‌ಗೆ ಹೊರಟುಹೋಗಿದ್ದ. ಮರಳಿ ಬಂದಾಗ ವಿಚಿತ್ರ ದೃಶ್ಯ ಕಾದಿತ್ತು. ಅವನ ತಂಡದ ನಾಲ್ವರು ತುಸು ದೂರ ಇಳಿಜಾರಿನಲ್ಲಿ ನಿಂತಿದ್ದರು. ಐದನೇ ವ್ಯಕ್ತಿ ಹ್ಯಾರಿ ಅಲ್ಲಿರಲಿಲ್ಲ. ಅವರೆಲ್ಲರ ಮುಖ ಭೀತಿಯಿಂದ ಬಿಳಿಚಿಕೊಂಡಿತ್ತು. ಕ್ರಾಫೋರ್ಡ್ ಪ್ರಶ್ನಿಸಿದಾಗ, ತಾವು ಗುಹೆಯೊಳಗೆ ಹೋಗಿ



ಒಂದು ದೊಡ್ಡ ಕಲ್ಲನ್ನು ಸರಿಸಿದಾಗ ಒಳಗಿನಿಂದ ಚೀತ್ಕಾರದ ಧ್ವನಿ ಬರತೊಡಗಿತೆಂದೂ, ತಾವೆಲ್ಲ ಹೆದರಿ ಓಡಿ ಬಂದೆವೆಂದೂ, ಆದರೆ ಹ್ಯಾರಿ ಮಾತ್ರ ಎಲ್ಲಿ ಹೋದನೆಂಬುದು ತಿಳಿಯಲಿಲ್ಲವೆಂದೂ ಹೇಳಿದರು. ಇದನ್ನು ಕೇಳಿ ಜೋರಾಗಿ ನಕ್ಕ ಕ್ರಾಫೋರ್ಡ್— 'ನೀವೆಲ್ಲ ಅಂಜುಗುಳಿಗಳು'— ಎಂದು ಹೇಳಿ ಗುಹೆಯೊಳಗೆ ನಡೆದೇ ಬಿಟ್ಟ. ಹ್ಯಾರಿ ಗುಹೆಯೊಳಗೇ ಇರಬಹುದೆಂದು ಅವನ ಊಹೆ. ಸಂಗಾತಿಗಳು ಅವನನ್ನು ತಡೆಯಲೆತ್ನಿಸಿದರು. ಆದರೆ ಆತ ಅವರಿಗೆ ಕಿವಿಗೊಡಲಿಲ್ಲ.

ಸುಮಾರು ಒಂದು ತಾಸು ಕಳೆದರೂ ಕ್ರಾಫೋರ್ಡ್ ಮರಳಲಿಲ್ಲ. ಆಕಸ್ಮಾತ್ ಜೋರಾಗಿ ಗಾಳಿ ಬೀಸಿದ ಸದ್ದು ಕೇಳಿಸಿತು. ಜೊತೆಗೆ ಒಳಗಿಂದ ಚೀತ್ಕಾರದ ಶಬ್ದ. ಕ್ರಾಫೋರ್ಡ್ ಹಾಗೂ ಹ್ಯಾರಿಯ ಬಗ್ಗೆ ಯೋಚಿಸದೆ ಉಳಿದವರೆಲ್ಲ ಅಲ್ಲಿಂದ ಓಟ ಕಿತ್ತರು.

ಸವೇಡಾ ತಲುಪಿ ಅವರು ಪೋಲೀಸರಿಗೆ ಸುದ್ದಿ ಮುಟ್ಟಿಸಿದರು. ಒಂದು ಪೋಲೀಸ್ ತಂಡ ಘಟನಾ ಸ್ಥಳಕ್ಕೆ ಹೊರಟಿತು. ಪೋಲೀಸ್ ಅಧಿಕಾರಿ ಡೀನ್ "ಏಶಿಯ ಅಂಥ ವಿಶ್ವಾಸಗಳಿಗೆ ಹೆಸರಾದುದು. ಆದರೆ ಅಮೇರಿಕದಲ್ಲೂ ಭೂತ ಪ್ರೇತಗಳನ್ನು ನಂಬುವ ಅಂಥ ಜನರಿದ್ದಾರಲ್ಲಾ!"– ಎಂದು ಯುವಕರನ್ನು ಗೇಲಿ ಮಾಡಿದ. ಆದರೆ ಆತ ಗುಹೆಯೊಳಗೆ ಹೋಗಿ ಐದು ನಿಮಿಷಗಳಲ್ಲೇ ಹೊರ ಬಿದ್ದಾಗ ಅವನ ಸ್ಥಿತಿ ವಿಚಿತ್ರವಾಗಿತ್ತು. ಮುಖ ಕೆಂಪಾಗಿತ್ತು. ದೇಹವಿಡಿ ಬೆವರಿನಿಂದ ತೊಯ್ದು ಹೋಗಿತ್ತು. ಹೊರ ಬರುತ್ತಲೇ ಆತ ಎಚ್ಚರದಪ್ಪಿ ಬಿದ್ದು ಬಿಟ್ಟ. ತುಸು ಹೊತ್ತಿನ ಬಳಿಕ ಅರಿವಿಗೆ ಬಂದಾಗ 'ಭೂತ, ಭೂತ' ಎಂದು ಅರಚತೊಡಗಿದ. ಪೋಲೀಸ್ ತಂಡ ಅವನನ್ನು ತಕ್ಷಣ ಆಸ್ಪತ್ರೆಗೆ ಸೇರಿಸಿತು.

ಎರಡು ಮೂರು ದಿನಗಳ ತನಕ ಡೀನ್‌ನ ಸ್ಥಿತಿ ಗಂಭೀರವಾಗಿತ್ತು. ಮುಂದೆ ಗುಣ ಹೊಂದಿದಾಗ ಆತ ತನ್ನ ಅನುಭಗಳನ್ನು ವಿವರಿಸುತ್ತ, ಆ ಗುಹೆಯಲ್ಲಿ ಭೂತಗಳು ವಾಸಿಸುತ್ತಿವೆಯೆಂದೂ, ಒಳ ಹೋಗುತ್ತಲೇ ತನ್ನ ಕೊರಳು ಹಿಡಿದು ಅಮುಕಿದವೆಂದೂ ಹೇಳಿದ. ಒಂದು ನಿಮಿಷ ತಡವಾಗಿದ್ದರೆ ತಾನು ಸತ್ತೇ ಹೋಗುತ್ತಿದ್ದೆನೆಂದೂ ನುಡಿದ.

ಡೀನನಿಗೊದಗಿದ ವಿಪತ್ತು ಹಾಗೂ ಗುಹೆಯೊಳಗೆ ಇಬ್ಬರು ಯುವಕರಿಗೊದಗಿದ ಸಾವು– ಈ ಎರಡು ಘಟನೆಗಳ ಬಳಿಕ, ಅದು ಭೂತದ ಗುಹೆಯೆಂದು ಭಾವಿಸಿ ಅದನ್ನು ಮುಚ್ಚಿಬಿಡಲಾಯಿತು. ಬಂಗಾರದ ಶೋಧಕ್ಕೆ ಹೊರಟ ಜನ ಆ ಗುಹೆಯ ಹತ್ತಿರ ಸುಳಿಯಲೂ ಹೆದರುತ್ತಿದ್ದರು.

ಕೆಲ ಕಾಲದ ನಂತರ ಜೆಕ್ ಹಾಗೂ ಜಿಮ್ ಗುಟ್ಟಾಗಿ ಅದನ್ನು ಶೋಧಿಸಲು ಹೊರಟರು. ಅವರು ಗುಹೆಯ ಹತ್ತಿರ ನಿಂತು ಕೆಲ ಕಲ್ಲುಗಳನ್ನು ಸರಿಸಿ, ಬೆಟ್ಟದ ಮೇಲ್ಭಾಗವನ್ನು ಸಮತಟ್ಟು ಮಾಡುತ್ತಿದ್ದಾಗಲೇ, ಒಳಗಿಂದ ಚೀತ್ಕಾರ ಕೇಳಿಸಿತು. ಅವರು ಓಡಿ ಹೋಗುವಾಗ ಬೆಟ್ಟದಿಂದ ಜಾರಿ ಕೆಳಗೆ ಬಿದ್ದು ಸತ್ತರು. ಈ ರೀತಿ ಎಪ್ರಿಲ್ ೨೩ರವರೆಗೆ ಆ ಕ್ರೂರ ಗುಹೆ ನಾಲ್ವರು ಯುವಕರ ಬಲಿ ತೆಗೆದುಕೊಂಡಿತ್ತು.

ಇಡೀ ಅಮೇರಿಕದಲ್ಲಿ ಈ ಸುದ್ದಿ ಪ್ರಚಾರಗೊಂಡಿತು. ಜನ ದೂರ ದೂರದಿಂದಲೂ ಈ ಗುಹೆ ನೋಡಲು ಬರುತ್ತಿದ್ದರು. ಆದರೆ ಅದರ ಬಗ್ಗೆ ಹರಡಿದ ಕತೆಗಳಿಂದಾಗಿ ಹೆದರಿ ಅದರ ಹತ್ತಿರಕ್ಕೂ ಸುಳಿಯುತ್ತಿರಲಿಲ್ಲ.

೧೯೩೯ ಜುಲೈ ನಾಲ್ಕರಂದು ಆ್ಯಂಡರ್‌ಸನ್ ಎಂಬೊಬ್ಬ ಯುವಕ ಆ ಗುಹೆಯನ್ನು ಪ್ರವೇಶಿಸಲು ನಿರ್ಧರಿಸಿದ. ಆತ ಬರ್ಕಲೇ ವಿಶ್ವವಿದ್ಯಾಲಯದಲ್ಲಿ ಭೂಗರ್ಭಶಾಸ್ತ್ರದ ವಿದ್ಯಾರ್ಥಿ, ಮಹಾ ಸಾಹಸಿ. ಆ ಗುಹೆಯಲ್ಲಿ ಯಾವುದೋ ವಿಷ ಅನಿಲ ತುಂಬಿದ್ದು, ಜನ ಉಸಿರುಗಟ್ಟಿ ಮೂರ್ಛೆ ಹೋಗುತ್ತಿರಬಹುದೆಂದೂ, ಮುಂದೆ ಭಯದಿಂದಲೇ ಸಾಯುತ್ತಿರಬಹುದೆಂದೂ ಆತ

ತರ್ಕಿಸಿದ. ಆದರೆ ರಹಸ್ಯಮಯ ಚೀತ್ಕಾರಗಳ ಬಗ್ಗೆ ಆತ ಏನೂ ಹೇಳದಾದ.

ಆ್ಯಂಡರ್‌ಸನ್ ಒಂದು ದಿನ ಲಾಸ್ ಏಂಜಲ್ಸ್‌ಗೆ ಹೋದ. ಅಲ್ಲಿ ತನ್ನ ಸಂಬಂಧಿಕ ಮೈಕ್‌ನ ಮನೆಯಲ್ಲಿ ತಂಗಿದ. ಮಾತುಕತೆಯ ಮಧ್ಯೆ ತಾನು ಆ ಭೂತದ ಗುಹೆಯೊಳಗೆ ಹೋಗಲು ನಿರ್ಧರಿಸಿದುದನ್ನು ತಿಳಿಸಿದ. ಮೈಕ್ ಗುಹೆಯ ಬಗ್ಗೆ ಸಾಕಷ್ಟು ಕೇಳಿದ್ದ. 'ಅದರೊಳಗೆ ಹೋಗುವ ವಿಚಾರ ಬಿಡು' ಎಂದು ಸಲಹೆಯಿತ್ತ. ಆದರೆ ಅಲ್ಲಿ ಯಾವುದೋ ವಿಷಯುಕ್ತ ಅನಿಲ ಇರಬಹುದೆಂಬ ತನ್ನ ಸಂದೇಹವನ್ನು ಆ್ಯಂಡರ್‌ಸನ್ ವ್ಯಕ್ತಪಡಿಸಿದಾಗ, ಮೈಕ್‌ನಿಗೂ ಅದು ನಿಜವೆನಿಸಿತು.

ಮರುದಿನವೇ ಆ್ಯಂಡರ್‌ಸನ್ ಮತ್ತು ಮೈಕ್ ಆ ಗುಹೆಗೆ ತಲಪಿದರು. ಆ್ಯಂಡರ್‌ಸನ್ ತನ್ನೊಟ್ಟಿಗೆ 'ಗ್ಯಾಸ್ ಮಾಸ್ಕ್' (ಅನಿಲ ಮುಸುಕು) ಹಾಗೂ ಕೆಲವು ಅಗತ್ಯದ ಸಾಮಾನು ತಂದಿದ್ದ. 'ಗ್ಯಾಸ್ ಮಾಸ್ಕ್' ಹಾಕಿಕೊಂಡು, ಶಕ್ತಿಶಾಲಿ ಟಾರ್ಚ್ ಹಿಡಿದು ಆತ ಗುಹೆಯೊಳಗೆ ನಡೆದ. ಮೈಕ್ ಗುಹೆಯ ಬಾಗಿಲಲ್ಲೇ ನಿಂತುಕೊಂಡ.

೧೫ ನಿಮಿಷ ಕಳೆದಾಗ ಒಳಗಿನಿಂದ ಚೀತ್ಕಾರ ಕೇಳಿಸಿತು. ಮೈಕ್ ಹೆದರಿ ಬಾಗಿಲು ಬಿಟ್ಟು ದೂರ ಓಡಿದ. ಅಷ್ಟರಲ್ಲೇ ಆ್ಯಂಡರ್‌ಸನ್ ನಗುತ್ತ ಹೊರಬಂದು ಓಡುತ್ತಿರುವ ಮೈಕ್‌ನನ್ನು ಕರೆದ. ಮೈಕ್ ತಿರುಗಿ ಆಶ್ಚರ್ಯದಿಂದ ಆ್ಯಂಡರ್‌ಸನ್‌ನನ್ನು ದಿಟ್ಟಿಸಿದ... ಓಡಿಬಂದು ಅವನನ್ನಪ್ಪಿಕೊಂಡ. ಗುಹೆಯ ರಹಸ್ಯ ಆ್ಯಂಡರ್‌ಸನ್‌ಸಿಗೆ ತಿಳಿದುಹೋಗಿತ್ತು!

ಮರುದಿನ ಆ್ಯಂಡರ್‌ಸನ್ ತನ್ನ ಶೋಧದ ರಹಸ್ಯವನ್ನು ಹೊರಗೆಡಹಲು ಒಂದು ಪತ್ರಿಕಾ ಗೋಷ್ಠಿ ಏರ್ಪಡಿಸಿದ. ಅಲ್ಲಿ ಆತ ಇಂತೆಂದ:— "ಗುಹೆಯೊಳಗೆ ಭೂತಪ್ರೇತಗಳೇನೂ ಇಲ್ಲ. ಹಿಂದೆ ಅದು ಸಿಂಹದ ಗುಹೆ ಇದ್ದಿರಬಹುದು. ಅಲ್ಲಿ ಪ್ರಾಣಿಗಳ ಎಲುಬುಗಳು ಹೇರಳವಾಗಿ ಬಿದ್ದಿವೆ. ಎಲುಬುಗಳಲ್ಲಿ ರಂಜಕ (ಫಾಸ್ಫರಸ್) ಸಾಕಷ್ಟಿರುತ್ತದೆ. ಆ ಗುಹೆಯಲ್ಲಿ ಕಲ್ಲಿದ್ದಲಿನ ಭಂಡಾರವೂ ಇದೆ. ರಂಜಕ ಹಾಗೂ ಕಲ್ಲಿದ್ದಲಿನ ಮಿಶ್ರಣದಿಂದ ವಿಷಮಯ ಅನಿಲವೊಂದು ನಿರ್ಮಾಣಗೊಂಡಿದೆ. ಈ ಅನಿಲ ಮನುಷ್ಯನ ಮೂಗಿನೊಳಗೆ ಸೇರಿದಾಗ ಉಸಿರು ಕಟ್ಟಿದಂತಾಗುತ್ತದೆ. ಗ್ಯಾಸ್ ಮಾಸ್ಕ್ ಇಲ್ಲದೆಯೇ ಒಳಹೋದವರಿಗೆ ಅದೃಶ್ಯಶಕ್ತಿಯೊಂದು ಕೊರಳನ್ನೊತ್ತಿದಂತೆ ಭಾಸವಾಗುತ್ತದೆ... ಇನ್ನು ರಹಸ್ಯಮಯ ಚೀತ್ಕಾರಗಳ ವಿಚಾರ... ಆ ಗುಹೆಯ ಮೇಲ್ಭಾಗದಲ್ಲೊಂದು ಸಣ್ಣ ತೂತಿದೆ. ಅದರ ಮೂಲಕ ಜೋರಾಗಿ ಗಾಳಿ ಒಳಬಂದಾಗ, ಗಾಳಿಯ ಒತ್ತಡದಿಂದ ಸಿಳ್ಳಿನಂತಹ ಸದ್ದು ಕೇಳಿಸುತ್ತದೆ. ಅದನ್ನೇ ಜನ ಚೀತ್ಕಾರವೆಂದು ಭ್ರಮಿಸಿದರು!"

ಅದೇ ದಿನ ಮಧ್ಯಾಹ್ನ ನಗರದ ಅಧಿಕಾರಿಗಳೂ ವಿಜ್ಞಾನಿಗಳೂ ಗ್ಯಾಸ್ ಮಾಸ್ಕ್ ಹಾಕಿಕೊಂಡು ಆ್ಯಂಡರ್‌ಸನ್‌ನೊಂದಿಗೆ ಗುಹೆಯೊಳಗೆ ನಡೆದರು. ಅಲ್ಲಿ ಅವರಿಗೆ ಹ್ಯಾರಿ ಮತ್ತು ಕ್ರಾಫೋರ್ಡರ ಹೆಣಗಳು ಸಿಕ್ಕವು. ಅವುಗಳ ಅಸ್ಥಿಪಂಜರಗಳಷ್ಟೇ ಉಳಿದಿದ್ದವು. ಬಟ್ಟೆ ಹಾಗೂ ಬೂಟುಗಳಿಂದ ಅವರ ಗುರುತು ಹಿಡಿಯಲಾಯಿತು.

ಕೆಲ ದಿನಗಳ ಬಳಿಕ ಆ ಗುಹೆಯನ್ನು ಸಿಡಿಮದ್ದುಗಳಿಂದ ಹಾರಿಸಲಾಯಿತು. ಈ ರೀತಿ ಗುಹೆಯನ್ನು ಸಿಡಿಸಿದುದು ಅಮೇರಿಕಕ್ಕೆ ವರವಾಗಿ ಪರಿಣಮಿಸಿತು. ಏಕೆಂದರೆ ಬಂಗಾರಕ್ಕಿಂತಲೂ ಹೆಚ್ಚು ಅಮೂಲ್ಯವಾದ ವಸ್ತುವೊಂದು ಅಲ್ಲಿತ್ತು. ಅದು ವಜ್ರದ ಗಣಿಯಾಗಿತ್ತು. ಕಲ್ಲಿದ್ದಲಿನ ಗಣಿಯಿಂದಲೆ ಅಲ್ಲವೆ ವಜ್ರವೂ ಹೊರಡುವುದು! ✡

(ಹಿಂದಿಯಿಂದ)

ಉನ್ನತ ತಂತ್ರಜ್ಞಾನದ ಅದ್ಭುತ

ಸಂಚಾರಿ ವರದಿ ಪ್ರೇಷಕ

ಅಶೋಕ ಹಾಸ್ಯಗಾರ

ಎಲ್ಲಿಯಾದರೂ ಯಾವುದೇ ವೈಪರೀತ್ಯದಿಂದ ಪ್ರಪಂಚದ ಇತರೆಡೆಗಳಿಗೆ ಸಂಪರ್ಕ ಕಡಿದು ಕೊಂಡಾಗ ಸಂಚಾರಿ ವರದಿ ಪ್ರೇಷಕಗಳ ಕಾರ್ಯ ಅದ್ಭುತವೆಂದು ಈಗ ಸಾಬೀತಾಗಿದೆ. ಕಳೆದ ವರ್ಷ ಮೆಕ್ಸಿಕೋ ನಗರದಲ್ಲಿ ಸಂಭವಿಸಿದ ಭೂಕಂಪದಿಂದ ಆ ಸ್ಥಳಕ್ಕೂ ಜಗತ್ತಿನ ಇತರ ಕಡೆಗಳಿಗೂ ನಡುವೆ ಸಂಪರ್ಕ ಕಡಿದು ಹೋಯಿತು. ಆದರೆ ಆ ಸ್ಥಳದಲ್ಲಿದ್ದ ಅಮೇರಿಕದ "ಉಪಗ್ರಹ ಸುದ್ದಿ ಸಂಗ್ರಾಹಕ ಟ್ರಕ್" ಗಳು ಪ್ರಪಂಚವ್ಯಾಪ್ಯಂತ ವರದಿಯನ್ನು ಬಿತ್ತರಿಸಲು ಸಹಾಯ ಮಾಡಿದವು.

ಈ ಉಪಗ್ರಹ ಸುದ್ದಿ ಸಂಗ್ರಾಹಕ ಒಂದು ಉನ್ನತ ತಂತ್ರಜ್ಞಾನದ ಕಲ್ಪನೆಯೆಂದು ಬಣ್ಣಿಸಲಾಗಿದೆ. ಇದು ದೂರದ ಸ್ಥಳಗಳಿಂದ ಟೆಲಿವಿಜನ್ ವೀಕ್ಷಕರಿಗೆ ಸುದ್ದಿಗಳನ್ನು ಕ್ಷಣ ಮಾತ್ರದಲ್ಲಿ ಒದಗಿಸುತ್ತದೆ. ಟ್ರಕ್‌ಗಳ ಮೇಲೆ ಸ್ಥಾಪಿಸಲ್ಪಡುವ ಈ 'ಭೂ-ನಿಲಯಗಳು' ಮಡಿಸಬಹುದಾದ ಒಂದು ಟ್ರಾನ್ಸ್‌ಮಿಷನ್ ಡಿಷ್ ಹೊಂದಿರುತ್ತವೆ. ಸುದ್ದಿ ಸಂಭವಿಸಿದ ಸ್ಥಳದಲ್ಲಿ ಈ ಅಂಡಾಕಾರದ ಡಿಷ್‌ಅನ್ನು ತೆರೆದುಕೊಂಡು ಕಕ್ಷೆಯಲ್ಲಿರುವ ಒಂದು ಸಂಪರ್ಕ ಉಪಗ್ರಹಕ್ಕೆ ನೇರವಾಗಿ ಹೊಂದಿಸುವುದರ ಮೂಲಕ ಟೆಲಿವಿಜನ್ ಚಿತ್ರಗಳನ್ನೂ, ವರದಿಗಾರನ ಧ್ವನಿಯನ್ನೂ ಉಪಗ್ರಹಕ್ಕೆ ಕಳುಹಿಸಲಾಗುತ್ತದೆ. ಬಳಿಕ ಆ ಉಪಗ್ರಹವು ಪ್ರೇಷಿಸಲ್ಪಟ್ಟ ಸಂಕೇತಗಳನ್ನು ದೂರ ದೂರದ ಟೆಲಿವಿಜನ್ ನಿಲಯಕ್ಕೆ ಅಥವಾ ಟೆಲಿವಿಜನ್ ಜಾಲಕ್ಕೆ ಬಿತ್ತರಿಸುತ್ತದೆ. ಈ ಉಪಕರಣವು ೪೮೦೦ಕಿಲೋಮೀಟರುಗಳ ವ್ಯಾಪ್ತಿಯನ್ನು ಹೊಂದಬಲ್ಲುದು.

ನಿಲಯಕ್ಕೆ ಚಿತ್ರಗಳನ್ನು ಹಾಗೂ ಧ್ವನಿಗಳನ್ನೂ ರವಾನಿಸುವುದಷ್ಟೇ ಅಲ್ಲದೇ ಆ ನಿಲಯವು ಟ್ರಕ್‌ನೊಂದಿಗೆ ಟೆಲಿಫೋನ್ ಸಂಪರ್ಕವನ್ನು ಕೂಡ ಪಡೆಯಬಹುದು. ಇಯರ್ ಫೋನ್ ಹೊಂದಿದ ವರದಿಗಾರನೊಬ್ಬ ಸಾವಿರಾರು ಕಿಲೋಮೀಟರ್ ದೂರವಿರುವ ಟೆಲಿವಿಜನ್ ನಿಲಯದ ಪ್ರೊಡ್ಯೂಸರ್‌ನಿಂದ ವರದಿಯನ್ನು ಯಾವಾಗ ಆರಂಭಿಸಬಹುದೆಂದು ಕೇಳಲು ಸಾಧ್ಯವಿದೆ. ಎಲ್ಲ ಸಂದೇಶಗಳೂ ಟ್ರಕ್ ಮತ್ತು ನಿಲಯಗಳ ನಡುವೆ ಉಪಗ್ರಹದ ಮೂಲಕ ಹಿಂದಕ್ಕೆ, ಮುಂದಕ್ಕೆ ಬಿತ್ತರವಾಗುತ್ತವೆ.

ಅಮೇರಿಕದ ಸುಮಾರು ೩೫ ಸ್ಥಳೀಯ ಪ್ರಸಾರ ನಿಲಯುಗಳು ಉಪಗ್ರಹ ಸುದ್ದಿ ಸಂಗ್ರಾಹಕ ಟ್ರಕ್‌ಗಳನ್ನು ಹೊಂದಿವೆ. ಇವುಗಳಲ್ಲಿ ಸಾಲ್ಟ್‌ಲೇಕ್ ಸಿಟಿಯಲ್ಲಿರುವ ನಿಲಯವು ೧೮೨೦೦೦೦ ಕಿಲೋಮೀಟರಗಳ ಪ್ರದೇಶಕ್ಕೆ ವರದಿಯನ್ನು ಪ್ರಸಾರ ಮಾಡುತ್ತದೆ. ದೂರದ ಸ್ಥಳವೊಂದರಲ್ಲಿ ಒಂದು ಘಟನೆ ಸಂಭವಿಸಿದರೆ ಈ ನಿಲಯವು ಉಪಗ್ರಹ ಸುದ್ದಿ ಸಂಗ್ರಾಹಕ ಟ್ರಕ್‌ನೊಂದಿಗೆ ವರದಿಗಾರರನ್ನೂ ಛಾಯಾಗ್ರಾಹಕರನ್ನೂ ಹಾಗೂ ಇಂಜನಿಯರುಗಳನ್ನೂ ಅಲ್ಲಿಗೆ ಕಳುಹಿಸುತ್ತದೆ. ಅವರು ಟ್ರಕ್‌ನಲ್ಲಿರುವ ಉಪಕರಣಗಳ ಸಹಾಯದಿಂದ ವೀಡಿಯೋ ಟೇಪ್ ಸಿದ್ಧಪಡಿಸಿ ವರದಿಯನ್ನು ಪ್ರಸಾರನಿಲಯಕ್ಕೆ ಪ್ರೇಷಿಸುತ್ತಾರೆ. ಟ್ರಕ್ ಆ ಸ್ಥಳವನ್ನು ತಲುಪಿದ ೬೦ ರಿಂದ ೯೦ ನಿಮಿಷಗಳೊಳಗಾಗಿ ವರದಿಯನ್ನು ಪ್ರಸಾರ ಮಾಡಬಹುದಾಗಿದೆ. ✡

(ಆಧಾರ : ಯು. ಎಸ್. ಆಯ್. ಎಸ್.)

ಮಾತೆ ಸಾವಿತ್ರಿ

ವೃಷಭೇಂದ್ರಯ್ಯ

ಈಕೆ ಯಾವೊಂದು ಪೀಠದ ಅಧಿಕಾರಿಯಲ್ಲ; ಯಾವುದೇ ಮತದ ಪ್ರಚಾರಕಿಯೂ ಅಲ್ಲ; ತನ್ನನ್ನು ತಾನೇ ಮಾತೆಯೆಂದು ಕರೆದುಕೊಂಡವಳೂ ಅಲ್ಲ. ತಮಗೆ ಆಶ್ರಯ-ಅನ್ನಗಳೆರಡನ್ನೂ ಇತ್ತು ರಕ್ಷಿಸಿದ ಈಕೆಯನ್ನು ಸ್ವಾತಂತ್ರ್ಯ ಹೋರಾಟಗಾರರು "ಮಾತೆ" ಎಂದರು. ಕ್ರಾಂತಿಕಾರಿಗಳಿಗೆ ಆಶ್ರಯವಿತ್ತ ಅಪರಾಧಕ್ಕಾಗಿ ಕಠಿಣ ಕಾರಾಗೃಹವಾಸವನ್ನು ಅನುಭವಿಸಿ ಹೊರಬಂದು ಬೀದಿ ಹೆಣವಾದವಳು ಈ ಮಾತೆ ಸಾವಿತ್ರಿ.

(ಈಗ ಬಂಗ್ಲಾದೇಶದಲ್ಲಿರುವ) ಚಿತ್‌ಗಾಂಗ್ ಜಿಲ್ಲೆಯ ಘಾಲಾಘಾಟ್ ಎಂಬ ಗ್ರಾಮದಲ್ಲಿ ಯಾರೂ ಗಮನಿಸಲಾರದಂಥ ಬಡ ಗುಡಿಸಿಲಲ್ಲಿದ್ದ ಈ ಅಶಿಕ್ತ, ಬಡಕಲು ಹೆಂಗಸಿನಲ್ಲಿ ಆತ್ಮಾಭಿಮಾನ ಮಾತ್ರ ಶ್ರೀಮಂತವಾಗಿತ್ತು. ಬಡತನದ ಬವಣೆ, ಸಂಬಂಧಿಕರ, ನೆರೆಹೊರೆಯವರ ಅಸಡ್ಡೆಯ ವರ್ತನೆಗಳಿಂದ ಸಿಡಿದೇಳುತ್ತಿದ್ದ ಸಾವಿತ್ರಿ ಉಳಿದವರ ದೃಷ್ಟಿಯಲ್ಲಿ 'ಜಗಳಗಂಟಿ' 'ಗರ್ವಿಷ್ಠೆ'. ಅಕ್ಷರಜ್ಞಾನವಿಲ್ಲದಿದ್ದರೂ ಅಪಾರ ಲೋಕಜ್ಞಾನವುಳ್ಳವಳಾಗಿದ್ದ ಸಾವಿತ್ರಿಗೆ ಬಡತನ ಮಾತ್ರ ಚಿರಸಂಗಾತಿಯಾಗಿತ್ತು.

ಆಕಸ್ಮಿಕವೊಂದರಲ್ಲಿ, ಅಲ್ಪವಯಸ್ಸಲ್ಲೇ ಮರಣಿಸಿದ ಈಕೆಯ ಗಂಡ. ಜತೆಗಿದ್ದವರು ಇಬ್ಬರು ಮಕ್ಕಳು: ಒಬ್ಬ ಮಗಳು, ಒಬ್ಬ ಮಗ. ನೆಂಟರಿಷ್ಟರಿಂದ ಈ 'ಜಗಳಗಂಟಿ' ದೂರವಾಗಿ ಒಂಟಿ ಜೀವನ ಸಾಗಿಸಬೇಕಾಗಿ ಬಂದುದಕ್ಕೆ ಬಡತನವೇ ಮೂಲ ಕಾರಣವಾಗಿತ್ತು. "ಈಕೆಯನ್ನು, ಈಕೆಯ ಇಬ್ಬರು ಮಕ್ಕಳನ್ನು ಕೂಡಿಸಿ ಹೊಟ್ಟೆಗೆ ಯಾರು ಹಾಕಬೇಕು?" ಎಂಬುದು ಸಂಬಂಧಿಕರ ಮೂದಲಿಕೆ.

ತನ್ನ ಪಾಡಿಗೆ ತಾನು ಮಕ್ಕಳನ್ನು ಕಷ್ಟಪಟ್ಟು ಪೋಷಿಸಿಕೊಂಡಿದ್ದ ಸಾವಿತ್ರಿಯ ಗುಡಿಸಿಲು ಊರ ಹೊರಗೆ ಇದ್ದುದೊಂದು ಅನುಕೂಲವಾಗಿ ಪರಿಣಮಿಸಿತು ಕ್ರಾಂತಿಕಾರಿಗಳಿಗೆ. ಈ ಬಡ ವಿಧವೆಯನ್ನು ಕ್ರಾಂತಿಕಾರಿಗಳು ಮನವೊಲಿಸಿ ಆಕೆಯ ಗುಡಿಸಿಲನ್ನು ಭೂಗತರ ನೆಲೆಯನ್ನಾಗಿ ಮಾಡಿಕೊಂಡರು. ಒಂದು ಹೊತ್ತಿನ ತುತ್ತಿಗೂ ಕಣ್ಣು ಬಿಡುತ್ತಿದ್ದ ಆ ತಾಯಿ-ಮಕ್ಕಳಿಗೆ ಇದರಿಂದ ಹೊಟ್ಟೆಯ ಸಮಸ್ಯೆಗೊಂದು ಪರಿಹಾರ ಸಿಕ್ಕಂತಾಯಿತು.

ಬಡ ವಿಧವೆಯ ಈ ಬಡ ಗುಡಿಸಿಲಿಗೆ ಬೇರೆ ಯಾರೂ ಬರುತ್ತಿರಲಿಲ್ಲ. ಅಸಹಾಯಕಳಾಗಿದ್ದ ಸಾವಿತ್ರಿಯ ಮೇಲೆ ಪೋಲೀಸರ ಸಂಶಯದ ಕಣ್ಣು ಬೀಳಲೂ ಸಾಧ್ಯವಿರಲಿಲ್ಲ. ಹೀಗಾಗಿ, ಬ್ರಿಟಿಶರಿಗೆ ತಲೆನೋವಾಗಿದ್ದ ಚಿತ್‌ಗಾಂಗಿನ ಇಂಡಿಯನ್ ರಿಪಬ್ಲಿಕನ್ ಆರ್ಮಿಯ ನೇತಾರರಿಗೆ

(ಸಾಧಾರ)

ಈ ಗುಡಿಸಿಲು ಸುರಕ್ಷಿತ ಸ್ಥಾನವಾಯಿತಲ್ಲದೆ ಅವರ ಗುಪ್ತ ಚಟುವಟಿಕೆಗಳ ಕೇಂದ್ರವಾಯಿತು.

ತನ್ನ ಜೀವಕ್ಕಿಂತಲೂ ಹೆಚ್ಚಾಗಿ ಈ ಕ್ರಾಂತಿಕಾರಿಗಳನ್ನು ಪ್ರೀತಿಸತೊಡಗಿದ ಸಾವಿತ್ರಿಗೆ ಬರಬರುತ್ತ ಮುಂಗೋಪಿತನ ಕಡಿಮೆಯಾಯಿತು. ತನ್ನ ಮಕ್ಕಳಿಗಿಂತ ಸ್ವಲ್ಪ ಹಿರಿಯರಾಗಿದ್ದ ತರುಣ ಕ್ರಾಂತಿಕಾರಿಗಳ ರಕ್ಷಣೆಗಾಗಿ, ಹಸಿವು ಹಿಂಗಿಸುವುದಕ್ಕಾಗಿ, ಗೌಪ್ಯವನ್ನು ಕಾದಿಡುವುದಕ್ಕಾಗಿ ಎಂಥ ಪ್ರಸಂಗವನ್ನೆದುರಿಸಲೂ ಆಕೆ ಸಿದ್ಧಳಾದಳು. ಓದು-ಬರಹ ಬಾರದ ಆಕೆಗೆ ರಾಜಕಾರಣ-ಕ್ರಾಂತಿ, ಹಿಂಸೆ – ಅಹಿಂಸೆಗಳೆಂದರೇನು ಎಂಬುದು ತಿಳಿಯುತ್ತಿರಲಿಲ್ಲವಾದರೂ ತನ್ನ ದೇಶವನ್ನು ಪರಕೀಯರು ಆಳುತ್ತಿದ್ದಾರೆ, ಅವರ ಕಪಿಮುಷ್ಟಿಯಿಂದ ದೇಶ ಮುಕ್ತವಾಗಬೇಕು, ಅದಕ್ಕಾಗಿ ಈ ಬಿಸಿ ರಕ್ತದ ತರುಣರು ತಮ್ಮ ಜೀವವನ್ನು ಪಣಕ್ಕೊಡ್ಡಿದ್ದಾರೆಂಬುದು ಚೆನ್ನಾಗಿ ಗೊತ್ತಿತ್ತು. ಸ್ವದೇಶದ ಬಗೆಗಿನ ಈ ಕಳಕಳಿಯೆ ಆಕೆಯನ್ನು ಎಂಥ ತ್ಯಾಗಕ್ಕೂ ಸಿದ್ಧಳನ್ನಾಗಿಸಿತು.

೧೯೩೦ ರ ಏಪ್ರಿಲ್ ೧೮. ಕ್ರಾಂತಿಕಾರಿಗಳು ಚಿತ್‌ಗಾಂಗಿನ ದಂಡು ಪ್ರದೇಶದ ಮೇಲೆ ದಾಳಿ ಮಾಡಿದರು. ಇಂಡಿಯನ್ ರಿಪಬ್ಲಿಕನ್ ಆರ್ಮಿಯ ಅಧ್ಯಕ್ಷನಾಗಿದ್ದ ಸೂರ್ಯಸೇನನಿಗೆ ಹಳೆಯ ಕ್ರಾಂತಿಕಾರಿಗಳ ಸ್ಥೈರ್ಯರಹಿತ ನೀತಿಯಿಂದಾಗಿ ನಿರಾಸೆಯಾಯಿತು. ಹೀಗಾಗಿ ಒಂದು ವಾರದ ಮಟ್ಟಿಗಾದರೂ, ತನ್ನ ಪ್ರಾಣವನ್ನು ಅರ್ಪಿಸಿಯಾದರೂ, ಚಿತ್‌ಗಾಂಗನ್ನು ವಿದೇಶೀಯರ ಆಡಳಿತದಿಂದ ಮುಕ್ತವಾಗಿಸಿ ದೇಶದ ಇತರೆಡೆಯ ಕ್ರಾಂತಿಕಾರಿಗಳಿಗೊಂದು ಉದಾಹರಣೆಯಾಗಿ ನಿಲ್ಲಬಯಸಿದ. ಅವಶ್ಯವೆನಿಸಿದರೆ ಈ ದಾಳಿಯಲ್ಲಿ ತನ್ನ ಸಂಗಡಿಗರು ಪ್ರಾಣಾರ್ಪಣೆಯನ್ನು ಮಾಡಲೂ ಹಿಂದೆ ಮುಂದೆ ನೋಡಬಾರದೆಂದು ಆತ ಸಾರಿದ.

ತಮ್ಮ ಬಲಿದಾನದಿಂದ ದೇಶದ ಇತರೆಡೆಯ ಸಾವಿರಾರು ತರುಣರಲ್ಲಿ ದೇಶಭಕ್ತಿ-ಪ್ರೇಮಗಳು ಜಾಗೃತಗೊಂಡು, ದಾಸ್ಯ-ವಿಮೋಚನೆಯೆ ಅವರ ಏಕೈಕ ಗುರಿಯಾಗಿ, ಅವರೆಲ್ಲರ ಒಟ್ಟು ಪ್ರಯತ್ನದಿಂದ ಭಾರತಕ್ಕೆ ಬಿಳಿಯರಿಂದ ಮುಕ್ತಿ ದೊರೆಯುವುದು ಖಂಡಿತ ಎಂದು ಇಂಡಿಯನ್ ರಿಪಬ್ಲಿಕನ್ ಆರ್ಮಿಯ ಯುವ ಕ್ರಾಂತಿಕಾರಿಗಳು ಬಲವಾಗಿ ನಂಬಿದ್ದರು. ಚಿತ್‌ಗಾಂಗಿನ ಮೇಲೆ ನಡೆದ ದಾಳಿ ಯಶಸ್ವಿಯಾಯಿತು. ಶಸ್ತ್ರಾಗಾರವನ್ನು ಕ್ರಾಂತಿಕಾರಿಗಳು ಸುಟ್ಟು ಬೂದಿಮಾಡಿದರಲ್ಲದೆ ತಂತಿ ಕಚೇರಿಯನ್ನು ಕೊಳ್ಳೆಹೊಡೆದರು.

ಇದೇ ವೇಳೆಗೆ ಕ್ರಾಂತಿಕಾರಿಗಳ ಇನ್ನೊಂದು ಗುಂಪು 'ಚಿತ್‌ಗಾಂಗಿನ ರೈಲು' ಹಳಿಗಳನ್ನು ಕಿತ್ತೊಗೆಯಿತು. ಚಿತ್‌ಗಾಂಗಿನ ಕಲೆಕ್ಟರನ ಮೇಲೆ ಗುಂಡು ಹಾರಿಸಲಾಯಿತಾದರೂ ಆತ ಪಾರಾಗಿ ಹೋಗಿ ಹಡಗೊಂದರಲ್ಲಿ ತಲೆಮರೆಸಿಕೊಂಡು ಅಲ್ಲಿಂದಲೇ ಈ ವಿದ್ಯಮಾನಗಳ ಬಗ್ಗೆ ಮೇಲಧಿಕಾರಿಗಳಿಗೆ ವೈರ್‌ಲೆಸ್ ಮೂಲಕ ವರದಿ ಮಾಡಿದ. ಕ್ರಾಂತಿಕಾರಿಗಳು ಕಲ್ಪಿಸಲೂ ಸಾಧ್ಯವಾಗದ ರೀತಿಯಲ್ಲಿ ಹಠಾತ್ತನೆ ಆಂಗ್ಲ ಸೈನ್ಯ ಚಿತ್‌ಗಾಂಗನ್ನು ಸುತ್ತುವರಿಯಿತು. ಕ್ರಾಂತಿಕಾರಿಗಳು ಮತ್ತು ಆಂಗ್ಲ ಸೈನ್ಯಗಳ ನಡುವೆ ಜಲಾಲಾಬಾದ ಪರ್ವತಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಎಡೆಬಿಡದ ಹೋರಾಟ ನಡೆದು ಇಬ್ಬದಿಯಲ್ಲೂ ಸಾಕಷ್ಟು ಸಾವು–ನೋವುಗಳಲ್ಲದೇ ಇತರ ಹಾನಿಯೂ ಉಂಟಾಯಿತು.

ಕ್ರಾಂತಿಕಾರಿಗಳು ಅಲ್ಪಸಂಖ್ಯೆಯಲ್ಲಿದ್ದರು. ಆಂಗ್ಲ ಸೈನ್ಯ ಅಪಾರವಾಗಿತ್ತು. ಕ್ರಾಂತಿಕಾರಿಗಳ ಬಳಿ ಕೇವಲ ಬಂದೂಕುಗಳಿದ್ದವು–ಅವರು ಸರಕಾರಿ ಶಸ್ತ್ರಾಗಾರದಿಂದ ಲೂಟಿ ಮಾಡಿದ ಬಂದೂಕುಗಳು. ಆದರೆ ಆಂಗ್ಲ ಸೈನ್ಯ ಸುಸಜ್ಜಿತವಾಗಿತ್ತು. ಅದರ ಹತ್ತಿರ ಮಶಿನ್‌ಗನ್ನುಗಳಿದ್ದವು, ತೋಪುಗಳೂ ಇದ್ದವು. ಇಷ್ಟಿದ್ದರೂ ಕೆಲವು ಕ್ರಾಂತಿಕಾರಿಗಳು ತಲೆ ತಪ್ಪಿಸಿಕೊಂಡು ಹೋಗಿ ಸಮೀಪದ ಹಳ್ಳಿಗಳಲ್ಲಿ ಅವಿತಿಟ್ಟುಕೊಂಡರು. ಅವಕಾಶ ಸಿಕ್ಕಾಗಲೆಲ್ಲ ಈ ಜನ ಬ್ರಿಟಿಶ್ ಸೈನ್ಯವನ್ನು ಕಂಗೆಡಿಸುತ್ತಿದ್ದರು. ಇದು

ಅವರ ಕೂಟಯೋಧ ಯುದ್ಧನೀತಿಯು ಮೊದಲ ಹೆಜ್ಜೆಯಾಯಿತು.

ಈ ಘಟನೆಗಳ ನಂತರ ಚಿತ್‌ಗಾಂಗ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಭಯದ ವಾತಾವರಣ ಉಂಟಾಯಿತು. ಬ್ರಿಟಿಶ್ ಸೈನ್ಯದ ತುಕಡಿಗಳು ಹಳ್ಳಿಗಳನ್ನೆಲ್ಲ ಜಾಲಾಡಿ ಅಡಗಿದ್ದ ಕ್ರಾಂತಿಕಾರಿಗಳನ್ನು ಬಂಧಿಸಲೆತ್ನಿಸಿದವು. ಕೆಲವೊಮ್ಮೆ ಕ್ರಾಂತಿಕಾರಿಗಳೊಂದಿಗೆ ಚಕಮಕಿಯೂ ನಡೆಯುತ್ತಿತ್ತು.

ಇಷ್ಟೆಲ್ಲ ಆದರೂ ಮಾತೆ ಸಾವಿತ್ರಿಯ ಗುಡಿಸಿಲು ಕ್ರಾಂತಿಕಾರಿಗಳ ಸುರಕ್ಷಿತ ಕೇಂದ್ರ ಸ್ಥಾನವಾಗಿಯೇ ಇತ್ತು. ಅದರತ್ತ ಆಂಗ್ಲರ ಕಣ್ಣು ಬಿದ್ದಿರಲಿಲ್ಲ. ಆಕೆಯಲ್ಲಿ ಅವರಿಗೆಲ್ಲ ಅಪಾರವಾದ ನಂಬಿಕೆಯಿತ್ತು. ಸರಕಾರ ಈ ಇಂಡಿಯನ್ ರಿಪಬ್ಲಿಕನ್ ಆರ್ಮಿಯ ಮುಖ್ಯಸ್ಥ ಸೂರ್ಯಸೇನ್ ಮತ್ತು ಇತರ ಪ್ರಮುಖ ಕ್ರಾಂತಿಕಾರಿಗಳ ತಲೆಯನ್ನು ತಂದೊಪ್ಪಿಸಿದವರಿಗೆ ಸಾವಿರಗಟ್ಟಲೇ ಇನಾಮು ಕೊಡುವುದಾಗಿ ಸಾರಿತ್ತು. ಮನಸ್ಸು ಮಾಡಿದ್ದರೆ ಸಾವಿತ್ರಿ ಅಂಥ ಹಲವು ಸಾವಿರದ ಇನಾಮುಗಳನ್ನು ಪಡೆಯಬಹುದಾಗಿತ್ತು. ಆದರೆ 'ತನ್ನ ಮಕ್ಕಳ ತಲೆ'ಗಳನ್ನು ಯಾವ ತಾಯಿಯಾದರೂ ಕಡಿಯಲು ಸಾಧ್ಯವೆ?

ಆದರೆ ಸಾವಿರದ ಇನಾಮು ಸಾವಿರಾರು ಜನರ ಬಾಯಲ್ಲಿ ನೀರು ತರಿಸಿತು. ಪೋಲೀಸರು-ಸೈನಿಕರಂತೂ ಸರಿಯೆ, ಸರಕಾರದ ಆಜ್ಞಾನುವರ್ತಿಗಳಾದ 'ಜೀ ಹುಜೂರ್'ಗಳೂ ಕ್ರಾಂತಿಕಾರಿಗಳ ಹೆಜ್ಜೆಯ ಗುರುತುಗಳನ್ನು ಪತ್ತೆಹಚ್ಚಲು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹೊರಟರು.

ಇತ್ತ, ತಮ್ಮ ಜೀವದ ಹಂಗನ್ನೇ ತೊರೆದ ಕ್ರಾಂತಿಕಾರಿಗಳು ಜೀವವುಳಿಸಿಕೊಳ್ಳುವುದು ಮುಖ್ಯವೆಂದೆನಿಸದೆ ತಮ್ಮ ಚಟುವಟಿಕೆಗಳಿಗೆ ಇನ್ನೂ ಚುರುಕು ತಂದುಕೊಂಡರು. ತಮ್ಮ ಕಾರ್ಯಾಚರಣೆಯಿಂದ ಜನರಲ್ಲಿ ಧೈರ್ಯ-ಸ್ಥೈರ್ಯ-ಉತ್ಸಾಹಗಳನ್ನು ತರುವುದೇ ಅವರ ಉದ್ದೇಶವಾಗಿತ್ತು. ಕೆಲ ದಿನಗಳ ಮಟ್ಟಿಗಾದರೂ ಬಂಗಾಲದಿಂದ ದೂರ ಹೋಗಿರೆಂಬ ತಮ್ಮ ಸಂಗಡಿಗರ ಸಲಹೆಯನ್ನು ಸೂರ್ಯಸೇನ್ ಕಿವಿಗೆ ಹಾಕಿಕೊಳ್ಳಲಿಲ್ಲ.

ಇದಲ್ಲದೆ, ಪಕ್ಷದ ಇನ್ನೊಬ್ಬ ಮುಖ್ಯ ವ್ಯಕ್ತಿ ಅನಂತಸಿಂಗರು ಪೋಲೀಸರಿಗೆ ಶರಣಾಗಬೇಕೆಂದೂ, ಹೀಗಾಗಿ ಅವರು ಸೆರೆಮನೆಗೆ ತಳ್ಳಲ್ಪಡುವುದರಿಂದ ಜೇಲಿನೊಳಗಿನ ಕ್ರಾಂತಿಕಾರಿಗಳನ್ನು ಸಂಘಟಿಸುವುದು ಮತ್ತು ಪೋಲಿಸರು ಅವರಲ್ಲಿಯ ಕೆಲವರನ್ನು 'ತಮ್ಮವ'ರನ್ನಾಗಿ ಮಾಡಿಕೊಳ್ಳುವ ಪ್ರಯತ್ನಕ್ಕೆ ತಣ್ಣೀರೆರೆಚಬಹುದೆಂದು ಕೆಲವು ಕ್ರಾಂತಿಕಾರಿಗಳು ಸಲಹೆಯಿತ್ತರು. ಇದಕ್ಕೊಪ್ಪಿದ ಅನಂತಸಿಂಗರು ಪೋಲೀಸರಿಗೊಂದು ಪತ್ರ ಬರೆದು, ತಾವು ಶರಣಾಗಬಯಸಿದುದಾಗಿಯೂ ತಮ್ಮನ್ನು ನಿರ್ದಿಷ್ಟ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ಬಂಧಿಸಬಹುದೆಂದೂ ತಿಳಿಸಿದರು. "ನಾನು ಶರಣಾಗಬಯಸಿದ್ದು ಕೇವಲ ವೈಯಕ್ತಿಕ ಕಾರಣಗಳಿಂದ. ನನಗೆಲ್ಲೂ ತಲೆ ಮರೆಸಿಕೊಳ್ಳಲು ನೆಲೆ ಸಿಗುತ್ತಿಲ್ಲ ಅಥವಾ ನಾನು ಹಿಂದೆ ಮಾಡಿದ್ದಕ್ಕೆಲ್ಲ ಪಶ್ಚಾತ್ತಾಪಪಡುತ್ತಿದ್ದೇನೆ ಎಂದೇನೂ ಭಾವಿಸುವ ಕಾರಣವಿಲ್ಲ. ನನಗೆ ಆಶ್ರಯಸ್ಥಾನಗಳಿಗೇನೂ ಕೊರತೆಯಿಲ್ಲ; ಬಂಗಾಲದಲ್ಲಾಗಲಿ, ಭಾರತದ ಯಾವುದೇ ಮೂಲೆಯಲ್ಲಾಗಲಿ ಅಲ್ಲದೆ ವಿದೇಶಗಳಲ್ಲಾಗಲಿ ನನಗೆ ಈ 'ಕಾರಣ'ಕ್ಕಾಗಿ ಆಶ್ರಯವಿದ್ದೇ ಇದೆ" ಎಂದು ಆ ಪತ್ರದಲ್ಲಿ ಅವರು ಸ್ಪಷ್ಟಪಡಿಸಿದ್ದರು.

ಅನಂತಸಿಂಗರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ಪೋಲೀಸರ ಹಿಂಸೆ ತಾಳಲಾರದೆ ಕೆಲವು ಮಾಹಿತಿಗಳನ್ನು ನೀಡಿದ್ದ ಕೆಲವರು ಕ್ರಾಂತಿಕಾರಿಗಳು ಅನಂತಸಿಂಗರನ್ನು ಭೆಟ್ಟಿಯಾಗಿ ತಾವು ಹಾಗೆ ಮಾಡಿದ್ದಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸಿದರು. ಹೀಗಾಗಿ ಮುಂದೆ ಯಾವೊಬ್ಬ ಕ್ರಾಂತಿಕಾರಿಯನ್ನೂ ಚಿತ್‌ಗಾಂಗ್ ಶಸ್ತ್ರಾಗಾರ ಪ್ರಕರಣದಲ್ಲಿ ತಮ್ಮವನನ್ನಾಗಿ ಮಾಡಿಕೊಳ್ಳಲು ಪೋಲೀಸರಿಗೆ ಸಾಧ್ಯವಾಗಲಿಲ್ಲ.

ಮಾತೆ ಸಾವಿತ್ರಿಯಂತೂ ಕ್ರಾಂತಿಕಾರಿಗಳ

ಉಸ್ತುವಾರಿಗೆ ಹಗಲಿರುಳೂ ಶ್ರಮಿಸುತ್ತಿದ್ದಳು. ಒಮ್ಮೊಮ್ಮೆ ಮೈಲುಗಟ್ಟಲೆ ನಡೆದು ಹೋಗಿ ಗುಪ್ತಚರರ ಬಗ್ಗೆ ತಿಳಿದುಕೊಂಡು ಬರುತ್ತಿದ್ದಳು. ಈ ಕೆಲಸದಲ್ಲಿ ಆಕೆ ತುಂಬ ಮುತುವರ್ಜಿ ವಹಿಸುತ್ತಿದ್ದಳು.

ಅದು ಹೇಗೋ ಪೋಲೀಸರಿಗೆ ಸಾವಿತ್ರಿಯ ಗುಡಿಸಿಲಿನ ವಿಷಯ ಗೊತ್ತಾಯಿತು. ಕ್ಯಾಪ್ಟನ್ ಕ್ಯಾಮರೂನನ ನೇತೃತ್ವದಲ್ಲಿ ಸೈನ್ಯ ಪಡೆಯೊಂದು ಕೂಡಲೇ ಗುಡಿಸಲನ್ನು ಮುತ್ತಿತು. ಆಗ ನಾಲ್ವರು ಕ್ರಾಂತಿಕಾರಿಗಳು—ಸೂರ್ಯಸೇನ, ಪ್ರೀತಿ ವಾಹ್ದೆದಾರ, ಅಪೂರ್ವ ಸೇನ ಮತ್ತು ನಿರ್ಮಲ ಸೇನ ಗುಡಿಸಿಲಲ್ಲಿಯೇ ಇದ್ದರು. ಈ ಹೊತ್ತಿಗೆ ಸೂರ್ಯಸೇನ ತನ್ನ ಸಂಗಾತಿಗಳನ್ನು ಅವರು ಸೈನ್ಯದ ಮೇಲೆ ಗುಂಡು ಹಾರಿಸಲು ಅನುವಾಗುವಂಥ ಜಾಗ ಸೂಚಿಸಿ ಅಲ್ಲಿಗೆ ಕಳುಹಿಸಿಬಿಟ್ಟಿದ್ದರು. ಆಂಗ್ಲ ಪಡೆಗೆ ಅಚ್ಚರಿ ತರುವ ರೀತಿಯಲ್ಲಿ ಗುಂಡಿನ ಸುರಿಮಳೆಯಾಗತೊಡಗಿತು. ಅದಕ್ಕೆ ಇತ್ತ ಕಡೆಯ ಬಂದೂಕುಗಳೂ ಉತ್ತರವಿತ್ತವು. ಅರ್ಧ ಗಂಟೆಗೆ ನಡೆದ ಈ ಚಕಮಕಿಯಲ್ಲಿ ಕ್ರಾಂತಿಕಾರಿಗಳದೇ ಮೇಲುಗೈಯಾಯಿತು. ಅವರು ಕ್ಯಾಪ್ಟನ್ ಕ್ಯಾಮರೂನನನ್ನು ನೆಲಕ್ಕುರುಳಿಸುವಲ್ಲಿ ಯಶಸ್ವಿಯಾಗಿದ್ದರಾದರೂ ಅಪೂರ್ವ ಸೇನ ಮತ್ತು ನಿರ್ಮಲ ಸೇನರನ್ನು ಕಳೆದುಕೊಳ್ಳಬೇಕಾಯಿತು.

ಆದರೂ ಗುಡಿಸಿಲನ್ನು ತಮ್ಮ ಹದ್ದುಗಣ್ಣಿಂದ ಕಾಯುತ್ತಿದ್ದ ಆಂಗ್ಲ ಸೈನಿಕರಿಗೆ ಅಲ್ಲಿಂದ ಸೂರ್ಯಸೇನರು ಪ್ರೀತಿ ವಾಹ್ದೆದಾರಳೊಂದಿಗೆ ಪಾರಾಗಿ ಹೋದದ್ದೂ ಗೊತ್ತಾಗಲಿಲ್ಲ. ಮುಂದೆ ಕೆಲವು ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ತೊಡಗಿದ್ದ ಪ್ರೀತಿ ೧೯೩೨ರ ಡಿಸೆಂಬರ್ ೨೪ರಂದು ಆತ್ಮಹತ್ಯೆ ಮಾಡಿಕೊಂಡಳು. ಸೂರ್ಯ ಸೇನರನ್ನು ಪೋಲೀಸರು ಬಂಧಿಸಿದರು. ೧೯೩೪ರ ಜನವರಿ ೧೩ರಂದು ಅವರನ್ನು ಗಲ್ಲಿಗೇರಿಸಲಾಯಿತು.

ಆದರೆ, ಸೂರ್ಯಸೇನರು ಪರಾರಿಯಾದದ್ದು ಅವರ ಪಕ್ಷಕ್ಕೆ ಒಂದು ರೀತಿಯ ವರದಾನವಾಗಿ ಪರಿಣಮಿಸಿತು.

ಸಾವಿತ್ರಿಯ ಗುಡಿಸಿಲನ್ನು ಮುತ್ತಿದಾಗ ತಮ್ಮನ್ನು ಅಂಜಿಸಿದ ಕ್ರಾಂತಿಕಾರಿಗಳ ಗುಂಡಿನ ದಾಳಿ ನಿಂತ ಮೇಲೆ, ಸೈನಿಕರು ಗುಡಿಸಿಲನ್ನು ಪ್ರವೇಶಿಸಿ ಸೂರ್ಯಸೇನನಿಗಾಗಿ ಹುಡುಕಿದರು. ಆದರೆ ಅವರು ಅಲ್ಲಿರಲೇಯಿಲ್ಲ. ಸೂರ್ಯಸೇನ ಅಲ್ಲಿಯೇ ಇದ್ದರೆಂದು ಸೈನಿಕರಿಗೆ ಸೂಚನೆ ಬಂದಿತ್ತು. ಸಾವಿತ್ರಿಯನ್ನು ಈ ಕುರಿತು ವಿಚಾರಿಸಲಾಗಿ ಆಕೆ ಅಲ್ಲಿ ಸೂರ್ಯಸೇನರ ಇರುವಿಕೆಯನ್ನು ಅಲ್ಲಗಳೆದಳಲ್ಲದೆ ಸುಮ್ಮಸುಮ್ಮನೆ ತೊಂದರೆ ಕೊಡುತ್ತಿದ್ದೀರೆಂದು ಸೈನಿಕರನ್ನು ಬೈದಳು. ಇದರಿಂದ ಕುಪಿತರಾದ ಸೈನಿಕರು ಸಾವಿತ್ರಿ, ಆಕೆಯ ವಿವಾಹಿತ ಮಗಳು ಮತ್ತು ಮಗ ರಾಮಕೃಷ್ಣರನ್ನು ಬಂಧಿಸಿದರು.

ಸಾವಿತ್ರಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡ ಪೋಲೀಸರು ಆಕೆಗೆ ನಾನಾ ರೀತಿಯ ಚಿತ್ರಹಿಂಸೆ ನೀಡತೊಡಗಿದರು. ಕ್ರಾಂತಿಕಾರಿಗಳ ರಹಸ್ಯಗಳನ್ನೆಲ್ಲ ಹೇಳಿಬಿಡುವಂತೆ ಆಕೆಯ ಮನವೊಲಿಸಲೆತ್ನಿಸಿದರು. ಈ ಎಲ್ಲ ಮಾಹಿತಿಗಳನ್ನು ತಮಗೆ ನೀಡಿದರೆ ಸಾವಿತ್ರಿ ಮುಂದೆ ಸುಖೀಜೀವನವನ್ನು ನಡೆಸಬಹುದೆಂದು ಪೋಲೀಸರು ಆಕೆಗೆ ಆಸೆ ತೋರಿಸಿದರು. ಆದರೆ ಸಾವಿತ್ರಿ ಬಾಯಿ ಬಿಡಲಿಲ್ಲ. ಪೋಲೀಸರೀಗ ಆಕೆಯ ಮಗ ರಾಮಕೃಷ್ಣನನ್ನು ತಾಯಿಯೆದುರೆ ಹಿಂಸಿಸಿದರು. ಮಗನೆದುರಿಗೆ ತಾಯಿಯನ್ನು ಪೀಡಿಸಿದರು. ಮಗಳಿಗೂ ಇದೇ ಗತಿಯಾದಾಗ, ತೊಂದರೆಯನ್ನು ಅನುಭವಿಸಲಾಗದೆ ಆಕೆ ಪೋಲೀಸರಿಗೆ ಅನುಕೂಲವಾಗಿ ವರ್ತಿಸತೊಡಗಿದಳು. ತನ್ನ ತಾಯಿ ಹಾಗೂ ತಮ್ಮನ ಮೇಲೆ ಸಾಕಷ್ಟು ಆಪಾದನೆ ಮಾಡಿದಳು. ಆದರೆ ಇದಕ್ಕೆ ಅವರಿಬ್ಬರೂ ಜಗ್ಗಲಿಲ್ಲ.

ಮಗಳನ್ನು ತುಂಬ ಪ್ರೀತಿಸುತ್ತಿದ್ದಳು ಸಾವಿತ್ರಿ. ಆದರೆ ಈಗ ದ್ರೋಹವೆಸಗುತ್ತಿರುವ ಮಗಳನ್ನಾಕೆ ನೋಡಲೂ ಮನಸ್ಸು ಮಾಡಲಿಲ್ಲ. "ನನಗೆಲ್ಲಿಯ ಮಗಳು? ಇರುವವ ಮಗ ಒಬ್ಬನೆ"

ಎನ್ನುತ್ತಿದ್ದಳು. ನ್ಯಾಯಾಲಯದಲ್ಲಿ ತಾಯಿ-ಮಗನ ವಿಚಾರಣೆ ನಡೆದು ಕೊನೆಗೆ ಅವರಿಬ್ಬರಿಗೂ ನಾಲ್ಕು ವರ್ಷಗಳ ಕಠಿಣ ಕಾರಾಗೃಹದ ಶಿಕ್ಷೆಯಾಯಿತು. "ನನ್ನ ದೇಶದ ಸ್ವಾತಂತ್ರ್ಯಕ್ಕಾಗಿ ನಾನು ಜೇಲಿನಲ್ಲಿ ಪಡುವ ಕಷ್ಟಕ್ಕಿಂತ ಹೆಚ್ಚಿನ ಸುಖ ಇನ್ನಾವುದಿದೆ?" ಎಂದಳಾಕೆ.

ಆದರೆ ಕಷ್ಟಗಳು ಇನ್ನೂ ಹೆಚ್ಚಾದುವು. ಜೇಲಿನ ಅಧಿಕಾರಿಗಳಿಗೂ ಸಾವಿತ್ರಿಗೂ ತಂಟೆಯಾಗದ ದಿನಗಳೇ ಇರಲಿಲ್ಲ. ರಾಜಕೀಯ ಕೈದಿಯಾಗಿದ್ದ ಆಕೆ ತನ್ನ ಆತ್ಮಗೌರವಕ್ಕೆ ಪೆಟ್ಟು ಬೀಳುವಂಥ ಸರಕಾರಿ ಆಜ್ಞೆಗಳನ್ನೆಲ್ಲ ಉಲ್ಲಂಘಿಸತೊಡಗಿದಳು. ಯಾವುದೇ ಕ್ರಾಂತಿಕಾರಿ ತರುಣಿ ಜೇಲಿಗೆ ಬರಲಿ, ಆಕೆ ಸಾವಿತ್ರಿಯ ನುಡಿಗಳಿಂದ ಹೊಸ ಧೈರ್ಯ ಪಡೆದು ಎಂಥ ದುರ್ಧರ ಪ್ರಸಂಗವನ್ನೆದುರಿಸಲೂ ಸಿದ್ಧಳಾಗುತ್ತಿದ್ದಳು. ಇದರಿಂದ ಜೇಲು ಅಧಿಕಾರಿಗಳಿಗೆ ಕಿರಿಕಿರಿಯುಂಟಾಗುತ್ತಿತ್ತು.

ಒಂದೇ ಜೇಲಿನಲ್ಲಿದ್ದರೂ ತಾಯಿ-ಮಗನಿಗೆ ಒಬ್ಬರನ್ನೊಬ್ಬರು ಭೆಟ್ಟಿಯಾಗಲು ಅಧಿಕಾರಿಗಳು ಬಿಡುತ್ತಿರಲಿಲ್ಲ. ಮಗನನ್ನು ಕಾಣಬಯಸಿದುದಾಗಿ ಹೇಳಿದಾಗಲೆಲ್ಲ ಸಾವಿತ್ರಿಗೆ ಏನಾದರೊಂದು ಕಾರಣ ಹೇಳಿ ಭೇಟಿ ನಿರಾಕರಿಸಲ್ಪಡುತ್ತಿತ್ತು.

ಆದರೆ ಒಂದು ದಿನ ಸಾವಿತ್ರಿ ಕೇಳಿರದಿದ್ದರೂ ಆಕೆಯನ್ನು ಮಗನ ಭೇಟಿಗೆಂದು ಕರೆದೊಯ್ದರು ಅಧಿಕಾರಿಗಳು. ಆಶ್ಚರ್ಯ-ಸಂಶಯಗಳಿಂದಲೇ ಅವರೊಂದಿಗೆ ಹೋದ ಸಾವಿತ್ರಿ ಅಳುತ್ತ ತನ್ನ ಬರಾಕಿಗೆ ವಾಪಸ್ಸಾದಳು. ಅಲ್ಲಿ ತನ್ನ ಬರಾಕಿನಲ್ಲಿ ರಾಮಕೃಷ್ಣ ಮರಣಶಯ್ಯೆಯಲ್ಲಿ ಮಲಗಿದ್ದ. ಆ ಸ್ಥಿತಿಗೆ ಆತನನ್ನು ತಂದದ್ದು ಅಧಿಕಾರಿಗಳ ಹಿಂಸೆ. ರಾಮಕೃಷ್ಣ ಕ್ಷಯದಿಂದ ಬಳಲುತ್ತಿದ್ದರೂ ಆತನ ಶುಶ್ರೂಷೆಗೇನೂ ಏರ್ಪಾಡಾಗಿರಲಿಲ್ಲ. ತಾಯಿಗಾದರೂ ಈ ಬಗ್ಗೆ ಅವರು ಹೇಳಬಾರದೆ? ಎಂಥಹುದು ಸೇಡು ತೀರಿಸಿಕೊಳ್ಳುವ ಈ ರೀತಿ...

ಪ್ರತೀಕಾರದ ಈ ಕಥೆ ಇಲ್ಲಿಗೇ ಮುಗಿಯಲಿಲ್ಲ. ಜಾಮೀನಿನ ಮೇಲೆ ಮಾತ್ರ ಆಕೆಯ ಮಗನನ್ನು ಚಿಕಿತ್ಸೆಗಾಗಿ ಬಿಡುಗಡೆಮಾಡಬಹುದೆಂದು ಜೇಲು ಅಧಿಕಾರಿಗಳು ಸಾವಿತ್ರಿಗೆ ಹೇಳಿದರು. ತನ್ನ ಸೋದರನಿಗೆ ಈ ಕುರಿತು ಒಂದು ತಾರನ್ನು ಕಳಿಸಬೇಕೆಂದುಕೊಂಡಳಾದರೂ ಆಕೆಯ ಬಳಿ ಇದ್ದದ್ದು ಎಂಟಾಣೆ ಮಾತ್ರ. ತಾರು ಕಳಿಸಲು ಕನಿಷ್ಟ ಹನ್ನೆರಡಾಣೆಯಾದರೂ ಬೇಕು. ಉಳಿದ ಕೈದಿಗಳನ್ನು ವಿಚಾರಿಸಿದಳು. ಅವರೆಲ್ಲ ತಮ್ಮ ಹಣವನ್ನು ಜೇಲು ಅಧಿಕಾರಿಗಳ ಬಳಿ ಠೇವು ಇಟ್ಟಿರುವುದಾಗಿ ಹೇಳಿದರು. ಸಾವಿತ್ರಿಗೆ ಸಹಾಯ ಮಾಡಬೇಕೆಂಬ ಅವರ ಯತ್ನಕ್ಕೆ ಜೇಲು ಅಧಿಕಾರಿಗಳು "ಹಾಗೆ ಮಾಡುವುದು ಕಾಯ್ದೆಗೆ ವಿರುದ್ಧ" ಎಂದು ಕಲ್ಲು ಹಾಕಿದರು. ಕೊನೆಗೆ ಒಂದು ಕಾರ್ಡನ್ನು ತನ್ನ ಸೋದರನಿಗೆ ಬರೆಸಿದಳು ಸಾವಿತ್ರಿ. ಅದರ ಗತಿ ಏನಾಯಿತೆಂಬುದು ಆ ಕಾರ್ಡಿಗೇ ಗೊತ್ತು.

ಒಂದು ವಾರದ ನಂತರ ಸಾವಿತ್ರಿಯ ಮಗ ಜೇಲಿನಲ್ಲಿಯೇ ಕಣ್ಣು ಮುಚ್ಚಿದ. ನಾಲ್ಕು ದಿನಗಳವರೆಗೆ ಅನ್ನ-ನೀರು ಮುಟ್ಟದೆ ಅಳುತ್ತ ಕುಳಿತ ಸಾವಿತ್ರಿ ನಂತರ ಮನಸ್ಸು ಗಟ್ಟಿಮಾಡಿಕೊಂಡಳು. ಮಹಿಳಾ ಕೈದಿಗಳನ್ನು ನೋಡಿಕೊಳ್ಳತೊಡಗಿದಳು. ಶಿಕ್ಷೆಯ ಅವಧಿ ಮುಗಿದು ಜೇಲಿನಿಂದ ಹೊರಬಂದಾಗ ಆಕೆಯನ್ನು ಸ್ವಾಗತಿಸುವವರಾರು? ಸಂಬಂಧಿಕರಂತೂ ಎಂದೋ ಸಂಬಂಧ ಕಡಿದುಕೊಂಡಿದ್ದರು. ಆಕೆಯ ಬಳಿ ಆಶ್ರಯ ಪಡೆದಿದ್ದ ಕ್ರಾಂತಿಕಾರಿಗಳಲ್ಲಿ ಕೆಲವರು ಇನ್ನೂ ಜೇಲಿನಲ್ಲಿದ್ದರು, ಇನ್ನು ಕೆಲವರಿಗೆ ಗಲ್ಲಾಗಿತ್ತು. ಮಗಳನ್ನಂತೂ ಎಂದೋ ಮರೆತುಬಿಟ್ಟಿದ್ದಳು ಸಾವಿತ್ರಿ. ಹೀಗಾಗಿ ಹಾದಿಬೀದಿ ತಿರುಗಾಡಿ ಒಂದು ದಿನ ಆ ಬಡಪಾಯಿ ಹಾದಿಯ ಹೆಣವಾದಳು.


ಇಂಥ ತ್ಯಾಗಜೀವಿಗಳಿಗೇನೂ ಕೊರತೆಯಿಲ್ಲ ನಮ್ಮಲ್ಲಿ. ಆದರೆ 'ಇತಿಹಾಸ' ಸೃಷ್ಟಿಸಲಿಲ್ಲವಲ್ಲ ಅವರು! ಮಾತೆ ಸಾವಿತ್ರಿಯಂಥ ಕ್ರಾಂತಿಕಾರಿ ಸಿಗುವುದಂತೂ ದುರ್ಲಭವೆ. ಅಂತೆಯೇ ಅಂಥವರ ಹೆಸರು ಇತಿಹಾಸದ ಪುಟಗಳಲ್ಲಿ ಸಿಗುವುದೂ ಕಠಿಣವೆ.

ಅಬ್ಬಾಸ್ ಕೊನೆಯ ಪುಟ

ವಸಂತ ಕಲಕೋಟಿ

ಸಾಹಿತ್ಯಿಕ, ಸಾಂಸ್ಕೃತಿಕ ವಲಯಗಳಲ್ಲಿ ಕೆ. ಎ. ಅಬ್ಬಾಸ್ ತುಂಬ ಪರಿಚಿತ ಹೆಸರು. ಅವರು ವಿಚಾರವಾದಿ, ಹಿರಿಯ ಪತ್ರಕರ್ತ, ಚಿತ್ರ ರಂಗದ ಸಾಹಿತಿ, ಸಮಾಜಸೇವಕ. ಈ ಎಲ್ಲ ಕ್ಷೇತ್ರಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡು. ಬೆಳೆಸಿಕೊಂಡು ಬಂದಿರುವ ಅಬ್ಬಾಸರ ಸ್ವಭಾವವೂ ಅಷ್ಟೇ ವಿಕ್ಷಿಪ್ತ. ನಾಲ್ಕು ತಿಂಗಳುಗಳ ಹಿಂದೆ ಮಿದುಳಿನ ರಕ್ತಸ್ರಾವದಿಂದಾಗಿ ಆಸ್ಪತ್ರೆಗೆ ಸೇರಿದ್ದ ಅಬ್ಬಾಸ್ ಚೇತರಿಸಿಕೊಂಡು ಮನೆಗೆ ಬಂದಿದ್ದರು. ಅವರೆ ಜೂನ್ ಒಂದರಂದು ಹೃದಯಾಘಾತದಿಂದ ಅವರು ಕೊನೆಯುಸಿರು ಎಳೆದಾಗ ಅವರ ಅಸಂಖ್ಯ ಅಭಿಮಾನಿಗಳಿಗೆಲ್ಲ ತುಂಬಲಾರದ ನಷ್ಟ.

೧೯೧೪ ರಲ್ಲಿ ಪಾನಿಪತ್ತಿನಲ್ಲಿ ಹುಟ್ಟಿದ ಅಬ್ಬಾಸ್ ಅಲೀಗಡ್ ವಿಶ್ವವಿದ್ಯಾಲಯದಿಂದ ಬಿ. ಎ., ಎಲ್‌ಎಲ್. ಬಿ. ಪದವಿಗಳನ್ನು ಪ್ರಶಸ್ತಿ ಸಹಿತ ಪಡೆದು ೧೯೩೫ರಲ್ಲಿ ಮುಂಬಯಿಗೆ ಬಂದರು. 'ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ ಆಗಲೇ 'ಕೊನೆಯ ಪುಟ' ಅಂಕಣ ಬರೆಯಲು ಆರಂಭಿಸಿದ್ದು. ಮುಂದೆ ಮುಂಬಯಿ ಕ್ರಾನಿಕಲ್ ಪತ್ರಿಕೆಯ ವ್ಯವಸ್ಥಾಪಕರೊಂದಿಗೆ ಭಿನ್ನಾಭಿಪ್ರಾಯ ಬಂದು ೧೯೪೮ ರಿಂದ ಆರ್. ಕೆ. ಕರಂಜಿಯಾರ 'ಬ್ಲಿಜ್' ಪತ್ರಿಕೆಯಲ್ಲಿ 'ಕೊನೆಯ ಪುಟ'ವನ್ನು ಮುಂದುವರೆಸಿದರು. ನಾಲ್ಕು ದಶಕಕ್ಕೂ ಮಿಕ್ಕಿ ಕರಂಜಿಯಾರೊಂದಿಗೆ ಅಬ್ಬಾಸರ ಮೈತ್ರಿ ಗಾಢವಾಗಿ ಬೆಳೆದು ಬಂದರೂ ಆಗಾಗ ಅವರ ಮಧ್ಯೆ ವೈಚಾರಿಕ ಭಿನ್ನಾಭಿಪ್ರಾಯಗಳು ತಲೆದೋರಿದ್ದೂ ಉಂಟು. ಅಬ್ಬಾಸರ ಸರಳತೆ, ಹೃದಯವೈಶಾಲ್ಯಗಳನ್ನು ಮೈತ್ರಿಯ ಹೆಸರಿನಲ್ಲಿ ಕರಂಜಿಯಾ ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಅಬ್ಬಾಸರ ಕೆಲವು ಸ್ನೇಹಿತರು ಆಗಾಗ ರಾಗ ಎಳೆದದ್ದೂ ಉಂಟು. ಅದಕ್ಕೆ ಕಾರಣವೂ ಇಲ್ಲದಿಲ್ಲ. ಆರ್ಥಿಕ ದೃಷ್ಟಿಯಿಂದ, ಪ್ರಸಾರದ ದೃಷ್ಟಿಯಿಂದ 'ಬ್ಲಿಜ್' ಏಶಿಯಾ



ಕೆ. ಎ. ಅಬ್ಬಾಸ್

ದಲ್ಲಿಯೇ ಹಿರಿಯ ಪತ್ರಿಕೆಯಾಗಿ ಬೆಳೆದರೂ ಅವರಿಂದ ಅಬ್ಬಾಸರಿಗೆ ಆರ್ಥಿಕ ರೂಪದಲ್ಲಿ ವಿಶೇಷ ಲಾಭವಾಗಲಿಲ್ಲವೆಂಬುದು ಸತ್ಯ. ತಮ್ಮ ಸ್ಪಷ್ಟ ವಿಚಾರಗಳನ್ನು ಪ್ರಕಟಪಡಿಸಲು 'ಬ್ಲಿಜ್' ಪತ್ರಿಕೆಯ ಕೊನೆಯ ಪುಟವನ್ನು ಒಳ್ಳೆಯ ಮಾಧ್ಯಮವನ್ನಾಗಿ ಬಳಸಿಕೊಂಡ ಅಬ್ಬಾಸ್ ಪತ್ರಕರ್ತನಾಗಿ ಹಲವು ಹೊಸ ಅಂಶಗಳನ್ನು ನೀಡುವುದರೊಂದಿಗೆ ತಮ್ಮ ಅಚ್ಚು ಮೆಚ್ಚಿನ ಪ್ರಗತಿಶೀಲ ಧೋರಣೆಗೆ-ವಿಚಾರಧಾರೆಗೆ ಹೊಸ ಆಯಾಮ ನೀಡಿದರು. ಮಾರ್ಕ್ಸಿಸಂ, ಕಮ್ಯೂನಿಸಂ ಬಲವಾಗಿ ನಂಬಿದ್ದ ಅಬ್ಬಾಸ್ ಕಾಂಗ್ರೆಸ್ಸಿನ ಎಡಪಕ್ಷ ಧೋರಣೆಯ ಮುಖಂಡರಿಗೆ ತಮ್ಮ ಬೆಂಬಲ ಸೂಚಿಸಲು ಯಾವಾಗಲೂ ಮುಂದು. ಜವಾಹರಲಾಲ ನೆಹರು, ನಂತರ ಇಂದಿರಾ ಗಾಂಧಿ ಇತ್ತೀಚೆಗೆ ರಾಜಕೀಯಕ್ಕಿಳಿದ ರಾಜೀವ ಗಾಂಧಿ ಅವರ ಮೇಲೆ ಅಬ್ಬಾಸರಿಗೆ ಅಚಲ ನಿಷ್ಠೆ, ಅಪ್ರತಿಮ ಪ್ರೇಮ. ಹಲವು ಸಲ ನೆಹರೂ ಕುಟುಂಬದ ಸದಸ್ಯರ ನೀತಿ ತಮಗೆ ವೈಚಾರಿಕವಾಗಿ ಸಮ್ಮತವಾಗದೇ ಹೋದರೂ, ಸಾರ್ವಜನಿಕವಾಗಿ ಎಂದಿಗೂ ಅವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಖಂಡಿಸಲಿಲ್ಲ. ಅಂತೆಯೇ ಕೆಲವರು ಅಬ್ಬಾಸರ ಈ ದ್ವಂದ್ವ ನೀತಿ ಸರಿಬರದೇ ಅವರನ್ನು ಟೀಕಿಸಿದ್ದೂ ಉಂಟು. ಖ್ಯಾತ ಕಲಾವಿದ ಬಲರಾಜ ಸಾಹನಿ, ರಾಜಕಾರಣಿಗಳಾದ ಕೃಷ್ಣ ಮೆನನ್, ರಜನೀ ಪಟೇಲ್ ಅವರೊಂದಿಗೆ ಸ್ನೇಹ ಬೆಳಸಿಕೊಂಡದ್ದು ಅವರ ಪ್ರಗತಿಶೀಲ ಧೋರಣೆಯಿಂದಾಗಿಯೆ. ಹಾಗೆ ನೋಡಿದರೆ ಕಮ್ಯುನಿಸಂ, ರಶಿಯ ಹಾಗೂ ರಶಿಯಾಪರ ರಾಷ್ಟ್ರಗಳ ಪ್ರತಿಪಾದಕರೆಲ್ಲ ಅಬ್ಬಾಸರಿಗೆ ಹತ್ತಿರದವರು. ಸಾಮ್ರಾಜ್ಯಶಾಹೀ ಬಂಡವಾಳಶಾಹಿ, ಅಮೇರಿಕದ ಹಾಗೂ ಅವರ ಹಿಂಬಾಲಕರನ್ನು ಪ್ರತಿಪಾದಿಸುವವರನ್ನೆಲ್ಲ ಅಬ್ಬಾಸ್ ಖಂಡಿಸಿದರು. ಸಮಾಜವಾದ, ಪ್ರಗತಿಶೀಲ ನೀತಿ ಯಾವುದನ್ನೂ ಸ್ಪಷ್ಟವಾಗಿ ತಿಳಿಯದ, ಆದರೆ ಚಿತ್ರಗಳ ಆರ್ಥಿಕ ಯಶಸ್ಸಿನಿಂದ ಸಿರಿವಂತರಾದ ರಾಜ ಕಪೂರರಿಂದ ಅಬ್ಬಾಸ್ ಎಂದೂ ದೂರಾಗಲಿಲ್ಲ. 'ಆವಾರಾ' 'ಶ್ರೀ ೪೨೦' 'ಜಾಗತೇ ರಹೋ' 'ಬಾಬಿ' ಹೀಗೆ ರಾಜ ಕಪೂರ ನಿರ್ಮಿಸಿದ ಹಲವು ಚಿತ್ರಗಳಿಗೆ ಚಿತ್ರಕತೆ ನೀಡಿದ ಅಬ್ಬಾಸರಿಗೆ ಸಂದ ಸಂಭಾವನೆ ತೀರ ಕಡಿಮೆ. ಆದರೂ ಅವರಿಬ್ಬರ ಸ್ನೇಹದಲ್ಲಿ ಈ ವಿಷಯ ಎಂದೂ ಮಹತ್ವ ಪಡೆಯಲಿಲ್ಲ. ಕರಂಜಿಯಾರಂತೆ ರಾಜ ಕಪೂರ ಸಹ ಅಬ್ಬಾಸರ ಪ್ರತಿಭೆಯನ್ನು ತಮ್ಮ ವೈಯಕ್ತಿಕ ಉನ್ನತಿಗೆ ಬಳಸಿಕೊಂಡರೆಂಬ ಟೀಕೆಗೆ ಇದು ಸಹಜವಾಗಿ ಕಾಣಬಹುದು. ಎಷ್ಟೋ ಸಲ ರಾಜಕೀಯ ನೀತಿ-ತತ್ವಗಳನ್ನು ಟೀಕಿಸುವಾಗ ಅಬ್ಬಾಸ್ ವ್ಯಕ್ತಿಗಳಿಗೆ ಅಸಹಜ ಮಹತ್ವ ನೀಡುತ್ತಿದ್ದರು. ಎಸ್. ಕೆ. ಪಾಟೀಲ, ಆಚಾರ್ಯ ಕೃಪಲಾನಿ, ಜಾರ್ಜ್ ಫರ್ನಾಂಡೀಸ್ ಹೀಗೆ ಹಲವು ರಾಜಕಾರಣಿಗಳು ಅಬ್ಬಾಸರಿಂದ ಅವಶ್ಯಕತೆಗಿಂತ ಹೆಚ್ಚಾಗಿ ಟೀಕೆಗೊಳಗಾದ ವ್ಯಕ್ತಿಗಳು. ಈ ವಿಶಿಷ್ಟ ನೀತಿ ಅಬ್ಬಾಸರದು ಮಾತ್ರವಲ್ಲ, ಕರಂಜಿಯಾ ಅಲ್ಲದೆ ಇಡೀ 'ಬ್ಲಿಜ್' ಪತ್ರಿಕಾ ಬಳಗದ ಇತರ ಸದಸ್ಯರದೂ ಆಗಿತ್ತು.

ಎಪ್ಪತ್ತೆರಡು ವರುಷ ಜೀವಿಸಿದ ಅಬ್ಬಾಸ್ "I am not an Island" ಎಂಬ ಆತ್ಮಚರಿತ್ರೆಯ ಗ್ರಂಥವನ್ನು ಬರೆದಿದ್ದಾರೆ. ಆದರೆ ಅವರ ಜೀವನದ ವೈಶಿಷ್ಟ್ಯ ವಿಚಾರಧಾರೆ ಸ್ವಭಾವಗಳನ್ನು ತೀರ ಸನಿಹದಿಂದ ಗಮನಿಸಿದರೆ ಅವರು 'Island' ಆಗಿದ್ದರೆಂಬುದು ಅಷ್ಟೇ ಸತ್ಯ. ಜೀವನದಲ್ಲಿ ಅವರು ಎದುರಿಸಿದ ಸಮಸ್ಯೆ, ಅನುಭವಿಸಿದ ವ್ಯಥೆ ಎಂದೂ ಹೊರಗೆ ತೋರಗೊಡಲಿಲ್ಲ. ಆದರೆ ಕೆಳ ವರ್ಗದವರ ಹೋರಾಟವನ್ನು ತಮ್ಮ ಲೇಖನಗಳಲ್ಲಿ, ಚಿತ್ರಗಳಲ್ಲಿ, ಗ್ರಂಥಗಳಿಗೆ ಯಾವಾಗಲೂ ಅಗ್ರಸ್ಥಾನ ನೀಡುತ್ತಿದ್ದರು. ಶ್ರಮಜೀವಿಗಳ ಆಗುಹೋಗುಗಳ ಬಗೆಗೆ ಅಬ್ಬಾಸರಿಗೆ ತುಂಬ ಅನುಕಂಪ. ಅವರ ಸಮಸ್ಯೆಗಳ ಮೇಲೆ ಕ್ಷ-ಕಿರಣ ಬೀರುವಲ್ಲಿ ಅಬ್ಬಾಸ್ ಯಾವಾಗಲೂ ಮುಂದು. ಶೋಷಣೆ ನಡೆಸುವವರ ವಿರುದ್ಧ ಅಬ್ಬಾಸ್ ಯಾವಾಗಲೂ

ಸಮರ ನಡೆಸುತ್ತಿದ್ದರು. ಅಷ್ಟೇ ಪ್ರಮಾಣದಲ್ಲಿ ಶೋಷಿತ-ವರ್ಗದವರ ಸಮಸ್ಯೆಗಳ ಪರಿಹಾರಕ್ಕಾಗಿ ಸಹೃದಯತೆ ಅನುಕಂಪ ಉಳ್ಳವರಾಗಿದ್ದರು. ಹೊಸ ವಿಚಾರಧಾರೆಗೆ ಅವರು ಪ್ರಾಶಸ್ತ್ಯ ನೀಡುತ್ತಿದ್ದರು. ಅಬ್ಬಾಸ್ ಒಬ್ಬ ವ್ಯಕ್ತಿಯಾಗಿರದೇ ಸಂಸ್ಥೆಯಾಗಿದ್ದರು. ಸುಮಾರು ಎಪ್ಪತ್ತು ಗ್ರಂಥಗಳನ್ನು ಇಂಗ್ಲಿಷ್, ಹಿಂದಿ, ಉರ್ದು ಭಾಷೆಗಳಲ್ಲಿ ಬರೆದಿದ್ದು ಖ್ಯಾತ-ಸಾಹಿತಿ ಎನಿಸಿದ್ದಾರೆ ಅಬ್ಬಾಸ್. ಮಾರ್ಕ್ಸ್, ಲೆನಿನ್, ಪಂಡಿತ ಜವಾಹರಲಾಲ ನೆಹರು ಅಬ್ಬಾಸರ ಆರಾಧ್ಯ ದೇವತೆಗಳು. ಇಂಗ್ಲಿಷ್ 'ಬ್ಲಿಜ್' ಪತ್ರಿಕೆಗೆ ಬರೆದ Last page, ಅದೇ ವಾರದ ಹಿಂದಿ, ಉರ್ದು 'ಬ್ಲಿಜ್' ಪತ್ರಿಕೆಗಳಿಗೆ ಬರೆದ ಕೊನೆಯ ಪುಟದ ವಿಷಯ, ಹೇಳುವ ರೀತಿ ವಿಧಾನ ತೀರ ಭಿನ್ನ, 'ಬ್ಲಿಜ್' ಇಂಗ್ಲಿಷ್, ಹಿಂದಿ-ಉರ್ದು ಅವತರಣಿಕೆಗಳಿಗೆ ಪ್ರತಿವಾರ ಬೇರೆ ಬೇರೆಯಾಗಿ ಕೊನೆಯ ಪುಟ ಬರೆಯುವ ಶಕ್ತಿ ಅವರದಾಗಿತ್ತು. ಪ್ರಗತಿಶೀಲ ಧೋರಣೆಯ ಬ್ಲಿಜ್ ನ್ಯಾಶನಲ್ ಫೋರಮ್ ಸ್ಥಾಪಕರಲ್ಲಿ ಅಬ್ಬಾಸ್ ಒಬ್ಬರು. ೧೯೭೮ರಲ್ಲಿ ಆರಂಭಗೊಂಡ ಪ್ರಗತಿಶೀಲ ಲೇಖಕರ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ ಅವರು ಪ್ರಪಂಚವನ್ನು ಸುತ್ತಿದ್ದಾರೆ. ೧೯೫೧ರಲ್ಲಿ ಭಾರತೀಯ ಪ್ರತಿನಿಧಿ ಮಂಡಲಿಯ ಸದಸ್ಯರಾಗಿ ಚೀನವನ್ನು ಅವರು ಸಂದರ್ಶಿಸಿದರು. ೧೯೫೪-೫೫ರಲ್ಲಿ ಅಬ್ಬಾಸ್, ಝೆಕೋಸ್ಲಾವಾಕಿಯ, ಪೋಲೆಂಡ್, ಇಂಗ್ಲೆಂಡ್ ಹಾಗೂ ಇತರ ಯುರೋಪಿನ ದೇಶಗಳನ್ನು ಸಂದರ್ಶಿಸಿ ಬಂದಿದ್ದಾರೆ. "Face to face with Khruschev" "Yuri Gagarin" ಅಬ್ಬಾಸರ ಈ ಗ್ರಂಥಗಳು ಇಂಗ್ಲಿಷ್ ಹಾಗೂ ರಶಿಯನ್ ಭಾಷೆಗಳಲ್ಲಿ ಪ್ರಕಟಗೊಂಡಿವೆ. ಇಂಗ್ಲಿಷ್, ಹಿಂದಿ, ಉರ್ದು ಮೂರೂ ಭಾಷೆಗಳಲ್ಲಿ ಅವರಿಗೆ ಪ್ರಭುತ್ವ. ಹಲವು ಕ್ಷೇತ್ರಗಳಲ್ಲಿ ಅವರು ಕೃಷಿ ಮಾಡಿ ಸಾಧನೆ ಪಡೆದರು. ವಿಶ್ರಾಂತ-ಜೀವನ ಅವರಿಗೆ ಪ್ರಿಯ. ಅವರ ಲೇಖನಗಳಲ್ಲಿ, ಗ್ರಂಥಗಳಲ್ಲಿ, ಚಿತ್ರಗಳಲ್ಲಿ ವಾಸ್ತವಿಕ ಅಂಶಗಳಿಗೆ ಸಹಜತೆಗೆ ಸೃಜನಶೀಲತೆಗೆ ಬಹು ಮುಖ್ಯ ಸ್ಥಾನ.

ಕ್ರಾಂತಿ ಘರ್ಷಣೆಗಳಿಂದ ಪ್ರಭಾವಿತರಾದ ಅಬ್ಬಾಸರ ಗ್ರಂಥಗಳಲ್ಲಿ, ಲೇಖನಗಳಲ್ಲಿ ಪ್ರಗತಿಶೀಲ ವಿಚಾರಗಳಿಗೆ ಆಗ್ರತೆ ಇದ್ದಂತೆ ಅವರು ನಿರ್ಮಿಸಿದ ಚಿತ್ರಗಳಲ್ಲಿ ಎಡ ತತ್ವ ಪ್ರಣಾಳಿಕೆಯ ಪ್ರಗತಿಶೀಲ ವಿಚಾರಗಳ ಪ್ರತಿಬಿಂಬವನ್ನು ಕಾಣಬಹುದು. ೧೯೩೫ ರಲ್ಲಿ ಮುಂಬಯಿಗೆ ಬಂದ ಅಬ್ಬಾಸ್ ಆಗಿನ 'ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ ಚಲನಚಿತ್ರಗಳ ವಿಮರ್ಶೆ ಬರೆಯುತ್ತಿದ್ದರು. ಆಗಲೇ ವಿಮರ್ಶಕರಾಗಿ ಅವರ ಸಂಬಂಧ ಚಿತ್ರರಂಗದೊಂದಿಗೆ ಬೆಳೆದು ಬಂದದ್ದು. ಅಬ್ಬಾಸರ ಚಿತ್ರ ವಿಮರ್ಶೆಯಲ್ಲಿ ಟೀಕೆಗೆ ಗುರಿಯಾದ ಹಲವು ಚಿತ್ರರಂಗದ ಪ್ರಭೃತಿಗಳು ಅಬ್ಬಾಸರಿಗೆ ಉತ್ತಮ ಚಿತ್ರಕತೆ ಬರೆಯಲು ಸವಾಲು ಹಾಕಿದಾಗ ೧೯೪೦ ರಲ್ಲಿ ಬಾಂಬೆ ಟಾಕೀಜಿನ 'ನಯಾ ಸಂಸಾರ' ಚಿತ್ರಕ್ಕೆ ಕತೆ ಬರೆದುಕೊಟ್ಟರು. ಆ ಚಿತ್ರ ಆಗ ರಜತಮಹೋತ್ಸವ ಕಂಡರೂ ಅಬ್ಬಾಸರಿಗೆ ಬಂದ ಗೌರವಧನ ೭೫೦ ರೂಪಾಯಿಗಳು ಮಾತ್ರ. ಭೀಕರ ಬರಗಾಲದ ವಾಸ್ತವಿಕ ಚಿತ್ರಣವುಳ್ಳ 'ಧರತೀಕೆ ಲಾಲ್' ೧೯೪೬ ರಲ್ಲಿ ಅವರು ನಿರ್ಮಿಸಿ ದಿಗ್ದರ್ಶಿಸಿದ ಪ್ರಥಮ ಚಿತ್ರ. ಅಬ್ಬಾಸರು ಹಲವು ಮಕ್ಕಳ ಚಿತ್ರಗಳನ್ನೂ ದಿಗ್ದರ್ಶಿಸಿದ್ದಾರೆ. ದೂರದರ್ಶನ ಹಾಗೂ ಸಾಕ್ಷ್ಯಚಿತ್ರಗಳಿಗೆ ಅವರು ದಿಗ್ದರ್ಶನ ನೀಡಿದ್ದಾರೆ. 'ನಯಾ ಸಂಸಾರ' 'ನಯೀ ಕಹಾನಿ' 'ನಯಿ ದುನಿಯಾ' 'ಪನ್ನಾ' ವಿ. ಶಾಂತಾರಾಮ ನಿರ್ಮಿಸಿ ದಿಗ್ದರ್ಶಿಸಿದ 'ಡಾ. ಕೋಟ್ನಿಸ್ ಕೀ ಅಮರ ಕಹಾನಿ' 'ಆಧೀ ರಾತ್' 'ಜಿಂದಗೀ ಜಿಂದಗಿ' 'ಅಚಾನಕ' ಹೀಗೆ ಹಲವು ಖ್ಯಾತ ಹಿಂದಿ ಚಿತ್ರಗಳಿಗೆ ಚಿತ್ರಕತೆ ಬರೆದಿದ್ದಾರೆ. ರಾಜ ಕಪೂರರ ಬಹುಶಃ ಎಲ್ಲ ಹಿಂದಿ ಚಿತ್ರಗಳಿಗೆ ಅಬ್ಬಾಸರ ಚಿತ್ರಕತೆ ಇವೆ. ಅಬ್ಬಾಸರು ತಮ್ಮದೇ ಆದ ನಯಾ ಸಂಸಾರ ಲಾಂಛನದಲ್ಲಿ 'ಅನ್ಹೋನಿ'

'ರಾಹಿ' 'ಮುನ್ನಾ' 'ಪರದೇಶಿ' 'ಚಾರ್ ದಿಲ್ ಚಾರ್ ರಾಹೆ' 'ಶಹರ್ ಔರ್ ಸಪನಾ' 'ಹಮಾರಾ ಘರ್' 'ಆಸ್ಮಾನ್ ಮಹಲ್' 'ಬಂಬಯಿ ರಾತ್‌ಕೀ ಬಾಹೋಮೆ' 'ಸಾತ್ ಹಿಂದುಸ್ತಾನಿ' 'ದೋ ಬೂಂದ ಪಾನೀ' ಹೀಗೆ ಹಲವು ವೈಶಿಷ್ಟ್ಯಪೂರ್ಣ ಹೊಸ ವಿಚಾರ ಧಾರೆಯ, ದೃಷ್ಟಿಕೋನದ ಹೊಸ ಅಲೆಯ ಚಿತ್ರಗಳನ್ನು ನಿರ್ಮಿಸಿ ದಿಗ್ದರ್ಶಿಸಿದ್ದಾರೆ. ಅವರ 'ಶಹರ್ ಔರ್ ಸಪನಾ' ಚಿತ್ರಕ್ಕೆ ಆ ವರುಷದ ಶ್ರೇಷ್ಠ ಚಿತ್ರವೆಂದು ರಾಷ್ಟ್ರಪ್ರಶಸ್ತಿ ದೊರಕಿತು. ಅವರು ನಿರ್ಮಿಸಿ ದಿಗ್ದರ್ಶಿಸಿದ 'ಹಮಾರಾ ಘರ್' ಚಿತ್ರಕ್ಕೆ ರಶಿಯಾ, ಝೆಕೋಸ್ಲೋವಾಕಿಯಾ, ಅಮೇರಿಕಗಳ ಪ್ರಶಸ್ತಿಗಳು ಬಂದಿವೆ. ೧೯೪೬ ರಲ್ಲಿ ಅವರು ನಿರ್ಮಿಸಿ ದಿಗ್ದರ್ಶಿಸಿದ 'ಧರತೀಕೆ ಲಾಲ್' ಚಿತ್ರ ಉತ್ತಮ ಚಿತ್ರಗಳಲ್ಲಿ ಒಂದು ಎಂದು ವಿದೇಶಿ ವಿಮರ್ಶಕರ ಮೆಚ್ಚುಗೆ ಪಡೆದಿತ್ತು. ಅವರು ನಿರ್ಮಿಸಿ ದಿಗ್ದರ್ಶಿಸಿದ 'ಪರದೇಶಿ' ಚಿತ್ರವು ಭಾರತ-ರಶಿಯಾ ಚಿತ್ರ ನಿರ್ಮಾಪಕರ ಸಹನಿರ್ಮಾಣದ ಸಂಕೇತ. ಹಿಂದಿ, ರಶಿಯನ್ ಎರಡೂ ಭಾಷೆಗಳಲ್ಲಿ ಅದು ನಿರ್ಮಾಣಗೊಂಡು ಜನಪ್ರಿಯತೆ ಪಡೆದಿದೆ. ರಶಿಯಾದಲ್ಲಿ ಅಬ್ಬಾಸರು ತುಂಬ ಅಚ್ಚುಮೆಚ್ಚಿನ ವ್ಯಕ್ತಿ. ಭಾರತೀಯ ಚಿತ್ರರಂಗದ ಅತಿರಥ ಮಹಾರಥಿಯೆನಿಸಿದ ರಾಜ ಕಪೂರ, ಬಲರಾಜ ಸಾಹನಿ ಅವರನ್ನು ರಶಿಯಾದಲ್ಲಿ ಪರಿಚಯಿಸಿದವರು ಅಬ್ಬಾಸ್ ಎಂಬುದು ಬಹು ಜನರಿಗೆ ಗೊತ್ತಿಲ್ಲ. ಅಮಿತಾಬ್ ಬಚ್ಚನ್‌ರ ತಂದೆ ಹರಿವಂಶರಾಯ ಬಚ್ಚನ್ ಹಾಗೂ ಅವರ ಕುಟುಂಬ ನೆಹರು ಕುಟುಂಬಕ್ಕೆ ತೀರ ಹತ್ತಿರ. ಅಮಿತಾಬ್ ಬಚ್ಚನ್‌ಗೆ ತಮ್ಮ ಹಿಂದೀ ಚಿತ್ರ ಒಂದರಲ್ಲಿ ಅವಕಾಶ ನೀಡಬೇಕೆಂದು ಇಂದಿರಾ ಗಾಂಧಿ ಅವರು ಅಬ್ಬಾಸರಿಗೆ ಕೇಳಿಕೊಂಡಾಗ ಅಬ್ಬಾಸರು ತಮ್ಮ 'ಸಾತ್ ಹಿಂದುಸ್ತಾನಿ' ಚಿತ್ರದಲ್ಲಿ ಅಭಿನಯಿಸಲು ಅಮಿತಾಬ್‌ನಿಗೆ ಪ್ರಪ್ರಥಮ ತಮ್ಮ ಅವಕಾಶ ನೀಡಿದರು. ಅಬ್ಬಾಸರ ಪ್ರಥಮ ವರ್ಣಚಿತ್ರ 'ದೋ ಬೂಂದ ಪಾನೀ'ಯಲ್ಲಿ ಅಮಿತಾಬ್‌ನಿಗಾಗಿ ಒಂದು ಪಾತ್ರ ಸೃಷ್ಟಿಸಿದ್ದರು. ಆದರೆ ಅಮಿತಾಬ್ ಈ ಚಿತ್ರದಲ್ಲಿ ಅಭಿನಯಿಸಲು ಒಪ್ಪಿಕೊಳ್ಳಲಿಲ್ಲ. ಹರಿವಂಶರಾಯ ಬಚ್ಚನ್‌ರು ಹೇಗಾದರೂ ಮಾಡಿ ಅಮಿತಾಬ್ ಈ ಚಿತ್ರದಲ್ಲಿ ಅಭಿನಯಿಸಲು ತಾವು ಮನ ಒಲಿಸುವನಾಗಿ ಮುಂದಾದಾಗ ಅಬ್ಬಾಸರು ಬೇಡವೆಂದರು. ನಂತರ ಅಬ್ಬಾಸರ ಯಾವ ಚಿತ್ರದಲ್ಲಿಯೂ ಅಮಿತಾಬ್ ಕಾಣಿಸಿಕೊಳ್ಳಲಿಲ್ಲ. ಅಬ್ಬಾಸರ ಚಿತ್ರಗಳಲ್ಲಿ ಗ್ಲ್ಯಾಮರ್ ಇರುವದಿಲ್ಲ.

ರಾಗ ವೈರಾಗ್ಯ

ಭೈರವಿಯನ್ನು ಕೇಳುತ್ತೇನೆ
ರುಂಡ ಮುಂಡಗಳ ಕಲ್ಪನೆಯು ಬಂದು
ಭೀತನಾಗಿಬಿಡುತ್ತೇನೆ.
ಶಂಕರಾಭರಣವೂ ಅಷ್ಟೇ,
ಸರ್ಪಗಳು ನೆನಪಿಗೆ ಬಂದು
ಮನವು ತಪ್ಪಿಸಿಕೊಳ್ಳಲು ಹವಣಿಸುತ್ತದೆ.
ಖರಹರಪ್ರಿಯವೋ
ಹಿಂಗಾಲುಗಳ ಒದೆತದ
ಗಾಂಧರ್ವರುಚಿಯು
ಮನಸಿಗೆ ಬಂದು ಅಪ್ರಿಯವೇ ಆಗುತ್ತದೆ.
ತೋಡಿಯಿಂದ ಹಳ್ಳ ತೋಡಿದಂತಾಗಿ
ಮೃತ್ಯುಂಜಯ ಜಪವ ನೆನಪಾಗುತ್ತದೆ.
ಕಲ್ಯಾಣಿಯಿಂದ, ಪಾಚಿಗಟ್ಟಿದ ನಿರ್ಜನ
ಪ್ರದೇಶದ ಹಳೆಯ ಪುಷ್ಕರಿಣಿಯ ನೆನಪು.
ಏಕೆ ಹೀಗೆ ? ಏಕಾಗಿದೆ ಹೀಗೆ ?
ಎಲ್ಲಿ ಹೋಗಿದೆ ನಮ್ಮ ಮನದೊಳಗಿದ್ದ
ಆ ರಾಗಗಳ ನಾದಾಮೃತದ ಮಧುರ
ಅನುಭವ ?
ಏನಾಗಿದೆ ನಮ್ಮ ರಸಿಕತೆಗೆ, ನಮ್ಮ
ಸಹೃದಯತೆಗೆ ?
-ಡಾ. ರಾಮಾನುಜಂ

ಅಂತೆಯೇ ಒಮ್ಮೆ ಅವರ ಚಿತ್ರಗಳಲ್ಲಿ ಅಭಿನಯಿಸಿದ ಕಲಾವಿದ ಪುನಃ ಅವರ ಚಿತ್ರಗಳಲ್ಲಿ ಅಭಿನಯಿಸಲು ಒಪ್ಪುವುದಿಲ್ಲ. ಪಾರಿತೋಷಕ, ಪುರಸ್ಕಾರ, ಪ್ರಶಸ್ತಿಗಳ ಸರಮಾಲೆ ಅಬ್ಬಾಸರ ಚಿತ್ರಗಳಿಗೆ ಬರುತ್ತಿದ್ದರೂ ಬಾಕ್ಸ್ ಆಫೀಸಿನಲ್ಲಿ ಆ ಚಿತ್ರಗಳು ಸೋಲುತ್ತಿದ್ದವು. ಆರ್ಥಿಕವಾಗಿ ಅವರು ಎಂದಿಗೂ ಯಶ ಪಡೆಯಲಿಲ್ಲ. ಬೇರೆ ಚಿತ್ರಗಳಿಗೆ ಚಿತ್ರಕತೆ ಬರೆದು, ಪತ್ರಿಕೋದ್ಯಮ, ಗ್ರಂಥ ಪ್ರಕಟನೆಗಳಿಂದ ಬರುತ್ತಿದ್ದ ಹಣವನ್ನೆಲ್ಲ ಅವರು ತಮ್ಮ ಚಿತ್ರನಿರ್ಮಾಣದಲ್ಲಿ ತೊಡಗಿಸಿ ಯಾವಾಗಲೂ ಬರಿಗೈ ದೊರೆಯೆನಿಸಿದರು. ತಮ್ಮ ೭೪ನೆಯ ವಯಸ್ಸಿನಲ್ಲೂ ಚಿತ್ರನಿರ್ಮಾಣದ ಹವ್ಯಾಸವನ್ನು ಅವರು ಬಿಡಲಿಲ್ಲ. 'ಏಕ ಆದ್ಮಿ' ಅವರ ಇತ್ತೀಚಿನ ಚಿತ್ರ. ಅದು ಪೂರ್ತಿ ಮುಗಿದಿದ್ದು ಇದೇ ಜೂನ್ ೮ರಂದು (ಅಬ್ಬಾಸರ ೭೩ನೆಯ ಹುಟ್ಟು ಹಬ್ಬ) ಪೂರ್ವ ಪ್ರದರ್ಶನಕ್ಕೆ ಸಿದ್ಧತೆ ನಡೆದಿತ್ತು. 'The Tale of Four Cities' ಅಬ್ಬಾಸರು ಬರೆದು ನಿರ್ದೇಶಿಸಿದ ಈ ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ಆಪೇಕ್ಷೆವೆತ್ತಿ ನಿರಾಕರಿಸಿದಾಗ, ಅಬ್ಬಾಸ್ ಸುಪ್ರೀಮ್ ಬಿಡುಗಡೆಗೆ ಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿ ಆ ಪ್ರಕರಣದಲ್ಲಿ ಗೆದ್ದರು. ಇಂದಿರಾ ಗಾಂಧಿ ಅವರೊಂದಿಗೆ ಗಾಢ ಸಂಪರ್ಕವಿದ್ದರೂ ತಮ್ಮ ಮೈತ್ರಿಯನ್ನು ಅವರು ದುರುಪಯೋಗಪಡಿಸಿಕೊಳ್ಳದೇ ನ್ಯಾಯಾಲಯದ ಮುಖಾಂತರ ತಮ್ಮ ಹಕ್ಕನ್ನು ಚಲಾಯಿಸಿದರು. ಅಲ್ಲದೆ ಫಿಲ್ಮ್ ಸೆನ್ಸಾರ್ ಸುಧಾರಣೆಗೆ ರಚಿಸಲಾಗಿದ್ದ ಖೋಸಲಾ ಸಮಿತಿಯ ಸದಸ್ಯರಾಗಿದ ಅಬ್ಬಾಸ್ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಹೊರಬಂದರು. ರಾಷ್ಟ್ರದ ಸರಕಾರಿ ವಲಯಗಳಲ್ಲಿ ಅಂತಾರಾಷ್ಟ್ರೀಯ ಪ್ರಮುಖ ವ್ಯಕ್ತಿಗಳೊಂದಿಗೆ ಅಬ್ಬಾಸರ ಸಂಬಂಧ ಘನಿಷ್ಟವಾಗಿದ್ದರೂ ಅವರು ಯಾವ ಕಾಲಕ್ಕೂ ಆ 'ಸಂಬಂಧ' ಮೈತ್ರಿಯನ್ನು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳಲಿಲ್ಲ. ಪ್ರಗತಿಶೀಲ ಧೋರಣೆಯ ಪ್ರತಿಪಾದಕರಾಗಿದ್ದರೂ, ಪ್ರಜಾಪ್ರಭುತ್ವದಲ್ಲಿ ಅವರಿಗೆ ತುಂಬ ವಿಶ್ವಾಸ ನಿಷ್ಠೆ. ರಶಿಯದಲ್ಲಿರುವಂತೆ ಏಕಪಕ್ಷೀಯ ರಾಜಕೀಯವನ್ನು ಅವರು ಭಾರತದಲ್ಲಿ ಬೆಂಬಲಿಸಲಿಲ್ಲ. ರಾಷ್ಟ್ರೀಯ ಏಕಾತ್ಮತೆ-ಐಕ್ಯದಲ್ಲಿ ಅವರಿಗೆ ಅಭಿಮಾನ. ಕಟ್ಟಾ ರಾಷ್ಟ್ರೀಯವಾದಿಯಾಗಿದ್ದ ಅಬ್ಬಾಸ್ ಅಂತಾರಾಷ್ಟ್ರೀಯ ಮಾನವೀಯತೆಗಾಗಿ ಮಿಡಿದವರು. ಗುಲಾಮಗಿರಿ, ಶೋಷಣೆ ನೀತಿಯನ್ನು ಅವರು ಸ್ವದೇಶದಲ್ಲಿ ಹಾಗೂ ಜಗತ್ತಿನ ಯಾವುದೇ ಮೂಲೆಯಲ್ಲಿರಲಿ ಖಂಡ ತುಂಡವಾಗಿ ಉಗ್ರವಾಗಿ ಟೀಕಿಸುತ್ತಿದ್ದರು. ಜಾತಿಯಿಂದ ಮುಸಲ್ಮಾನರಾಗಿದ್ದರೂ ಜಾತ್ಯತೀತ ರಾಷ್ಟ್ರ, ಪರಧರ್ಮ ಸಹಿಷ್ಣುತೆಯ ನೀತಿಯನ್ನು ಬಲವಾಗಿ ಪ್ರತಿಪಾದಿಸುತ್ತ ಬಂದರು. ಅಬ್ಬಾಸರಿಗೆ ಯಾರ ಬಗ್ಗೆಯೂ ಅಸೂಯೆ, ದ್ವೇಷ ಸಲ್ಲದು. ಮೈತ್ರಿಯಿಲ್ಲದಿದ್ದರೂ ವೈರತ್ವ ಕಟ್ಟಿಕೊಳ್ಳುವಲ್ಲಿ ಅವರಿಗೆ ಮನಸ್ಸಿಲ್ಲ.

೧೯೬೯ರಲ್ಲಿ ಅಬ್ಬಾಸರ ಪ್ರತಿಭೆ, ಸಾಧನೆಗಳನ್ನು ಗುರುತಿಸಿ ಭಾರತ ಸರಕಾರವು ಅವರಿಗೆ 'ಪದ್ಮಶ್ರೀ' ಪದವಿ ನೀಡಿ ಗೌರವಿಸಿತು. ಹಲವು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಅವರಿಗೆ ಬಂದಿವೆ. ಭಾರತ–ರಶಿಯ ಮೈತ್ರಿ ಸಂಘ ಹಾಗೂ ಸೋವಿಯತ್ ಪತ್ರಿಕೆಯು ಜೊತೆಗೂಡಿ ಸ್ಥಾಪಿಸಿದ ನೆಹರು ಲ್ಯಾಂಡ್ ಅವಾರ್ಡ್ ನಿರ್ಣಾಯಕ ಸಮಿತಿಯ ಸದಸ್ಯರಾಗಿ ಕಳೆದ ಎರಡು ದಶಕಗಳಿಂದ ಅವರು ಸೇವೆ ಸಲ್ಲಿಸಿದ್ದಾರೆ. ಒಂದೊಂದು ಕ್ಷೇತ್ರದಲ್ಲಿ ತಮ್ಮ ಪ್ರತಿಭೆ ತೋರಿಸಿ ಅಗ್ರಮಾನ್ಯರೆಂದು ಪ್ರಸಿದ್ಧಿ ಪಡೆದವರು ಹಲವರಿರಬಹುದು. ಆದರೆ ರಾಜಕೀಯ, ಪತ್ರಿಕೋದ್ಯಮ, ಸಾಹಿತ್ಯ, ಚಲನಚಿತ್ರರಂಗ ಹೀಗೆ ಹಲವು ಕ್ಷೇತ್ರಗಳಲ್ಲಿ ಅಪೂರ್ವ ಸಾಧನೆ ಗಳಿಸಿ ಪ್ರತಿಭಾವಂತರಾಗಿ ಮಿನುಗಿದ ಅಬ್ಬಾಸರಂಥ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವುಳ್ಳವರು ತೀರ ವಿರಳ. ✡

ಬಹೂಪಯೋಗಿ ಬಿದಿರು

ಟಿ. ಎನ್. ಸುಬ್ಬರಾಯ

"ಬಿದಿರು ಹೂ ಬಿಟ್ಟಿದೆ. ಮುಂದಿನ ವರುಷ ತಿನ್ನಲು ಬಿದಿರಕ್ಕಿ ಅನ್ನವೇ ಗತಿ."

"ಕಾಡಿನ ತುಂಬಾ ಬಿದಿರಕ್ಕಿ ಹಾಸಿ ಬಿದ್ದಿದೆ. ಇಲಿಗಳ ಹಾವಳಿ ವಿಪರೀತವಾಗುತ್ತದೆ."

"ಕಾಡಿನ ತುಂಬಾ ಬಿದಿರಕ್ಕಿ. ಯಾವುದೋ ರೋಗ ಹಬ್ಬುತ್ತದೆ."

"ಎರಡು ದಿನಗಳಿಂದ ಎಮ್ಮೆ ಹಾಲು ಸೋರಿಯುತ್ತಿಲ್ಲ. ಬಿದುರು ಕಳಲೆ ತಿಂದಿರಬೇಕು."

"ಬಿದಿರು ಒಣಗಿ ನಿಂತಿದೆ. ಸಧ್ಯ ಕಾಡಿಗೆ ಬೆಂಕಿ ಬೀಳುತ್ತದೆ".

"ಹಣ್ಣು ಹಂಪಲಿನೊಂದಿಗೆ ಬಿದಿರಕ್ಕಿಯ ಅನ್ನವನ್ನೂ ಮಾಡಿ ರಾಮನಿಗೆ ನೀಡಿದ್ದಳು ಶಬರಿ."

ಬಿದಿರಿನ ಬಗ್ಗೆ ಜನರಲ್ಲಿ ಪ್ರಚಲಿತವಾಗಿರುವ ನಂಬಿಕೆಗಳು ಇವು. ಬಿದಿರಕ್ಕಿಯ ಅನ್ನವನ್ನು ಮಾಡಿ ಶಬರಿ ರಾಮನಿಗೆ ನೀಡಿದ್ದಳೋ ಇಲ್ಲವೋ ...ಈ ಅಂಶವೊಂದನ್ನು ಬಿಟ್ಟರೆ ಉಳಿದೆಲ್ಲಾ ನಂಬಿಕೆಗಳೂ ಸಕಾರಣವಾದವುಗಳೇ; ವೈಜ್ಞಾನಿಕ ಹಿನ್ನೆಲೆವುಳ್ಳವುಗಳೇ. ಮಳೆ ತೀರ ಕಡಿಮೆಯಾದಾಗ ಬದಿರು ಹೂ ಬಿಡುತ್ತದೆ. ಮಳೆ ಕಡಿಮೆಯಾದರೆ ಫಸಲೂ ಕಡಿಮೆಯಾಗುತ್ತದೆ ತಾನೆ? ಆಹಾರ ಧಾನ್ಯ ಅಲಭ್ಯವೆನಿಸಿದಾಗ ಬದುಕಲು ಬಿದಿರಕ್ಕಿಯ ಅನ್ನವನ್ನಾದರೂ ತಿನ್ನಬೇಕಷ್ಟೆ! ಹೊಲ ಗದ್ದೆಗಳಲ್ಲಿ ಫಸಲು ಕಡಿಮೆಯಾದಾಗ ಇಲಿಗಳೂ ಆಹಾರವನ್ನರಸಿ ಹೊರಡುತ್ತವೆ. ಕಾಡಿನ ತುಂಬಾ ಹರಡಿಬಿದ್ದ ಬಿದಿರಕ್ಕಿಯನ್ನು ಭುಂಜಿಸುತ್ತವೆ. ಬಿದಿರಿನಲ್ಲಿ 'ತಬಶೀರ್' ಎನ್ನುವ ವೀರ್ಯವರ್ಧಕ ಅಂಶವಿರುವುದರಿಂದ,



ಬಿದಿರಿನ ಎಲೆಗಳು ಅಕ್ಕಪಕ್ಕದಲ್ಲಿ ಚಿಕ್ಕ ಮುಗುಳೆಲೆ ತೋರಿಸಿವೆ

ಸಹಜವಾಗಿ ಇಲಿಗಳ ಸಂತತಿ ವೃದ್ಧಿಯಾಗುತ್ತದೆ. ಹೆಚ್ಚಿದ ಮೂಷಕ ಸಂತತಿ ಸಾಯತೊಡಗಿದರೆ ಸಾಂಕ್ರಾಮಿಕ ರೋಗ ಹಬ್ಬುವುದೂ ಸಹಜ. ಬಿದಿರಿನ ಮೊಳಕೆ ಕಳಲೆ ಪ್ರಾಣಿಗಳಿಗೆ ರುಚಿಕರವಾದ ಪದಾರ್ಥವಾದರೂ ಅವುಗಳಲ್ಲಿರುವ ವಿಷಯುಕ್ತ ಅಂಶದಿಂದಾಗಿ ಹಸು-ಎಮ್ಮೆಗಳು ಹಾಲು ಸ್ರವಿಸುವುದಕ್ಕೆ ತಡೆಯುಂಟಾಗುತ್ತದೆ. ಒಣಗಿದ ಬಿದಿರು ಕಾಂಡಗಳು ತೊನೆದು ಪರಸ್ಪರ ತಾಡನಗೊಂಡು ಘರ್ಷಿಸಲ್ಪಟ್ಟಾಗ ಶಾಖೋತ್ಪತ್ತಿಯಾಗುತ್ತದೆ. ಈ ಶಾಖದ ಕಿಡಿ ಕೆಲವೇ ಕ್ಷಣಗಳಲ್ಲಿ ಇಡೀ ಕಾಡನ್ನೇ ವ್ಯಾಪಿಸುತ್ತದೆ.

ಬಿದಿರು ಬಹು ಬಳಕೆಯ ವಸ್ತು. ಬುಟ್ಟಿ, ತಟ್ಟಿ, ತಡಿಕೆ, ಕುಡಿಕೆ, ಚೊಂಬು, ಬೊಂಬು, ಬಿಲ್ಲು, ಬಾಣ, ಕೊಳಲು ವಾದ್ಯ, ನೇಲೆ, ಬಲೆ, ದೊಂದಿ, ಜಂತಿ, ಪಕಾಶಿ, ಕುರ್ಚಿ, ಮೇಜು, ಹೂಬಿಬ್ಬಲು, ಹೂಕುಂಡ, ಬಾಗಿಲು, ಬೇಲಿ ಗೂಟ, ಏಣಿ, ನಾಗೊಂದಿಗೆ, ಇದ್ದಿಲು, ಕಾಗದ ಹೀಗೆ- ತೊಟ್ಟಿಲಿನಿಂದ ಚಟ್ಟದವರೆಗೆ ಮಾನವ ಬಿದಿರಿನಿಂದ ಹಲವು ವಸ್ತುಗಳನ್ನು ತಯಾರಿಸಿ ಬಳಸುತ್ತಾನೆ. ಒಂದೇ ಒಂದು ಕಬ್ಬಿಣದ ತುಂಡು, ಮೊಳೆಯನ್ನೂ ಬಳಸದೆ, ಹಂಚು, ಸೋಗೆ ಮುಚ್ಚದೆ ಸಂಪೂರ್ಣ ಬಿದಿರಿನಿಂದಲೇ ಮನೆ ನಿರ್ಮಿಸಿ, ಅದರಲ್ಲಿ ವಾಸಿಸುತ್ತಾನೆ. ಕೆಲವೆಡೆಗಳಲ್ಲಿ ಮನಷ್ಯನ ಬದುಕು ಬಿದಿರಿನೊಂದಿಗೆ ಬೆಸೆದುಕೊಂಡಿದೆ. ಹಲವರಿಗೆ ಅದು ಆಸರೆ; ಆಧಾರ.



ಬೆಳೆದ ಬಿದಿರು

ಏಶಿಯಾ ಖಂಡದ ದಕ್ಷಿಣ ಭಾಗವನ್ನು ಸಸ್ಯ ಶಾಸ್ತ್ರಜ್ಞರು 'ಬಿದಿರು ತೋಪುಗಳ ನಾಡು' ಎಂದೇ ಕರೆಯುತ್ತಾರೆ. ಚೀನ, ಕೋರಿಯಾ, ಜಪಾನ್, ಭಾರತ, ಮಲೇಶಿಯಾ, ಸಯ್ಯಾಮು, ಬರ್ಮಾ, ಆಸ್ಟ್ರೇಲಿಯಾ. ಮಡಗಾಸ್ಕರ್, ಶ್ರೀಲಂಕಾಗಳಲ್ಲಿ ಬಿದಿರು ಗಣನೀಯ ಪ್ರಮಾಣದಲ್ಲಿ ಬೆಳೆಯುತ್ತದೆ. ಈ ದೇಶಗಳಲ್ಲಿ ಬೆಳೆಯುವಷ್ಟು ದೊಡ್ಡ

ಪ್ರಮಾಣವಲ್ಲಲ್ಲದಿದ್ದರೂ ಪ್ರಪಂಚದ ಇನ್ನಿತರ ಹಲವು ದೇಶಗಳಲ್ಲಿ ಮುಖ್ಯವಾಗಿ ದಕ್ಷಿಣ ಆಫ್ರಿಕ, ದಕ್ಷಿಣ ಅಮೇರಿಕಾ, ಅಮೇರಿಕ ಸಂಯುಕ್ತ ಸಂಸ್ಥಾನ, ಯುರೋಪ್, ಬ್ರಿಟಿಶ್ ನಡುಗಡ್ಡೆಗಳಲ್ಲಿ ಬಿದಿರು ಬೆಳೆಯುತ್ತದೆ. ತೇವಾಂಶದಿಂದ ಕೂಡಿದ ಭೂಮಿಯಲ್ಲಿ ಎಲ್ಲೆಂದರಲ್ಲಿ – ಸಾಗರ ತೀರದಲ್ಲಿ, ಹಿಮಾಚ್ಛಾದಿತ ಪ್ರದೇಶ ಸಸಿಪದಲ್ಲಿ ಕೂಡ – ಬಿದಿರು ಬೆಳೆಯುತ್ತದೆ. ಬಿದಿರಿನ ಪೊದೆಗೆ ಹೆಚ್ಚು ವ್ಯಾಪಕ ಜಾಗ, ತೇವಾಂಶ. ಅಧಿಕ ಮಳೆ ಅಗತ್ಯ. ಹಾಗಾಗಿ, ಮಾನ್ಸೂನ್ ಪ್ರದೇಶಗಳಲ್ಲಿ ಇದರ ಪ್ರಮಾಣ ಜಾಸ್ತಿ. ಈ ಅಂಶಗಳು ಲಭ್ಯವಿರುವ ಭಾರತದ ಪಶ್ಚಿಮ ಬಂಗಾಲ, ಅಸ್ಸಾಂ, ಕರ್ನಾಟಕ, ಕೇರಳ, ಅಂಡಮಾನ್ ದ್ವೀಪ ಹಾಗೂ ಈಶಾನ್ಯ ಭಾಗಗಳಲ್ಲಿ ಬಿದಿರು ಹೆಚ್ಚು.

ಬಿದಿರಿನ ಮೂಲ ತಳಿಯನ್ನು 'ಬಾಂಬುಸೇಯಸ್' ಎಂದು ಕರೆಯಲಾಗುತ್ತದೆ. ಸಸ್ಯ ಸಾಮ್ರಾಜ್ಯದಲ್ಲಿ ಬಿದಿರು ಹುಲ್ಲಿನೊಂದಿಗೆ ಸಾದೃಶ್ಯ ಹೊಂದಿರುವ ಸಸ್ಯ. ಆದ್ದರಿಂದಲೇ ಬಿದಿರನ್ನು 'ರಾಕ್ಷಸ ಹುಲ್ಲು' ಎಂದೂ ಕರೆಯುವುದುಂಟು. ಆದರೂ, ಕೆಲವು ವಿಶಿಷ್ಟ ಅಂಶಗಳಿಂದಾಗಿ ಬಿದಿರು ಹುಲ್ಲಿಗಿಂತ ಪ್ರತ್ಯೇಕವಾಗಿ ನಿಲ್ಲುತ್ತದೆ. ಈ ಪ್ರತ್ಯೇಕ ಗುಣಗಳನ್ನು 'ಬಾಂಬೂ ಸಾಯಿಡ್' ಎಂದು ಕರೆಯಲಾಗಿದೆ. ಪ್ರಕಂದ, ಕಾಂಡ ಕಾಪ್ಪದ ರೀತಿ, ಸಣ್ಣ ಸಿಬಿಕೆ ಎತ್ತಬಹುದಾದ ಕಾಂಡಗುಣ, ಸೀಳು ಸೀಳಾದ ಎಲೆಗಳು ಬಿದಿರಿನ 'ಬಾಂಬೂ ಸಾಯಿಡ್' ಅಂಶಗಳು. ಈ ಕೆಲವು ವಿಶಿಷ್ಟ ಅಂಶಗಳೇ ಬಿದಿರನ್ನು ಇನ್ನಿತರ ಸಸ್ಯಗಳಿಂದ ಪ್ರತ್ಯೇಕಿಸಲು ಕಾರಣವಾಗಿವೆ. ಜೊತೆಗೆ ಬಿದಿರು ಗೆಣ್ಣುಗಳನ್ನೂ, ವೃತ್ತಾಕಾರದ ಕಾಂಡಬೊಳಗೆ ಪೊಳ್ಳನ್ನೂ ಹೊಂದಿರುವುದೂ ಬಿದಿರನ್ನು ಪ್ರತ್ಯೇಕ ವರ್ಗಕ್ಕೆ ಸೇರಿಸಲು ನೆರವಾದ ಅಂಶಗಳಾಗಿವೆ.

ಬಿದಿರಿನಲ್ಲಿ ಸುಮಾರು ೫೫೦ ಪ್ರಭೇದಗಳನ್ನು ಗುರುತಿಸಲಾಗಿದೆ. ಈ ಪ್ರಭೇದಗಳ ಮೂಲ 'ಬಾಂಬುಸೇ'. ಇದರಲ್ಲಿ ನಾಲ್ಕು ಮುಖ್ಯ ವರ್ಗಗಳಿವೆ. ಅರುಂಡಿಯಾನರಿಯಾ ಡೆಂಡ್ರೊಕಲಮಿಯಾ ಯುಬಂಬೂಸಿಯಾ ಮತ್ತು ಮೆಲೊಕಾನೆಯಾ ಈ ನಾಲ್ಕು ವರ್ಗಗಳಲ್ಲಿ ಪ್ರತಿಯೊಂದರಲ್ಲಿಯೂ ಮೂವತ್ತು ಉಪವರ್ಗಗಳಿವೆ. ಇವುಗಳಲ್ಲಿ ಅರುಂಡಿಯಾನರಿಯಾ, ಸೆಪಲೊಸ್ಟ್ಯಾಕಿಸಮ್ ಡೆಂಡ್ರೊಕಲಮುಸ್, ಗಿಗಾಂಟೋಕ್ಲೋಸೀಲಾ, ಮೆಲೋಕನ್ನಾ ಮತ್ತು ಆಕ್ಲಾಂಡ್ರಾ ಜಾತಿಯ ಬಿದಿರುಗಳು ವಾಣಿಜ್ಯ ಉಪಯುಕ್ತ ತಳಿಗಳು ಎಂಬುದಾಗಿ ಪರಿಗಣಿಸಲ್ಪಟ್ಟಿವೆ. ಇವು ಹೆಚ್ಚಾಗಿ ಭಾರತ, ಬರ್ಮಾ, ಚೀನ ಮತ್ತು ಮಲೇಶಿಯಾಗಳಲ್ಲಿ ಬೆಳೆಯುತ್ತವೆ. ಸೆಡೊಸಸಾ, ಪಿಲೊಸ್ಟ್ಯಾಕಿಸ್ ಮತ್ತು ಡೆಂಡ್ರೋ ಕಲಮುಸ್ ತಳಿಗಳು ಯುರೋಪಿನಲ್ಲಿ ಬೆಳೆಯುತ್ತವೆ. ಅಮೇರಿಕ ಸಂಸ್ಥಾನಗಳಲ್ಲಿ ಕಾಣಸಿಗುವ ಬಿದಿರಿನ ತಳಿಗಳು ಅರುಂಡಿಯಾನರಿಯಾ ಮ್ಯಾಕ್ರೋಸ್ಪೆರ್ಮಾ ಮತ್ತು ಟೆಕ್ಟಾ, ಸ್ಯೂಡೋಸಸಾ ಜಪಾನಿಕಾ ತಳಿ ಬ್ರಿಟನ್ನಿನಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ಬಿದಿರಿನ ಪ್ರಕಂದಗಳು ವರ್ತುಲಾಕಾರವಾಗಿ ಭೂಮಿಯ ಒಳಗೆ ಒಂದರ ಸನಿಹ ಮತ್ತೊಂದು ಒತ್ತೊತ್ತಾಗಿ ಚಿಗುರುತ್ತವೆ. ಭೂಮಿಯ ಮೇಲ್ಬದಿ ಇವು ಚಾಚಿಕೊಂಡಾಗ ರೈನೋಸಾರಸ್‌ನ ಕೋಡುಗಳೋಪಾದಿ ತೋರುತ್ತವೆ. ಪ್ರಕಂದದ ಬೇರುಗಳು ತುಂಬಾ ಗಡಸು. ಈ ಬೇರುಗಳಿಂದ ಪೋಲೋ ಚೆಂಡುಗಳನ್ನು ತಯಾರಿಸುವುದೂ ಉಂಟು.

ಪ್ರಕಂದದ ಮೇಲ್ಭಾಗವನ್ನು ಕಳಲೆ ಎಂದು ಕರೆಯಲಾಗುತ್ತದೆ. ಕಳಲೆಯು ಮೇಲ್ಭಾಗ ಹಾಗೂ ಮೈ ಹಾಳೆ ಹಾಗೂ ದಪ್ಪ ಸಿಪ್ಪೆಗಳಿಂದ ಕೂಡಿರುತ್ತದೆ. ಒಳಗೆ ಕಳಲೆ ತುಂಬಾ ಕೋಮಲ. ಹಾಗೂ ತೀರಾ ಮಧುರ. ಆದ್ದರಿಂದಲೇ ಪ್ರಾಣಿಗಳು ಕಳಲೆಯನ್ನು ತಿನ್ನಲು ಹಾತೊರೆಯುತ್ತವೆ. ಮೇಲ್ಪದರದ

ಹಾಳೆ ಗಟ್ಟಿಯಾಗದ ಅತಿ ಸಣ ಕಳಲೆಗಳನ್ನು ಪ್ರಾಣಿಗಳು ಅರಸಿ ತಿನ್ನುತ್ತವೆ. ಕಳಲೆ ಬೆಳೆದಂತೆಲ್ಲಾ ಹಾಳೆ ಹಾಗೂ ಸಿಪ್ಪೆ ಕಠಿಣವಾಗುತ್ತಾ ಹೋಗುತ್ತದೆ. ಈ ಕಳಲೆ ಮಾನವನಿಗೂ ಆಹಾರ ವ್ಯಂಜಕ ವಸ್ತು ಎನ್ನಿಸಿದೆ. ಕಳಲೆಯನ್ನು ಕತ್ತರಿಸಿ, ಹೋಳು ಮಾಡಿ ಎರಡು ಅಥವಾ ಮೂರು ದಿನಗಳ ಕಾಲ ಅದನ್ನು ನೀರಿನಲ್ಲಿ ನೆನಸಿ, ಅನಂತರ ಕುದಿಸಿ ಪದಾರ್ಥವಾಗಿ ಬಳಸುತ್ತಾರೆ. ಕಳಲೆಯ ಪಳಿದ್ಯ ಮಲೆನಾಡಿನ ಸ್ವಾದಕರ ಪದಾರ್ಥಗಳಲ್ಲಿ ಒಂದು. ಕಳಲೆಯಿಂದ ಉಪ್ಪಿನಕಾಯಿಯನ್ನೂ ತಯಾರಿಸುತ್ತಾರೆ.

ಅತಿ ವೇಗವಾಗಿ ಬೆಳೆಯುವ ಸಸ್ಯ ಬಿದಿರು. ದಿನವೊಂದಕ್ಕೆ ಸರಾಸರಿ ಇದು ೦.೬ ರಿಂದ ಒಂದು ಮೀಟರ್‌ಗಳಷ್ಟು ಎತ್ತರವಾಗಿ ಬೆಳೆಯುತ್ತದೆ. ಬಿದಿರು ಮೆಳೆಯ ಪಕ್ಕದಲ್ಲಿ ತಾಳ್ಮೆಯಿಂದ ಕುಳಿತಿದ್ದರೆ ಗಂಟೆ ಗಂಟೆಗೂ ಅದು ಎತ್ತರವಾಗುವುದನ್ನು ಸೂಕ್ಷ್ಮವಾಗಿ ಗಮನಿಸಲು ಸಾಧ್ಯ. ಬಿದಿರಿನ ಬೆಳವಣಿಗೆಯ ವೇಗ ಎಷ್ಟು ಎಂಬುದನ್ನು ಸೂಚಿಸಲು ಒಂದು ಘಟನೆಯನ್ನು ಉದಾಹರಿಸಬಹುದು: ಒಮ್ಮೆ ಅರಣ್ಯಾಧಿಕಾರಿಯೊಬ್ಬ ಕಾಡಿಗೆ ಹೋದಾಗ, ತನ್ನ ಟೋಪಿಯನ್ನು ತನ್ನ ಕೈಗೆಟುಕುವಂತಿದ್ದ ಬಿದಿರಿನ ಕಾಂಡವೊಂದರ ತುದಿಗೆ ಸಿಕ್ಕಿಸಿ, ಮರಳುವಾಗ ಅದನ್ನು ತೆಗೆದುಕೊಳ್ಳಲು ಮರೆತು ಬಂದುಬಿಟ್ಟ. ಮೂರನೆಯ ದಿನ ಅದರ ಬಳಿ ಹೋಗಿ, ಟೊಪ್ಪಿಗೆ ತೆಗೆದುಕೊಳ್ಳಲು ನೋಡಿದಾಗ, ಕಾಲಿನ ಮುಮ್ಮಡಿಗಳ ಮೇಲೆ ನಿಂತು, ಎರಡೂ ಕೈ ಮೇಲೆತ್ತಿ ಚಾಚಿದರೂ ಆತನಿಗೆ ಅದು ಎಟುಕಲಿಲ್ಲವಂತೆ!



"...ಈ ಟ್ಯುಟೋರಿಯಲ್‌ನ ಪ್ರಾರಂಭ ಸೋಡಾಂದ್ರೆ ನೂರೆಂಟು ವಿಘ್ನ."

ಬಿದಿರು ಕಾಂಡಗಳ ಶೀಘ್ರಗತಿಯ ಬೆಳವಣಿಗೆಯನ್ನು ಅರಿತಿದ್ದ ಚೀನೀಯರು ಹಿಂದೆ, ಕೈದಿಗಳು ತಮ್ಮ ಅಪರಾಧಗಳನ್ನು ಒಪ್ಪಿಕೊಳ್ಳುವಂತೆ ಮಾಡಲು ಇವನ್ನು ಸಾಧನವನ್ನಾಗಿ ಬಳಸುತ್ತಿದ್ದರಂತೆ. ಹೇಗೆ ಗೊತ್ತೇ: ಆಸನರಹಿತ ಕುರ್ಚಿಗಳಲ್ಲಿ ಅಪರಾಧಿಯನ್ನು ಬಿಗಿದು ಕೂರಿಸಿ, ಅದನ್ನು ಬಿದಿರು ಕಾಂಡದ ತುದಿಗೆ ಕಟ್ಟಿ, ಬಂಧಿಸಿಡುತ್ತಿದ್ದರಂತೆ. ಬಿದಿರು ಕಾಂಡ ಕ್ಷಣ ಕ್ಷಣಕ್ಕೆ ಬೆಳೆದಂತೆ ಕಾಂಡದ ತುದಿ ಅಪರಾಧಿಯ ಆಸನಕ್ಕೆ ಒತ್ತಲ್ಪಟ್ಟು, ಆತ ಆ ಒತ್ತುವಿಕೆ ಮತ್ತು ಚುಚ್ಚುವಿಕೆ ತಾಳಲಾರದೆ ತನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿದ್ದನಂತೆ!

ಕೇವಲ ಎರಡು ತಿಂಗಳ ಅವಧಿಯಲ್ಲಿ ಬಿದಿರು ಸಾಕಷ್ಟು ಎತ್ತರಕ್ಕೆ ಬೆಳೆದಿರುತ್ತದೆ. ಈ ಅವಧಿಯಲ್ಲಿ ಕಾಂಡದ ಸುತ್ತ ರಕ್ಷಕ ಹಾಳೆಗಳು ಆವರಿಸಲ್ಪಟ್ಟಿರುತ್ತವೆ. ಮೂರರಿಂದ ಐದು ವರ್ಷಗಳಲ್ಲಿ ಬಿದಿರು ಸಾಮಾನ್ಯವಾಗಿ ಪೂರ್ಣ ಪ್ರಮಾಣದ ಬೆಳವಣಿಗೆ ಪಡೆಯುತ್ತದೆ. ಬಿದಿರು ಬೆಳೆದಂತೆಲ್ಲಾ ಕಾಂಡದ ಹೊರಮೈ ಆವೃತ ಹಾಳೆಗಳು ಉದುರುತ್ತವೆ. ಆರಂಭಿಕ ಹಂತದಲ್ಲಿ ಬಿಳಿ, ಕೆಂಪು ಬಣ್ಣ ಹೊಂದಿದ್ದು. ಬೆಳೆದಂತೆ ಹಸಿರು ಬಣ್ಣ ತಳೆದು, ಪೂರ್ಣ ಬೆಳವಣಿಗೆಯ ಹಂತ ತಲುಪಿದಾಗ ಕಂದು ಬಣ್ಣ ತಳೆಯುತ್ತದೆ.

ಬಹುತೇಕ ಬಿದಿರಿನ ಎಲ್ಲಾ ತಳಿಗಳೂ ನೇರವಾಗಿ ಬೆಳೆಯುತ್ತವೆ. ಆದರೆ, ಟೆನೋಸ್ಟಾಕಿ-

ಯುಮ್ ಹೆಲ್‌ಫರಿ ತಳಿ ಇದಕ್ಕೆ ಅಪವಾದ. ಅದರ ಕಾಂಡ ಅಡ್ಡಾದಿಡ್ಡಿ, ಅಂಕುಡೊಂಕು. ಬಿದಿರಿನ ಕಾಂಡಗಳು ಗೇಣಂತರದಲ್ಲಿ ಗಣ್ಣು-ಗಳನ್ನು ಹೊಂದಿ, ಒಳಗೆ ಪೊಳ್ಳಾಗಿ, ವೃತ್ತಾ-ಕಾರದಲ್ಲಿರುತ್ತದೆ ಎಂಬುದು ಗೊತ್ತಷ್ಟೇ: ಆದರೆ, ಚಚ್ಚೌಕವಾಗಿಯೂ ಬೆಳೆಯುವ ಬಿದಿರು ಕಾಂಡಗಳು ಚೀನದಲ್ಲಿವೆ!

ಸಾಮಾನ್ಯವಾಗಿ ಬೆಳವಣಿಗೆ ಹೊಂದಿದ ಬಿದಿರು ಕಾಂಡದ ವ್ಯಾಸ ಆರರಿಂದ ಎಂಟು ಇಂಚುಗಳು. ಎತ್ತರ ೪೦ ರಿಂದ ೬೦ ಅಡಿಗಳು. ಕೆಲವೆಡೆ ಬಿದಿರು ಎತ್ತರ ೧೨೦ ಅಡಿಗಳಷ್ಟು ಎತ್ತರವಾಗಿಯೂ ಬೆಳೆಯುವುದುಂಟಂತೆ!

ಬಿದಿರು–ಅದು ಯಾವುದೇ ಪ್ರಭೇದದ್ದಾಗಿರಲಿ ಪ್ರತಿ ವರುಷ ಹೂ ಬಿಡುವುದಿಲ್ಲ. ಸಾಮಾನ್ಯ-ವಾಗಿ ೨೫-೫೦ ವರುಷಗಳಷ್ಟು ದೀರ್ಘ ಅಂತರ ದಲ್ಲಿ ಬಿದಿರು ಹೂ ಬಿಡುತ್ತದೆ. ಭಾರತದಲ್ಲಿ ಬಿದಿರು ಸಾಮಾನ್ಯವಾಗಿ ೩೨ ವರುಷಗಳ ಅಂತರದಲ್ಲಿ ಹೂ ಬಿಡುತ್ತದೆ ಎಂದು ಗುರುತಿಸ-ಲಾಗಿದೆ. ಬದುಕಿನ ಅವಧಿಯಲ್ಲಿ ಒಂದೇ ಒಂದು ಬಾರಿ ಹೂ ಬಿಡುವ ಬಿದಿರು ತಳಿಗಳೇ ಅಧಿಕ. ವಿಶೇಷವೆಂದರೆ ಕಾಡಿನ ಯಾವುದೋ ಒಂದು ಮೂಲೆಯಲ್ಲಿ ಬಿದಿರು ಮೆಳೆಯೊಂದು ಹೂ ಬಿಟ್ಟರೆ. ಅದರ ಅಲೆ ಕೆಲವೇ ದಿನಗಳಲ್ಲಿ ಇಡೀ ಕಾಡಿನ ಬಿದಿರ ಮೆಳೆಗಳಿಗೆ ಪಬ್ಬಿ, ಎಲ್ಲವೂ ಹೂ ಬಿಡಲಾರಂಭಿಸುತ್ತವೆ.

ಬಿದಿರು ಬೀಜ ಅಕ್ಕಿಯ ಆಕಾರ, ಗಾತ್ರದ್ದು. ಅಂತೆಯೇ ಬಿದಿರು ಬೀಜ ಬಿದಿರಕ್ಕಿ ಎನ್ನುವು-ದಾಗಿಯೂ ಕರೆಯಲ್ಪಡುತ್ತದೆ. ಆದರೆ ಕೆಲವು ಬಿದಿರು ತಳಿಗಳ ಬೀಜದ ಗಾತ್ರ ದೊಡ್ಡದು. ಅಸ್ಸಾಂ ಪ್ರದೇಶದಲ್ಲಿ ಬೆಳೆಯುವ ಮೆಲೊಕನ್ನಾ ಬ್ಯಾಕಿ ಫೇರಾ ಎನ್ನುವ ಬಿದಿರು ತಳಿಯ ಬೀಜ ಪೇರಲ ಹಣ್ಣಿನಷ್ಟು ದೊಡ್ಡದಾಗಿರುತ್ತದೆ. ಈ ಬೀಜದಲ್ಲಿ ಪಿಷ್ಟ ಪದಾರ್ಥ ಹೆಚ್ಚು. ಈ ಬೀಜ ಗಳನ್ನು ಜನ ತಿನ್ನುತ್ತಾರೆ. ಬೇಯಿಸಿ ವ್ಯಂಜಕ ತಯಾರಿಸುತ್ತಾರೆ. ಪ್ರಾಣಿಗಳಿಗಂತೂ ಈ ಬೀಜ ತುಂಬಾ ಇಷ್ಟವಾದದ್ದು. ಕೆಲವೊಮ್ಮೆ, ದೊಡ್ಡ ಗಾತ್ರದ ಈ ಬೀಜಗಳು ಮೊದಲು ಕಾಂಡದಿಂದ ಉದುರದೆ ಚಿಗುರೊಡೆದು, ಆ ಚಿಗುರು ೩೦ ಸೆಂಟಿಮೀಟರ್ ಬೆಳೆದ ನಂತರವೇ ಕೆಳಗುರುಳುವುದೂ ಉಂಟು. ಹೀಗೆ ಕಾಂಡಗಳ ಮೇಲಿದ್ದೇ ಚಿಗುರೊಡೆಯುವ ಬೀಜಗಳ ಈ ಅವಸ್ಥೆಯನ್ನು ಸಸ್ಯ ವಿಜ್ಞಾನಿಗಳು 'ವಿವಿಪಾರಿ' ಎಂದು ಕರೆದಿದ್ದಾರೆ.

ಬಿದಿರಿನ ಕಾಂಡವನ್ನು ಸಣ್ಣ ಸಿಬಿಕೆಗಳನ್ನಾಗಿ ಸೀಳಿ. ಆ ಸಿಬಿಕೆಯ ತುದಿಯನ್ನು ಚೂಪಾಗಿಸಿ ಶಸ್ತ್ರಕ್ರಿಯೆಯ ಪರಿಕರವನ್ನಾಗಿ ಹಿಂದೆ ಶಸ್ತ್ರ ಕ್ರಿಯಾ ಚಿಕಿತ್ಸಕರು ಬಳಸುತ್ತಿದ್ದರಂತೆ! ಬಿದಿರಿನ ಕೇಸರದಂಡ ಹಾಗೂ ನಾರುಗಳನ್ನು ಇದ್ದಲಿನ ಸಾರವಾಗಿ ಮಾರ್ಪಡಿಸಿ ಎಡಿಸನ್ ತನ್ನ ವಿದ್ಯುತ್ ಲ್ಯಾಂಪ್‌ಗಳನ್ನು ಆರಂಭಿಕ ಹಂತದಲ್ಲಿ ಉರಿಸುತ್ತಿದ್ದನಂತೆ.

ಬರವಣಿಗೆಯ ಕಾಗದ, ವಿದ್ಯುತ್ ಬ್ಯಾಟರಿ-ಗಳಿಗೆ ಇದ್ದಿಲು, ಸ್ಫಟಿಕದ ಸಂಯುಕ್ತ ವಸ್ತು ಬೇರ್ಪಡಿಸುವ ಬಿಳಿಯ ಪುಡಿ ಹೀಗೆ ಹಿಂದಿ-ನಿಂದಲೂ ಈ ಹಲವು ಬಗೆಯಲ್ಲಿ ಬಿದಿರು ಬಳಕೆ-ಯಾಗುತ್ತಾ ಬಂದಿದೆ. ಬಿದಿರು ಕಾಂಡದ ಸುತ್ತ, ಒಳಗಿನ ಪೊಳ್ಳಿನಲ್ಲಿ ಶೇಖರವಾಗುವ 'ತಬರ್ಶೀರ್' ಎನ್ನುವ ವಸ್ತುವನ್ನು ವೀರ್ಯ-ವರ್ಧಕ ಟಾನಿಕ್ ತಯಾರಿಕೆಯಲ್ಲಿ ಬಳಸುತ್ತಾರೆ. ಬಿದಿರನ್ನು ಸುಟ್ಟು ಅದರ ಬೂದಿಯನ್ನು ಭಟ್ಟಿ ಇಳಿಸಿ, ಅದನ್ನು ಡೀಸಲ್ ಇಂಧನದಲ್ಲಿ ಸೇರಿಸಿ, ಬಳಸುವುದೂ ಉಂಟು.

ಬಳಕೆಗಾಗಿ ಹಲವು ವಸ್ತುಗಳ ತಯಾರಿಕೆ, ಅವುಗಳ ಮಾರಾಟದಿಂದ ದೊರೆಯುವ ಲಾಭದ ಆಶೆ ಹಾಗೂ ವ್ಯವಸಾಯ ನಿಮಿತ್ತ ಅರಣ್ಯ ಭೂಮಿಯ ಬಳಕೆ–ಮೊದಲಾದ ಕಾರಣಗಳಿಂದ ಮನುಷ್ಯ ಬಿದಿರು ಮೆಳೆಗಳನ್ನು ನಾಶಗೊಳಿಸು-ತ್ತಿದ್ದಾನೆ. ಜೊತೆಗೆ ಕಾಗದ ತಯಾರಿಕಾ ಕಾರ್ಖಾನೆಗಳೂ ಬಿದಿರು ನಾಶಕ್ಕೆ ನಡೆಸುತ್ತಿರುವ ಪ್ರಯತ್ನ ಸಣ್ಣ ಪ್ರಮಾಣದ್ದೇನಲ್ಲ. ❁

ಪುಷ್ಕಿನ್ನನ ಕೊನೆಯ ಕ್ಷಣಗಳು

ಜಿ. ಎಂ. ಕೃಷ್ಣಮೂರ್ತಿ

೨೮ ಜನೆವರಿ ೧೮೩೭...

ಪುಷ್ಕಿನ್ನರ ಮನೆ ತುಂಬಾ ಜನ ತುಂಬಿ ಹೋಗಿದ್ದರು. ಎಲ್ಲರ ಮುಖಗಳೂ ಕಳೆಗುಂದಿದ್ದವು. ಎಲ್ಲೆಲ್ಲೂ ಆತಂಕ, ಉದ್ವೇಗ ಒಡಮೂಡಿತ್ತು. ಡಾಕ್ಟರುಗಳಾದ ಅರೆಂಡ್ಟ ಮತ್ತು ಸ್ಪಾಸ್ಕಿ ಅಸಹಾಯಕರಂತೆ ಹೆಗಲು ಕುಣಿಸುತ್ತ, ಜೋಲುಮುಖ ಹೊತ್ತು ಓಡಾಡುತ್ತಿದ್ದರು. ಅಪಾರ ಯಾತನೆಯನ್ನನುಭವಿಸುತ್ತಿದ್ದ ಪುಷ್ಕಿನ್ನನ ಎದುರು ಅವನ ಗೆಳೆಯ ವ್ಲಾಡಿಮಿರ್ ದಾಹ್ಲ್ ನಿಂತಾಗ, ಆ ನೋವಿನಲ್ಲೂ ನಕ್ಕು ಕೈ ನೀಡಿದ. "ಸಹೋದರನೇ, ಪರಿಸ್ಥಿತಿ ಕೆಟ್ಟದಾಗಿದೆ." ಪುಷ್ಕಿನ್ನನ ಮಾತು ಕೇಳಿದ ದಾಹ್ಲ್ ಮುಖ ಮುಚ್ಚಿಕೊಂಡು ಗೆಳೆಯನ ಪಕ್ಕದಲ್ಲಿ ಕುಸಿದು ಕುಳಿತ. ಆ ಗೆಳೆಯ ಈ ಲೋಕ ಬಿಟ್ಟು ತೆರಳುವವರೆಗೂ ಈ ಗೆಳೆಯ ಆ ಜಾಗ ಬಿಟ್ಟು ಮೇಲೇಳಲಿಲ್ಲ. ಅಂದು ಪುಷ್ಕಿನ್ ದಾಹ್ಲನನ್ನು ಮೊಟ್ಟ ಮೊದಲ ಬಾರಿ ಎನ್ನುವಂತೆ ಅತಿ ಆತ್ಮೀಯತೆಯಿಂದ ಮಾತನಾಡಿಸಿದ್ದ. ದಾಹ್ಲ್ ಕೂಡಾ ಅದೇ ಆತ್ಮಿಯತೆಯಿಂದ ಉತ್ತರಿಸಿದ್ದ. ಈ ಜಗತ್ತಿಗೆ ಬೇಡವಾದ ಆತ್ಮದೊಂದಿಗೆ, ಇಲ್ಲಿ ಇನ್ನೂ ಇರಬಹುದಾದ ಆತ್ಮ ಬೆರೆತು ಹೋಗಿತ್ತು.

ಪುಷ್ಕಿನ್ ತುಂಬಾ ಶಾಂತ ಮನಸ್ಸಿನಿಂದಿದ್ದ. ಎಲ್ಲರೊಂದಿಗೆ ತುಂಬಾ ಸ್ನೇಹದಿಂದ ಮಾತಾಡುತ್ತಿದ್ದ. ಆತ ಸಾವನ್ನು ನಿರೀಕ್ಷಿಸುತ್ತಿರುವಂತಿತ್ತು. ತನ್ನ ಅಂತಿಮ ಘಳಿಗೆ ಹತ್ತಿರವಾಗುತ್ತಿದೆಯೆಂಬುದನ್ನು, ಪುಷ್ಕಿನ್ ಈಗಾಗಲೇ ಅರಿತುಕೊಂಡಿದ್ದ. ಅಂತಹ ಅಂತ್ಯವನ್ನೊಪ್ಪಿಕೊಳ್ಳಲು ಆತ ಸಿದ್ಧನಾಗುತ್ತಿದ್ದ. ಹತ್ತಿರವಿದ್ದ ಗೆಳೆಯ ಪ್ಲೆಟ್ನ್ಯೊವ್ ಉದ್ಗಾರವೆತ್ತಿದ್ದ, ಪುಷ್ಕಿನ್ನನ್ನು ನೋಡುತ್ತಲೇ ಇದ್ದರೆ ಸಾವಿನ ಭಯ ನನ್ನಿಂದ ದೂರವಾಗುತ್ತಿದೆ." ತನ್ನನ್ನು ಸುತ್ತುವರೆದವರೆಲ್ಲರೂ ಧೈರ್ಯ ಹೇಳುತ್ತಿರುವುದನ್ನೂ, ಸಮಾಧಾನಿಸಲು ಪ್ರಯತ್ನಿಸುವುದನ್ನೂ ಪುಷ್ಕಿನ್ ಮೆಚ್ಚಿಕೊಂಡಿರಲಿಲ್ಲ. "ನಮಗೆ ತುಂಬಾ ಭರವಸೆ ಇದೆ, ನೀನು ನಮ್ಮನ್ನು ನಿರಾಶೆಗೊಳಿಸಬಾರದು,"ಎಂದಾಗ ಪುಷ್ಕಿನ್ ಉತ್ತರಿಸಿದ್ದ "ಇಲ್ಲ ಸ್ನೇಹಿತ, ಖಂಡಿತಾ ಸಾಧ್ಯವಿಲ್ಲ. ಇನ್ನು ಇಲ್ಲಿಯ ಬಾಳು ನನ್ನ ಪಾಲಿಗಿಲ್ಲ. ನಾನು ಸಾಯುತ್ತಿದ್ದೇನೆ. ಅದು ಅನಿವಾರ್ಯ ಕೂಡಾ."

೨೮ ರ ರಾತ್ರಿಯೆಲ್ಲಾ ಇದೇ ರೀತಿಯ ಮಾತುಗಳನ್ನು ಪುಷ್ಕಿನ್ ಮತ್ತೆ ಮತ್ತೆ ಉಚ್ಚರಿಸುತ್ತಿದ್ದ. ಸ್ವಲ್ಪ ಹೊತ್ತು ಸುಮ್ಮನೆ ಮಲಗಿರುತ್ತಿದ್ದ. ಆದರೆ ಒಳಗಿನ ನೋವು ಬಂದು ಅಪ್ಪಳಿಸಿದಾಗ ತಟ್ಟನೆ ಎಚ್ಚೆತ್ತು, ಮುಖ ಹಿಂಡಿಕೊಂಡು ಪರಿತಪಿಸುತ್ತಿದ್ದ. "ಈ ನೋವನ್ನು ಇನ್ನೂ ಬಹಳ ಕಾಲ ಅನುಭವಿಸಬೇಕೇನು? ಸಾವು ಬೇಗನೆ ಬಂದುಬಿಡಲಿ. ಬಡಿದಿದ್ದ ಗುಂಡಿನಿಂದಾದ ಯಾತನೆಯನ್ನು ತಡೆದುಕೊಳ್ಳಲು ಪ್ರಯಾಸಪಡುತ್ತಿದ್ದ ಪುಷ್ಕಿನ್ ಭಾರೀ ಹೋರಾಟ ನಡೆಸಿದ್ದ. ಈಹೋರಾಟ ಕ್ಷಣದಿಂದ ಕ್ಷಣಕ್ಕೆ ಕಳೆಗುಂದುತ್ತಿರುವುದನ್ನೂ ಆತ ಅರಿತಿದ್ದ.

ಇಡೀ ರಾತ್ರಿ ಪುಷ್ಕಿನ್ ದಾಹ್ಲನ ಕೈ ಬಿಟ್ಟಿರಲಿಲ್ಲ. ಆಗೊಮ್ಮೆ ಈ ಗೊಮ್ಮೆ, ನೀರು ಬೇಕೆಂದು ಕೇಳುತ್ತಿದ್ದ. "ಸ್ವಲ್ಪ ಐಸ್ ತುಂಡು

(ಆಧಾರ: ಸೋವಿಯತ್ ಲಿಟರೇಚರ್)

"ಕೊಡು" ಎಂದು ಕೇಳುತ್ತಿದ್ದ. ಇಲ್ಲವೆ ತಾನೇ ಪಕ್ಕದಲ್ಲಿದ್ದ ಶೆಲ್ಫಿನ ಮೇಲಿದ್ದ ಹೂಜಿಯಿಂದ ನೀರನ್ನು ಗ್ಲಾಸಿನಲ್ಲಿ ಹೊಯ್ದುಕೊಂಡು ಕುಡಿಯುತ್ತಿದ್ದ. ತನ್ನ ಕಪೋಲಗಳ ಮೇಲೆ ಮಂಜುಗಡ್ಡೆಯ ಚೂರುಗಳನ್ನಿಟ್ಟುಕೊಂಡು ಉಜ್ಜಿಕೊಳ್ಳುತ್ತಿದ್ದ. ತನ್ನ ಹೊಟ್ಟೆಯ ಮೇಲಿದ್ದ ಕಂಪ್ರೆಸ್ಸನ್ನು ಬದಲಾಯಿಸಿಕೊಳ್ಳುತ್ತಾ ತನ್ನಲ್ಲಿಯೇ ತಾನು "ಈಗ ಎಷ್ಟೋ ಆರಾಮವಾಗಿದೆ, ಈಗ ಹಾಯೆನ್ನಿಸಿದೆ" ಎಂದೆಲ್ಲಾ ಗೊಣಗುತ್ತ ಆತ ಯಾರನ್ನು ಸಮಾಧಾನಪಡಿಸುತ್ತಿದ್ದನೋ ತಿಳಿಯದಾಗಿತ್ತು.

ನಿಜವಾಗಿಯೂ ಆತ ಭಾರಿ ಯಾತನೆಯಿಂದ ನರಳುತ್ತಿದ್ದ. ಆದ್ದರಿಂದಲೇ ಆತ ಈ ರೀತಿ ಗೊಣಗಾಡುತ್ತಿದ್ದ. ಆತನ ಹೊಟ್ಟೆಯೊಳಗೆ ಉರಿಯೆದ್ದಿತ್ತು. ಗುಲ್ಮವಿರುವೆಡೆಯಲ್ಲಿ ಅಪಾರವಾದ ನೋವು ಅವನನ್ನು ಕಂಗೆಡಿಸಿತ್ತು. ಬಹುಶಃ ಭಾರಿ ರಕ್ತನಾಳಗಳು ಒಡೆದು ಭಗ ಭಗನೆ ಉರಿಯುತ್ತಿದ್ದವು.

"ಅಯ್ಯೊ ಎಂಥಾ ನೋವಿದು?" ಯಾತನೆಯ ಆರ್ಭಟ ಹೆಚ್ಚಿದಾಗ ಕನಲುತ್ತಿದ್ದ. "ಈ ನೋವು ನನ್ನ ಹೃದಯವನ್ನೇ ಒಣಗಿಸುತ್ತಿದೆ."

ತನ್ನನ್ನು ಸ್ವಲ್ಪ ಎತ್ತುವಂತೆ ಇಲ್ಲವೇ ಬೇರೆ ದಿಕ್ಕಿಗೆ ತಿರುಗಿಸಿ ಮಲಗಿಸುವಂತೆ ಪ್ರಾರ್ಥಿಸುತ್ತಿದ್ದ. ದಿಂಬನ್ನು ಸರಿಯಾಗಿಡುವಂತೆ ಹೇಳುತ್ತಿದ್ದ. ಹಾಗೆ ಮಾಡಲು ಹೊರಟ ಕೈಗಳನ್ನು ತಡೆದು ನಿಲ್ಲಿಸಿ "ಈಗ ಸರಿಹೋಯಿತು. ಇಷ್ಟೇ ಸಾಕು. ಈಗ ಆರಾಮವಾಯಿತು." ಎನ್ನುತ್ತಿದ್ದ. ತಟ್ಟನೇ ಪುಷ್ಕಿನ್, ದಾಹ್ಲ್‌ನನ್ನು ಪ್ರಶ್ನಿಸಿದ. "ನನ್ನ ಹೆಂಡತಿಯೊಂದಿಗೆ ಯಾರಿದ್ದಾರೆ?"

"ತುಂಬಾ ಜನರಿದ್ದಾರೆ. ಎಲ್ಲರೂ ಸಮಾಧಾನ ಹೇಳುತ್ತಿದ್ದಾರೆ. ಡ್ರಾಯಿಂಗ್ ರೂಮು, ಹಾಲ್ ತುಂಬಿ ಹೋಗಿದೆ."

"ಸರಿ, ಆದರೆ ನೀನೂ ಹೋಗಿ ಸಮಾಧಾನ ಹೇಳು. ನಾನು ಚೆನ್ನಾಗಿರುವೆನೆಂದು ತಿಳಿಸು. ಅವಳು ಇನ್ನಷ್ಟು ಕಂಗೆಡದಿರಲಿ."

೨೮ರ ಬೆಳಗಿನಿಂದಲೇ ಅವನ ನಾಡಿ ದುರ್ಬಲವಾದಂತೆ ಕಂಡಿತ್ತು. ಆದರೆ ಮಧ್ಯಾಹ್ನದ ಹೊತ್ತಿಗೆ ಆತ ಗೆಲುವಾಗಿರುವಂತೆ ತೋರಿತು. ಸುಮಾರು ಐದು – ಆರು ಗಂಟೆಯಲ್ಲಿ ನಾಡಿಯ ಮಿಡಿತ ನೂರಾ ಇಪ್ಪತ್ತಕ್ಕಿಂತ ಹೆಚ್ಚಿರಲಿಲ್ಲ. ಅವನ ಇಡೀ ದೇಹ ಜ್ವರದಿಂದ ಸುಡುತ್ತಿತ್ತು. ಡಾಕ್ಟರರ ಆದೇಶದಂತೆ ಚುಚ್ಚುಮದ್ದನ್ನು ಕೊಡಲಾಯಿತು. ಎಷ್ಟೋ ಬಾರಿ ಪುಷ್ಕಿನ್ ತನ್ನ ಕೈಯಿಂದ ತಾನೇ ಚುಚ್ಚಿಕೊಂಡಿದ್ದ. ಅವನ ನಾಡಿ ನಿಧಾನವಾಗಿಯಾದರೂ ಬಲಗೊಳ್ಳುತ್ತಿತ್ತು. ಇದರಿಂದಾಗಿ ಎಲ್ಲರಲ್ಲೂ ಭರವಸೆಯ ಮಿಂಚು ಸುಳಿಯುತ್ತಿತ್ತು. ಈ ಆಸೆಯ ಮಿಂಚು ಅವನನ್ನೂ, ಅವನ ಆಪ್ತರನ್ನೂ ಮೋಸಗೊಳಿಸಿತ್ತು.

ಪುಷ್ಕಿನ್ ಎಲ್ಲರ ಮುಖಗಳಲ್ಲೂ ಹೊರಹೊಮ್ಮುತ್ತಿದ್ದ ಭರವಸೆಯ ಮಿಂಚನ್ನು ಗಮನಿಸಿದ್ದ. ಸ್ನೇಹಿತನ ಕೈ ಹಿಡಿದು ಪ್ರಶ್ನಿಸಿದ: "ದಾಹ್ಲ್ ನಿಜ ಹೇಳು. ನಾನು ಬೇಗನೇ ಸಾಯುವೆನೇನು?"

"ಇಲ್ಲ, ನಮಗೆ ತುಂಬಾ ಭರವಸೆ ಇದೆ. ಖಂಡಿತವಾಗಿಯೂ ನೀನು ಬದುಕುವೆ."

"ಸರಿ, ನಿನಗೆ ವಂದನೆಗಳು."

ಬಹುಶಃ ಪುಷ್ಕಿನ್ ಅದೊಂದು ಬಾರಿ ಮಾತ್ರವೇ ತನ್ನ ಭರವಸೆಯನ್ನು ನಂಬಿದ್ದ. ಇಲ್ಲವೇ ನಂಬಿದಂತೆ ನಟಿಸಿದ್ದ. ಆದರೆ ಮುಂದೆ ಅವನು ಅಂತಹ ಯಾವುದೇ ನಂಬಿಕೆಯನ್ನೂ ತಳೆಯಲೇ ಇಲ್ಲ. "ಬೇಗನೇ, ಬೇಗನೇ ಎಲ್ಲವೂ ಮುಗಿದು ಹೋಗುವುದೇನು?" ಸ್ವಲ್ಪ ತಡೆದು ಪುಷ್ಕಿನ್ ಮತ್ತೆ, ಮತ್ತೆ ಗೊಣಗುತ್ತಿದ್ದ: "ದಯವಿಟ್ಟು ಎಲ್ಲವೂ ಬೇಗನೇ ಮುಗಿದು ಹೋಗಲಿ."

ದಾಹ್ಲ್ ಒಂದು ಗ್ಲಾಸಿನಲ್ಲಿ ಔಡಲೆಣ್ಣೆಯನ್ನು ಸುರಿದು ಪುಷ್ಕಿನ್ನನಿಗೆ ಕುಡಿಯಲು ನೀಡಿದ. "ಅದರ ಸವಿ ನಿನಗೆ ರುಚಿಸದಿರಬಹುದು. ಆದರೂ ಅದು ನಿನಗೆ ಒಳ್ಳೆಯದನ್ನು ಮಾಡುವುದು.


ಕುಡಿದು ಬಿಡು" ಒಮ್ಮೆಲೇ ಎಲ್ಲವನ್ನು ಬಾಯೊಳಗೆ ಸುರಿದುಕೊಂಡ ಪುಷ್ಕಿನ್ ಮುಖ ಸಿಂಡರಿಸಿಕೊಂಡು ಅಂದ: "ಅದು ಔಡಲೆಣ್ಣೆ-ಯಲ್ಲವೇ? ಅದು ನೀರ ಮೇಲೆ ತೇಲುತ್ತಿತ್ತಲ್ಲ. ಎಣ್ಣೆ ಮೇಲ್ಗಡೆಯಿತ್ತಲ್ಲ. ನೀರು ಕೆಳಗಿತ್ತಲ್ಲ."

ದಾಹ್ಲ್ ಸಮಾಧಾನ ಹೇಳಿದ: "ಅದಕ್ಕಾಗಿ ನೀನು ತಲೆಕೆಡಿಸಿಕೊಳ್ಳಬೇಡ. ಹೊಟ್ಟೆಯಲ್ಲಿ ಎಲ್ಲವೂ ಕಲಸುಮೇಲೋಗರವಾಗುತ್ತೆ."

ಪುಷ್ಕಿನ್ ತಲೆಯಲ್ಲಾಡಿಸಿ ನಕ್ಕ.

ಅಂದಿನ ರಾತ್ರಿಯೆಲ್ಲಾ ದಾಹ್ಲ್ ಪುಷ್ಕಿನ್ನನ ಪಕ್ಕ ಕೂತು, ಮಹಾಕವಿಯ ಅಂತಿಮ ಹೋರಾಟವನ್ನು ಗಮನಿಸುತ್ತಿದ್ದ. ಅದು ಜೀವನ್ಮರಣಗಳ ಮಧ್ಯದ ಹೋರಾಟವಾಗಿತ್ತು. 'ಅವನು ಕೊಲ್ಲಲ್ಪಟ್ಟಿದ್ದಾನೆ.' ಎಂಬ ಪುಷ್ಕಿನ್ ಕೃತಿ 'ಒನೆ ಜಿನ್'(One jin)ನ ಮಾತುಗಳು ದಾಹ್ಲ್‌ನ ಕಿವಿಗಳಲ್ಲಿ ಮೊರೆಯುತ್ತಿದ್ದವು ಮಹಾ ಕವಿ ಶೇಕ್ಸ್‌ಪಿಯರ್‌ನ ಮಾತುಗಳಿಗೆ ಸಮಾನ-ವಾಗಿ ಬಂದ ಮಾತುಗಳಿವು: "ಇರುವುದು ಅಥವಾ ಇಲ್ಲದಿರುವುದು" – ಪುಷ್ಕಿನ್ನನ ಪಕ್ಕ ಕೂತ ಗೆಳೆಯ ಇಂತಹ ಭಯಾನಕ ಆಲೋಚನೆಗಳಿಂದ ತಲ್ಲಣಗೊಂಡಿದ್ದ. ಉಸಿರಾಡಲೂ ಭಯವಾಗು ವಂತಹ ವಾತಾವರಣವದು. ಬಹುಶಃ ಯಾರೇ ಆಗಲಿ ಜೀವನಾನುಭವದ ಎಲ್ಲ ಜಾಣ್ಮೆಯನ್ನೂ ಇಂಥಲ್ಲಿಯೇ ಕಲಿಯಬೇಕಾಗಿತ್ತು. ಜೀವನ ದರ್ಶನವೆನ್ನುವುದು ಇಲ್ಲಿ ಮಾತ್ರವೇ ಕಂಡು ಬರುವಂತಹದು. ಆತ್ಮ ದೇಹವನ್ನು ಬಿಟ್ಟು ಹೋಗಲು ತಯಾರಿ ನಡೆಸಿತ್ತು. ಜೀವಂತ-ವಿರುವ ಸತ್ವಗಳೆಲ್ಲವೂ ನಿರ್ಜೀವ ಸ್ತರಕ್ಕೆ ರೂಪಾಂತರಗೊಳ್ಳುತ್ತಿದ್ದವು. ಬಹುಶಃ ಯಾವುದೇ ವಿಶ್ವವಿದ್ಯಾನಿಲಯ ಇಲ್ಲವೇ ಭಾರಿ ಕಟ್ಟಿನ ಗ್ರಂಥಗಳು ತೋರಿಸಿಕೊಡಲಾರದಂತಹ ಜೀವಂತ ಸತ್ಯವೊಂದು ಕಣ್ಣೆದುರು ನಡೆಯು-ತ್ತಿತ್ತು. ನೋವನ್ನು ತಾಳಲಾರದೇ ಪುಷ್ಕಿನ್ ಮುಖ ಹಿಂಡುತ್ತಿದ್ದ. "ಸಮಾಧಾನ ತಂದುಕೋ ಗೆಳೆಯಾ. ಏನೂ ಮಾಡುವಂತಿಲ್ಲ. ನಿನ್ನ ನೋವನ್ನು ತಡೆದುಕೊಳ್ಳಬೇಡ. ಒಮ್ಮೆ ಕಿರುಚಿಬಿಡು. ಅದರಿಂದ ನಿನಗೆ ಸ್ವಲ್ಪವಾದರೂ ಸಮಾಧಾನವಾದೀತು" ಎಂದರೆ ಪುಷ್ಕಿನ್ ಒಪ್ಪುತ್ತಿರಲಿಲ್ಲ. "ಹಾಗೆ ಮಾಡಲಾರೆ ಗೆಳೆಯಾ. ನನ್ನ ಹೆಂಡತಿಗೆ ನಾನೆಷ್ಟು ನೋವು ತಿನ್ನು ತ್ತಿರುವೆನೆಂದು ಗೊತ್ತಾಗಿಬಿಡುತ್ತದೆ." ಸುಸ್ತಾದ ಪುಷ್ಕಿನ್ ವೇಗವಾಗಿ ಉಸಿರಾಡುತ್ತ ಗೊಣಗು ತ್ತಿದ್ದ "ಈ ಎಲ್ಲ ಅವಿವೇಕ ನನ್ನನ್ನು ಎಷ್ಟೊಂದು ಬಾಧಿಸುತ್ತಿದೆ. ಇದೇ ಒಂದು ವಿಪರ್ಯಾಸ ಕೂಡಾ."

ಅವನ ನಾಡಿ ದುರ್ಬಲವಾಗತೊಡಗಿತ್ತು.



"ಅವರು ರಾಜಕೀಯ ಸೇರುವುದಕ್ಕೆ ಮುನ್ನ ಕ್ರಿಕೆಟ್ ಆಟಗಾರರಾಗಿದ್ದರು. ಭಾಷಣಕ್ಕೆ ಅವರು ಯಾವಾಗಲೂ ಹೀಗೆಯೇ ಬರುವುದು. ಅವರು ಸತತ ಮೂರು ಗಂಟೆ ಕಾಲ ಮಾತಾಡಿದರೂ ಕಲ್ಲು ಹೊಡೆಯುವ ಧೈರ್ಯ ಯಾರಿಗೂ ಆಗುವುದಿಲ್ಲ!"

ಅದು ತಟ್ಟನೇ ಮಾಯವಾಯಿತು. ಅವನ ಕೈಗಳು ತಣ್ಣಗಾಗತೊಡಗಿದವು. ಜನವರಿ ೨೯ರ ಮಧ್ಯಾಹ್ನದ ಎರಡು ಗಂಟೆಗಳನ್ನು ಅದೇ ತಾನೇ ಗಡಿಯಾರ ಬಡಿದಿತ್ತು. ಪುಷ್ಕಿನ್ನನ ದೇಹದಲ್ಲಿ ಉಳಿದದ್ದು ಎಲ್ಲೋ ಅಲ್ಪ ಸತ್ವ ಮಾತ್ರ. ಬಹುಶಃ ಇನ್ನು ಕೇವಲ ಮುಕ್ಕಾಲು ಗಂಟೆ ಮಾತ್ರ ಉಳಿಯುವಂತಹದದು. ಅವನಲ್ಲಿನ್ನೂ ಉಳಿದದ್ದು ಲವಲವಿಕೆಯ ಚೂರು ಮಾತ್ರ. ಒಂದೆರಡು ಕ್ಷಣಗಳು ಆತ ಮಂಕನಂತಿರುತ್ತಿದ್ದ. ಮತ್ತೆರಡು ಕ್ಷಣಗಳಲ್ಲಿ ಹುರುಪುಗೊಳ್ಳುತ್ತಿದ್ದ.

"ನನ್ನನ್ನು ಎತ್ತು. ನನ್ನೊಂದಿಗೆ ಬಾ." ಪುಷ್ಕಿನ್ ಮತ್ತೆ ಗೊಣಗುತ್ತಿದ್ದ. "ಸ್ನೇಹಿತನೇ ನಾನೊಂದು ಕನಸು ಕಂಡೆ. ನಾವಿಬ್ಬರೂ ಆ ಪುಸ್ತಕಗಳ ರಾಶಿಯನ್ನೇರಿ, ಶೆಲ್ಫಿನ ಮೇಲೇರಿ, ಮೇಲೆ ಮೇಲೆ ಹೋಗುತ್ತಿದ್ದವು. ನಾನಾದರೋ ದಿಗ್ಭ್ರಮೆಗೊಂಡಿದ್ದೆ."

ಕೆಲವು ಕ್ಷಣ ಬಿಟ್ಟು ಮತ್ತೆ ಪ್ರಶ್ನಿಸುತ್ತಿದ್ದ: "ಅದ್ಯಾರು? ನೀನೇ ಏನು? ನೀನೇ ಏನು ನನ್ನ ಸ್ನೇಹಿತ. ಓ ಗೆಳೆಯಾ, ನಿನ್ನ ಗುರುತು ಹಿಡಿಯಲಾರೆ...ಹಾಗಿದ್ದರೆ ನನ್ನೊಂದಿಗೇ ಬಾ... ಒಟ್ಟಾಗಿ ಹೋಗುವಾ..."

ದಾಹ್ಲ್ ಹತ್ತಿರವಿದ್ದವರಿಗೆ ಉಸಿರಿದ: "ಅವನು ಹೊರಟು ಹೋಗುತ್ತಿದ್ದಾನೆ."

ಕಣ್ಣು ತೆರೆದ ಪುಷ್ಕಿನ್ ಉಪ್ಪಿನಕಾಯಿ ಬೇಕೆಂದ. "ನನ್ನ ಹೆಂಡತಿಯನ್ನು ಕರೆಯಿರಿ. ಅವಳೇ ತಿನ್ನಿಸಲಿ" ಎಂದು ತನ್ನ ಅಂತಿಮ ಇಚ್ಛೆಯನ್ನು ವ್ಯಕ್ತಪಡಿಸಿದ. ದುಃಖ ತಡೆಯದೇ ಕುಸಿಯುತ್ತಿದ್ದ ಹೆಂಡತಿ ನತಾಲಿಯ ನಿಕೊಲಾಯೆವ್ನಾ ದೂರದ ಲೋಕಕ್ಕೆ ಪ್ರಯಾಣ ಹೊರಟ ಗಂಡನ ಹಾಸಿಗೆಯ ಬಳಿ ಕುಸಿದು ಬಿದ್ದಳು. ಒಂದಾದ ಮೇಲೆ ಒಂದರಂತೆ, ಗಂಡನ ಬಾಯಲ್ಲಿ ಚಮಚದಿಂದ ಉಪ್ಪಿನಕಾಯಿಯನ್ನು ಸುರಿಯಲುತೊಡಗಿದಳು. ಗಂಡನ ಹಣೆಯ ಮೇಲೆ ತನ್ನ ಮುಖ ಒತ್ತಿ ಅಳುವನ್ನು ತಡೆಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದಳು. ಪುಷ್ಕಿನ್ ಅವಳ ತಲೆಗೆ ತನ್ನ ಮುಖ ಒತ್ತಿ ಧೈರ್ಯ ಹೇಳುತ್ತಿದ್ದ: "ಚಿಂತಿಸಬೇಡ. ಈಗ ಹುಷಾರಾಗಿದ್ದೇನೆ."


ಅವನ ಸುತ್ತಲೂ ಕಣ್ಣೀರು ಹರಿಸುತ್ತಿದ್ದ ಗೆಳೆಯರು ತುಂಬಿಹೋಗಿದ್ದರು. ಪುಷ್ಕಿನ್ನನ ಇಚ್ಛೆಯಂತೆ ದಾಹ್ಲ್ ಅವನ ಬೆನ್ನಿಗೆ ಕೈಕೊಟ್ಟು, ಸ್ವಲ್ಪ ಎತ್ತಿ ಕೂರಿಸಿದ. ತನ್ನ ಕಣ್ಣುಗಳನ್ನು, ಪುಷ್ಕಿನ್ ಒಮ್ಮೆ ಅಗಲವಾಗಿ ತೆರೆದ. ಅವನ ಕಣ್ಣುಗಳಲ್ಲಿ ದಿವ್ಯ ಪ್ರಕಾಶವೊಂದು ಹೊರಹೊಮ್ಮಿ ಬಂದಂತಾಯಿತು. ಮೆಲ್ಲನೆ ಗೊಣಗಿದ. "ಬಾಳು ಮುಗಿಯಿತು."

ದಾಹ್ಲ್ ಪ್ರಶ್ನಿಸಿದ: "ಏನು ಮುಗಿದದ್ದು?"

"ಬಾಳು ಮುಗಿಯಿತು." ಪುಷ್ಕಿನ್ ದೃಢವಾಗಿ ಉತ್ತರಿಸಿದ್ದ. "ಉಸಿರಾಡಲು ತುಂಬಾ ಕಷ್ಟವಾಗುತ್ತಿದೆ. ಆ ಭಾರ ಎಲ್ಲವನ್ನೂ ಚೂರು, ಚೂರು ಮಾಡುತ್ತಿದೆ."

ಪುಷ್ಕಿನ್ ಉಚ್ಚರಿಸಿದ ಕಟ್ಟಕಡೆಯ ಮಾತುಗಳಿವು.

ಕವಿಯ ದೇಹವನ್ನು ನಿಧಾನವಾಗಿ ಶಾಂತಿ ವ್ಯಾಪಿಸತೊಡಗಿತು. ಅವನ ತೋಳುಗಳು, ಹಾಗೆಯೇ ಅವನ ಮೈ, ಸೊಂಟ, ತೊಡೆ, ಕಾಲುಗಳು—ಹೀಗೆ ಎಲ್ಲವೂ ತಣ್ಣಗಾಗತೊಡಗಿ ಅವನ ಉಸಿರಾಟ ಕ್ಷೀಣಿಸತೊಡಗಿತು. ಪ್ರತಿ ಉಸಿರಿನ ಅಂತರ ಹೆಚ್ಚತೊಡಗಿತು. ಕೊನೆಗೊಮ್ಮೆ ಕೇಳಿಸದಂತಾಯ್ತು. ಜೀವವಿರುವವರ ಹಾಗೂ ಸತ್ತವನ ಮಧ್ಯೆ ದುರ್ಗಮವಾದ ಕಂದರ ಅಡ್ಡ ಬಂದಿತ್ತು. ಅವನನ್ನು ಯಾವುದೇ ಸದ್ದು-ಗದ್ದಲವಿಲ್ಲದೇ ಸಾವು ಕರೆದೊಯ್ದಿತ್ತು. ಏಕೆಂದರೆ ಹತ್ತಿರವಿದ್ದವರಿಗೆ ಕೂಡಾ ಅವನು ಸತ್ತದ್ದು ತಟ್ಟನೇ ತಿಳಿಯಲೇ ಇಲ್ಲ. ❀



'ಗುಣಮಟ್ಟ ವೃತ್ತ' ಎಂದರೇನು ?

ಬಿ. ಎಸ್. ಎನ್. ಹೆಬ್ಬಾರ

ಆಗ ಎರಡನೇ ಮಹಾಯುದ್ಧ ಮುಗಿದಿತ್ತು. ಜಪಾನ್ ದೇಶ ತನ್ನ ಎರಡು ಪ್ರಮುಖ ಪಟ್ಟಣಗಳನ್ನು ಅಣುಬಾಂಬಿನ ದಾಳಿಯಿಂದ ಉಧ್ವಸ್ತಗೊಳಿಸಿಕೊಂಡು ಹೇಳತೀರದ ಕಷ್ಟ ನಷ್ಟಗಳನ್ನು ಅನುಭವಿಸುತ್ತಿತ್ತು. ಕೈಗಾರಿಕಾ ರಂಗದಲ್ಲಂತೂ ಆ ದೇಶ ಅತ್ಯಂತ ಹೀನಸ್ಥಿತಿಯಲ್ಲಿತ್ತು. ದೇಶದಲ್ಲಿ ಉತ್ಪಾದಿಸಿದ ವಸ್ತುಗಳಿಗೆ ಬೆಲೆಯೇ ಇರಲಿಲ್ಲ. ಬೇಡಿಕೆಯೂ ಇರಲಿಲ್ಲ. ಗುಣಮಟ್ಟದಲ್ಲಂತೂ ವಸ್ತುಗಳು ತೀರಾ ಕೆಳ ದರ್ಜೆಯವುಗಳಾದುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಂತೂ ಅವುಗಳನ್ನು ಕೇಳುವವರೇ ಇರಲಿಲ್ಲ. ಭೌಗೋಳಿಕ ಹಾಗೂ ಪ್ರಾಕೃತಿಕ ಸಂಪತ್ತು ಅಷ್ಟಾಗಿ ಇರದ ಆ ಪುಟ್ಟ ದೇಶ ಚೇತರಿಸಿಕೊಂಡು ಮುಂದೆ ಬರಲು ಕೈಗಾರಿಕಾ ರಂಗದ ಉನ್ನತಿಯನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ. ಪಶ್ಚಿಮ ದೇಶಗಳಲ್ಲಿ ತಯಾರಾದ ವಸ್ತುಗಳಿಗಿಂತ ಜಪಾನಿನಲ್ಲಿ ತಯಾರಾದ ವಸ್ತುಗಳನ್ನು ಹೆಚ್ಚು ಬೆಲೆಗೆ ಮಾರುವಂತೆಯೂ ಇರಲಿಲ್ಲ. ಹೀಗೆ ಮಾಡಿದಲ್ಲಿ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಜಪಾನ್ ದೇಶದ ಉತ್ಪನ್ನಗಳಿಗೆ ಬೇಡಿಕೆಬರುವುದು ಸಂಭವನೀಯವಾಗಬಹುದಿತ್ತು.

ಆದರೆ ಈಗ ಅದೇ ಆ ದೇಶದ ಪರಿಸ್ಥಿತಿಯನ್ನು ಗಮನಿಸಿ. ಕೇವಲ ೪೦ ವರ್ಷದ ಅಲ್ಪ ಅವಧಿಯಲ್ಲಿ ಅದು ಸಾಧಿಸಿದ ಪ್ರಗತಿಯನ್ನು ಕಂಡು ಯಾರಾದರೂ ಬೆರಳು ಕಚ್ಚಲೇಬೇಕು. ಅದು ಇಲೆಕ್ಟ್ರಾನಿಕ್ಸ ರಂಗದಲ್ಲೇ ಇರಲಿ, ಸ್ವಯಂ ಚಾಲಿತ ಯಂತ್ರಗಳ ಉತ್ಪಾದನೆಯಲ್ಲೇ ಇರಲಿ, ಗಡಿಯಾರ, ಟಿವಿ., ರೇಡಿಯೋ, ವಾಚು, ಫ್ಯಾನ್ ಮುತಾದ ವಸ್ತುಗಳ ತಯಾರಿಕೆಯಲ್ಲೇ ಇರಲಿ ಇಂದು ಕೈಗಾರಿಕಾ ರಂಗದಲ್ಲೇ ಅತ್ಯುನ್ನತ ಸ್ಥಾನದಲ್ಲಿರುವ ಬಹುದೊಡ್ಡ ದೇಶವಾದ ಅಮೇರಿಕವನ್ನೇ ನಾಚಿಸುವಂತೆ ಪ್ರಪಂಚದ ಮಾರುಕಟ್ಟೆಯಲ್ಲಿ ಜಪಾನ್ ದೇಶದ ಉತ್ಪನ್ನಗಳಿಗೆ ಬೇಡಿಕೆ ಇದೆ. ಆದರೆ ಇದು ಸಾಧ್ಯವಾದದ್ದು ಹೇಗೆ ?

"ಅಗತ್ಯವೇ ಸಂಶೋಧನೆಗೆ ಮೂಲ ಕಾರಣ" ವೆನ್ನುವಂತೆ ಜಪಾನ ದೇಶ ಮಾಡಿ ತೋರಿಸಿದ ಪ್ರಗತಿಗೆ ಮುಖ್ಯವಾದ ಕಾರಣವೇ 'ಕ್ವಾಲಿಟಿ ಸರ್ಕಲ್ ('ಗುಣಮಟ್ಟ ವೃತ್ತ')ದ ತತ್ವ. ೧೯೪೬ ರಲ್ಲಿಯೇ ಜಪಾನು ತನ್ನಲ್ಲಿ ತಯಾರಾದ ವಸ್ತುಗಳ ಗುಣಮಟ್ಟ ಹಾಗೂ ಉತ್ಪನ್ನ ಮಟ್ಟ ಇವೆರಡನ್ನೂ ಚೆನ್ನಾಗಿ ಕಾಪಾಡಿಕೊಂಡು ಬರಲು ನಿರ್ಧರಿಸಿತು. ೧೯೪೬–೧೯೫೦ ರ ಅವಧಿಯಲ್ಲಿ ಜಪಾನಿನ ಸರಕಾರ ಗುಣಮಟ್ಟ (Quality)ವನ್ನು ಕಾಯ್ದುಕೊಳ್ಳುವುದೇ

ಅಲ್ಲದೆ ಅದನ್ನು ಹೆಚ್ಚಿಸುವುದನ್ನು ರಾಷ್ಟ್ರೀಯ ಗುರಿಯಾಗಿರಿಸಿಕೊಂಡು ಅಮೇರಿಕದ ಡಾ॥ ಡೆಮಿಂಗ್‌ರನ್ನು ಸಂಖ್ಯಾಶಾಸ್ತ್ರದ ಆಧಾರದ ಮೇಲೆ ಗುಣಧರ್ಮದ ಹಿಡಿತ (statistical ಎಂಬ ವಿಷಯದ ಮೇಲೆquality control) ತನ್ನ ದೇಶದ ವಿಜ್ಞಾನಿಗಳಿಗೆ ಹಾಗೂ ವಾಸ್ತು ಶಿಲ್ಪಿಗಳಿಗೆ ಉಪನ್ಯಾಸವನ್ನು ನೀಡುವಂತೆ ಏರ್ಪಾಡು ಮಾಡಿತು. ೧೯೫೪ ರಲ್ಲಿ ಜಪಾನ್ ದೇಶ ಗುಣಮಟ್ಟವನ್ನು ದೇಶದ ಎಲ್ಲಾ ಉದ್ಯಮಗಳ ಕೆಳಮಟ್ಟದ ನೌಕರರಿಂದ ಹಿಡಿದು ಮೇಲ್ಮಟ್ಟದ ನೌಕರರವರೆಗೂ ಕಾಪಾಡಿಕೊಂಡು ಬರಲೇಬೇಕಾದ ನಿಯಮವನ್ನಾಗಿ ಸಾರಿತು. ಗುಣಮಟ್ಟದ ಬಗ್ಗೆ ಅದು(ಸೇವಾ ಕ್ಷೇತ್ರವೇ ಆಗಿರಲಿ ಔದ್ಯಮಿಕ ಕ್ಷೇತ್ರವೇ ಆಗಿರಲಿ) ರೇಡಿಯೋ ಹಾಗೂ ಟೆಲಿವಿಜನ್ ಕಾರ್ಯಕ್ರಮಗಳು ಪದೇ ಪದೇ ನಡೆಸಲ್ಪಟ್ಟು ಈ ಬಗ್ಗೆ ಜನಮನದಲ್ಲಿ ಪ್ರಜ್ಞೆಯನ್ನು ಮೂಡಿಸಿದವು. ೧೯೬೨ರಲ್ಲಿ ಮೊದಲನೆಲ ಗುಣಮಟ್ಟ ವೃತ್ತ ಪ್ರೊಫೆಸರ್ ಈಶಿಕವಾರವರ ಮುಂದಾಳುತನದಲ್ಲಿ ಜಪಾನಿನಲ್ಲಿ ಜನ್ಮ ತಾಳಿತು. ಒಂದು ಕ್ರಾಂತಿಕಾರಕ ಚಳುವಳಿಯ ರೂಪ ಹೊಂದಿದ ಈ ತತ್ವ ಬೃಹತ್ ರೂಪವನ್ನು ಕೆಲ ಕಾಲದಲ್ಲಿಯೇ ಪಡೆಯಿತು. ಕೇವಲ ಜಪಾನಿನಲ್ಲಿಯೇ ಈಗ ಒಂದುಕೋಟಿ ಸದಸ್ಯರನ್ನೊಳಗೊಂಡ ಹತ್ತುಲಕ್ಷಕ್ಕಿಂತಲೂ ಹೆಚ್ಚು ಗುಣ ಮಟ್ಟವೃತ್ತಗಳಿವೆ. ಅಲ್ಲದೇ ಭಾರತವನ್ನೊಡಗೂಡಿ ಜಗತ್ತಿನ ಇತರ ೪೦ ದೇಶಗಳಲ್ಲಿ ಈ ವೃತ್ತಗಳು ಕೆಲಸ ಮಾಡುತ್ತಿವೆ.

ಭಾರತದಲ್ಲಿ ಮೊತ್ತ ಮೊದಲಿಗೆ ೧೯೮೧ರ ಜನವರಿ ತಿಂಗಳಲ್ಲಿ ಭಾರತ ಹೆವಿ ಇಲೆಕ್ಟ್ರಿಕಲ್ಸ್ ಸಂಸ್ಥೆ ತನ್ನ ಭೂಪಾಲದ ಘಟಕದಲ್ಲಿ ಕ್ವಾಲಿಟಿ ಸರ್ಕಲ್ ಅನ್ನು ರಚಿಸಿ ಉತ್ಪಾದನೆಯ ಮಟ್ಟದಲ್ಲಿ ಹಾಗೂ ಉತ್ಪಾದಿಸಿದ ವಸ್ತುಗಳ ಗುಣಮಟ್ಟದಲ್ಲಿ ತುಂಬಾ ಪ್ರಗತಿಯನ್ನು ತೋರಿಸಿ ಗುಣಮಟ್ಟವೃತ್ತದ ಸ್ಥಾಪನೆಗೆ ಭಾರತ ದೇಶದಲ್ಲಿ ನಾಂದಿಯನ್ನು ಹಾಕಿತು. ಅಲ್ಲದೆ ಎಚ್.ಎಂ.ಟಿ., ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪನಿ, ಶ್ರೀರಾಮ ಫೈಬರ್ಸ್, ಮಾರುತಿ, ಡಿ. ಸಿ. ಎಂ., ಈವೆಲ್ಲಾ ಸಂಸ್ಥೆಗಳು ಗುಣಮಟ್ಟ ವೃತ್ತವನ್ನು ಈಗಾಗಲೇ ರಚಿಸಿ ಕಾರ್ಯ ರೂಪಕ್ಕೆ ತಂದಿವೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ ಹಾಗೂ ಕೆನರಾ ಬ್ಯಾಂಕುಗಳು ಕೂಡ ಗುಣಮಟ್ಟ ವೃತ್ತಗಳನ್ನು ಸ್ಥಾಪಿಸಿವೆ.

ಗುಣಧರ್ಮ ವೃತ್ತ ಅಂದರೆ ಒಂದು ಸಂಸ್ಥೆಯಲ್ಲಿ ಯಾವುದೇ ರೀತಿಯ ಕೆಲಸ ಮಾಡುವ ವಿಭಾಗದ ನೌಕರರ ಐಚ್ಛಿಕವಾದ ಗುಂಪು ಅಥವಾ ವೃತ್ತ. ಈ ವೃತ್ತವು ತಾವು ಕೆಲಸ ಮಾಡುತ್ತಿರುವ ಸಂಸ್ಥೆಯ ವಿಭಾಗದಲ್ಲಿ ಇರುವ ಸಮಸ್ಯೆಗಳನ್ನು ಹೇಗೆ ಎದುರಿಸುವುದು ಮತ್ತು ನಿವಾರಿಸುವುದು ಎನ್ನುವ ಬಗ್ಗೆ ಆಗಾಗ ಸಭೆ ಕೂಡಿ, ಚರ್ಚಿಸಿ, ಪರಿಹಾರವನ್ನು ಕಂಡು ಹಿಡಿದು, ಆ ಪರಿಹಾರವನ್ನು ಕಾರ್ಯ ರೂಪಕ್ಕೆ ತರಬೇಕು.

ಯಾವುದೇ ವೃತ್ತದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಸದಸ್ಯರು ಇರಬಾರದು. ಏಳು ಅಥವಾ ಎಂಟು ಸದಸ್ಯರ ಗುಂಪು ಅತ್ಯುತ್ತಮ. ಕೆಲವು ಬಾರಿ ವೃತ್ತದಲ್ಲಿ ಎರಡರಿಂದ ಹತ್ತು ಮಂದಿ ಸದಸ್ಯರು ಇರುವುದುಂಟು. ಆದರೆ ಹೆಚ್ಚು ಮಂದಿ ಸದಸ್ಯರಿದ್ದಲ್ಲಿ ಎಲ್ಲಾ ಸದಸ್ಯರಿಗೆ ಕ್ರಿಯಾತ್ಮಕವಾಗಿ ಸಭೆಯಲ್ಲಿ ಭಾಗವಹಿಸಲು ಕಷ್ಟವಾಗುವುದರಿಂದ ಹತ್ತು ಮಂದಿ ಸದಸ್ಯರಿಗಿಂತ ಹೆಚ್ಚು ಸದಸ್ಯರು ವೃತ್ತದಲ್ಲಿರುವುದು ಒಳ್ಳೆಯದಲ್ಲ. ಪ್ರತಿಯೊಂದು ವೃತ್ತಕ್ಕೂ ಒಬ್ಬ ನಾಯಕ ಹಾಗೂ ಉಪನಾಯಕನನ್ನು ಒಮ್ಮತದಿಂದ ಆರಿಸಬೇಕು. ಪ್ರತಿಯೊಂದು ವೃತ್ತವನ್ನು ನಿರ್ದಿಷ್ಟವಾಗಿ ಗುರುತಿಸಲು ಹೆಸರನ್ನು ಇಡಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಈ ವೃತ್ತವು ಐಚ್ಛಿಕವಾಗಿರಬೇಕು ಹಾಗೂ ಇದರಲ್ಲಿ ಸೇರಲೇಬೇಕೆಂಬ ಯಾವ ಕಡ್ಡಾಯವನ್ನೂ ವಿಧಿಸಬಾರದು. ಸದಸ್ಯರು ಆಗಾಗ ಸಭೆ ಕೂಡಿ ತಾವು ಕೆಲಸ ಮಾಡುತ್ತಿರುವ ಶಾಖೆಗಳಲ್ಲಿ ತಲೆದೋರುತ್ತಿರುವ ಸಮಸ್ಯೆಗಳು ಮತ್ತು ಅದರ ಪರಿಹಾರಕ್ರಮವನ್ನು ಚರ್ಚಿಸಿ ಕಾರ್ಯರೂಪಕ್ಕೆ ತಂದು ಸಂಸ್ಥೆಯ ವಸ್ತುವಿನ ಗುಣಮಟ್ಟ 'ಸೇವಾ ಗುಣಮಟ್ಟವನ್ನು' ಕಾಪಾಡಿಕೊಂಡು ಬರಬೇಕು.

ಒಂದು ಸಂಸ್ಥೆಯ ಒಂದೇ ಶಾಖೆಯ ಒಂದೇ ರೀತಿಯ ಕೆಲಸ ಮಾಡುತ್ತಿರುವ ನೌಕರರು ತಮ್ಮದೇ ಆದ ವೃತ್ತವನ್ನು ನಿರ್ಮಿಸುವುದು

ಉತ್ತಮ. ಏಕೆಂದರೆ ಗುಣಮಟ್ಟವೃತ್ತದ ಮುಖ್ಯ ಉದ್ದೇಶ ಸಂಸ್ಥೆಯ ಎಲ್ಲಾ ಕೆಲಸಗಾರರನ್ನು ತಮ್ಮ ಕೆಲಸಗಳಲ್ಲಿ ಹೆಚ್ಚು ಹೆಚ್ಚು ಕ್ರಿಯಾತ್ಮಕವಾಗಿ ತೊಡಗಿಸುವುದಾಗಿರುತ್ತದೆ. ಒಂದೇ ರೀತಿಯ ಕೆಲಸವನ್ನು ಮಾಡುತ್ತಿರುವವರ ಗುಂಪು ತಾವು ಮಾಡುತ್ತಿರುವ ಕೆಲಸಗಳಲ್ಲಿ ಇರುವ ನ್ಯೂನತೆಗಳನ್ನು ಶೀಘ್ರವಾಗಿ ಕಂಡು ಹಿಡಿಯುವುದರಲ್ಲಿ ಸಮರ್ಥರಾಗಿರುವುದಲ್ಲದೇ ಪರಿಹರಿಸುವುದು ಮತ್ತು ಪರಿಹಾರವನ್ನು ಕಾರ್ಯರೂಪಕ್ಕೆ ತರುವುದರಲ್ಲಿಯೂ ಯಶಸ್ವಿಯಾಗಬಲ್ಲದು ಎನ್ನುವುದರಲ್ಲಿ ಸಂದೇಹವಿಲ್ಲ.

ಗುಣಮಟ್ಟವೃತ್ತದ ಮೂಲ ವೈಶಿಷ್ಟ್ಯಗಳು ಹೀಗಿವೆ.

ಸಂಸ್ಥೆಯ ಎಲ್ಲಾ ವರ್ಗಗಳ ಎಲ್ಲ ಶಾಖೆಗಳ ನೌಕರರನ್ನು ತಮ್ಮ ತಮ್ಮ ಕೆಲಸಗಳಲ್ಲಿ ಹೆಚ್ಚು ಭಾಗಿಯಾಗಿಸುವಂತೆ ಮಾಡುವುದು. ಅಲ್ಲದೇ ಸಂಸ್ಥೆಯಲ್ಲಿ ಉತ್ತಮ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸುವುದು.

ಕೆಲಸದ ಗುಣಮಟ್ಟವನ್ನು ಪರಿಶುದ್ಧಗೊಳಿಸುವುದು ಮತ್ತು ಉತ್ತಮಗೊಳಿಸುವುದು.

ಸಾಮಾನ್ಯ ನೌಕರನಿಂದಲೂ ಅಸಾಮಾನ್ಯ ರಚನಾತ್ಮಕ ಪ್ರತಿಭೆ ಹಾಗೂ ಗುಣಶೀಲತೆ ಮತ್ತು ಸಾಮರ್ಥ್ಯಗಳು ಬರುವಂತೆ ಪ್ರೋತ್ಸಾಹಿಸುವುದು. ವೈಯಕ್ತಿಕ, ಸಾಮೂಹಿಕ, ಹಾಗೂ ದೇಶದ ಹಿತಕ್ಕಾಗಿ ಮಾನವ ಸಂಪತ್ತಿನ ಸಂಪೂರ್ಣ ಸದುಪಯೋಗ ಪಡೆಯಬೇಕು.

ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವ ಸಂಸ್ಥೆಯ ಬೇರೆ ಬೇರೆ ಸಮಸ್ಯೆಗಳನ್ನು ನೌಕರ ಹಾಗೂ ಆಡಳಿತವರ್ಗದವರು ನಿರ್ಭಯವಾಗಿ ಎದುರಿಸಲು ಸಾಕಷ್ಟು ತಯಾರಿ ಮಾಡಿಕೊಳ್ಳುವುದು ಮತ್ತು ಚೇತನವನ್ನೀಯುವುದು.

ಗುಣಮಟ್ಟ ವೃತ್ತದ ವಿವಿಧ ಕಾರ್ಯ ವೈಖರಿಯ ವಿವಿಧ ಹಂತಗಳು ಹೀಗಿವೆ;

ಮೊದಲನೆಯದಾಗಿ ತಾವು ಕೆಲಸ ಮಾಡುತ್ತಿರುವ ವಿಭಾಗದಲ್ಲಿ ಇರುವ ಸಮಸ್ಯೆಗಳನ್ನು ಗುರುತಿಸುವುದು.

ಎರಡನೆಯದಾಗಿ, ಸಮಸ್ಯೆಗಳ ಪರಿಹಾರದ ಬಗ್ಗೆ ಮಾತುಕತೆ/ಚರ್ಚೆಯನ್ನು ನಡೆಸುವುದು.

ಮೂರನೆಯದಾಗಿ, ಉತ್ತಮವಾದ ಪರಿಹಾರವನ್ನು ಕಂಡುಹಿಡಿಯುವುದು.

ನಾಲ್ಕನೆಯದಾಗಿ ಕಂಡುಹಿಡಿದ ಪರಿಹಾರವನ್ನು ಆಡಳಿತ ವರ್ಗಕ್ಕೆ ತಿಳಿಸುವುದು.

ಐದನೆಯದಾಗಿ, ಪರಿಹಾರ ಕ್ರಮದ ಸಲಹೆಗೆ ಆಡಳಿತವರ್ಗದ ಶಿಫಾರಸು ನಿಲುವು ಬಂದ ನಂತರ ಅದರ ಬಗ್ಗೆ ಚರ್ಚಿಸುವುದು.

ಆರನೆಯದಾಗಿ, ಪರಿಹಾರ ಕ್ರಮಗಳನ್ನು ಆಡಳಿತ ವರ್ಗದ ಮಾರ್ಗದರ್ಶನದಂತೆ ಕಾರ್ಯರೂಪಕ್ಕೆ ತರುವುದು.

ಯಾವುದೇ ಒಂದು ಉದ್ಯಮ ಸಂಸ್ಥೆಯ ಆರ್ಥಿಕ ಸಾಮರ್ಥ್ಯ ಅದರ ನಿಲುವು ಹಾಗೂ ಅಳಿವುಗಳ ಪ್ರಶ್ನೆ ಇವನ್ನು ನಾವು ಆ ಸಂಸ್ಥೆಯ ನಿವ್ವಳ ಲಾಭಾಂಶದಿಂದ ತಿಳಿಯುತ್ತೇವೆ. ಹಾಗೆಯೇ ಆ ಸಂಸ್ಥೆಯ ಅಷ್ಟೇ ಪ್ರಾಮುಖ್ಯವಾದ ಅಳಿವುಉಳಿವು ಹಾಗೂ ನಿಲುವು, ಏಳಿಗೆಗಳ ಪ್ರಶ್ನೆ—ಅದು ಸೇವಾ ಸಂಸ್ಥೆಯಾಗಿದ್ದಲ್ಲಿ—ನೌಕರರು ನೀಡುತ್ತಿರುವ ಸೇವೆಯ ಗುಣಮಟ್ಟ—ಅದು ಉದ್ಯಮ ಸಂಸ್ಥೆಯಾಗಿದ್ದರೆ—ತಯಾರಿಸಲ್ಪಡುತ್ತಿರುವ ವಸ್ತುವಿನ ಗುಣಮಟ್ಟವನ್ನು ಅವಲಂಬಿಸಿದೆ.

ಈ ಸೇವೆಯ ಅಥವಾ ವಸ್ತುವಿನ ಗುಣಮಟ್ಟ ಆ ಸಂಸ್ಥೆಯ ನೌಕರ ವೃಂದವು ಪರಸ್ಪರ ಭಾಗಿಯಾಗಿ ಕ್ರಿಯಾತ್ಮಕವಾಗಿ ಸೌಹಾರ್ದದಿಂದ, ಸಹಕಾರದಿಂದ ಕೆಲಸವನ್ನು ಮಾಡುವುದನ್ನು ಅವಲಂಬಿಸಿದೆ. ಈ ನೌಕರ ವೃಂದದ ಸಹಕಾರ ಹಾಗೂ ಕ್ರಿಯಾಶೀಲತೆಯು ಆಕಸ್ಮಿಕವಾಗಿ ಒದಗಿಬರುವುದಿಲ್ಲ. ಇದಕ್ಕೆ ಆಡಳಿತ ವರ್ಗಗಳಲ್ಲಿ ಹಾಗೂ ನೌಕರವರ್ಗಗಳಲ್ಲಿ ಸಾಮರಸ್ಯಬೇಕು. ಅಧಿಕಾರ ವರ್ಗದ ಭೇದವನ್ನು ಮರೆತು ನಮ್ಮೆಲ್ಲರ ಧ್ಯೇಯ ಒಂದು ಎನ್ನುವ ಮನೋಭಾವ ಬೇಕು. ಒಂದು ದೇಶದ ಉನ್ನತಿ ಅಥವಾ ವಿಕಾಸ ಕೇವಲ ಭೌತಿಕ ಸಂಪತ್ತು ಹಾಗೂ ರಾಜಕೀಯ ಭದ್ರತೆಯನ್ನು ಅವಲಂಭಿಸಿಲ್ಲ. ಆ ದೇಶದ ಪ್ರಜೆಗಳೆಲ್ಲರೂ ತಮ್ಮ ವೈಯಕ್ತಿಕ ಹಾಗೂ ದೇಶದ ಉನ್ನತಿಗಾಗಿ ತಮ್ಮ ಪೂರ್ಣ ವ್ಯಕ್ತಿವಿಕಾಸಕ್ಕೆ ಮತ್ತು ಸಂಪೂರ್ಣ ಕ್ರಿಯಾಶೀಲತೆಯನ್ನು ಪ್ರಕಟಪಡಿ

ಸದವಕಾಶವನ್ನು ಒದಗಿಸುವ ವಾತಾವರಣವನ್ನು ನಿರ್ಮಿಸುವುದರಲ್ಲಿದೆ.

ಹಾಗಾದಲ್ಲಿ, ನಮ್ಮ ದೇಶಕ್ಕೆ ಈ ತತ್ವ ಹೊಸತೇ? ಎನ್ನುವ ಪ್ರಶ್ನೆ ಏಳುವುದು ಸಹಜ. ಹೌದು, ಈ ತತ್ವ ನಮಗೆ ಹೊಸದಲ್ಲ. ಮಾನವ ಸಂಪತ್ತಿನ ಅತ್ಯುತ್ತಮ ಉಪಯೋಗದ ನಿದರ್ಶನ ಭಾರತೀಯ ಇತಿಹಾಸ, ದರ್ಶನಗಳಲ್ಲಿ ನಾವು ಕಂಡಿದ್ದೇವೆ. ವೈಯುಕ್ತಿಕ ಪರಾಕಾಷ್ಠೆಯ 'ಮಹತೋ ಮಹೀಯಾನ್' ಎಂಬ ಅಮೃತ ಸದೃಶ ಅನುಭವವನ್ನು ನಮ್ಮ ಮಂತ್ರ ದೃಷ್ಟಾರರು ಹೊಂದಿದ್ದಾರೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋ' ಎಂದು ಜಗತ್ತಿಗೆ ಅವರು ಸಾರಿದ್ದಾರೆ. ಆದರೆ ವೈಯುಕ್ತಿಕವಾಗಿ ಭಾರತೀಯರು ಹೆಚ್ಚು ಸಮರ್ಥರು; ಸಮುದಾಯವಾಗಿ ಅಸಮರ್ಥರು ಎನ್ನುವ ಮಾತಿನಲ್ಲಿ ಭಾಗಶಃ ಸತ್ಯಾಂಶವಿದೆ. ಭಾರತೀಯರಲ್ಲಿ ವಿವಿಧ ವರ್ಗ, ಜಾತಿ, ತತ್ವ, ವರ್ಣಗಳು 'ವಿವಿಧತೆಯಲ್ಲಿ ಸಾಮರಸ್ಯ' ಎನ್ನುವಂತಿದ್ದರೂ ಒಡಕನ್ನೇ ತಂದಿವೆ. ಆದುದರಿಂದಲೋ ಏನೋ, ಭಾರತದಲ್ಲಿ ಇನ್ನೂ 'ಗುಣಮಟ್ಟ ವೃತ್ತಿ'ದ ಮಹತ್ವವನ್ನು ಜನರು ಇನ್ನೂ ಮನಗಂಡಿಲ್ಲ ಎಂದು ತಜ್ಞರು ಅನ್ನುತ್ತಾರೆ.

ಆದರೆ ಜಪಾನಿನಲ್ಲಿ ಈ ತತ್ವ ಕೇವಲ ೪೦ ವರ್ಷಗಳಲ್ಲಿ ಎಷ್ಟು ಪರಿಣಾಮಕರವಾಗಿ ಕೆಲಸವನ್ನು ಮಾಡಿತು ಎನ್ನುವುದಕ್ಕೆ ಅಲ್ಲಿಯ ಸರ್ವತೋಮುಖ ಪ್ರಗತಿಯೇ ಸಾಕ್ಷಿಯಾಗಿದೆ. ಈ ಅದ್ಭುತ ಯಶಸ್ಸಿಗೆ ಆ ದೇಶದ ಜನರ ಸಾಕ್ಷರತೆಯ ಮಟ್ಟ, ವಿದ್ಯಾಭ್ಯಾಸದ ರೀತಿ ಮತ್ತು ನಿಯಮಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅಲ್ಲಿಯ ಜನರ ಅಸಾಮಾನ್ಯ ದೇಶಭಕ್ತಿ, ನಿಸ್ವಾರ್ಥತೆಗಳು ಕಾರಣವೆನ್ನಬಹುದು. ಅಲ್ಲಿ ಒಬ್ಬ ಕನಿಷ್ಟ ವರ್ಗದ ನೌಕರ ಕೂಡ ತನ್ನ ಕೆಲಸವನ್ನು ಕೇವಲ ಹೊಟ್ಟೆಪಾಡಿಗಾಗಿ ಎಂದು ಎಣಿಸದೆ. ತನ್ನ ರಾಷ್ಟ್ರಕ್ಕಾಗಿ ಕಿಂಚಿತ್ ಸೇವೆ ಎಂದು ಭಾವಿಸುತ್ತಾನೆ. ಜಪಾನಿನಲ್ಲಿನ ಕೌಟುಂಬಿಕ ವ್ಯವಸ್ಥೆಯು ಹೆಚ್ಚುಕಡಿಮೆ ಭಾರತ ದೇಶದಂತೆ ಇದ್ದರೂ ಜನರ ಆಂತರಿಕ ಪ್ರಜ್ಞೆಯಲ್ಲಿ ವಿಪರೀತ ವ್ಯತ್ಯಾಸವಿದೆ. ಅಲ್ಲಿಯ ಪ್ರತಿ ಪ್ರಜೆಯೂ ತನ್ನ ಕುಟುಂಬದ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಾನೋ ಅಷ್ಟೇ ಶ್ರದ್ಧೆಯನ್ನು ತಾನು ಕಚೇರಿಯಲ್ಲಿ ಮಾಡುವ ಕೆಲಸದಲ್ಲಿಯೂ ವಹಿಸುತ್ತಾನೆ.

ಇತ್ತೀಚೆಗೆ ಜಪಾನ್ ದೇಶದ ಸಂದರ್ಶಕನೊಬ್ಬ ಭಾರತದೇಶಕ್ಕೆ ಬಂದಾಗ, ಇಲ್ಲಿಯ ಅತಿ ಕಡಿಮೆ ಸಂಬಳವನ್ನು ಪಡೆಯುತ್ತಿದ್ದ ನೌಕರರು ಹಾಗೂ ಕೂಲಿಗಳು ವಾಚನ್ನು ಧರಿಸುತ್ತಿದ್ದುದನ್ನು ನೋಡಿ ಬೆರಗಾದ. ತನ್ನ ಭಾರತೀಯ ಮಿತ್ರನಿಗೆ, "ನಮ್ಮ ದೇಶ ಆರ್ಥಿಕವಾಗಿ ಭಾರತಕ್ಕಿಂತ ಉತ್ತಮ ಮಟ್ಟದಲ್ಲಿದ್ದರೂ, ನಾವು ನಮ್ಮ ದೇಶದಲ್ಲಿ ಉತ್ಪಾದಿಸಿದ ಕೈಗಡಿಯಾರಗಳನ್ನು ಬಳಸುವುದೇ ಇಲ್ಲ. ಏಕೆಂದರೆ ಹೊರದೇಶಗಳಲ್ಲಿ ಅತಿ ಬೇಡಿಕೆಯಲ್ಲಿರುವ ನಮ್ಮ ದೇಶದ ಉತ್ಪನ್ನಗಳನ್ನು ನಾವು ಉಪಯೋಗಿಸದೇ ಉಳಿಸಿ, ಪರದೇಶಗಳಿಗೆ ನಮ್ಮ ಸರಬರಾಜನ್ನು ಹೆಚ್ಚಿಸಿ ನಮ್ಮ ದೇಶದ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವುದರಲ್ಲಿ ಸಂತೋಷವನ್ನು ಕಾಣುತ್ತೇವೆ," ಎಂದಾತ ಹೇಳಿದ. ಅಲ್ಲದೆ ಅವನು ಇನ್ನೂ ಒಂದು ವಿಷಯ ಹೇಳಿದ:

"ಭಾರತದಲ್ಲಿ ಜನರು ಕೈಗಡಿಯಾರಗಳನ್ನು ಹೆಚ್ಚು ಬಳಸಿದರೂ ಯಾರೂ ಸಮಯ ಪಾಲನೆ ಮಾಡುವುದೇ ಇಲ್ಲ. ಇಲ್ಲಿ ಕೈಗಡಿಯಾರಗಳನ್ನು ಧರಿಸುವುದನ್ನು ಆಢ್ಯತೆಯ ದ್ಯೋತಕವಾಗಿ ಭಾವಿಸುತ್ತಾರೆಯೇ ವಿನಾ ಸಮಯ ಪಾಲನೆಗಾಗಿ ಅಲ್ಲ."

ಜಪಾನಿಯರ ಉದ್ಯೋಗಶೀಲತೆ, ಶಿಸ್ತು, ಸಮಯ ಪಾಲನೆ ಹಾಗೂ ರಾಷ್ಟ್ರಪ್ರೇಮಗಳಿಗೆ ಇದೊಂದು ಜ್ವಲಂತ ನಿದರ್ಶನ. ಭಾರತೀಯರು ಇನ್ನಾದರೂ ಎಚ್ಚೆತ್ತು ತಮ್ಮ ಸಮುದಾಯ ಪ್ರಜ್ಞೆ ಹಾಗೂ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡಲ್ಲಿ ದೇಶಕ್ಕೂ ಜನರಿಗೂ ಒಳ್ಳೆಯದಾದೀತು. ✡

ಹಲವು ಕಾರಣಗಳ ಒಂದು ಚಿನ್ಹೆ

ಬಾವು

ಡಾ. ವಸಂತ ಅ. ಕುಲಕರ್ಣಿ

ಬಸ್ಸಿನಲ್ಲಿ ದೀರ್ಘಕಾಲ ಪ್ರಯಾಣ ಮಾಡಿದಾಗ ಕೆಲವರಿಗೆ ಕಾಲಿನ ಬಾವು ಬರುವುದು ಸಾಮಾನ್ಯ. ಕೆಲವು ಬಾರಿ ಔಷಧಗಳ ಸೇವನೆಯ ದುಷ್ಪರಿಣಾಮದಿಂದಾಗಿಯೂ ದೇಹದ ಕೆಲವೆಡೆ ಬಾವು ಕಾಣಿಸಿಕೊಳ್ಳುವುದು. ಅಲ್ಲಲ್ಲಿ ಗಾದರಿಗಳೆದ್ದು ತುರಿಕೆಯುಂಟಾಗಬಹುದು. ಮಕ್ಕಳಲ್ಲಿ ಆಹಾರದ ಪೌಷ್ಟಿಕಾಂಶಗಳ ಕೊರತೆಯಿಂದಲೂ ಬಾವು ಗೋಚರವಾಗುವುದುಂಟು. ರೋಗದ ಚಿನ್ಹೆಯಾಗಿ ಇಲ್ಲವೆ ದೇಹಕ್ರಿಯೆಯಲ್ಲಿಯ ಸ್ಥಿತ್ಯಂತರಗಳಿಂದ ಬಾವು ಬರಬಹುದು. ಅದಕ್ಕೆ ಹಲವಾರು ಕಾರಣಗಳಿವೆ.

ಬಾವು ಎಂಬುದಕ್ಕೆ ಪರ್ಯಾಯ ಶಬ್ದ 'ಊತ' ಅಂಗಾಂಶಗಳಲ್ಲಿ ದೇಹಜಲ ಸಂಗ್ರಹಗೊಳ್ಳುವುದು ಊತಕ್ಕೆ ಕಾರಣವಾಗುವುದು. ಜೀವಕೋಶಗಳ ಜಾಲದಿಂದ ರೂಪುಗೊಂಡ ಅಂಗಾಂಶದಲ್ಲಿ ದೇಹಜಲದ ಪ್ರಮಾಣ ಹೆಚ್ಚಾಗುವುದು. ಕಾಲುವೆಯಲ್ಲಿ ಹರಿಯುವ ನೀರಿಗೆ ಅಡೆತಡೆಯುಂಟಾದರೆ ಅದು ಕವಲು ದಾರಿ ಹಿಡಿಯುವಂತೆಯೇ ನಮ್ಮ ದೇಹದಲ್ಲಿ ಈ ಬಾವು ಉಂಟಾಗುತ್ತದೆ.

ರಕ್ತದ ಕೇಶವಾಹಿನಿಗಳಲ್ಲಿ ಪ್ರವಹಿಸುವ ದ್ರವದ ಹೆಚ್ಚಿನ ಒತ್ತಡದಿಂದಲೂ ದೇಹ ಜಲವು ಅಂಗಾಂಶಗಳಿಗೆ ಒಸರಿ ಊತವನ್ನುಂಟು ಮಾಡುವುದು. ಮಲಿನ ರಕ್ತನಾಳಗಳಲ್ಲಿ ರಕ್ತವು ಕೆಲವು ಬಾರಿ ಹೆಪ್ಪುಗಟ್ಟುವದರಿಂದ ಅಡೆತಡೆಯುಂಟಾಗಿ ರಕ್ತ ಸಂಚಾರಕ್ಕೆ ತೊಂದರೆಯಾಗುತ್ತದೆ. ಒತ್ತಡ ಹೆಚ್ಚಾಗಿ ಊತ ಉಂಟಾಗಬಹುದು. ಹೃದಯ ಕ್ರಿಯೆಯಲ್ಲಿ ಸೋಲುವಿಕೆಯಿಂದ ಮಲಿನ ರಕ್ತನಾಳಗಳಲ್ಲಿ ರಕ್ತಸಂಚಾರ ಹೆಚ್ಚಾಗುವುದರಿಂದ ಕಾಲಿನಮೇಲೆ, ಹೊಟ್ಟೆ ಮತ್ತು ಮುಖದ ಮೇಲೆ ಊತ ಕಾಣಿಸಿಕೊಳ್ಳಬಹುದು. ಇದಲ್ಲದೆ ಶುದ್ಧ ರಕ್ತನಾಳಗಳ ಹಿಗ್ಗುವಿಕೆಯಿಂದಲೂ ಊತ ಉಂಟಾಗಬಹುದು. ಕೆಲವು ಅಲರ್ಜಿ ಪ್ರಕರಣಗಳಲ್ಲಿ 'ಹಿಸ್ಟಮಿನ್' ಎಂಬ ರಸಾಯನಿಕ ಪದಾರ್ಥ ಶುದ್ಧ ರಕ್ತನಾಳಗಳನ್ನು ಹಿಗ್ಗಿಸುವದರಿಂದ ಈ ತೆರನಾದ ಊತಕ್ಕೆ ಕಾರಣವಾಗಬಹುದು. ಶುದ್ಧ ರಕ್ತನಾಳಗಳ ಸ್ಥಿತಿಸ್ಥಾಪಕತೆಯಲ್ಲಿ ಏರುಪೇರಾದಾಗಲೂ ಊತ ಉಂಟಾಗಬಹುದು.

ರಕ್ತದಲ್ಲಿ ಪ್ರೋಟೀನ್‌ಗಳ ಪ್ರಮಾಣ ಕಡಿಮೆಯಾದರೆ ಮೊದಲೇ ಹೇಳಿದಂತೆ ರಕ್ತನಾಳಗಳಲ್ಲಿಯ ಜಲಾಂಶವು ಅಂಗಾಂಗಗಳಿಗೆ ಒಸರಿ ಊತ


ಉಂಟಾಗುವುದು. ಪ್ರೋಟೀನುಗಳು ರಕ್ತದ್ರವದಲ್ಲಿ ಒಸರುವ ಕ್ರಿಯೆಯ ಒತ್ತಡವನ್ನು ನಿಯಂತ್ರಿಸುವವು. ಉದಾಹರಣೆ : ಮಾಂಸಖಂಡಗಳಿಗೆ ಬೆಂಕಿ ತಾಕಿದಾಗ ಅವು ಅಲ್ಬುಮಿನ್ ಎಂಬ ಪ್ರೋಟೀನನ್ನು ಕಳೆದುಕೊಳ್ಳುವುದರಿಂದ ಸುಟ್ಟ ನಂತರ ಬಾವು ಬರಲು ಕಾರಣವಾಗುವುದು. ಅಲ್ಬುಮಿನ್ ಪ್ರೋಟಿನು ಒಸರುವ ಕ್ರಿಯೆಯ ಒತ್ತಡವನ್ನು ನಿಯಂತ್ರಿಸುತ್ತದೆ.

ಮೂತ್ರಪಿಂಡದ ಕೆಲ ರೋಗಗಳಲ್ಲಿ ಸಾಕಷ್ಟು ಪ್ರೋಟೀನುಗಳು ಮೂತ್ರ ವಿಸರ್ಜನೆಯಲ್ಲಿ ಹೊರ ಹೋಗುವುದರಿಂದ ರಕ್ತದ್ರವದಲ್ಲಿಯ ಒಸರುವ ಒತ್ತಡವು ಕುಗ್ಗುವುದು, ಆದ್ದರಿಂದ ಮೂತ್ರಪಿಂಡದ ರೋಗಗಳಲ್ಲಿ ಮುಖಕ್ಕೆ ಬಾವು ಮತ್ತು ಕೈಕಾಲಿಗೆ 'ಬಾವು' ಬರುತ್ತದೆ. ಕಾರಣ ಕೇಶವಾಹಿನಿಗಳಿಂದ ಹೊರದಬ್ಬಲ್ಪಟ್ಟ ದೇಹಜಲವು ಪುನಃ ಕೇಶವಾಹಿನಿಗಳಲ್ಲಿ ಮರಳಿ ಬರಲಾರದು.

ಸತತವಾಗಿ ಸಣ್ಣ ಪ್ರಮಾಣದಲ್ಲಿ ಪ್ರೋಟೀನುಗಳು ಕೇಶವಾಹಿನಿಗಳಿಂದ ಅಂಗಾಂಶಗಳಲ್ಲಿ ಹೋಗುವವು. ಅವು ಸದಾ ಒಸರುತ್ತಲೆ ಇರುವವು. ದುಗ್ಧರಸ(Lymphglands)ಗ್ರಂಥಿ ಜಾಲವು ಅದನ್ನು ಪುನಃ ತನ್ನೆಡೆಗೆ ಸೆಳೆದುಕೊಂಡು ರಕ್ತಪರಿಚಲನೆಯಲ್ಲಿ ಬಿಡುತ್ತದೆ. ಆದ್ದರಿಂದ ಆನೆಕಾಲಿನ ರೋಗದಲ್ಲಿ ದುಗ್ಧರಸಗ್ರಂಥಿಗಳಿಗೆ ತೊಂದರೆಯುಂಟಾಗಿ 'ಪ್ರೋಟೀನ್' ಹಿಂದಕ್ಕೆ ಪಡೆಯುವ ಕಾರ್ಯ ಕುಂಠಿತಗೊಂಡು ಕಾಲುಗಳು ಭಾರೀ ಪ್ರಮಾಣದಲ್ಲಿ ಬಾಯುವುದಕ್ಕೆ ಕಾರಣವಾಗುವುದು.

ಸ್ತನಕ್ಕೆ ಕ್ಯಾನ್ಸರ್ ಉಂಟಾದಾಗ ನಡೆಸುವ ಶಸ್ತ್ರಕ್ರಿಯೆಯಲ್ಲಿ ಸ್ತನದ ಸಹಹೊರೆಯ ದುಗ್ಧರಸ ಗ್ರಂಥಿಗಳನ್ನು ತೆಗೆದುಬಿಡುತ್ತಾರೆ. ಆದರಿಂದಾಗಿ ಪ್ರೋಟೀನು ಹಿಂದಕ್ಕೆ ಪಡೆಯುವ ಕಾರ್ಯಕ್ಕೆ ತೊಂದರೆಯಾಗಿ ಊತ ಉಂಟಾಗಬಹುದು.

ಊತಕ್ಕೆ ಇನ್ನೊಂದು ಮಹತ್ವದ ಕಾರಣ.



ರಕ್ತನಾಳಗಳ ಭಿತ್ತಿಯು ಹೆಚ್ಚು ರಂಧ್ರಯುಕ್ತ-ವಾಗುವದು. ಆಗ ರಕ್ತದಲ್ಲಿಯ ಪ್ರೋಟೀನ್ ಅಂಗಾಂಶಗಳಿಗೆ ಒಸರಿ ಊತವನ್ನುಂಟುಮಾಡು-ವವು. ಆಗಲೇ ಹೇಳಿದಂತೆ ಅಲರ್ಜಿಯ ಪರಿಣಾಮವಾಗಿ 'ಹಿಸ್ಟಮಿನ್' ಬಿಡುಗಡೆಗೊಂಡು ಅದು ರಕ್ತನಾಳಗಳ ಭಿತ್ತಿಯಲ್ಲಿ ರಂಧ್ರಗಳನ್ನು ಹೆಚ್ಚು ಮಾಡುವದು. ದೇಹದ ಯಾವದೇ ಭಾಗಕ್ಕೆ ಪೆಟ್ಟು ತಗುಲಿದಾಗಲೂ ನೋವಿನೊಂದಿಗೆ ಊತ ಉಂಟಾಗುತ್ತದೆ. ಒಡೆದ ಕೇಶವಾಹಿನಿಗಳಿಂದ ಒಸರುವ ದ್ರವವೇ ಇದಕ್ಕೆ ಕಾರಣವಾಗಬಹುದು. ಮೂತ್ರಪಿಂಡಗಳಲ್ಲಿ ಮೂತ್ರ ಸಂಗ್ರಹಣೆ ಮತ್ತು ಮೂತ್ರ ವಿಸರ್ಜ-ನೆಗೆ ವ್ಯತ್ಯಯವುಂಟಾದರೆ ಕಲ್ಮಷವೂ ಒಳಗೇ ಉಳಿದು ದೇಹದ್ರವದ ಪ್ರಮಾಣದ ಮೇಲೆ ಪರಿಣಾಮ ಬೀರುವುದು. ಇದು ಕೂಡ ಊತಕ್ಕೆ ಕಾರಣವಾಗಬಹುದು.

ಕೆಲವು ಸಲಹೆಗಳು

೧) ಮೇಲಿಂದ ಮೇಲೆ ಕಾಲು-ಪಾದಗಳಿಗೆ ಬಾವು ಬರತೊಡಗಿದರೆ ಡಾಕ್ಟರರಿಂದ ಪರೀಕ್ಷಿಸಿಕೊಳ್ಳುವುದು ಅಗತ್ಯ. ಮೂತ್ರಪರೀಕ್ಷೆ-ರಕ್ತ-ಒತ್ತಡದ ಪರೀಕ್ಷೆಯನ್ನು ಮಾಡಿಸಬೇಕು. ತೇಕು ಬಂದು ಹೃದಯದ ಬಡಿತದಲ್ಲಿ ವ್ಯತ್ಯಾಸ ಉಂಟಾಗುತ್ತಿದ್ದರಂತೂ ಸಂಪೂರ್ಣ ಪರೀಕ್ಷೆ ಅವಶ್ಯಕ. ಬಾವು ಕೆಲವು ಬಾರಿ ಅಪಾಯಕರ ಚಿನ್ಹೆಯಾಗಿ ಬರಬಹುದು.

೨) ಮಕ್ಕಳಲ್ಲಿ ಬಾವು ಕಾಣಿಸಿಕೊಂಡರೆ ಪ್ರೋಟೀನ ಅಭಾವವೇ ಹೇಗೆ ಎಂದು ಖಚಿತಪಡಿಸಿಕೊಂಡು ಸೂಕ್ತ ಆಹಾರ ಕೊಡುವ ವ್ಯವಸ್ಥೆ ಮಾಡಬೇಕು. ಸಮತೋಲ ಸತ್ವಯುತ ಆಹಾರವನ್ನು ನೀಡಬೇಕು.

೩) ಔಷಧಿಗಳ ಸೇವನೆಯಿಂದ ತುರಿಕೆಯುಂಟಾಗಿ ಗಾದರಿಗಳೆದ್ದು ಬಾವು ಬರತೊಡಗಿ-ದರೆ ಕೂಡಲೆ ಔಷಧವನ್ನು ವರ್ಜಿಸಬೇಕು. ಬೇರೆ ಔಷಧಿಗಾಗಿ ಡಾಕ್ಟರರ ಸಲಹೆ ಪಡೆಯಬೇಕು.

೪) ಬಾವು ಬಂದ ಸಮಯದಲ್ಲಿ ಡಾಕ್ಟರರು ಉಪ್ಪು ಲವಣಗಳ ಪಥ್ಯ ಹೇಳಿದ್ದರೆ ಅವುಗಳನ್ನು ಬಿಡಬೇಕು. ಉಪ್ಪಿನಂಶದಿಂದ ಬಾವು ಹೆಚ್ಚಾಗುವ ಸಂಭವವಿರುತ್ತದೆ.

೫) ಕುಳಿತರೆ ಇಲ್ಲವೆ ನಿಂತಾಗ ಬಾವು ಬಂದರೆ ಮಲಗುವ ಸಮಯದಲ್ಲಿ ಕಾಲುಗಳ ಬುಡದಲ್ಲಿ ದಿಂಬನ್ನು ಇಟ್ಟು ಪಾದಗಳನ್ನು ಎತ್ತರಿಸುವುದರಿಂದ ಬೆಳಿಗ್ಗೆ ಏಳುವ ಸಮಯದಲ್ಲಿ ಬಾವು ಕಡಿಮೆಯಾಗುತ್ತದೆ.

೬) ಕೀಟಗಳ ಕಡಿತದಿಂದ ಅಥವಾ ಏಟು ತಗುಲಿ ಬಾವು ಬಂದಿದ್ದರೆ ಇಟ್ಟಿಗೆಯ ಕಾವು ಇಲ್ಲವೆ ಉಗಿಯ ಮುಖಾಂತರ ಕಾವು ಕೊಡುವುದರಿಂದ ಬಾವು ಕಡಿಮೆಯಾಗುವುದು. ಎಲುವು ಕೀಲುಗಳ ಬಾವಿಗೂ ಇದೇ ಚಿಕಿತ್ಸೆಯನ್ನು ಮಾಡಬಹುದು. ಬಾವು ಕಡಿಮೆ ಮಾಡುವ ಮಲಾಮು ಉಪಯೋಗಿಸಬಹುದು.

೭) ಕೆಲ ಸಂದರ್ಭಗಳಲ್ಲಿ ಬಾವು ಬಂದಾಗ ಡಾಕ್ಟರರು ಹೆಚ್ಚು ಸಲ ಮೂತ್ರ ವಿಸರ್ಜನೆಯಾಗುವ ಮಾತ್ರೆಗಳನ್ನು ಕೊಡುವರು. ಅವನ್ನು ಬೆಳಿಗ್ಗೆ ತೆಗೆದುಕೊಳ್ಳಬೇಕು. ಇದರೊಡನೆ ಪೊಟ್ಯಾಶಿಯಂ ಲವಣಯುಕ್ತ ದ್ರವವನ್ನು ತೆಗೆದು ಕೊಂಡರೆ ಕಾಲುಗಳ ಸ್ನಾಯುಖಂಡಗಳಲ್ಲಿ ಬರುವ ಬಳಲಿಕೆಯು ತಪ್ಪುತ್ತದೆ.

೮) ಕೆಲವು ಗಿಡಗಂಟಿಗಳಿಂದ, ಹೊಲಗಳಲ್ಲಿ ಹಾಕುವ ಗೊಬ್ಬರದ ಸಂಪರ್ಕದಿಂದ ದೇಹದ ಅಂಗಗಳ ಮೇಲೆ ಬಾವು ಬರತೊಡಗಿದರೆ ಅವನ್ನು ತ್ಯಜಿಸಬೇಕು. ✡

ಬಡವನಾಗಿರುವುದರಲ್ಲಿ ಇನ್ನೂ ಒಂದು ಅನುಕೂಲವಿದೆ - ವೈದ್ಯರು ಬಡವರನ್ನು ಕ್ಷಿಪ್ರವಾಗಿ ಗುಣಪಡಿಸುತ್ತಾರೆ.

—ಫ್ರ್ಯಾಂಕ್ ಮ್ಯಾಕಿನ್ಲೆ ಹಬಾರ್ಡ್

ಹುಲಿ ಬಂತು ಹುಲಿ

ರಮೇಶಚಂದ್ರ

ಚುಮು ಚುಮು ನಸುಕಿನಲ್ಲಿ, ಹೂಗಳು ಅರಳುವ ವೇಳೆಯಲ್ಲಿ ಡಿಸೆಂಬರ್ ತಿಂಗಳ ಚಳಿ ಇನ್ನೂ ತನ್ನ ಪ್ರಭಾವವನ್ನು ತಗ್ಗಿಸಿರದ ಕಾರಣ ಹೈದ್ರಾಬಾದ್ ನಗರವು ಒಮ್ಮೆ ಎಚ್ಚರವಾದರೂ, ಹಾಸಿಗೆ ಬಿಟ್ಟೇಳದ ಸೋಮಾರಿಯಂತೆ ಮಲಗಿತ್ತು. ನಗರದ ಹೊರ ಆವರಣದ ಶ್ರೀಮಂತ ಬಡಾವಣೆಗಳ ಮನೆಗಳಲ್ಲಿ ಚಟುವಟಿಕೆ ನಿಧಾನವಾಗಿ ಪ್ರಾರಂಭವಾಗುತ್ತಿತ್ತು. ಇಂತಹ ಮನೆಯೊಂದರ ಮುಂದೆ ಕೆಲಸದ ಕೆಂಪಮ್ಮ ಮುಂದೆ ಬರುವ ಅಸಾಮಾನ್ಯ ಘಟನೆಯ ಅರಿವೇ ಇಲ್ಲದೆ ಬಾಗಿಲಿಗೆ ನೀರು ಚುಮುಕಿಸಿ, ರಂಗೋಲಿಯಿಟ್ಟು ಎದ್ದು ನಿಂತು ತನ್ನ ಕೈ ಚಳಕವನ್ನು ಇನ್ನೊಮ್ಮೆ ನೋಡಿ ತಲೆ ಎತ್ತಿದಳು. ಅವಳು ಕಂಡ ನೋಟವನ್ನು ಅರ್ಥಮಾಡಿಕೊಳ್ಳಲು ಅವಳಿಗೆ ಕೆಲವು ಕ್ಷಣಗಳೇ ಬೇಕಾಯ್ತು...ಕೊಂಚವೇ ತೆರೆದಿದ್ದ ಕಾಂಪೌಂಡಿನ ಕಬ್ಬಿಣದ ಬಾಗಿಲನ್ನು ದೂಡಿಕೊಂಡು ಒಳಗೆ ರಾಜಾರೋಷದಿಂದ ಬರುತ್ತಿದೆ...ಒಂದು ದೊಡ್ಡ ಪಟ್ಟೆಪಟ್ಟೆಯ ಹುಲಿ...!! ವಿಷಯ ಮನನವಾಗುವಷ್ಟರಲ್ಲಿ... ಹುಲಿ... ಇನ್ನೂ ಹತ್ತಿರ...ಹತ್ತಿರ ಬಂದು ಬಿಟ್ಟಿದೆ...ಕೆಂಪಮ್ಮ ಇರುವ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ...ಅಮ್ಮಾ... ಎಂದು ಚೀರಿದಳು. ಅವಳ ಕೂಗಿನಿಂದ ಕೆರಳಿದ ಹುಲಿ ಒಂದೇ ಏಟಿಗೆ ನೆಗೆದು ತನ್ನ ಪಂಜದಿಂದ ಅವಳ ಕಪಾಳಕ್ಕೆ ಒಂದು ಬಾರಿಸಿತು....ಕೆನ್ನೆಯಿಂದ ರಕ್ತ ಚಿಮ್ಮಿ ಕೆಂಪಮ್ಮ ಪ್ರಜ್ಞಾಶೂನ್ಯಳಾದಳು.

ಬಿಸಿ ಬಿಸಿ ಕಾಫಿಯ ಲೋಟದೊಂದಿಗೆ ಬೆಳಗಿನ ಸುದ್ದಿಯನ್ನು ನೋಡಲು ಪತ್ರಿಕೆಯನ್ನು ಕೈಗೆತ್ತಿಕೊಂಡಿದ್ದ ಕೃಷ್ಣಮೂರ್ತಿಗಳು ಈ ಆಕ್ರಂದನವನ್ನು ಕೇಳಿ, ಗಾಬರಿಯಿಂದ ಮೇಲೆ ಏಳುವುದಕ್ಕೂ, ಹುಲಿ ನೇರ ಮನೆಯೊಳಗೇ ಪ್ರವೇಶಿಸುವುದಕ್ಕೂ ಸರಿ ಹೋಯಿತು. ಕುರ್ಚಿಗಳನ್ನು ಬಾಗಿಲ ಪಕ್ಕದಲ್ಲಿ ಹಾಕಿದ್ದರಿಂದ ಹುಲಿಯ ನೇರ ದೃಷ್ಟಿಯಿಂದ ಕೃಷ್ಣಮೂರ್ತಿ ಬಚಾವಾದರು. ಮನೆಯೊಳಗೆ ಬಂದ ಹುಲಿ ನೇರವಾಗಿ ನಡೆದು ಮುಂಬಾಗಿಲಿಗೆ ಎದುರಾಗಿದ್ದ ಅಡುಗೆಯ ಮನೆಯೊಳಗೆ ನುಗ್ಗಿತು. ವಿಷಯದ ತೀವ್ರತೆಯನ್ನು ಅರಿತ ಕೃಷ್ಣಮೂರ್ತಿ ಬುದ್ಧಿಯನ್ನು ಉಪಯೋಗಿಸಿ, ಕೂಡಲೇ ಅಡುಗೆಯ ಮನೆಯ ಬಾಗಿಲನ್ನು ಹೊರಗಿನಿಂದ ಮುಚ್ಚಿ ಅಗುಳಿ ಹಾಕಿಬಿಟ್ಟರು.

ಕೃಷ್ಣಮೂರ್ತಿಯ ಮನೆಯಲ್ಲಿದ್ದವರು ಅವರ ಹೆಂಡತಿ ರಾಧಾದೇವಿ, ಹದಿನಾರು ವರ್ಷದ

ಮಗಳು ಕಸ್ತೂರಿ, ಹತ್ತು ವರ್ಷದ ಮಗ ಕಿಶೋರ. ಮೇಲಿನ ಪ್ರಸಂಗ ನಡೆದ ಸಂದರ್ಭದಲ್ಲಿ ರಾಧಾದೇವಿ ಸ್ನಾನ ಮುಗಿಸಿ ಹೂಗಳನ್ನು ಕೀಳಲು ಹಿಂದಿನ ಕೈತೋಟಕ್ಕೆ ಹೋಗಿದ್ದರು. ಕಿಶೋರ ತನ್ನ ಓದಿನ ಕೋಣೆಯಲ್ಲಿ ಕುಳಿತು ಓದಲುತೊಡಗಿದ್ದ. ಮಗಳು ಕಸ್ತೂರಿ ಸ್ನಾನ ಮಾಡುತ್ತಿದ್ದಳು.

ಇವರ ಮನೆಯ ವಿನ್ಯಾಸ ಹೇಗಿತ್ತೆಂದರೆ— ಅಡುಗೆಯ ಮನೆಯ ಮೂಲಕವೇ ಬಚ್ಚಲು ಮನೆಗೆ ಪ್ರವೇಶ. ಬಚ್ಚಲು ಮನೆಗೆ ಒಂದೇ ಬಾಗಿಲು. ಸ್ನಾನದ ಮನೆಯಿಂದ ಹೊರ ಬಂದು ಅಡುಗೆಯ ಮನೆಯ ಮೂಲಕವೇ ಮನೆಯ ಒಳಗೆ ಪ್ರವೇಶ. ಈಗ ಪ್ರಸಂಗದ ಗಂಭೀರತೆ ಓದುಗರಿಗೆ ಅರಿವಾಗಿರಬಹುದು. ಕಸ್ತೂರಿ ಬಚ್ಚಲು ಮನೆಯಿಂದ ಹೊರಬಂದ ಕೂಡಲೆ— ಹುಲಿಗೆ ಬೆಳಗಿನ ಉಪಾಹಾರವಾಗುತ್ತಾಳೆ!!!??

ಈ ವೇಳೆಗೆ ರಾಧಾಬಾಯಿ, ಕೃಷ್ಣಮೂರ್ತಿ, ಕಿಶೋರ ಇವರೆಲ್ಲರೂ ಬಚ್ಚಲು ಮನೆಯ ಚಿಕ್ಕ ಕಿಟಕಿಯ ಮೂಲಕ ಕಸ್ತೂರಿಗೆ ವಿಷಯವನ್ನು ವಿವರಿಸಿ, ಏನೇ ಆದರೂ ಬಚ್ಚಲು ಮನೆಯ ಬಾಗಿಲನ್ನು ಮಾತ್ರ ತೆಗೆಯಬೇಡ ಎಂದು ಬೇಡಿಕೊಂಡು ಒಪ್ಪಿಸುವ ಹೊತ್ತಿಗೆ ಸಾಕು ಸಾಕಾಯ್ತು. ಕಸ್ತೂರಿ ಭಯ-ಗಾಬರಿಯಿಂದ ಬಚ್ಚಲಲ್ಲೇ ರೋದಿಸುತ, ಕುಳಿತಳು.

ಇದ್ದುದರಲ್ಲಿ ಧೈರ್ಯ ತಂದುಕೊಂಡು ಕೃಷ್ಣ ಮೂರ್ತಿ ನೆರೆಹೊರೆಯವರಲ್ಲಿ ನೆರವಿಗೆ ಧಾವಿ-





ಸಿದರು. ನೆರೆಹೊರೆಯುವರೆಲ್ಲರೂ ಕೃಷ್ಣಮೂರ್ತಿಯ ಮನೆಗೆ ಧಾವಿಸಿ ಬಂದು ಅಡುಗೆಯ ಮನೆಯ ಕಿಟಕಿಯ ಗಾಜನ್ನು ಒಡೆದು ಇಣಿಕಿ ನೋಡಿ ಹುಲಿಯ ಅಂದಚಂದಗಳನ್ನು ವರ್ಣಿಸ ತೊಡಗಿದರು. ಕೃಷ್ಣಮೂರ್ತಿ ಸಮಯಪ್ರಜ್ಞೆ ತಂದುಕೊಂಡು ಕೆಂಪಮ್ಮನನ್ನು ಆಸ್ಪತ್ರೆಗೆ ಸೇರಿಸುವ ಏರ್ಪಾಡು ಮಾಡಿ ಪೋಲೀಸ್ ಠಾಣೆಗೆ ವಿಷಯ ತಿಳಿಸಿ ನೆರವು ಕೋರಿದರು.

ಈ ವೇಳೆಗೆ ಪುಕ್ಕಟೆಯಾಗಿ ಹುಲಿಯನ್ನು ನೋಡುವ ಅವಕಾಶ ತಪ್ಪಿಸಿಕೊಳ್ಳಬಾರದೆಂದು ಜನಸಮೂಹ ಗುಂಪು ಸೇರಿ ಕೃಷ್ಣಮೂರ್ತಿಯ ಮನೆಯ ಮುಂದೆ ಒಂದು ಜಾತ್ರೆಯೇ ನೆರೆಯಿತು. ಈ ಗದ್ದಲದಿಂದ ಗಾಬರಿಯಾದ ಹುಲಿ ಅಡುಗೆಯ ಮನೆಯಲ್ಲಿ ಪಾತ್ರೆ ಪರಡಿಗಳನ್ನು ಜೋಡಿಸಿಡಲು ಕಟ್ಟಿದ್ದ ಕಟಕಟೆಯ ಗೂಡಿನಲ್ಲಿ ತಲೆ ಮರೆಸಿಕೊಳ್ಳಲು ಯತ್ನಿಸಿತು. ಬಚ್ಚಲು ಮನೆಯ ಸಣ್ಣ ಕಿಟಕಿಯ ಮೂಲಕ ಕಸ್ತೂರಿಗೆ ಕಾಫಿ, ಉಪಾಹಾರದ ಸರಬರಾಜು ನಡೆಯುತ್ತಿತ್ತು. ಏನೇ ಆದರೂ ಬಾಗಿಲು ಮಾತ್ರ ತೆಗೆಯಬೇಡ ಎಂದು ಅವಳಿಗೆ ಮನದಟ್ಟು ಮಾಡಿಸಿದರು.

ಪೋಲೀಸರು ಸ್ಥಳಕ್ಕೆ ಧಾವಿಸಿ ಬಂದು, ಗಲಭೆಯನ್ನು ನಿಯಂತ್ರಿಸಿ, ಪರಿಸ್ಥಿತಿಯನ್ನು ಹತೋಟಿಗೆ ತರುವಷ್ಟರಲ್ಲಿ ಸಾಕಷ್ಟು ಸಮಯ ಹಿಡಿಯಿತು. ಅದೇ ಸಮಯಕ್ಕೆ ಅರಣ್ಯ ಇಲಾಖೆಗೆ ಸಹ ದೂರು ನೀಡಿ, ಅವರೂ ತಮ್ಮ ಸಾಮಗ್ರಿ ಸಮೇತ ಸ್ಥಳಕ್ಕೆ ಬರುವಂತೆ ವಿನಂತಿಸಲಾಯಿತು.

ದುರದೃಷ್ಟವಶಾತ್ ಆ ದಿನ-ಹುಲಿಯಂತಹ ಕಾಡು ಮೃಗಗಳಿಗೆ ಮತ್ತು ಬರಿಸುವದಕ್ಕಾಗಿ ಉಪಯೋಗಿಸುವ ಟ್ರಾಂಕ್ವಿಲೈಸರ್ ಗನ್ ಉಪಕರಣವನ್ನು ಪ್ರಯೋಗಿಸಲು ಪರಿಣತಿ ಪಡೆದಿದ್ದ ತರಬೇತಿದಾರನು ರಜೆಯ ಮೇಲೆ ಹೋಗಿದ್ದ ಪ್ರಯುಕ್ತ, ಕಣ್ಣದ್ದೂ ಕುರುಡಾದಂತಿತ್ತು.

ಅರಣ್ಯ ಇಲಾಖೆಯ ದಿಬ್ಬಣ ಹೊರಟು ಕೃಷ್ಣಮೂರ್ತಿಯ ಮನೆ ಸೇರುವ ಹೊತ್ತಿಗೆ ಹೊತ್ತು ನೆತ್ತಿಗೇರಿತ್ತು.

ಕಿಟಕಿಯ ಗಾಜಿನ ಮೂಲಕ ಎಲ್ಲರೂ ಹುಲಿಯನ್ನು ನೋಡುವವರೇ ಹೊರತು, ಒಬ್ಬರಾದರೂ ಮತ್ತು ಬರಿಸುವ ತುಪಾಕಿಯಿಂದ ಹೊಡೆಯುದಾದರು. ಏಕೆಂದರೆ, ಸರಿಯಾದ ಆಯಕಟ್ಟಾದ ಜಾಗದಲ್ಲಿ ಬೀಳದೇ ಹೋದರೆ ಆ ಹುಲಿಗೆ ಪ್ರಾಣಾಪಾಯವಾಗಬಹುದು.

ಕೃಷ್ಣಮೂರ್ತಿಯ ಮನೆಯಿಂದ ಕೊಂಚ ದೂರದಲ್ಲಿ ಇದ್ದವರು ಶಾಂತಾ — ಮೋಹನ ದಂಪತಿಗಳು. ಇವರನ್ನು ಭೇಟಿಯಾಗಿ ಕೊಂಚ ಕಾಲ ಇದ್ದು ಹೋಗಲೆಂದೆ ನಾಲ್ಕು ದಿನದ ಕೆಳಗೆ ಶಾಂತಾಬಾಯಿಯ ತಂದೆ ಪದ್ಮನಾಭ ರಾವ್ ಆಗಮಿಸಿದ್ದರು. ಯೋಗಾಯೋಗ-

ವೆಂದರೆ ಇವರು ನಿವೃತ್ತ ಫಾರೆಸ್ಟ್ ರೇಂಜ್ ಆಫೀಸರ್ ಆಗಿದ್ದುದೂ ಅಲ್ಲದೇ ಮೇಲೆ ವಿವರಿಸಿದ ತುಪಾಕಿಯ ಬಳಕೆಯನ್ನೂ ಬಲ್ಲವರಾಗಿದ್ದರು. ಕರ್ಣಾಕರ್ಣಿಕೆಯಾಗಿ ಹುಲಿಯ ಆಗಮನದ ವಿಷಯ ಇವರಿಗೂ ತಿಳಿದು, ನೋಡುವ ಕುತೂಹಲದಿಂದ ಕೃಷ್ಣಮೂರ್ತಿಯ ಮನೆಯ ಬಳಿ ಬಂದರಾದರೂ ಪೋಲೀಸರ ಬಲವಂತದಿಂದ ಹಿಂದೆ ಉಳಿದರು.



ಟ್ರಾಂಕ್ವಿಲೈಸರ್ ಬಳಸುವವರಿಲ್ಲದೇ ಹುಲಿಯನ್ನು ಕೈವಶ ಪಡಿಸಿಕೊಳ್ಳುವ ಯತ್ನಕ್ಕೆ ತಡೆಯಾಗುತ್ತಿದೆ ಎಂದು ತಿಳಿದಾಗ ಸ್ವಯಂಪ್ರೇರಣೆಯಿಂದ ಮುನ್ನುಗ್ಗಿ, ತಮ್ಮ ಪರಿಚಯ ಮಾಡಿಕೊಂಡು, ಹುಲಿಯು ಮಲಗಿದ್ದ ಅಡುಗೆಯ ಮನೆಯ ಬಳಿಗೆ ಪ್ರವೇಶ ದೊರಕಿಸಿಕೊಂಡರು. ಕಟಕಟೆಯಲ್ಲಿ ಮಲಗಿದ್ದ ಹುಲಿಯನ್ನು ನೋಡಿ... ಮತ್ತು ಬರಿಸುವ ತುಪಾಕಿಯನ್ನು ತೆಗೆದುಕೊಂಡು ಹುಲಿಯ ಕುತ್ತಿಗೆಯ ಬಳಿ ಏಟು ಬೀಳುವಂತೆ ಗುರಿ ಹಿಡಿದು, ಪ್ರಯೋಗಿಸಿಯೇಬಿಟ್ಟರು. ಒಂದೆರಡು ನಿಮಿಷ ಒದ್ದಾಡಿದ ಹುಲಿಯು ಕಟಕಟೆಯಲ್ಲಿಯೇ ಮಲಗಿ ಚೈತನ್ಯಶೂನ್ಯವಾಯಿತು. ಎಲ್ಲರೂ ನೆಮ್ಮದಿಯ ಉಸಿರು ಬಿಟ್ಟರು.

ಈಗ ಹುಲಿಯೇನೋ ಮಲಗಿದೆ. ಒಳಗೆ ನುಗ್ಗಿ ಹೊರಗೆ ಎಳೆಯಲು ಎಲ್ಲರಿಗೂ ಹೆದರಿಕೆ. ಸರಿ... ಕೊನೆಗೆ ಹತ್ತು ಮಂದಿ ಪೋಲೀಸರು ಒಳಗೆ ನುಗ್ಗಿ ಹುಲಿಯ ಕಾಲಿಗೆ ಹಗ್ಗ ಬಿಗಿದು, ಬಹಳ ಶ್ರಮದಿಂದ ಕಟಕಟೆಯ ಮೇಲಿನಿಂದ ಕೆಳಗಿಳಿಸಿ ಸಾಕಷ್ಟು ಪ್ರಯತ್ನದಿಂದ ಹೊರಗೆ ತಂದು ತೆರೆದ ಪೋಲೀಸ್ ಜೀಪಿನಲ್ಲಿಟ್ಟು ನಿಟ್ಟುಸಿರು ಬಿಟ್ಟರು. ಇಷ್ಟೆಲ್ಲಾ ರಾದ್ಧಾಂತ ನಡೆಯುತ್ತಿದ್ದಾಗಲೂ ಪದ್ಮನಾಭರಾಯರು ಇನ್ನೊಂದು ಟ್ರಾಂಕ್ವಿಲೈಸರನ್ನು ಲೋಡ್ ಮಾಡಿ, ಗನ್ ಹಿಡಿದು ಹುಲಿಯನ್ನು ಗಮನಿಸುತ್ತಲೇ ಇದ್ದರು. ನಂತರ ಹುಲಿಗೆ ಹೂಮಾಲೆಗಳನ್ನು ಹಾಕಿ. ರಾಜ ಬೀದಿಯಲ್ಲಿ ಮೆರವಣಿಗೆ ಮಾಡಿ ಮೃಗಾಲಯದ ಕ್ಯುರೇಟರ್‌ನ ವಶಕೊಪ್ಪಿಸಲಾಯಿತು.

ಹುಲಿಯನ್ನು ಅಡುಗೆಯ ಮನೆಯಿಂದ ಹೊರಗೆಳೆದ ಕೂಡಲೇ ಬಚ್ಚಲು ಮನೆಯಿಂದ ಕಸ್ತೂರಿಯನ್ನು ಹೊರಗೆ ಕರೆತಂದರು; ಬಂಧಮುಕ್ತಗೊಳಿಸಿದರು. ಇನ್ನೇನು ಸ್ಮೃತಿ ತಪ್ಪುವುದರಲ್ಲಿದ್ದ ಕಸ್ತೂರಿಯನ್ನು ಉಪಚರಿಸಿದರು. ಅಪಾಯದಿಂದ ಪಾರಾಗಿದ್ದ ಕೆಂಪಮ್ಮ ಸಹ ಶುಶ್ರೂಷೆ ಪಡೆದಳು.

ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾದ ಈ ಹುಲಿ ಆಕಸ್ಮಾತ್ ಸಹ್ಯಾದ್ರಿಯ ಬೆಟ್ಟಗಳಿಂದ ದಿಕ್ಕು ತಪ್ಪಿ ಬಂದಿತ್ತಂತೆ. ಈಗ ಹೈದ್ರಾಬಾದಿನ ಮೃಗಾಲಯದಲ್ಲಿ ವಿಶ್ರಾಂತಿ ಪಡೆಯುತ್ತಿದೆ.

ಕಳೆದ ತಿಂಗಳು ನನ್ನ ತಂಗಿಯ ಮನೆಗೆ ಹೋಗಿ ಬಂದ ನನ್ನ ತಾಯಿಯವರು ಹೇಳಿದ ಈ ನೈಜ ಘಟನೆಯನ್ನು, ಹೆಸರುಗಳನ್ನು ಮಾತ್ರ ಕಲ್ಪಿಸಿಕೊಂಡು, ನಿಮ್ಮ ಮುಂದೆ ಇಟ್ಟಿದ್ದೇನೆ. ✡

ಜಮಾನೆ ಜೀವ ಜನು ಜೀವನ

ನಾನಾಗ ಮಿಡ್ಲ್ ಸ್ಕೂಲಿನಲ್ಲಿ ಕಲಿಯುತ್ತಿದ್ದೆ. ನನ್ನ ಅಣ್ಣ ಪಿ. ಯು. ಸಿ. ಯಲ್ಲಿ ಓದುತ್ತಿದ್ದ. ನಮ್ಮ ಮನೆಯಲ್ಲಿ ವಿದ್ಯುದ್ದೀಪದ ಅನುಕೂಲ-ವಿಲ್ಲದ್ದರಿಂದ ನನ್ನ ಅಣ್ಣ ಮತ್ತು ಅವನ ಮೂರು ಜನ ಗೆಳೆಯರು ಅಭ್ಯಾಸ ಮಾಡಲು ಕಾಲೇಜಿನ ಹತ್ತಿರವೇ ಒಂದು ಕೋಣೆಯನ್ನು ಬಾಡಿಗೆ ಹಿಡಿದಿದ್ದರು. ಅವನ ಗೆಳೆಯರಲ್ಲಿ ಕುಂಭಕರ್ಣನ ಹಾಗೆ ನಿದ್ದೆ ಮಾಡುವವನೊಬ್ಬನಿದ್ದ. ಬೆಳಿಗ್ಗೆ ಎಷ್ಟು ಎಚ್ಚರಿಸಿದರೂ ಏಳುತ್ತಿರಲಿಲ್ಲವಷ್ಟೇ ಅಲ್ಲ, ರಾತ್ರಿ ಮಲಗುವ ಮುನ್ನ ಒಮ್ಮೊಮ್ಮೆ ಗಡಿ-ಯಾರದ ಅಲಾರಾಂ ಬಟನ್ನನ್ನು ಒತ್ತಿ ಮುಂಜಾನೆ ಅಲಾರಾಂ ಆಗದಂತೆ ಮಾಡುತ್ತಿದ್ದ. ಇದರಿಂದ ಉಳಿದವರಿಗೆಲ್ಲ ಬಹಳ ತೊಂದರೆಯಾಗುತ್ತಿತ್ತು. ಆದ್ದರಿಂದ ಅವರು ಮೂವರೂ ತಮ್ಮ ಗೆಳೆಯನ ನಿದ್ರಾಭಂಗಕ್ಕೆ ಒಂದು ಔಷಧಿಯನ್ನು ಹುಡುಕ ತೊಡಗಿದರು. ಕ್ರಿಶ್ಚಿಯನ್ ಮತದವರಾದ ಅವ-ರಿಗೆ ಒಂದು ಉಪಾಯ ಹೊಳೆಯಿತು. ಒಂದು ದಿನ ಬೆಳಿಗ್ಗೆ ಮೂವರು ಕೂಡಿ ಅವನ ಹಾಸಿಗೆಯ ಸುತ್ತಲು ಮೊಂಬತ್ತಿಗಳನ್ನು ಹಚ್ಚಿಟ್ಟು ಮೊಣ ಕಾಲೂರಿ ದೊಡ್ಡದಾಗಿ ಕೂಗಲಾರಂಭಿಸಿದರು. ಅದನ್ನು ಕೇಳಿ ಅಕ್ಕಪಕ್ಕದ ಮನೆಯವರು ಓಡಿ ಬಂದು ಮಲಗಿದ್ದವನನ್ನು, ಅಕ್ಕಪಕ್ಕದಲ್ಲಿ ಉರಿ-ಯುವ ಮೊಂಬತ್ತಿಗಳನ್ನು ನೋಡಿ ಹುಡುಗ ಸತ್ತನೆಂದು ತಿಳಿದು ಗಲಾಟೆ ಮಾಡತೊಡಗಿದರು. ಆಗ ಆ ಕುಂಭಕರ್ಣ ಗೆಳೆಯನಿಗೆ ಒಮ್ಮೆಲೆ ಎಚ್ಚರ ವಾಯಿತು. ಅವನು ಗಾಬರಿಯಿಂದ ಒಮ್ಮೆಲೆ ಎದ್ದು ಮುಸುಕನ್ನು ಕಿತ್ತೊಗೆದು ಉರಿಯು ತ್ತಿರುವ ಮೊಂಬತ್ತಿಗಳನ್ನೂ ನೆರೆದಿರುವ ಜನತೆ-ಯನ್ನೂ ನೋಡಿ ನಾಚಿಕೆಯಿಂದ ಮುದ್ದೆಯಾದ. ಅಂದು ಎಪ್ರಿಲ್ ಒಂದನೆಯ ತಾರೀಖು.

–ಡೆಲ್ಫಿ ಗುಡಿನೊ

ಒಮ್ಮೆ ನಮ್ಮ ಕುಟುಂಬದವರೆಲ್ಲ ಮಂತ್ರಾಲ-ಯಕ್ಕೆ ಹೋಗಿ ಬೆಂಗಳೂರಿಗೆ ಬರುವಾಗ ಬಳ್ಳಾರಿ ಯಲ್ಲಿ ಬಸ್ಸು ಬದಲಾಯಿಸಬೇಕಾಯಿತು. ಬಸ್ಸು ಹತ್ತುವ ಜಾಗದಲ್ಲಿ ವಿಪರೀತ ಜನಜಂಗುಳಿ. ಅಂತೂ ಶ್ರಮ ಪಟ್ಟು ಬಸ್ಸು ಹತ್ತಿದೆವು. ನಂತರ ಟಿಕೇಟು ತೆಗೆಯಲು ನಮ್ಮ ಅಣ್ಣ ಪರ್ಸ್ ನೋಡಿ ಕೊಂಡರೆ ಅದಾಗಲೇ 'ಪಿಕ್ ಪಾಕೆಟ್' ಆಗಿತ್ತು. ಎಲ್ಲಾ ಹಣ ಅವರಲ್ಲಿಯೇ ಇಟ್ಟದ್ದರಿಂದ ಬೇರೆ ಯಾರಲ್ಲಿಯೂ ಹಣ ಇರಲಿಲ್ಲ. ಪರಸ್ಥಳ, ಯಾರೂ ಗುರುತಿಲ್ಲ. ಏನು ಮಾಡಬೇಕೆಂಬುದೇ ತೋಚಲಿಲ್ಲ. ಇನ್ನೇನು ಬಸ್ಸಿನಿಂದ ಇಳಿದು ಬೆಂಗಳೂರಿಗೆ ಫೋನು ಮಾಡಬೇಕೆಂದು ಯೋಚಿ-ಸುವಷ್ಟರಲ್ಲೇ, ಇದನ್ನೆಲ್ಲಾ ಕೇಳಿಸಿಕೊಂಡ ಮಹಾನುಭಾವರೊಬ್ಬರು ತಕ್ಷಣ ತಮ್ಮ ಜೇಬಿ ನಿಂದ ೧೦೦ರೂ. ತೆಗೆದು "ತೊಗೊಳ್ಳಿ ಸ್ವಾಮಿ ಏನು ಮಾಡೋಕ್ಕಾಗುತ್ತೆ, ಈ ಸಂಜೇಲಿ ಇಳಿದು ಇನ್ನೇನು ಪರದಾಡ್ತೀರಿ," ಅಂದರು. ನಮಗೆ ಅದನ್ನು ನಂಬುವದೇ ಕಠಿಣವಾಯಿತು. ಮನು-ಷ್ಯನ ಎರಡು ಮುಖಗಳು ಒಮ್ಮೆಲೇ ಪರಿಚಯ ವಾದವು. ಬೆಂಗಳೂರಿನಲ್ಲಿ ಇಳಿದ ಮೇಲೆ ಕೂಡ ಅವರು ಹಿಂದಿರುಗಿ ನೋಡದೆ ಹೊರಟು ಬಿಟ್ಟರು. ನಮ್ಮ ಅಣ್ಣ ಹಿಂದೆಯೇ ಓಡಿಹೋಗಿ ಅವರ ವಿಳಾಸ ಪಡೆದು ನಂತರ ಹಣ ಮುಟ್ಟಿಸಿ ದರು.

–ಮೈತ್ರಿ ರಾವ್

ಒಮ್ಮೆ ಬಟ್ಟೆಗಳನ್ನು ಖರೀದಿಸಲೆಂದು ಪರಿಚ-ಯದ ಬಟ್ಟೆಯಂಗಡಿಯೊಂದಕ್ಕೆ ಹೋಗಿದ್ದೆ. ಅಂಗಡಿಯ ಮಾಲಿಕ ಆದರದಿಂದ ಮಾತನಾಡಿಸಿ. ಬಟ್ಟೆಗಳನ್ನು ಬಿಚ್ಚಿ ತೋರಿಸಿ ನಾಲ್ಕು ಬಟ್ಟೆ ಹೆಚ್ಚಿಗೆ ಖರೀದಿಸುವಂತೆ ಮಾಡಿದ. ಬಟ್ಟೆ ಆಯ್ಕೆ ಮಾಡಿದ ನಂತರ ನನ್ನ ಬಳಿಯಿದ್ದ ಹಣ ಕಡಿಮೆ ಬೀಳಬಹುದೆಂದು ಅನುಮಾನವಾಯಿತು.ಅಂಗಡಿ-ಯಾತನಿಗೆ ಹೇಳಿದಾಗ "ಇಲ್ಲಾಮ್ಮ, ಸಾಕಾಗು ತ್ತದೆ. ಒಂದು ವೇಳೆ ಸಾಕಾಗದಿದ್ದರೆ ನಾಳೆ ತಂದು ಕೊಡುವಿರಂತೆ ನೀವೇನೂ ಪರಿಚಯವಿಲ್ಲದವರಲ್ಲ" ಎಂದು ಎಲ್ಲ ಬಟ್ಟೆಗಳನ್ನು ಬಿಲ್ ಮಾಡಲು ಕೊಟ್ಟ. ಬಿಲ್ ಮಾಡಿದಾಗ ನನ್ನ ಅನುಮಾನ ನಿಜವಾಗಿತ್ತು. ಬಿಲ್ಲಿನ ಮೊತ್ತ ನನ್ನ ಬಳಿ ಇದ್ದುದಕ್ಕಿಂತ ೪೦ ರೂಗಳಷ್ಟು ಹೆಚ್ಚಾಗಿತ್ತು. ಆದರೆ ೪೦ರೂ. ಬೆಲೆಬಾಳುವ ಬಟ್ಟೆಯೊಂದನ್ನು

ಆತನ ಅಂಗಡಿಯಲ್ಲೇ ಹೊಲಿಸಲು ಕೊಡುವುದಿದ್ದುದರಿಂದ ಹೇಗೂ ಕಡಿಮೆ ಬಿದ್ದ ಮೌಲ್ಯದ ಬಟ್ಟೆ ಆತನಲ್ಲೇ ಇರುತ್ತದೆ. ನನಗೇನೂ ಆತನ ಋಣ ಇರುವದಿಲ್ಲ ಎನ್ನಿಸಿತು. ಆದರೆ ಹಣ ಕೊಟ್ಟ ನಂತರ ಅವನು ಸುಮಾರು ೩೦ ರೂ ಬೆಲೆಯ ಮತ್ತೊಂದು ಬಟ್ಟೆಯನ್ನೂ ಹೊಲೆಯಲೆಂದು ಇಟ್ಟುಕೊಂಡಿದ್ದ ಬಟ್ಟೆಯ ಜೊತೆಗೇ ತೆಗೆದಿಟ್ಟುಕೊಂಡು "ಇವೆರಡನ್ನೂ ಇವರು ನಾಳೆ ಒಟ್ಟಿಗೆ ತೆಗೆದುಕೊಂಡು ಹೋಗುತ್ತಾರೆ" ಎಂದು ಉಳಿದ ಬಟ್ಟೆಗಳನ್ನಷ್ಟೆ ಪ್ಯಾಕ್ ಮಾಡಲು ಕೊಟ್ಟ.

-ಎಸ್. ವಿ. ಸುಜಾತ

ನಮ್ಮ ಮನೆಯ ಬದಿಗೆಯೆ ಇನ್ನೊಂದು ಚಿಕ್ಕ ಮನೆ ಅರ್ಥಾತ್ ಅದು ನಮ್ಮ ಔಟ್‌ಹೌಸ್. ಸಾಮಾನ್ಯವಾಗಿ ಅದನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ಆದರೆ ನಮ್ಮ ಮನೆ ತುಸು ಎತ್ತರದಲ್ಲಿದ್ದರೆ ಆ ಮನೆ ಕೆಳಗಡೆಗಿದೆ. ನಗರಸಭೆಯು ನಮ್ಮ ಓಣಿಯ ನಳಗಳಲ್ಲಿ ನೀರು ಬಿಟ್ಟಾಗ ಔಟ್‌ಹೌಸಿನ ನಳದಲ್ಲಿ ನೀರು ರಭಸದಿಂದ ಸುರಿಯತೊಡಗುತ್ತದೆ. ಆಗಲೇ ನಮ್ಮ ಮನೆಯ ನಳಗಳಲ್ಲಿ ಮಾತ್ರ ಬಂದೂ ಬಾರದಂತೆ ಹನಿಹನಿಯಾಗಿ ನೀರು ಬರುತ್ತದೆ. ಆದ್ದರಿಂದ ಹೊಸತಾಗಿ ಬಾಡಿಗೆಗೆಂದು ಬರುವವರಿಗೆಲ್ಲ ಕರಾರಿನ ರೂಪದಲ್ಲಿ, "ನಾವು ನೀರು ತುಂಬಿಕೊಂಡ ನಂತರವೇ ನೀವು ನೀರು ತುಂಬಿಕೊಳ್ಳಬೇಕು," ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತೇವೆ.

ಮೂರು ವರ್ಷಗಳ ಹಿಂದೆ ನಮ್ಮ ಔಟ್‌ಹೌಸಿಗೆ ಒಂದು ಕುಟುಂಬ ವಾಸಿಸಲು ಬಂತು. ಗಂಡ, ಹೆಂಡತಿ, ಅವರ ಚಿಕ್ಕ ಮಗು ಹಾಗು ೧೨ ವರ್ಷದ ಒಬ್ಬ ಬಾಲಕ (ಮನೆಯ ಯಜಮಾನರ ತಮ್ಮ) ಇಷ್ಟು ಜನ ಅಲ್ಲಿರುವವರು. ಒಂದು ಮಧ್ಯಾಹ್ನ ಯಜಮಾನರು ಊಟ ಮುಗಿಸಿ ಆಫೀಸಿಗೂ ಅವರ ತಮ್ಮ ಶಾಲೆಗೂ ಹೋದರು. ಪತ್ನಿ, ಕೂಸನ್ನು ತೊಟ್ಟಿಲಲ್ಲಿ ಮಲಗಿಸಿ ತಾವು ನಿದ್ರೆ ಹೋದರು. ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ ನಳಕ್ಕೆ ನೀರು ಬಂತು. ಅವರ ಮನೆಯಲ್ಲಿ ನಳ ಬಿಟ್ಟಿದ್ದರೋ ಏನೋ, ನಮ್ಮ ಮನೆಯಲ್ಲಿ ಮಾತ್ರ ನೀರು ಹನಿಹನಿಯಾಗಿ ಒಸರುತ್ತಿತ್ತು. ಆ ಮನೆಯಲ್ಲಿ ಯಾರೂ ನೀರು ತುಂಬಿಕೊಳ್ಳುತ್ತಿದ್ದಂತೆ ಕಂಡುಬರಲಿಲ್ಲ; ಅದು ರಭಸದಿಂದ ಹರಿದು ಬಚ್ಚಲಿಂದ ಗಟಾರ ಸೇರುತ್ತಿತ್ತು. ನಳವನ್ನು ನಿಲ್ಲಿಸುವಂತೆ ಕಿಟಕಿಯಲ್ಲಿ ಕೂಗಿ ಕೂಗಿ ಹೇಳಿದರೂ ಅದು ಯಾರ ಕಿವಿಗೂ ಬಿದ್ದಂತೆ ತೋರಲಿಲ್ಲ. ಮುಂಬಾಗಿಲಿಗೆ ಹೋಗಿ ಎಷ್ಟು ಬಾಗಿಲು ಬಡಿದರೂ, ಏನೂ ಪರಿಣಾಮವಾದಂತೆ ತೋರಲಿಲ್ಲ. ಗೊಂದಲ ಕೇಳಿ ನೆರೆಹೊರೆಯವರೆಲ್ಲ ಸೇರಿದರು. ಆದರೆ ಯಾರಿಗೂ ಹೊಸ ಪರಿಹಾರ ಮಾರ್ಗ ತೋಚಲೇಯಿಲ್ಲ. ಹತ್ತೆಂಟು ನಿಮಿಷಗಳ ನಂತರ ಒಬ್ಬ ಯುವಕನಿಗೆ ಏನೋ ಹೊಳೆದು ನಮ್ಮ ಮನೆಯೊಳಗಿನಿಂದ ಎತ್ತರದ ಸ್ಟೂಲೊಂದನ್ನು ತಂದ. ಒಂದಿಷ್ಟು ನೀರನ್ನು ತರಿಸಿಕೊಂಡು ಎತ್ತರದಲ್ಲಿದ್ದ ವೆಂಟಿಲೇಟರ್ ಮೂಲಕ ನೀರನ್ನು ರಭಸದಿಂದ ಒಳಕ್ಕೆ ತೂರಹತ್ತಿದ — ಒಳಗೆ ಗೊರಕೆ ಹೊಡೆಯುತ್ತ ಮಲಗಿದ್ದ ಆ ಗೃಹಿಣಿಯ ಮುಖಕ್ಕೆ ನೀರು ತಲಪಿದರೆ ಆಕೆಗೆ ಎಚ್ಚರಾಗಬಹುದೆಂಬ ಆಸೆಯಿಂದ. ಹಲವು ಕ್ಷಣಗಳ ನಂತರ ಇಚ್ಛಿತ ಪರಿಣಾಮವುಂಟಾಗಿರಬೇಕು. ಆಕೆ ಎದ್ದರು. ಇದೇನು ಗದ್ದಲವೆಂದುಕೊಂಡು ಬಾಗಿಲು ತೆರೆದಾಗ ವಿಷಯ ಅರ್ಥವಾಗಿ ನಳ ನಿಲ್ಲಿಸಿದರು. ಅವರ ಮುಖದಲ್ಲಿ ಮಾತ್ರ ದೈನ್ಯ ಭಾವ ಮೂಡಿತ್ತು. ಅವರು ನನ್ನನ್ನು ಬದಿಗೆ ಕರೆದು, "ಸುಡಗಾಡು ನಿದ್ದೆ. ಇನ್ನು ಮುಂದೆ ಮಾತ್ರ ಇಂಥ ತಪ್ಪು ಮಾಡುವುದಿಲ್ಲ; ಆದರೆ ನಮ್ಮ ಮನೆಯವರೆದುರು ಮಾತ್ರ ಈ ವಿಷಯ ಹೇಳಬೇಡಿರಿ. ಅವರು ರೌದ್ರಾವತಾರವನ್ನೇ ತಳೆಯುತ್ತಾರೆ," ಎಂದು ಅಂಗಲಾಚಿದರು.

ಆದರೆ ಮುಂದೊಂದು ರವಿವಾರ ಅವರೇ, ನಮ್ಮ ಯುಕ್ತಿಯನ್ನೇ ಅನುಸರಿಸಿ ತಮ್ಮ ಮನೆಯ ಬಾಗಿಲು ತೆರೆಸಬೇಕಾಯಿತು. ಗಂಡ ಹೆಂಡಿರಿಬ್ಬರೂ ಆ ೧೨ ವರ್ಷದ ಬಾಲಕನನ್ನು ಮನೆ ಕಾಯಲು ಮಲಗಿಸಿ ಸಿನೆಮಾಕ್ಕೆ ಹೋಗಿದ್ದರು. ಮನೆಗೆ ಮರಳಿದಾಗ ಆ ಬಾಲಕನಿಗೆ ಕುಂಭಕರ್ಣ ನಿದ್ರೆ. ಏನು ಮಾಡಿದರೂ ಆತನಿಗೆ ಎಚ್ಚರಾಗದಿದ್ದಾಗ ಅವರು ಕಿಟಕಿಯ ಮೂಲಕ ಜಲಸಿಂಚನ ಪ್ರಯೋಗಕ್ಕೆ ಇಳಿದು ಯಶಸ್ವಿಯಾದರು.

–ಗೋವಿಂದನಂದನ

ದೂರಸಂಪರ್ಕ- ತಂತಿಯಿಂದ ಉಪಗ್ರಹದ ವರೆಗೆ

ವಂದನಾ ಶಾನಭಾಗ

ಇಂದು ನಮ್ಮ ಜೀವನದಲ್ಲಿ ದೂರವಾಣಿಯು ಹಾಸುಹೊಕ್ಕಾಗಿ ಹೆಣೆದುಕೊಂಡಿದೆ.

"ನೋಡಿರಿ ಮಾರಾಯ್ರೇ, ಮೊನ್ನೆ ನ್ಯೂಯಾರ್ಕದಲ್ಲಿರುವ ಭಾವನ ಜೊತೆಗೆ ಡಾಯಲ್ ಮಾಡಿ ಮಾತಾಡಿದ್ದೆ. ಎಷ್ಟೊಂದು ಸ್ಪಷ್ಟವಾಗಿ ಮಾತು ಕೇಳಿ ಬರುತ್ತಿತ್ತು. ಲೋಕಲ್ ಮಾತಾಡಿದುದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಕೇಳಿಸುತ್ತಿತ್ತು" ಎಂದೊ...

"ಬೊಮ್ಮನಹಳ್ಳಿಗೆ ಕಾಲ್ ಹಚ್ಚಿ ಕುಂತು ಹತ್ ತಾಸ ಆದವ್ರು, ಈಗ ಹೇಳುತ್ತಾರೆ, ಲೈನ್ ಕೆಟ್ಟೈತಿ ಅಂತ. ಇಷ್ಟು ಹೊತ್ನಾಗ ಅಲ್ಲಿಗೆ ನಡಕೊಂಡು ಹೋಗಿ ಬರಬಹುದಿತ್ತು." ಎಂದೋ ಅಲ್ಲಲ್ಲಿ ಟೀಕೆಗಳು ಕೇಳಿಬರುವುದು ಸಾಮಾನ್ಯ. ನ್ಯೂಯಾರ್ಕಿನಲ್ಲಿ ಇರುವವರೊಂದಿಗೆ ಮಾತನಾಡಲು ಉತ್ತಮ ಗುಣಮಟ್ಟದ, ವಿಶ್ವಾಸನೀಯ ಲೈನು ದೊರಕುವುದು ಸಾಧ್ಯವಾದರೆ, ಬೊಮ್ಮನಹಳ್ಳಿಗೆ ಮಾತನಾಡಲು ಮಾತ್ರ ಏಕೆ ಅಡೆತಡೆಯಿಂದ ಕೂಡಿದ, ಮಾತನಾಡುತ್ತಿದ್ದಂತೇ ಕಟ್ ಆಗುವ, ಗದ್ದಲದಿಂದ ಕೂಡಿದ ಲೈನು ಸಿಗುತ್ತದೆ ಎನ್ನುವ ಪ್ರಶ್ನೆ ಬರುವುದು ಸಹಜ. ಇದಕ್ಕೆ ಮುಖ್ಯ ಕಾರಣ ನ್ಯೂಯಾರ್ಕಿಗೆ ಮಾತನಾಡಲು ಹೊಸ ಪದ್ಧತಿಯ, ಹೊಚ್ಚ ಹೊಸ ತಾಂತ್ರಿಕತೆಯ ಉತ್ತಮ ಗುಣ ಮಟ್ಟದ ಉಪಕರಣ ಬಳಸಿದರೆ, ಬೊಮ್ಮನಹಳ್ಳಿಗೆ ಮಾತನಾಡಲು ಓಬೀರಾಯನ ಕಾಲದ, ಅಡೆತಡೆಗಳಿಂದ ಕೂಡಿದ, ಬಳಸಿ ನಿರ್ಜೀವವಾದ ಉಪಕರಣಗಳನ್ನು ಉಪಯೋಗಿಸುತ್ತಿರುವುದೇ ಆಗಿದೆ. ದೂರಸಂಪರ್ಕವು ಆಧುನಿಕತೆಯತ್ತ ದಾಪುಗಾಲು ಹಾಕುತ್ತಿದೆ. ಹಳೆಯ ಪದ್ಧತಿಗಳು ಕಾಲ್ದಾರಿಯಂತಾದರೆ ಹೊಸ ಪದ್ಧತಿಗಳು ವಾಯುಯಾನದಂತಿವೆ.


ಒಂದು ದೂರವಾಣಿ ಕರೆಯು ಪೂರ್ತಿಯಾಗಬೇಕಾದರೆ ಅನೇಕ ಹಂತಗಳನ್ನು ದಾಟಿ ಬರಬೇಕಾಗುತ್ತದೆ. ದೂರದ ಊರಿನಲ್ಲಿರುವ ನಿಮ್ಮ ಆಪ್ತರೊಡನೆ ಮಾತನಾಡುವಾಗ ನೀವು ಟ್ರಂಕ್ ವಿನಿಮಯ ಕೇಂದ್ರವನ್ನು ಸಂಪರ್ಕಿಸುವಿರಷ್ಟೇ? ಇಲ್ಲಿರುವ ಆಪರೇಟರ್ ನಿಮಗೆ ಬೇಕಾದ ಊರಿನ ಆಪರೇಟರರನ್ನು ಸಂಪರ್ಕಿಸಿ, ಅವರಿಂದ ನಿಮಗೆ ಬೇಕಾಗಿರುವ ಗ್ರಾಹಕರನ್ನು ಪಡೆದು ಅವರ ಜೊತೆಗೆ ಮಾತನಾಡಲು ಅನುವು ಮಾಡಿಕೊಡುತ್ತಾರೆ. ನೀವು ಮಾತನಾಡಿ ಮುಗಿದ ನಂತರ ಲೈನನ್ನು ನಿಮ್ಮ ಟೆಲಿಫೋನಿನಿಂದ ಬೇರ್ಪಡಿಸುತ್ತಾರೆ. ಡಾಯಲಿಂಗ್ ಪದ್ಧತಿ ಇರುವ ಕಡೆ, ನೀವು ಕೋಡ್ ಡಾಯಲ್ ಮಾಡಿದಾಗ ನೇರವಾಗಿ ನೀವು ಡಾಯಲ್ ಮಾಡಿದ ಊರಿನ ಸ್ವಯಂ ಚಾಲಿತ ವಿನಿಮಯ ಕೇಂದ್ರದ ಜೊತೆಗೆ ಸಂಪರ್ಕ

ಉಂಟಾಗುತ್ತದೆ. ಮುಂದೆ ಗ್ರಾಹಕರ ನಂಬರ್ ಡಾಯಲ್ ಮಾಡಿದಾಗ ಗ್ರಾಹಕರ ಜೊತೆಗೆ ಸಂಪರ್ಕ ದೊರೆಯುತ್ತದೆ. ಗ್ರಾಹಕರ ಜೊತೆಗೆ ನಿಮ್ಮ ದೂರವಾಣಿ ಉಪಕರಣವನ್ನು ಕೂಡಿಸುವ ಮತ್ತು ಬೇರ್ಪಡಿಸುವ ಕೆಲಸವನ್ನು ಇಲ್ಲಿ ಯಂತ್ರಗಳೇ ಮಾಡುತ್ತವೆ. ಎರಡು ಊರುಗಳ ವಿನಿಮಯ ಕೇಂದ್ರಗಳ ನಡುವೆ ಸಂಭಾಷಣೆ ಸಾಗಿಸಲು ಅನೇಕ ಮಾಧ್ಯಮಗಳನ್ನು ಬಳಸುತ್ತಾರೆ. ಇದರಲ್ಲಿ ಊರ್ಧ್ವಗತ ತಂತಿ ಪದ್ಧತಿ ಮೊದಲನೆಯದು.

ಊರ್ಧ್ವಗತ ತಂತಿ ಪದ್ಧತಿ ಮತ್ತು ವಾಹಕ ತತ್ವ

ಮೋರ್ಸನು ಮೊದಲ ಸಲ ತಂತಿ ಸಂದೇಶ ಕಳುಹಿಸಿದಾಗಿನಿಂದಲೂ ಎರಡು ಊರುಗಳ ನಡುವೆ ಸಂಪರ್ಕ ಸಾಧಿಲು, ರಸ್ತೆಯ ಉದ್ದಕ್ಕೂ ನಿಗದಿತಗೊಳಿಸಿದ ಅಂತರವಲ್ಲಿ ಕಂಬಗಳನ್ನು ನೆಟ್ಟು ಅದರ ಉದ್ದಕ್ಕೂ ಒಂದು ಜೊತೆ ತಂತಿ ಬಿಗಿದು, ಇವುಗಳ ಮುಖಾಂತರ ದೂರ ಸಂಪರ್ಕ ಸಾಧಿಸುವ ಪದ್ಧತಿ ಬಳಕೆಯಲ್ಲಿದೆ. ಇಂತಹ ಒಂದು ಜೊತೆ ತಂತಿಯ ಮೇಲೆ ಒಂದು ಸಲಕ್ಕೆ ಒಂದು ಸಂಭಾಷಣೆ ನಡೆಸಬಹುದು. ನೀವು ಹುಬ್ಬಳ್ಳಿಯಿಂದ ಗದುಗಿಗೆ ಮಾತನಾಡ ಬಯಸುತ್ತೀರೆಂದು ತಿಳಿಯಿರಿ. ಅದೇ ಸಮಯ ದಲ್ಲಿ ಇನ್ನೂ ಇಬ್ಬರು, ಮೂವರು ಗ್ರಾಹಕರು ಹುಬ್ಬಳ್ಳಿಯಿಂದ ಗದುಗಿಗೆ ಸಂಪರ್ಕಿಸಲು ಬಯಸಬಹುದು. ಆಗ ಸರತಿಯ ಪ್ರಕಾರ ಕರೆ ಕೊಡುತ್ತ ಹೋದಂತೇ ಇನ್ನಷ್ಟು ಗ್ರಾಹಕರು ಮಾತನಾಡಲು ಸಿದ್ಧರಾಗುತ್ತ ಹೋಗಿ ಗ್ರಾಹಕರ ಎಂದೂ ಮುಗಿಯದ ಕ್ಯೂ ಬೆಳೆಯಬಹುದು. ಇದನ್ನು ತಡೆಗಟ್ಟಲು ಎರಡು ಪಟ್ಟಣಗಳ ನಡುವೆ ನಾಲ್ಕು ಐದು ಜೊತೆ ತಂತಿಗಳನ್ನು ಹಾಯಿಸುವುದು ಆರ್ಥಿಕವಾಗಿ ಅನುಕೂಲಕರವಾಗಿರುವುದಿಲ್ಲ. ಹೀಗಾಗಿ ಒಂದೇ ಜೊತೆ ತಂತಿಯ ಮೇಲೆ ಒಂದೇ ಸಲಕ್ಕೆ ಹಲವಾರು ಸಂಭಾಷಣೆಗಳನ್ನು ನಡೆಸುವ ಅಗತ್ಯ ಕಂಡು ಬಂದಿತು. ನೀರಿನ ಪೂರೈಕೆಯಂತಾಗಲೀ, ವಿದ್ಯುತ್ತಿನ ಪೂರೈಕೆಯಂತಾಗಲೀ ಒಂದೇ ಲೈನಿನ ಮೇಲೆ ಎಲ್ಲ ಗ್ರಾಹಕರಿಗೂ ಒಂದೇ ಸಲಕ್ಕೆ ಸರಕನ್ನು ಪೂರೈಸುವುದು ದೂರವಾಣಿಯಲ್ಲಿ ಸಾಧ್ಯವಿಲ್ಲ. ಇಲ್ಲಿ ರಹಸ್ಯಕ್ಕೆ ಮಹತ್ವ. ಒಬ್ಬ ರಿಂದ ಹೊರಟ ಮಾತುಗಳು ನಿಗದಿತಗೊಳಿಸಿದ ಗ್ರಾಹಕರಿಗೇ ತಲಪಬೇಕೆ ವಿನಾ ಎಲ್ಲರಿಗೂ ಅಲ್ಲ. ಅಂಚೆ ಪದ್ಧತಿಯಲ್ಲಿ ಒಂದೇ ಊರಿಗೆ ಹೋಗುವ ಪತ್ರಗಳನ್ನು ಹೇಗೆ ಬೇರೆ ಬೇರೆ ಲಕೋಟೆಯಲ್ಲಿ ಭದ್ರಪಡಿಸಿ ಒಂದೇ ಚೀಲದಲ್ಲಿ ಹಾಕಿ ಒಂದೇ ಸಲಕ್ಕೆ ಕಳುಹಿಸುತ್ತಾರೋ, ಅದೇ ರೀತಿ ದೂರವಾಣಿಯೂ ಬೇರೆ ಬೇರೆ ಗ್ರಾಹಕರು ಧ್ವನಿಗಳನ್ನು ಪ್ರತ್ಯೇಕವಾಗಿ ಭದ್ರಪಡಿಸಿ ಒಂದೇ ಜತೆ ತಂತಿಯ ಮೂಲಕ ಒಂದೇ ಸಲಕ್ಕೆ ಕಳುಹಿಸುವ ಪದ್ಧತಿಯನ್ನು ಕಂಡುಹಿಡಿಯಲಾಗಿದೆ.

ಧ್ವನಿಯನ್ನು ವಿದ್ಯುತ್ ಅಲೆಗಳ ರೂಪದಲ್ಲಿ ಪ್ರೇಷಿಸಲಾಗುವುದಲ್ಲವೇ? ವಿದ್ಯುತ್ ಅಲೆಗಳ ರೂಪದಲ್ಲಿರುವ ಬೇರೆ ಬೇರೆ ಜನರ ಧ್ವನಿಗಳನ್ನು ಬೇರೆ ಬೇರೆ ವಾಹಕ ವಿದ್ಯುತ್ ಅಲೆಗಳ ಮೇಲೆ ಹೇರಿ ಒಂದೇ ಜೊತೆ ತಂತಿಯ ಮೇಲೆ ಒಂದೇ ಸಲಕ್ಕೆ ಕಳುಹಿಸುತ್ತಾರೆ. ಇನ್ನೊಂದು ಊರಿನಲ್ಲಿ ಧ್ವನಿಗಳನ್ನು ವಾಹಕ ಅಲೆಗಳಿಂದ ಬೇರ್ಪಡಿಸಿ ಬೇಕಾದ ಗ್ರಾಹಕರಿಗೆ ತಲಪಿಸುತ್ತಾರೆ. ಹೀಗೆ ಒಂದೇ ಮಾಧ್ಯಮದ ಮೇಲೆ ಒಂದೇ ಸಲಕ್ಕೆ ಒಂದಕ್ಕಿಂತ ಹೆಚ್ಚು ಸಂಭಾಷಣೆಗಳನ್ನು ನಡೆಸಲು ಅನುವು ಮಾಡಿಕೊಟ್ಟಿರುವ ಈ ಪದ್ಧತಿಗೆ ವಾಹಕ ಪದ್ಧತಿ ಅಥವಾ carrier ಪದ್ಧತಿ ಎನ್ನುತ್ತಾರೆ. ಇದನ್ನು ನಡೆಸಲು ಬಹಳ ಎಲೆಕ್ಟ್ರಾನಿಕ್ ಉಪಕರಣಗಳು ಬೇಕಾಗುತ್ತವೆ. ಈ ಉಪಕರಣಗಳನ್ನು ಇಡುವ ತಾಣಕ್ಕೆ ಕ್ಯಾರಿಯರ್ ಸ್ಟೇಶನ್ ಎನ್ನುತ್ತಾರೆ. ಪ್ರತಿ ವಿನಿಮಯ ಕೇಂದ್ರಕ್ಕೆ ಹೊಂದಿಕೊಂಡು ಒಂದು ಕ್ಯಾರಿಯರ್ ಸ್ಟೇಶನ್ ಇರುತ್ತದೆ. ಇಲ್ಲಿ ಟ್ರಂಕ್ ಅಥವಾ ಸ್ವಯಂಚಾಲಿತ ವಿನಿಮಯ ಕೇಂದ್ರಗಳಿಂದ ಬೇರೆ ಬೇರೆ ಜೊತೆ ತಂತಿಗಳ ಮೇಲೆ ಬಂದ ಧ್ವನಿಯ ಅಲೆಗಳನ್ನು ಕೂಡಿಸುವ ಮತ್ತು ಬೇರೆ ಊರಿನಿಂದ ಬಂದ ಧ್ವನಿಯ ಅಲೆಗಳನ್ನು ವಿಂಗಡಿಸಿ ಬೇರೆ ಬೇರೆ ಜೊತೆ ತಂತಿಗಳ ಮೇಲೆ ವಿನಿಮಯ ಕೇಂದ್ರಗಳಿಗೆ ಕಳುಹಿಸುವ ಕಾರ್ಯ ನಡೆಯುತ್ತದೆ.



ಇಂತಹ ಒಂದು ಜೊತೆ ತಂತಿಯ ಮೇಲೆ ಒಂದು ಸಲಕ್ಕೆ ಹೆಚ್ಚೆಂದರೆ ಹದಿನಾರು ಸಂಭಾಷಣೆಗಳನ್ನು ಕಳುಹಿಸಬಹುದು. ಮಳೆ, ಗಾಳಿ, ಬಿಸಿಲಿಗೆ ಬಿಚ್ಚಿನಿಂತ ಈ ಊರ್ಧ್ವಗತ ತಂತಿಗೆ ಬಾಹ್ಯ ಅಡೆತಡೆಯೂ ಹೆಚ್ಚು; ಆಗಾಗ ತುಂಡಾಗುವ, ಕಳುವಾಗುವ ಸಂಭವ ಹೆಚ್ಚು. ಹೀಗಾಗಿ ಅಡೆತಡೆ ಇಲ್ಲದ ವಿಶ್ವಸನೀಯ ಕರೆಗಳನ್ನು ಎಲ್ಲ ಕಾಲಕ್ಕೂ ಕೊಡುವುದು ಸಾಧ್ಯವಿಲ್ಲ.

ಭೂಗತ ಸಮಾನಾಕ್ಷ ಕೇಬಲ್

ಎರಡು ಊರುಗಳ ನಡುವೆ ಸಂಪರ್ಕ ಸಾಧಿಸಲು ಬಳಸುವ ಇನ್ನೊಂದು ಮಾಧ್ಯಮವೇ ಭೂಗತ ಕೇಬಲ್. ನೆಲದಡಿಯಲ್ಲಿ ರಸ್ತೆಯ ಬದಿಗೆ ಉದ್ದಕ್ಕೂ ಕಾಲುವೆ ತೋಡಿ ಕೇಬಲ್ ಹಾಯಿಸಲಾಗುತ್ತದೆ. ಇದರಿಂದ ಆಗುವ ಮುಖ್ಯ ಅನುಕೂಲತೆಯೆಂದರೆ, ಇದು ಮಳೆ, ಗಾಳಿ, ಬಿಸಿಲುಗಳ ಹೊಡೆತಕ್ಕೆ ತುತ್ತಾಗದಿರುವುದು. ಭೂಗತ ಕೇಬಲ್ಲುಗಳಲ್ಲಿ ಬಳಕೆಯಲ್ಲಿರುವ ಸಮಾನಾಕ್ಷ [Co-oxial] ಕೇಬಲ್ಲು ಒಂದು ಅಖಂಡ ತಾಮ್ರದ ತಂತಿ, ಮತ್ತು ಇದಕ್ಕೆ ಸಮಾನಾಕ್ಷವಾಗಿ ಒಂದು ಪೊಳ್ಳು ತಾಮ್ರದ ಕೊಳವೆಯನ್ನೊಳಗೊಂಡಿರುತ್ತದೆ. ಇಂತಹ ಒಂದು ಕೊಳವೆಯ ಮೂಲಕ ಒಂದು ಸಲಕ್ಕೆ ಹತ್ತು ಸಹಸ್ರಕ್ಕಿಂತಲೂ ಹೆಚ್ಚು ಮಾತುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಳುಹಿಸಬಹುದು. ಇನ್ನೊಂದು ದಿಕ್ಕಿನಿಂದ ತಿರುಗಿ ಬರುವ ಮಾತುಗಳಿಗಾಗಿ ಬೇರೊಂದು ಕೊಳವೆ ಬೇಕಾಗುತ್ತದೆ. ಎರಡು ಕೊಳವೆಗಳನ್ನು ಬಳಸಿ ಹೆಚ್ಚೆಂದರೆ ೧೧,೫೦೦ ಸಂಭಾಷಣೆಗಳನ್ನು ಒಂದು ಸಲಕ್ಕೆ ನಡೆಸಬಹುದು. ಒಂದು ಕೊಳವೆಯ ವ್ಯಾಸ ಕೇವಲ ೦.೩೭೫ ಇಂಚು.

ವಿದ್ಯುತ್ ಅಲೆಗಳ ಶಕ್ತಿ ದೂರ ಹೆಚ್ಚಾದಂತೆ ಕ್ಷೀಣಿಸುವದರಿಂದ ಪ್ರತಿ ಐದು ಕಿ. ಮೀ. ಸುಮಾರಿಗೆ ಒಂದೊಂದು ವರ್ಧಕ (Amplifier) ಅಥವಾ ಪ್ರತ್ಯುತ್ಪಾದಕ (Repeater) ಉಪಕರಣ ಬಳಸಿ 4000 k. m. ತನಕ ದೂರ ಸಂಪರ್ಕ ಸಾಧಿಸಬಹುದು. ಹೆದ್ದಾರಿಗುಂಟ RS-1. RS-2 ಇತ್ಯಾದಿ ಕ್ರಮಾಂಕ ಕೊಟ್ಟ ಸಣ್ಣ ಸಣ್ಣ ಮನೆಗಳನ್ನು ನೀವು ನೋಡಿರಬಹುದು. ಇವುಗಳಲ್ಲಿಯೇ ಈ ವರ್ಧಕ ಉಪಕರಣಗಳನ್ನು ಇಡಲಾಗುತ್ತದೆ.

ಸೂಕ್ಷ್ಮತರಂಗ ಪದ್ಧತಿ [Microwave]

ಈ ಪದ್ಧತಿಯಲ್ಲಿ ಎರಡು ಊರುಗಳ ನಡುವೆ ಸಂಪರ್ಕ ಸಾಧಿಸಲು ಯಾವ ಮಾಧ್ಯಮವೂ ಬೇಕಾಗಿಲ್ಲ. ವಿದ್ಯುತ್ ಯಾವ ಮಾಧ್ಯಮದ ಸಹಾಯವಿಲ್ಲದೇ ವಿದ್ಯುತ್ ಕಾಂತೀಯ ಅಲೆಗಳ ರೂಪದಲ್ಲಿ ವಾತಾವರಣದಲ್ಲಾಗಲಿ, ಅವಕಾಶ (Space)ದಲ್ಲಾಗಲಿ ಚಲಿಸಬಲ್ಲದು. ಆಕಾಶವಾಣಿ ಮತ್ತು ದೂರದರ್ಶನದಲ್ಲಿ ಈ ವಿದ್ಯುತ್ ಕಾಂತೀಯ ಅಲೆಗಳನ್ನು ಎಲ್ಲ ದಿಕ್ಕುಗಳಲ್ಲಿಯೂ ಪ್ರಸಾರ ಮಾಡಿದರೆ, ದೂರ ಸಂಪರ್ಕದಲ್ಲಿ ಈ ಅಲೆಗಳನ್ನು ಒಂದೇ ದಿಕ್ಕಿನಲ್ಲಿ ಕೇಂದ್ರಿಕೃತಗೊಳಿಸಲಾಗುತ್ತದೆ. ಈ ಅಲೆಗಳ ವರ್ತನೆಯು


ಬೆಳಕಿನ ಕಿರಣದ ವರ್ತನೆಯಂತಿದ್ದು, ಒಂದು ಎತ್ತರವಾದ ಗೋಪುರಕ್ಕೆ ಬಿಗಿದ ಎಂಟೆನಾದಿಂದ ಹೊರಹೊಮ್ಮಿಸಿದ ಈ ವಿದ್ಯುತ್ ಕಾಂತಿಯ ಅಲೆಗಳನ್ನು, ಈ ಎಂಟೆನಾದ ದೃಷ್ಟಿರೇಖೆಯಲ್ಲಿರುವ, ಎತ್ತರವಾದ ಗೋಪುರಕ್ಕೆ ಕಟ್ಟಿದ ಇನ್ನೊಂದು ಎಂಟೆನಾ ಗ್ರಹಿಸಬಲ್ಲದು. ದೂರ ಸಂಪರ್ಕದಲ್ಲಿ ಮೈಕ್ರೊವೇವ್ ಅಥವಾ ಸೂಕ್ಷ್ಮ ತರಂಗ ಎನ್ನುವ ಪ್ರಸಾರದ ವಿದ್ಯುತ್ ಕಾಂತೀಯ ಅಲೆಗಳನ್ನು ಬಳಸುತ್ತಾರೆ.

ವಾಹಕ ಪದ್ಧತಿಯನ್ನು ಅನುಸರಿಸಿ ದೊರಕಿರುವ ವಿದ್ಯುತ್ ಅಲೆಗಳ ರೂಪದಲ್ಲಿರುವ ಧ್ವನಿ ಸಮೂಹಗಳನ್ನು ಮೈಕ್ರೋವೇವ್ ಹಂತದ ವಿದ್ಯುತ್ ಕಾಂತಿಯ ಅಲೆಗಳನ್ನಾಗಿ ಪರಿವರ್ತಿಸುತ್ತಾರೆ. ಅನಂತರ ಎತ್ತರವಾದ ಗೋಪುರಕ್ಕೆ ಕಟ್ಟಿದ ಎಂಟೆನಾದಿಂದ ಇವುಗಳನ್ನು ಪ್ರೇಷಿಸುತ್ತಾರೆ. ಇನ್ನೊಂದು ಎಂಟೆನಾ ಗ್ರಹಿಸಿದ ಈ ಅಲೆಗಳನ್ನು ತಿರುಗಿ ವಿದ್ಯುತ್ ಅಲೆಗಳನ್ನಾಗಿ ಪರಿವರ್ತಿಸುತ್ತಾರೆ. ಮುಂದೆ ವಾಹಕ ಪದ್ಧತಿಯಂತೆ ವಿದ್ಯುತ್ ಅಲೆಗಳ ರೂಪದಲ್ಲಿರುವ ಬೇರೆ ಬೇರೆ ಧ್ವನಿಯ ಅಲೆಗಳನ್ನು ವಿಂಗಡಿಸಿ ವಿನಿಮಯ ಕೇಂದ್ರಕ್ಕೆ ಕಳುಹಿಸಲಾಗುತ್ತದೆ.

ಈ ಪದ್ಧತಿಯಲ್ಲಿಯೂ ಸಮಾನಾಕ್ಷ ಕೇಬಲ್ ಪದ್ಧತಿಯಲ್ಲಿರುವಂತೇ ೧೦೮೦೦ ಸಂಭಾಷಣೆಗಳನ್ನು ಒಂದೇ ಸಲಕ್ಕೆ ನಡೆಸಬಹುದು. ವಿದ್ಯುತ್ ಕಾಂತೀಯ ಅಲೆಗಳ ಶಕ್ತಿಯೂ ದೂರ ಹೆಚ್ಚಿದಂತೆ ಕ್ಷೀಣಿಸುವದರಿಂದ ಪ್ರತಿ ೫೦ ಕಿ.ಮಿ. ಸುಮಾರಿಗೆ ಈ ಅಲೆಗಳನ್ನು ಗ್ರಹಿಸಿ, ವರ್ಧಿಸಿ ಮುಂದೆ ಪ್ರೇಷಿಸುತ್ತಾರೆ. ಎರಡು ಊರುಗಳ ಉದ್ದಕ್ಕೂ ಕಾಲುವೆ ತೋಡಿ ಕೇಬಲ್ ಹಾಯಿಸುವ ಅಗತ್ಯವಿಲ್ಲವಾದ್ದರಿಂದ ಈ ಪದ್ಧತಿಯು ಸಮಾನಾಕ್ಷ ಕೇಬಲ್ ಪದ್ಧತಿಗಿಂತ ಅನುಕೂಲತರವಾಗಿದೆ.

ಉಪಗ್ರಹ ಪದ್ಧತಿ

ಪ್ರತಿ ೫೦ ಕಿ. ಮಿ. ಗಳಿಗೆ ಒಂದೊಂದು ಗೋಪುರ ಸ್ಥಾಪಿಸಿ, ಪ್ರತ್ಯುತ್ಪಾದಕ ಉಪಕರಣ ಇರಿಸುವ ಬದಲಿಗೆ ಆಕಾಶದಲ್ಲಿ ಇರುವ ಒಂದೇ ಒಂದು ಉಪಗ್ರಹದಲ್ಲಿ ಈ ಪ್ರತ್ಯುತ್ಪಾದಕ ಉಪಕರಣಗಳನ್ನು ಇರಿಸಲಾಗುತ್ತದೆ. ಭೂಕೇಂದ್ರದಿಂದ ಹೊರಹೊಮ್ಮಿಸಿದ ವಿದ್ಯುತ್ ಕಾಂತೀಯ ಅಲೆಗಳನ್ನು ಉಪಗ್ರಹದಲ್ಲಿರುವ ಎಂಟೆನಾ ಗ್ರಹಿಸಿ ವರ್ಧಿಸಿ ಇನ್ನೊಂದು ಭೂ



ಮೈಕ್ರೋವೇವ್ ಗೋಪುರ

ಕೇಂದ್ರಕ್ಕೆ ಕಳುಹಿಸುತ್ತದೆ. ಭೂಮಿಯದೇ ವೇಗದಿಂದ ಸುತ್ತುತ್ತಿರುವ ಒಂದು ಉಪಗ್ರಹವು ಒಂದೇ ಕಡೆಗೆ ನಿಂತಂತೆ ಕಾಣಿಸುತ್ತದೆ. ಇದು ಒಂದೇ ಸಲಕ್ಕೆ ಭೂಮಿಯ ಮೂರರಲ್ಲಿಯ ಒಂದು ಭಾಗಕ್ಕೆ ಕಾಣಿಸಬಲ್ಲದು. ಈ ಉಪಗ್ರಹವು ಎಲ್ಲ ಭೂಕೇಂದ್ರಗಳಿಗೆ ಪ್ರತಿಫಲಕದಂತೆ ವರ್ತಿಸುವುದರಿಂದ ಹೊಸ ಕೇಂದ್ರವನ್ನು ಈಗಿರುವ ಭೂಕೇಂದ್ರದೊಡನೆ ಜೋಡಿಸಲು ಒಂದೇ ಒಂದು ಭೂಕೇಂದ್ರವನ್ನು ಸ್ಥಾಪಿಸಿದರೆ ಸಾಕು. ಎರಡು ಊರುಗಳ ಉದ್ದಕ್ಕೂ ೫೦ ಕಿ. ಮೀ. ಗಳಿಗೆ ಒಂದೊಂದು ಮೈಕ್ರೋವೇವ್ ಗೋಪುರ ಸ್ಥಾಪಿಸಬೇಕಾಗಿಲ್ಲ. ಇನ್ನಿತರ ಕಾರ್ಯವಿಧಿಗಳೆಲ್ಲ ಮೈಕ್ರೋವೇವ್ ಪದ್ಧತಿಯಂತೇ ನಡೆಯುತ್ತದೆ.

ಆಪ್ಟಿಕಲ್ ಫೈಬರ್

ಇತ್ತೀಚೆಗೆ ಎರಡು ಊರುಗಳ ನಡುವೆ ಸಂಪರ್ಕ ಸಾಧಿಸಲು ಒಂದು ಸಪೂರಾದ ಗಾಜಿನ ನಾರನ್ನು (Optical Fibre) ಮಾಧ್ಯಮವಾಗಿ ಬಳಸುತ್ತಿದ್ದಾರೆ. ವಿದ್ಯುತ್ ಅಲೆಗಳ ರೂಪದಲ್ಲಿರುವ ಧ್ವನಿಯನ್ನು ಬೆಳಕಿನ ಅಲೆಗಳನ್ನಾಗಿ ಪರಿವರ್ತಿಸಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಗಾಜಿನ ನಾರಿನಿಂದ ಪ್ರೇಷಿಸುತ್ತಾರೆ. ಇನ್ನೊಂದು ಸ್ಥಳದಲ್ಲಿ ಬೆಳಕಿನ ಅಲೆಗಳನ್ನು ವಿದ್ಯುತ್ ಅಲೆಗಳಾಗಿ ಪರಿವರ್ತಿಸುತ್ತಾರೆ. ಉಳಿದ ಕಾರ್ಯವಿಧಿಗಳೆಲ್ಲ ಇತರ ಪದ್ಧತಿಗಳಲ್ಲಿಯಂತೆಯೇ ನಡೆಯುತ್ತವೆ. ಈ ಪದ್ಧತಿಯಲ್ಲಿ ೫೦,೦೦೦ ಸಂಭಾಷಣೆಗಳನ್ನು ಒಂದೇ ಸಲಕ್ಕೆ ಕಳುಹಿಸಬಹುದು. ಇದಕ್ಕೆ ಬಳಸುವ ಗಾಜಿನ ನಾರಿನ ವ್ಯಾಸ ಕೇವಲ ೧೦ ಮೈಕ್ರೋಮೀಟರುಗಳು. ಗಾಜಿನ ನಾರಿಗೆ ಬೇಕಾಗುವ ಕಚ್ಚಾವಸ್ತು ಉಸುಕು. ಇದು ನಿಸರ್ಗದಲ್ಲಿ ಹೇರಳವಾಗಿ ದೊರಕುತ್ತದೆ. ಹೀಗಾಗಿ ಇದರ ವೆಚ್ಚ ಇತರ ಮಾಧ್ಯಮಗಳಿಗಿಂತ ತೀರ ಕಡಿಮೆ.

ದೂರಸಂಪರ್ಕದಲ್ಲಿ ಆಧುನೀಕರಣವಾಗುತ್ತಲೇ ಇದೆ. ಆದರೂ ಅದಕ್ಕಾಗಿ ತಗಲುವ ವೆಚ್ಚವನ್ನು ಕಡಿಮೆಗೊಳಿಸಲು ಶಕ್ಯವಾಗಿಲ್ಲ. ಮೈಲುಗಟ್ಟಲೆ ಕೇಬಲ್ಲು, ತಂತಿ, ಸಂಕೀರ್ಣ ಉಪಕರಣ, ಭೂಕೇಂದ್ರದ ವೆಚ್ಚ, ಉಪಗ್ರಹದ ವೆಚ್ಚ ತುಂಬಾ ಹೆಚ್ಚು. ಆಪ್ಟಿಕಲ್ ಫೈಬರ್ ಪದ್ಧತಿಯ ಬಳಕೆಯು ಭವಿಷ್ಯತ್ತಿನಲ್ಲಿ ಕಡಿಮೆ ವೆಚ್ಚದ, ಉತ್ತಮ ಗುಣಮಟ್ಟದ, ವಿಶ್ವಸನೀಯ ಸಂಪರ್ಕ ಕಲ್ಪಿಸುವ ಭರವಸೆಯನ್ನು ಈಡೇರಿಸಬಹುದು ಎಂದು ತೋರುತ್ತದೆ.

ಮಾನವನ ಧ್ವನಿಯು ಒಂದೇ ಅಲೆಯಲ್ಲ. ಇದು ಅಲೆಗಳ ಸಮೂಹ. ಈ ಸಮೂಹವು ೩೦೦ ಸೈಕಲ್/ಸೆಕೆಂಡಿನಿಂದ ೨೦ ಕಿಲೋಸೈಕಲ್/ಸೆಕಂಡ್ ಆವರ್ತನಾಂಕವಿರುವ ಬೇರೆ ಬೇರೆ ಅಲೆಗಳನ್ನು ಒಳಗೊಂಡಿರುತ್ತದೆ. ೩೦೦/ಸೈಕಲ್ ಸೆಕೆಂಡ್ ಆವರ್ತನಾಂಕದ ಅಲೆಯು ಒಂದು ಸೆಕೆಂಡಿಗೆ ೩೦೦ ಸಲ ಕಂಪಿಸುತ್ತದೆ. ಈ ಅಲೆಗಳಲ್ಲಿ ೩೦೦ ಸೈಕಲ್ಸ್‌ನಿಂದ ೧೫ ಕಿಲೋಸೈಕಲ್ಸ್ ಆವರ್ತನಾಂಕವಿರುವ ಅಲೆಗಳನ್ನು ಕೇಳಬಹುದಾಗಿದೆ. ಹೆಚ್ಚಿನ ಆವರ್ತನಾಂಕವಿರುವ ಅಲೆಗಳು ಶ್ರವಣಾತೀತ. ೩೦೦ ಸೈಕಲ್ಸ್‌ನಿಂದ ೩೪೦೦ ಸೈಕಲ್ಸ್ ಆವರ್ತನಾಂಕವಿರುವ ಅಲೆಗಳಲ್ಲಿ ಮುಖ್ಯಾಂಶವು ಕೂಡಿದ್ದು ಇವಿಷ್ಟು ಅಲೆಗಳನ್ನು ಕೇಳಿದರೆ ಇದು ಯಾರ ಧ್ವನಿ, ಏನು ವಿಷಯ ಎನ್ನುವುದನ್ನು ಗುರುತಿಸುವುದು ಸಾಧ್ಯ. ಹೀಗಾಗಿ ದೂರವಾಣಿಯಲ್ಲಿ ಬಳಸುವ ಧ್ವನಿಯ ಅಲೆಗಳು ಇವಿಷ್ಟೇ! ಆದ್ದರಿಂದ ದೂರವಾಣಿಯಲ್ಲಿ ನಾವು ಕೇಳುವ ಧ್ವನಿಯು ನೇರವಾಗಿ ಕೇಳುವ ಧ್ವನಿಗಿಂತ ಭಿನ್ನವಾಗಿರುತ್ತದೆ.

ಊರ್ಧ್ವಗತ ತಂತಿಯ ಮೇಲೆ ೦ ಸೈಕಲ್‌ನಿಂದ ೧೫೦ ಸೈಕಲ್ಸ್‌ವರೆಗೆ ಆವರ್ತನಾಂಕವಿರುವ ಅಲೆಗಳನ್ನು ಕಳುಹಿಸಬಹುದಾಗಿದೆ. ಸಮಾನಾಕ್ಷ ಮತ್ತು ಸೂಕ್ಷ್ಮ ತರಂಗ ಪದ್ಧತಿಯಲ್ಲಿ ೧೨ ಮೆಗಾ ಸೈಕಲ್ಸ್ ಆವರ್ತನಾಂಕದವರೆಗೆ ಆವರ್ತನಾಂಕವಿರುವ ಎಲ್ಲಾ ಅಲೆಗಳನ್ನೂ ಪ್ರೇಷಿಸಬಹುದಾಗಿದೆ. ಆದರೆ ದೂರವಾಣಿಯಲ್ಲಿ ಬಳಸುವ ವಿದ್ಯುತ್ ಅಲೆಗಳ ರೂಪದಲ್ಲಿರುವ ಧ್ವನಿಯ ಅಲೆಯು ಕೇವಲ ೩೦೦–೩೪೦೦ ಸೈಕಲ್ಸಿನ ಪಟ್ಟಿಯಲ್ಲಿ ಇರುತ್ತದೆ. ವಾಹಕ ಪದ್ಧತಿಯನ್ನು ಅನುಸರಿಸಿ ಈ ಅಲೆಗಳನ್ನು ಉನ್ನತ ಆವರ್ತನಾಂಕದ ಅಲೆಗಳನ್ನಾಗಿ ಪರಿವರ್ತಿಸುವುದರಿಂದ ಒಂದೇ ಸಲಕ್ಕೆ ಅನೇಕ ಸಂಭಾಷಣೆಗಳನ್ನು ಒಂದೇ ಸಲಕ್ಕೆ ಕಳುಹಿಸಬಹುದಾಗಿದೆ. ✡

ಫಾದರ್ ಲೂಯಿಸ್

ಎ. ಅಶೋಕ

ಹೊರಗಡೆ ಭಯಂಕರವಾಗಿ ಮಳೆ ಸುರಿಯುತ್ತಿತ್ತು. ರಭಸದಿಂದ ಬೀಸುತ್ತಿದ್ದ ಗಾಳಿಯ ಹೊಡೆತವನ್ನು ತಾಳಲಾರದೆ, ಮುಗಿಲೆತ್ತರಕ್ಕೆ ಬೆಳೆದ ಗಿಡ ಮರಗಳು ತಮ್ಮ ಶಿರವನ್ನು ಬಾಗಿಸಿಕೊಂಡಿದ್ದವು. ತೋಡು, ಕೆರೆ, ನದಿಗಳು ತುಂಬಿ ಹರಿಯುತ್ತಿದ್ದವು. ಜಡಿ ಹಿಡಿದಿದ್ದ ಮಳೆಯಿಂದಾಗಿ ಯಾರೂ ಹೊರಗೆ ಕಾಲಿಟ್ಟಿದ್ದಿಲ್ಲ. ಕೆಲ ಅನುಕೂಲವಂತರು ತಮ್ಮ ಹೊಟ್ಟೆಯನ್ನು ಗಟ್ಟಿಮಾಡಿಕೊಂಡು ಮಿತ್ರರೊಡಗೂಡಿ ಹರಟೆಯಲ್ಲಿ ಮುಳುಗಿದ್ದರೆ, ಮೂಲೆಯಲ್ಲಿ ಮುದುಡಿ ಕೂತ ಬಡವನ ಸಂಸಾರ ದೇವರಿಗೆ ಮೊರೆ ಇಡುತ್ತಿತ್ತು.

ಫಾದರ್ ಲೂಯಿಸರು, ಬೆಳಗಿನ ಪ್ರಾರ್ಥನೆ ಮುಗಿದ ನಂತರ ಸ್ವಲ್ಪ ಉಪಹಾರ ಸೇವಿಸಿ ಯಾವುದೋ ಕೆಲಸದಲ್ಲಿ ಮುಳುಗಿದ್ದರು. ಸುಮಾರು ಎಂಟೂವರೆ – ಒಂಭತ್ತು ಗಂಟೆಯ ಸಮಯ. ಅಷ್ಟರಲ್ಲಿ ಅವರ ಬಾಗಿಲ ಮುಂದೆ ಯಾರದೋ ನೆರಳು ಬಿದ್ದ ಹಾಗಾಯ್ತು. ಕಾಲಿನ ಟಪ...ಟಪ...ಶಬ್ದವೂ ಕೇಳಿಸಿತು. 'ಇಂತಹ ವೇಳೆಯಲ್ಲಿ ಯಾರಪ್ಪಾ ಬಂದವರು ... 'ಎಂದು ಯೋಚಿಸುತ್ತಾ ಅವರು ತಮ್ಮ ಬರವಣಿಗೆಯನ್ನು ನಿಲ್ಲಿಸಿ ಬಾಗಿಲ ಬಳಿಗೆ ಬಂದರು.

ಹೊರಗಡೆ ಮಾರ್ಸೆಲ್ ನಿಂತುಕೊಂಡಿದ್ದ. ಭಯಂಕರ ಗಾಳಿ ಮಳೆಗೆ ಸಿಕ್ಕು ತೊಯ್ದು ಹೋಗಿದ್ದ. ರಕ್ಷಣೆಗೆಂದು ಹಿಡಿದಿದ್ದ ಕೊಡೆ ಗಾಳಿಯ ರಭಸಕ್ಕೆ ಚಿಂದಿಯಾಗಿತ್ತು. ಅವನ ಹರಕು ಬಟ್ಟೆ, ಮುಖದಲ್ಲಿ ಬೆಳೆದ ಗಡ್ಡ–ಅವನೊಬ್ಬ ಬಡವನೆಂದು ಸಾರಿ ಹೇಳುತ್ತಿದ್ದವು. "ಆಶೀರ್ವಾದ ಮಾಡಿ ಫಾದರ್..." ಅವನು ಚಳಿಯಿಂದ ನಡುಗುತ್ತ ಹೇಳಿದ.

"ದೇವರು ಒಳ್ಳೆಯದು ಮಾಡಲಿ. ಯಾಕೆ ಬಂದಿರುವೆ? ಏನಾದರೂ ಕೆಲಸವಿತ್ತೆ?" ಅರೆ-ಮನದಿಂದ ವಿಚಾರಿಸಿದರು, ಲೂಯಿಸರು.

"ಫಾದರ್...ಫಾದರ್..." ಮುಂದೆ ಅವನಿಗೆ ಮಾತನಾಡಲು ಆಗಲಿಲ್ಲ.

"ಫಾದರ್...ಫಾದರ್...ಎಂದು ಯಾಕೆ ಕಿರಿಕಿರಿ ಮಾಡ್ತಿ? ನನಗೆ ಇಲ್ಲಿ ತುಂಬಾ ಕೆಲಸವಿದೆ. ಹುಂ. ಇಲ್ಲಿಂದ ಹೊರಡಬಹುದು..." ಫಾದರ್ ಲೂಯಿಸರು ಗುಡುಗಿದರು.

ಮೊದಲೇ ಚಳಿಯಿಂದ ನಡುಗುತ್ತಿದ್ದ ಅವನ ಕೈ ಕಾಲುಗಳು ಈಗ, ಫಾದರರ ಗುಡುಗಿನ ಸ್ವರ ಕೇಳಿ ಮತ್ತಷ್ಟು ನಡುಗಲಾರಂಭಿಸಿದವು. ಆದರೂ ಇದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ, ಮತ್ತೆ ಮಾತು ಮುಂದುವರಿಸಿದ... "ಫಾದರ್, ನನ್ನ ಹೆಂಡತಿ ಎಲಿಜಾ, ಒಂದು ವಾರದಿಂದ ಜ್ವರ ಪೀಡಿತಳಾಗಿ ಹಾಸಿಗೆ ಹಿಡಿದಿದ್ದಾಳೆ. ಅವಳನ್ನು ಬಿಟ್ಟು ನನಗೆ ಕೆಲಸಕ್ಕೆ ಹೋಗಲಿಕ್ಕೆ ಆಗಲಿಲ್ಲ.

ಅಲ್ಲದೆ, ಇಂಥ ಮಳೆಯಲ್ಲಿ ಸರಿಯಾದ ಕೆಲಸವಾದರೂ ಹೇಗೆ ಸಿಗಬೇಕು ? ಮನೆಯಲ್ಲಿ ಹಿಡಿ ಅಕ್ಕಿಯೂ ಇಲ್ಲ. ಅವಳಿಗೆ ಮದ್ದು ತರಬೇಕೆಂದರೆ ಒಂದು ಚೆಕ್ಕಾಸೂ ಕೈಯಲ್ಲಿಲ್ಲ. ಏನಾದರೂ ಒಂದಿಷ್ಟು ಸಹಾಯ ಮಾಡುವಿರಾದರೆ..." ಅವನ ಸ್ವರ ಗದ್ಗದಿತವಾಯಿತು. ಮುಂದಿನ ಮಾತುಗಳು ಗಂಟಲಲ್ಲೇ ಉಳಿದವು.

ಮಾರ್ಸೆಲ್‌ನ ಮಾತುಗಳನ್ನು ಅರೆ ಮನಸ್ಸಿನಿಂದ ಕೇಳುತ್ತಿದ್ದ ಫಾದರ್ ಲೂಯಿಸರಿಗೆ ಈಗ ಭಯಂಕರ ಸಿಟ್ಟು ಬಂತು. ತಮ್ಮ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, "ಹುಂ. ಎಲ್ಲ ತರಹ ನಾಟಕವಾಡಲು ನೀವು ಬಹಳ ಜಾಣರಿದ್ದೀರಿ. ಇಲ್ಲೇನು ಖಜಾನೆ ತುಂಬ ಇಟ್ಟಿದೆ ಎಂದು ಭಾವಿಸಿರುವೆಯೋ? ಒಂದು ಚೆಕ್ಕಾಸೂ ದೊರೆಯದು..." ಎಂದು ಸಿಡಿಲಿನಂತೆ ಗುಡುಗಿದರು.

ಬಡವರ ಬಂಧುವೆಂದೇ ಹೆಸರು ಪಡೆದಿದ್ದ ಫಾದರ್ ಲೂಯಿಸ್ ಬಾಯಿಂದ ಇಂತಹ ಮಾತುಗಳೇ! ಮಾರ್ಸೆಲ್ ತಬ್ಬಿಬ್ಬಾದ.

"ಇದು ನಾಟಕವಲ್ಲ ಫಾದರ್, ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಏನಾದರೂ ಸಹಾಯ ಮಾಡಿ. ನಿಮ್ಮ ಋಣವನ್ನು ಹೇಗಾದರೂ ಮಾಡಿ ತೀರಿಸ್ತೀನಿ"

ಅವನ ಸ್ಥಿತಿಯನ್ನು ಕಂಡರೆ ಯಾರಿಗಾದರೂ ಕರುಣೆ ಉಕ್ಕುತ್ತಿತ್ತು. ಆದರೆ ಫಾದರ್ ಲೂಯಿಸರು ಇನ್ನೂ ಕಠಿಣರಾದರು. "ಇಲ್ಲಿ ಇಗರ್ಜಿಯ ಜೀರ್ಣೋದ್ಧಾರಕ್ಕೆ ಸಹಾಯ ಕೇಳಿದರೆ ನಿಮ್ಮ ಕೈಯಲ್ಲಿ ದುಡ್ಡು ಇರೋದಿಲ್ಲ. ಕೈ ತುಂಬಾ ಕೆಲಸವಿರೋವಾಗ ಶರಾಬು ಕುಡಿಯಲಿಕ್ಕೆ ಮೋಜು ಮಾಡ್ಲಿಕ್ಕೆ ಹಣ ಉಂಟು. ಮತ್ತೆ ಈಗ, ಕೈ ಬರಿದಾದಾಗ ನಾನು ನಿಮ್ಮ ಕಣ್ಣಿಗೆ ಬೀಳುತ್ತೇನೆ. ಬ್ಯಾಂಕಿನಲ್ಲಿ ಹಣ ಇಟ್ಟವರ ಹಾಗೆ ತಗೊಂಡು ಹೋಗಲು ಬರುವಿರಿ ಅಲ್ಲವೆ?"

ಫಾದರ್ ಲೂಯಿಸರ ಉತ್ತರ ಕೇಳಿ ಮಾರ್ಸೆಲ್‌ನ ಕಿವಿಗೆ ಕಾದ ಸೀಸವನ್ನು ಹೊಯ್ದಂತಾಯಿತು. ಯಾರ ಯಾರ ಸಿಟ್ಟನ್ನೆಲ್ಲ ಮಾರ್ಸೆಲ್‌ನ ಮೇಲೆ ಕಾರಿದ್ದರೋ ಏನೋ, ಏಕೆಂದರೆ, ಹಿಂದಿನ ವರ್ಷ ಇಗರ್ಜಿಯ ದುರಸ್ತಿಗಾಗಿ ಮಾರ್ಸೆಲ್ ತನ್ನ ಕೈಲಾಗದ ಸಹಾಯ ಮಾಡಿದ್ದ. ಒಳ್ಳೆಯ ಮನುಷ್ಯನಾಗಲು ಪ್ರಯತ್ನಿಸುತ್ತಿದ್ದ. ಶರಾಬು ಕುಡಿಯುವುದನ್ನು ಬಿಟ್ಟು ಐದು ವರ್ಷಗಳಾಗಿದ್ದವು. ಆದರೆ ಫಾದರ್ ಲೂಯಿಸರ ದೃಷ್ಟಿಯಲ್ಲಿ ತಾನು ಇನ್ನೂ ಕೀಳುಮಟ್ಟದಲ್ಲಿ ಕಾಣುವಂತಾಯಿತೇ... ಎಂದು ಅವನು ಮರುಗಿದ. ಫಾದರ್ ಲೂಯಿಸರು ಬಡವರ ಬಂಧುವೆಂದೇ ಹೆಸರು ಪಡೆದಿದ್ದುದರಿಂದ, ಈ ವೇಳೆಯಲ್ಲಿ ತನಗೊಂದಿಷ್ಟು ನೆರವು ನೀಡಬಹುದು ಎಂಬಾಸೆಯಿಂದ ಓಡಿ ಬಂದಿದ್ದ. ಆದರೆ ಇಲ್ಲಿ ಈ ತರದ ಕಟು ಮಾತುಗಳನ್ನು ಎದುರಿಸಬೇಕಾಗುತ್ತದೆ ಎಂದು ಅವನು ಎಣಿಸಿರಲಿಲ್ಲ.

"ಯಾಕೆ ಸುಮ್ಮನಾದೆ?" ಫಾದರ್ ಮತ್ತೊಮ್ಮೆ ಗರ್ಜಿಸಿದರು. "ಸತ್ಯ ಹೇಳಿದರೆ ನಿಮಗೆ ಕೋಪ ಬರುತ್ತದಲ್ಲವೆ? ಹೋಗು, ಏನು ಬೇಕೋ ಅದನ್ನು ಮಾಡು. ನನ್ನಿಂದ ಮಾತ್ರ ನಿನಗೆ ಸಹಾಯ ದೊರೆಯದು," ಎನ್ನುತ್ತ ಕೋಣೆಯೊಳಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡರು.


ಮಾರ್ಸೆಲ್ ಮರಗಟ್ಟಿದಂತೆ ಅಲ್ಲಿಯೇ ನಿಂತಿದ್ದ. ಒಂದು ಸಣ್ಣ ಆಸೆಯಿಂದ, ಒಂದು ಸಣ್ಣ ಭರವಸೆಯಿಂದ ಅವನು ಗಾಳಿ ಮಳೆಯಲ್ಲಿ ನೆನೆಯುತ್ತಾ ಬಂದಿದ್ದ. ಈಗ ಆ ಆಸೆ, ಆ ಭರವಸೆ, ಮಳೆಯ ನೀರಿನಲ್ಲಿ ಕೊಚ್ಚಿ ಹೋಗಿತ್ತು. ತನ್ನ ಕೆಟ್ಟ ಅದೃಷ್ಟಕ್ಕೇ ಮರುಗುತ್ತ, 'ದೇವರೇ, ಇನ್ನೇನು ಮಾಡಲಿ?' ಎಂದು ಚಿಂತಿಸುತ್ತಾ ಅವನು ಬಂದ ದಾರಿಯಲ್ಲೇ ಹಿಂದಿರುಗಿದ.

*

ಕೋಣೆ ಸೇರಿದ ಫಾದರ್ ಲೂಯಿಸರಿಗೆ ತಾವು ಬಿಟ್ಟು ಬಂದ ಕೆಲಸದ ನೆನಪಾಯಿತು. ಮತ್ತೆ ಆ ಕೆಲಸವನ್ನು ಮುಂದುವರಿಸಿದರು. ಆದರೆ ಆ ಕೆಲಸದಲ್ಲಿ ಮತ್ತೆ ಗಮನ ಹರಿಸಲು ಅವರಿಂದ ಸಾಧ್ಯವಾಗಲಿಲ್ಲ. ಎರಡು ಮೂರು

ಸಲ, ಬರೆದುದನ್ನೇ ಮತ್ತೆ ಮತ್ತೆ ಬರೆದು ಅದನ್ನು ಹರಿದು ಕಸದ ಬುಟ್ಟಿಗೆ ಎಸೆದರು. ಏನಾದರೂ ಓದೋಣವೆಂದು ಒಂದು ಪುಸ್ತಕವನ್ನು ಕೈಗೆತ್ತಿಕೊಂಡರು. ಆದರೆ ಅದು ಕೂಡಾ ರುಚಿಸಲಿಲ್ಲ. ಹೊರಗಾದರೂ ಹೋಗೋಣವೆಂದರೆ, ಭಾರಿ ಮಳೆ ಸುರಿಯುತ್ತಿದೆ. ನಿಂತಲ್ಲಿ ನಿಲ್ಲಲಾರದ ಅವರ ಸ್ಥಿತಿ ಶೋಚನೀಯವಾಯಿತು. ಅತ್ತಿಂದಿತ್ತ ಶತಪಥ ಹಾಕತೊಡಗಿದರು. ಆದರೂ ಅವರ ಮನಸ್ಸು ಸಮಸ್ಥಿತಿಗೆ ಬರಲೊಲ್ಲದು. ಚಿಂತೆಗಳ ಹಿಂಡು ಅವರನ್ನು ಮುತ್ತಿ ಹಣ್ಣು ಮಾಡುತ್ತಿದ್ದವು. ಯಾಕೆ ಹೀಗೆ? ಎಂದು ಅವರಿಗೇ ತಿಳಿಯದಾಯಿತು. ಹೊರಗಡೆ ಗಾಳಿ ಮಳೆ ನಿಮಿಷ ನಿಮಿಷಕ್ಕೆ ಹೆಚ್ಚಾಗುತ್ತಿತ್ತು. ಜೊತೆಗೆ ಅವರ ಮನಸ್ಸಿನಲ್ಲೂ ಬಿರುಗಾಳಿ ಎದ್ದಿತ್ತು.

ಸೀದಾ ಹೋಗಿ ದೇವರ ಮುಂದೆ ಕುಳಿತುಕೊಂಡರು. ಶಿಲುಬೆಯಲ್ಲಿ ತೂಗುತ್ತಿದ್ದ ಏಸುವನ್ನು ನೋಡಿದರು. ಮೌನವಾಗಿ ಪ್ರಾರ್ಥಿಸಲಾರಂಭಿಸಿದರು. ಊಹುಂ ಅವರಿಗೆ ಸರಿಯಾಗಿ ಪ್ರಾರ್ಥನೆ ಮಾಡಲಾಗಲಿಲ್ಲ. ಅಲ್ಲಿಂದೆದ್ದು



ಕೋಣೆಗೆ ಹೋಗಿ ಪವಿತ್ರ ಬೈಬಲ್ಲನ್ನು ತೆರೆದರು. ಮೊದಲನೆಯ ಪಂಕ್ತಿಯೆಡೆ ಕಣ್ಣು ಹೊರಳಿಸಿದರು. ಅದು ಪವಿತ್ರ ಮಾತೆಯ ಐದನೆಯ ಅಧ್ಯಾಯವಾಗಿತ್ತು. ಓದುತ್ತಾ ಓದುತ್ತಾ ಅವರ ದೃಷ್ಟಿ ಮುಂದೆ ಕೊಟ್ಟ ಉತ್ತರದ ಕಡೆ ಹೋಯಿತು. "ನಾನು ನಿಮಗೆ ಸತ್ಯವನ್ನೇ ಹೇಳುತ್ತೇನೆ. ನನಗಿಂತ ಸಣ್ಣವರಿಗೆ (ದುರ್ಬಲರಿಗೆ) ನೀವು ಏನೂ ಸಹಾಯ ಮಾಡಲಾರಿರೋ, ಅಂತೆಯೇ ನನಗೂ ಮಾಡಲಾರಿರಿ"– ಫಾದರ್ ಲೂಯಿಸರ ಎದೆ ಧಸಕ್ಕೆಂದಿತು. ಬೆಳಗ್ಗಿನ ದೃಶ್ಯಗಳು ಬೇಡ ಬೇಡವೆಂದರೂ ಅವರ ಕಣ್ಣು ಮುಂದೆ ವರ್ತಿಸಲಾರಂಭಿಸಿದವು. ಮಾರ್ಸೆಲ್ಲನ ದೀನ ಮುಖ ಮತ್ತೆ ಅವರ ಮುಂದೆ ನಿಂತ ಹಾಗಾಯಿತು. ಕೋಣೆಯಲ್ಲಿ ನೇತಾಡುತ್ತಿದ್ದ ಶಿಲುಬೆಗೇರಿದ ಏಸುವಿನ ಮೇಲೆ ಅವರ ದೃಷ್ಟಿ ಹೋಯಿತು. ಒಂದು ಕ್ಷಣ ಏಸುವಿನ ಮುಖವು ಮಾರ್ಸೆಲ್ಲನ ಮುಖದಂತೆ ಕಂಡಿತು. ಅವರ ಅಂತಃಕರಣವು ಚೀರಿ ಹೇಳಿತು. 'ನಾನು ಮಾರ್ಸೆಲ್ಲನನ್ನು ನಡೆಸಿಕೊಂಡ ರೀತಿ ಸರಿಯೇ? ಚಳಿ – ಮಳೆಯಲ್ಲಿ ನೆನೆಯುತ್ತ ಓಡಿ ಬಂದವನಿಗೆ ಒಂದೆರಡು ಒಳ್ಳೆಯ ಮಾತುಗಳನ್ನು ಹೇಳಿ ಕಳುಹಿಸಿದ್ದರೆ ಬಡವನಾದ ಅವನಿಗೆ ಎಷ್ಟೊಂದು ಸಂತೋಷವಾಗುತ್ತಿತ್ತೋ ? ಛೀ ... ನಾನು ಮಾಡಿದ್ದು ಸರಿಯಲ್ಲ! ಮಾರ್ಸೆಲ್‌ನಿಗೇನಾದರೂ ಸಹಾಯ ಮಾಡಬೇಕು. ಇಲ್ಲವಾದರೆ ಏಸು ನನ್ನನ್ನು ಕ್ಷಮಿಸಲಾರ... ಆದರೆ ಮಾರ್ಸೆಲ್ ಮುಖ ನೋಡಲು ನನಗೆ ನಾಚಿಕೆಯಾಗುತ್ತಿದೆ. ಅವನನ್ನು ತುಚ್ಛವಾಗಿ ಬೈದು ಕಳುಹಿಸಿರುವೆನಲ್ಲವೆ? ಅಯ್ಯೋ! ನಾನೆಂತಹ ತಪ್ಪು ಮಾಡಿಬಿಟ್ಟೆ...' ಫಾದರ್ ಲೂಯಿಸರು ಚಡಪಡಿಸತೊಡಗಿದರು.

ವೇಳೆ ಸರಿಯುತ್ತಿದೆ. ನೂರಾರು ಕಾರ್ಮೋಡಗಳು ಅವರ ತಲೆ ತುಂಬಾ ಹರಡಿಕೊಂಡಿವೆ. ಊಟಕ್ಕೆ ಕರೆಯಲು ಬಂದ ಅಡಿಗೆಯವನಿಗೂ ಅವರು ಈ ದಿನ ಒಂದೆರಡು ಬೈದು "ನನಗೆ ಊಟ ಬೇಕಾಗಿಲ್ಲ. ಹಸಿವೆಯಿಲ್ಲ" ಎಂದರು. ನಿದ್ದೆ ಮಾಡಲೆತ್ನಿಸಿದರು. ಊಹುಂ, ನಿದ್ದೆ ಕೂಡಾ ಅವರ ಬಳಿ ಸುಳಿಯಲೊಲ್ಲದು. ಮಾರ್ಸೆಲ್ಲನ ದೀನ ಮುಖ, ಅವನ ಬಡತನದ ಸಂಸಾರದ ಚಿತ್ರ ಮತ್ತೆ ಅವರ ಕಣ್ಣು ಮುಂದೆ ಭೂತಾಕಾರ ತಳೆದು ನಿಂತವು. ತಟ್ಟನೆ ಎದ್ದರು. ಒಂದು ನಿರ್ಧಾರ ಮಾಡಿದರು. ಒಂದು ಕೈಚೀಲ ಹಿಡಿದು ನೇರವಾಗಿ ಅಂಗಡಿಗೆ ಬಂದರು. ಒಂದಿಷ್ಟು ಅಕ್ಕಿ, ಹಣ್ಣು–ಹಂಪಲಗಳನ್ನು ಖರೀದಿಸಿದರು. ಧೋ...ಧೋ...ಎಂದು ಸುರಿಯುವ ಮಳೆಯನ್ನು ಕೂಡಾ ಲೆಕ್ಕಿಸದೆ ಮಾರ್ಸೆಲ್ಲನ ಮನೆಯೆಡೆ ದಾಪುಗಾಲು ಹಾಕಿದರು.

ಮಾರ್ಸೆಲ್ಲನ ಮನೆಗೆ ಬಂದಾಗ. ಅವನು ಮನೆಯಲ್ಲಿರಲಿಲ್ಲ. ಅವನ ಹೆಂಡತಿ ಎಲಿಜಾ ಒಂದು ಮೂಲೆಯಲ್ಲಿ ಚಾಪೆಯ ಮೇಲೆ ಮಲಗಿಕೊಂಡಿದ್ದಳು. ಚಾಪೆಯು ಅಲ್ಲಲ್ಲಿ ಹರಿದು ಹೋಗಿತ್ತು. ಮಾರ್ಸೆಲ್ಲನ ಪುಟ್ಟ ಮಕ್ಕಳು ಆ ಚಾಪೆಯ ತುದಿಯಲ್ಲಿ, ಎಲಿಜಾಳ ಪಕ್ಕದಲ್ಲಿ ಕೂತು ಮಿಕ ಮಿಕ ತಾಯಿಯ ಮೋರೆಯನ್ನೇ ನೋಡುತ್ತಿದ್ದವು. ಫಾದರ್ ಲೂಯಿಸರು ಒಳಗೆ ಅಡಿ ಇಟ್ಟರು.

"ಬನ್ನಿ ಫಾದರ್..." ಆ ಮಕ್ಕಳಲ್ಲಿ ಒಂದಿಷ್ಟು ದೊಡ್ಡವಳಾದ ಲೀನಾ! ಆಕಸ್ಮಿಕವಾಗಿ ಬಂದ ಫಾದರನ್ನು ಸ್ವಾಗತಿಸಿದಳು. ಕುಳಿತುಕೊಳ್ಳಲು ಒಂದು ಮುರುಕು ಕುರ್ಚಿಯನ್ನು ತಂದಳು. "ಅಪ್ಪ ಎಲ್ಲಿಗೆ ಹೋಗಿದ್ದಾನೆ?" ಫಾದರ್ ಲೂಯಿಸರು ವಿಚಾರಿಸಿದರು. "ಗೊತ್ತಿಲ್ಲ ಫಾದರ್, ಈಗ ಬರುತ್ತೇನೆಂದು ಹೋದವರು ಇನ್ನೂ ಬಂದಿಲ್ಲ." ಎಂದು ಲೀನಾ ಹೇಳಿದಳು.

ಫಾದರ್ ಲೂಯಿಸರು, ಎಲಿಜಾಳ ಹಣೆಯನ್ನು ಮುಟ್ಟಿ ನೋಡಿದರು. ತಟ್ಟನೆ ಕೈ ಹಿಂದೆಳೆದುಕೊಂಡರು. ಅದು ಕೆಂಡದಂತೆ ಸುಡುತ್ತಿತ್ತು! ಅವಳಿಗೆ ತುರ್ತು ಚಿಕಿತ್ಸೆಯ ಅಗತ್ಯವಿತ್ತು.

"ನೀವು ಊಟ ಮಾಡಿದ್ದೀರಾ?"– ಫಾದರ್

ಮಕ್ಕಳನ್ನು ಕೇಳಿದರು. "ಹುಂ" ಲೀನಾ ಹೇಳಿದಳು. ಆದರೆ ಅವಳ ಉತ್ತರ ಫಾದರರಿಗೆ ನಿಜವೆಂದು ತೋರಲಿಲ್ಲ. ಅವರು ಊಟ ಮಾಡಿಯೇ ಇಲ್ಲ ವೆಂಬುದು ಸ್ಪಷ್ಟವಾಯಿತು.

"ತಗೋ, ಇದರಲ್ಲಿ ಸ್ವಲ್ಪ ಹಣ್ಣುಗಳಿವೆ. ನೀವು ತಿನ್ನಿರಿ. ಮತ್ತೆ ಒಂದಿಷ್ಟು ಅಕ್ಕಿ ಇದೆ. ಗಂಜಿ ಮಾಡು," ಎಂದು ಚೀಲವನ್ನು ಮುಂದೆ ಮಾಡಿದರು.

ಅಷ್ಟರಲ್ಲಿ ಮಾರ್ಸೆಲ್ ಒಳಗೆ ಬಂದ. ಫಾದರ್ ಲೂಯಿಸರನ್ನು ಕಂಡು ದಂಗುಬಡಿದವನಂತೆ ನಿಂತು ಬಿಟ್ಟ. ಬೆಳಿಗ್ಗಿನ ದೃಶ್ಯಗಳೆಲ್ಲ ಮತ್ತೆ ಅವನ ಮನಃಪಟಲದ ಮುಂದೆ ಹಾದು ಹೋದವು. ಫಾದರ್ ಲೂಯಿಸರ ಮೇಲೆ ಅವನಿಗೆ ಅಸಾಧ್ಯ ಕೋಪ ಬಂದಿತ್ತು. ಆದರೇನು? ಬಡವನ ಕೋಪ ದವಡೆಗೆ ಮೂಲ—ಮಾರ್ಸೆಲ್ ಮೌನದಿಂದ ಹೊರಗೆ ಬಂದಿದ್ದ. ನಂತರ ಬೇರೆ ಎಲ್ಲಾದ್ರೂ ಸಹಾಯ ಸಿಗಬಹುದು ಎಂದು ಹೋದವ ಈಗ ಮತ್ತೆ ಬರಿಗೈಯಿಂದ ತಿರುಗಿ ಬಂದಿದ್ದ. ಈಗ ತನ್ನೆದುರು ಫಾದರ್ ಲೂಯಿಸರೇ ನಿಂತಿರುವಾಗ ಇದು ಕನಸೋ, ನನಸೋ ಎಂಬ ಗೊಂದಲಕ್ಕೆ ಬಿದ್ದ. ಅಷ್ಟರಲ್ಲಿ ಫಾದರ್ ಲೂಯಿಸರೆ ಎದ್ದು ಬಂದು ಮಾರ್ಸೆಲ್ಲನ ಭುಜದ ಮೇಲೆ ಕೈಯಿರಿಸಿ "ಮಾರ್ಸೆಲ್. ಬೆಳಿಗ್ಗ ನಡೆದುದೆಲ್ಲವನ್ನು ಮರೆತುಬಿಡು. ಅದೊಂದು ವಿಷಗಳಿಗೆಯಾಗಿತ್ತು. ಈಗ ಬೇಗನೆ ಹೋಗಿ ಯಾವುದಾದರೊಂದು ರಿಕ್ಷಾನೋ, ಕಾರೋ ತಗೊಂಡು ಬಾ. ಎಲಿಜಾಳನ್ನು ಆದಷ್ಟು ಬೇಗನೆ ಆಸ್ಪತ್ರೆಗೆ ಕರೆದೊಯ್ದರೆ ಒಳ್ಳೆಯದು."

"ಆದರೆ ಫಾದರ್ ಆಸ್ಪತ್ರೆಗೆ ಕರೆದೊಯ್ಯಲು..." ಅವನಿಗೆ ಮುಂದೆ ಮಾತು ಕಟ್ಟಿತು. "ಕರೆದೊಯ್ಯಲು ಏನು?" ಫಾದರ್ ಲೂಯಿಸರು ಕೇಳಿದರು.

"ಕಿಸೆಯಲ್ಲಿ ಒಂದು ಪೈಸೆ ಕೂಡಾ ಇಲ್ಲ ಫಾದರ್..." ಸಣ್ಣ ಸ್ವರದಲ್ಲಿ ಹೇಳಿದ ಮಾರ್ಸೆಲ್.

"ಅದರ ಚಿಂತೆಯನ್ನು ನೀನು ಮಾಡಬೇಡ. ಮೊದಲು ಯಾವುದಾದರೂ ವಾಹನ ತಗೊಂಡು ಬಾ" ಎಂದು ಅವನನ್ನು ಹೊರಗೆ ಕಳುಹಿಸಿದರು.

ಅವನು ಬರುವದರೊಳಗೆ ಲೀನಾಳಿಗೆ ಹೇಳಿ, ಎಲಿಜಾಳಿಗೆ ಸರಿಯಾಗಿ ಬಟ್ಟೆ ಉಡಿಸಿದರು. ಮಾರ್ಸೆಲ್ ತಂದ ರಿಕ್ಷಾದಲ್ಲಿ ಎಲಿಜಾಳನ್ನು ಜಾಗ್ರತೆಯಿಂದ ಕೂಡ್ರಿಸಿ ಆಸ್ಪತ್ರೆಗೆ ಕರೆದೊಯ್ದರು. ಸ್ವತಃ ಫಾದರ್ ಲೂಯಿಸರೆ, ಡಾಕ್ಟರ ಹತ್ತಿರ ಮಾತನಾಡಿದರು. ಆ ಡಾಕ್ಟರು ಫಾದರರ ಮಿತ್ರರಾದುದರಿಂದ ಎಲಿಜಾಳಿಗೆ ಕೂಡಲೇ ಚಿಕಿತ್ಸೆ ದೊರೆಯಿತು.

"ಲೀನಾ ಇಲ್ಲೇ ಇರಲಿ. ನೀನು ಮನೆಗೆ ಹೋಗು; ಮನೆಯಲ್ಲಿ ಮಕ್ಕಳು ಗಾಬರಿಯಾಗಿರಬಹುದು. ಅವರಿಗೆ ಒಂದಿಷ್ಟು ಗಂಜಿ ಮಾಡಿ ಬಡಿಸು—ಇದನ್ನು ತಗೋ" ಎಂದು, ಹತ್ತರ ಮೂರು ನೋಟುಗಳನ್ನು ಫಾದರ್ ಲೂಯಿಸರು ಮಾರ್ಸೆಲ್ಲನ ಮುಂದೆ ಹಿಡಿದರು.

"ಫಾದರ್, ನೀವು ಇಷ್ಟು ಮಾಡಿದ್ದೇ ದೊಡ್ಡದು. ಅದರ ಮೇಲೆ..." ಮಾರ್ಸೆಲ್ಲನ ಗಂಟಲು ಕಟ್ಟಿತ್ತು.

"ಅವೆಲ್ಲವನ್ನೂ ಮಾತನಾಡಲು ಸಾಕಷ್ಟು ಸಮಯವಿದೆ. ಈಗ ನೀನು ಬೇಗನೆ ಮನೆಗೆ ಹೋಗು. ಮಕ್ಕಳು ಹಸಿದಿರಬಹುದು," ಎಂದು ಅವರು ನೋಟುಗಳನ್ನು ಅವನ ಕಿಸೆಯೊಳಗೆ ತುರುಕಿದರು. ಮಾರ್ಸೆಲ್ಲಿನಿಗೆ ಇದೆಲ್ಲವೂ ಒಂದು ಸ್ವಪ್ನದಂತೆ ತೋರಿತು. ಬೆಳಿಗ್ಗ ಏನೆಲ್ಲ ಮಾತನಾಡಿದ ಫಾದರರಿಗೂ, ಈಗ ಇಲ್ಲಿ ಬಂದಿರುವ ಫಾದರರಿಗೂ ಎಷ್ಟೊಂದು ವ್ಯತ್ಯಾಸ? ಒಂದೂ ಅರ್ಥವಾಗಲೊಲ್ಲದು. ಅವನು ಬೇಗ ಬೇಗನೆ ಮನೆಯ ಕಡೆ ಹೆಜ್ಜೆ ಹಾಕತೊಡಗಿದ. ಅದೇ ವೇಳೆಗೆ ಮಳೆಯೂ ಕಡಿಮೆಯಾಗುತ್ತಿತ್ತು.

(ಕೊಂಕಣಿ ಸಣ್ಣ ಕತೆಯೊಂದರ ಸ್ಫೂರ್ತಿಯಿಂದ)



ಅಂಗವೈಕಲ್ಯವನ್ನೂ ಗೆದ್ದ ಧೀರೆ ಹೇಮಾ

ಮಾಧವ ನಾ. ಮಹಿಷಿ

ಮುಖಚರ್ಯೆ ನೋಡಿ ಭವಿಷ್ಯ ಹೇಳುವ ಶಾಸ್ತ್ರ ಇವರಿಗೆ ಕರಗತವಾಗಿದೆ; ಅನೇಕ ರೋಗಗಳಿಗೆ ಗಿಡಮೂಲಿಕೆಗಳ ಔಷಧಗಳನ್ನು ಕೊಟ್ಟು ರೋಗ ನಿವಾರಿಸುವ ಇವರ ಪರಿಣತಿ ಅಸಾಧಾರಣವಾದದ್ದು ... ಈ ರೀತಿ ಶಿಫಾರಸು ಮಾಡಿದವರು ಅವರಿವರಲ್ಲ—ರಾಷ್ಟ್ರಪತಿಗಳು (ಹಾಲಿ ಮತ್ತು ಮಾಜಿ), ಪ್ರಧಾನಿ, ಕೆಲ ರಾಜ್ಯಗಳ ಮುಖ್ಯ ಮಂತ್ರಿಗಳು, ಕೆಲವು ಹೈಕೋರ್ಟುಗಳ ನ್ಯಾಯಾಧೀಶರು... ಅವುಗಳನ್ನು ಮೆರೆಸುತ್ತ ಬಂದವರು ಆಂಧ್ರಪ್ರದೇಶದ ಒಬ್ಬ ಆದಿವಾಸಿ ಧುರೀಣ ಲಕ್ಷ್ಮಣರಾಜು ಎಂಬವರು. ಅವರಿಂದಾದರೂ ತಮ್ಮ ಮಗಳ ಅಂಗಾಂಗಗಳಿಗೆ ಚೈತನ್ಯ ಮರಳಿ ಸಾಮಾನ್ಯ ಮನುಷ್ಯಳಂತಾಗಲಿ ಎಂಬ ಆಸೆಯಿಂದ ರಾಯರು ಅವನನ್ನು ಮನೆಗೆ ಕರೆತಂದರು. ಬಂದವನು, ರಾಯರ ಮಗಳನ್ನು ಪರೀಕ್ಷಿಸಿದಂತೆ ಮಾಡಿ ತಂದೆಯೊಂದಿಗೆ ಏಕಾಂತದಲ್ಲಿ ಮಾತನಾಡಲು ಕೋಣೆಯೊಳ ಸೇರಿದನು. ಹಾಗೇ ಮಾತೆಯ ಕೃಪೆಯಿಂದ ಮಗಳನ್ನು ಸಾಮಾನ್ಯ ಆರೋಗ್ಯವತಿಯನ್ನಾಗಿ ಮಾಡಲು ಸಾಧ್ಯವಿದೆಯೆಂದೂ ಅದಕ್ಕಾಗಿ ತಾಯಿಗೆ ಚಿನ್ನದ ಆಭರಣಗಳನ್ನು ಅರ್ಪಿಸಬೇಕಾಗುವುದೆಂದೂ ತಂದೆಯವರ ಮೇಲೆ ಬಿಂಬಿಸಲು ಯತ್ನಿಸಿದನು. ನಾಲ್ಕು ದಿನಗಳ ನಂತರ ತಮ್ಮ ಆಫೀಸಿಗೆ ಬಂದರೆ ೫೦೦ ರೂಪಾಯಿಗಳನ್ನು ಕೊಡುವುದಾಗಿ ಹೇಳಿ ತಂದೆಯವರು ಅವನನ್ನು ಅಂದು ಬೀಳ್ಕೊಂಡರು. ಮುಂದೆ ಪೋಲೀಸ್ ಕಮೀಶನರೊಂದಿಗೆ ಮಾತಾಡಿ ವಿಷಯವನ್ನೆಲ್ಲ ವಿವರಿಸಿದರು. ಪೋಲೀಸರು ಬಲೆಯೊಡ್ಡಿ ಲಕ್ಷ್ಮಣರಾಜುವನ್ನು ಬಂಧಿಸಿದರು. ಆ ಮನುಷ್ಯ ಮತ್ತು ಅವನ ತಂಡವನ್ನು ಬೆಂಗಳೂರಿಂದ ಹೊರಗಟ್ಟಲು ಮಾತ್ರ ಶಕ್ಯವಾಯಿತೇ ಹೊರತು, ಆ ಕುರಿತು ಒಂದಕ್ಷರ ಸಹ ಪತ್ರಿಕೆಗಳಲ್ಲಿ ಪ್ರಕಟಿಸುವ

ಧೈರ್ಯ ಯಾರಿಗೂ ಆಗಲಿಲ್ಲ. (ಇದು ನಡೆದದ್ದು ೧೯೭೧ ರಲ್ಲಿ) ಆ ಮನುಷ್ಯನ ರಾಜಕೀಯ ವರ್ಚಸ್ಸು ಅಷ್ಟೊಂದು ಅಗಾಧವಾದದ್ದಾಗಿತ್ತು...

ಇದು ಹೇಮಾ ಪಾಟೀಲರ ಜೀವನದಲ್ಲಿ ನಡೆದ ಒಂದು ವಿಪರೀತ ಘಟನೆಯ ಮಾದರಿ ಮಾತ್ರ. ಅವರ ತಂದೆ ಭೀಮರಾಯರು ಕರ್ನಾಟಕ ಹೈಕೋರ್ಟಿನಲ್ಲಿ ಸಹಾಯಕ ರಜಿಸ್ಟ್ರಾರರು.

ಹೇಮಾ ಈಗ ೩೨ ವರ್ಷದ ಯುವತಿ. ಆದರೆ ಅವರಿಗೆ ತಿಳುವಳಿಕೆ ಬಂದಾಗಿನಿಂದ ಅವರು ಕಳೆದ ಒಂದೊಂದು ಕ್ಷಣವೂ ಪರೀಕ್ಷಾ ಕ್ಷಣವಾಗಿಯೇ ಪರಿಣಮಿಸಿದೆ. ಮಗುವಾಗಿದ್ದಾಗಲೇ ಅವರನ್ನು ಬಾಧಿಸಿದ ಪೋಲಿಯೋ ಜೀವನವಿಡಿ ಅವರು ಪರಾವಲಂಬಿಯಾಗಿ ಬಾಳಬೇಕೇನೋ ಎಂಬಂತಹ ಭೀಕರ ಪರಿಣಾಮವನ್ನು ಅವರ ವ್ಯಕ್ತಿತ್ವದ ಮೇಲೆ ಉಂಟುಮಾಡಿದೆ. ಆದರೆ ಹೇಮಾ ಮಾನಸಿಕವಾಗಿ ಎಂಥ ಅಡೆತಡೆಗಳು ಬಂದರೂ ಎದುರಿಸಿ ಬದುಕನ್ನು ಗೆಲ್ಲಬಲ್ಲೆ ಎಂಬ ಆತ್ಮವಿಶ್ವಾಸವನ್ನು ಮೈಗೂಡಿಸಿಕೊಂಡು ಬೆಳೆದ ಅಪರೂಪದ ವ್ಯಕ್ತಿ.



ಒಂದೇ ಕೈಯಿಂದ ತರಕಾರಿ ಹೆಚ್ಚುತ್ತಾಳೆ.

*

೧೯೪೪ರಲ್ಲಿ ಭೀಮರಾಯರು ಮುಂಬಯಿಯ ಹೈಕೋರ್ಟಿನಲ್ಲಿ ಕೆಲಸದಲ್ಲಿದ್ದರು. ಆಗ ಅವರ ಮನೆಯಿದ್ದುದು ಮುಂಬಯಿ ಬಳಿಯ ದಹಿಸರದಲ್ಲಿ. ಅಲ್ಲಿಯೇ ಅವರ ಹೆಂಡತಿ ಡಿಸೆಂಬರ್ ೨೨ರಂದು ಹೆಣ್ಣು ಮಗುವೊಂದನ್ನು ಹಡೆದರು. ಎಂಟುವರೆ ಪೌಂಡು ತೂಗುತ್ತಿದ್ದ ಮಗು ಸ್ಫುರದ್ರೂಪಿಯಾಗಿದ್ದುದಲ್ಲದೆ, ಆರೋಗ್ಯವೇ ಮೈದಳೆದಂತೆ ತೋರುತ್ತಿತ್ತು. ಆಶ್ಚರ್ಯವೆಂದರೆ ಏಳು ತುಂಬುವದರೊಳಗೆ ಅದು ಓಡಾಡಲೂ ಆರಂಭಿಸಿತು. ಅಂದಿನ ಮುಂಬಯಿ ಸರಕಾರದಲ್ಲಿ ಕೆಲಸಕ್ಕಿದ್ದ ಕನ್ನಡಿಗರಲ್ಲಿ ಬಹುಸಂಖ್ಯರು ಹೊಸದಾಗಿ ರೂಪುಗೊಳ್ಳುತ್ತಿದ್ದ ಕರ್ನಾಟಕ(ಅಂದಿನ ಮೈಸೂರು) ಕ್ಕೆ ಹೋಗುವ ಸಿದ್ಧತೆ ನಡೆಸಿದ್ದರು. ಭೀಮರಾಯರು ಕೂಡ ಬೆಂಗಳೂರಿಗೆ ಹೋಗಿ ನೆಲಸುವ ದಿನವನ್ನು ಎದುರುನೋಡುತ್ತಿದ್ದರು. ಈ ಮಧ್ಯೆ ತಾಯಿ ಮಗುವಿನೊಂದಿಗೆ ಕೆಲ ದಿನಗಳ ಮಟ್ಟಿಗೆ ಊರಿಗೆ ಹೋಗಿದ್ದರು. ಆ ಊರು ಬಾಗಲಕೋಟೆಯ ಬಳಿ ಒಂದು ಚಿಕ್ಕ ಹಳ್ಳಿ. ಅಲ್ಲಿದ್ದಾಗ ಜುಲೈ ೪೫ರಲ್ಲಿ ಮಗುವಿಗೆ ವಿಪರೀತ ಜ್ವರ ಬರತೊಡಗಿತ್ತು. ಒಂದು ತಿಂಗಳ ಕಾಲ ಊರಲ್ಲೇ ಅವರಿವರ ಶುಶ್ರೂಷೆ ನಡೆದು ಜ್ವರ ನಿಯಂತ್ರಣದಲ್ಲಿ ಬಂದರೂ ಬೇರೆಯೇ ಒಂದು ಪರಿಣಾಮ ಶರೀರದ ಮೇಲಾಗಿಬಿಟ್ಟಿತ್ತು. ಶರೀರದ ಎಲ್ಲ ಭಾಗಗಳಿಗೂ ಪಾರ್ಶ್ವವಾಯು ಬಡಿದಂತಾಗಿ ಕತ್ತಿನಿಂದ ಕಾಲ್ಬೆರಳುಗಳ ವರೆಗಿನ ಯಾವುದೇ ಅವಯವದಲ್ಲಿ ಚೈತನ್ಯವೆಂಬುದೇ ಉಳಿಯಲಿಲ್ಲ. ಸುದೈವವೆಂದರೆ ಮಗುವಿನ ಮಿದುಳು, ದೃಕ್-ಶಕ್ತಿ ಮತ್ತು ಮಾತು ಮಾತ್ರ ಈ ಆಘಾತದಿಂದ ಬಚಾವಾಗಿ ಉಳಿದಿದ್ದವು.

ಮಗುವನ್ನು ಬಾಧಿಸಿದ್ದು ಪೋಲಿಯೋ ಎಂದು ಗುರುತಿಸಿದ್ದು ಸೊಲ್ಲಾಪುರದ ಡಾ.

ತೇಲುಂಗರವರು. ಅವಕ್ಕೆ ಶುಶ್ರೂಷೆ ದೊರೆಯುಬಹುದಾದ್ದು ಮುಂಬಯಿಯಲ್ಲಿ ಮಾತ್ರ ಎಂಬ ಸಲಹೆಯನ್ನು ಅವರು ನೀಡಿದರು. ಅಲ್ಲಿಂದಲೇ ಮಗುವಿನ ಜೀವನ ತಪಸ್ಸು ಪ್ರಾರಂಭವಾಯಿತೆಂದು ಹೇಳಬೇಕು. ಮುಂಬಯಿಯಲ್ಲಿ ಮಕ್ಕಳಿಗಾಗಿಯೇ ಇರುವ ವಿಶೇಷ ಆಸ್ಪತ್ರೆ–ವಾಡಿಯಾ ಚಿಲ್ಡ್ರನ್ಸ್ ಹಾಸ್ಪಿಟಲ್‌ಗೆ ಮಗುವನ್ನು ಸೇರಿಸಲಾಯಿತು. ತಜ್ಞ ಡಾ. ಕತ್ರಕ್ ಅಂದು ಪ್ರಚಲಿತವಿದ್ದ ಎಲ್ಲ ವೈಜ್ಞಾನಿಕ ಮಾರ್ಗಗಳನ್ನೂ ಅನುಸರಿಸಿ ಮಗುವನ್ನು ಸಾಮಾನ್ಯ ಸ್ಥಿತಿಗೆ ತರಲು ಯತ್ನಿಸಿದರು.

ಮುಂದೆ ೧೯೫೬ರಲ್ಲಿ ಬೆಂಗಳೂರಿಗೆ ಬಂದ ನಂತರ ಮೊದಲು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಡಾ. ಹಾಫೀಜರು ಮಗುವಿನ ಶುಶ್ರೂಷೆಗೆ ತೊಡಗಿದರು. ಅನಂತರ ಅಸ್ಥಿ ಚಿಕಿತ್ಸಕ ಡಾ. ಎಚ್. ಕೆ. ಶ್ರೀನಿವಾಸಮೂರ್ತಿಯವರು ಕಾಲುಗಳಿಗೆ ಶಸ್ತ್ರಚಿಕಿತ್ಸೆ ಮಾಡಿ ಪಾದಗಳಲ್ಲಿಯ ಬಿಗುವನ್ನು ಕಡಿಮೆ ಮಾಡಿದರು. ಮುಂದೆ ಮರಳಿನ ತಗ್ಗಿನಲ್ಲಿ ನಿಲ್ಲಿಸುವುದು, ಕಾಡ್‌ಲಿವರಾ ಎಣ್ಣೆ ಮತ್ತು ಆಲಿವ್ ಎಣ್ಣೆಗಳ ಮಜ್ಜನ ಮಾಡಿಸುವುದು, ಎಳೆ ಬಿಸಿಲಲ್ಲಿ ಕೂಡಿಸುವುದು, ಕ್ಯಾಲಿಪರ್ಸ್ ಸಹಾಯದೊಂದಿಗೆ ನಡೆಯುವುದು, ಮುಂತಾದ್ದನ್ನು ಪ್ರಾರಂಭಿಸಲಾಯಿತು. ಅದೆಲ್ಲದರ ಪರಿಣಾಮವಾಗಿ ೧೯೬೦ರಲ್ಲಿ, ಅಂದರೆ ತನ್ನ ಎರಡನೆಯ ವಯಸ್ಸಿನಲ್ಲಿ ಮಗುವಿಗೆ ಕೂಡಲು ಶಕ್ಯವಾಯಿತಲ್ಲದೆ ಕುತ್ತಿಗೆ ನಿಂತಿತು. ಆಗಲೇ ಕುಳಿತು ಸರಿಯಲೂ ಸಾಧ್ಯವಾಯಿತು. ಡಾ. ರಾವ್ ಹೋಮಿಯೋಪಥಿ ಚಿಕಿತ್ಸಾ ವಿಧಾನವನ್ನನುಸರಿಸಿ ಶುಶ್ರೂಷೆಗೆ ತೊಡಗಿದರು. ಇದೇ ಹೊತ್ತಿಗೆ ಬಿ. ಜುಲಿನ್ ಬಿಂದುಮಾಧವರ ಮೂಲಕ ವ್ಯಾಯಾಮಪಟು ಕೆ. ವಿ. ಅಯ್ಯರರ ಪರಿಚಯವಾಗಿ ಅವರ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆಗೆ ಮೊದಲಾಯಿತು.

ಇದೆಲ್ಲ ವೈದ್ಯಕೀಯ ಇಲ್ಲವೆ ಆರೋಗ್ಯಶಾಸ್ತ್ರ ವಿಧಿಸುವ ರೀತಿಯಲ್ಲಿ ನಡೆದ ಅನೇಕ ಪ್ರಯೋಗಗಳ ಕತೆಯಾಯಿತು. ಅವರೆ ಮಗುವಿನಲ್ಲಿ ಸುಧಾರಣೆ ಕಂಡುಬಂದರೂ ಅದು ತಾಯಿ ತಂದೆಯರ ನಿರೀಕ್ಷೆಯ ಮಟ್ಟವನ್ನು ತಲಪುತ್ತಿರಲಿಲ್ಲ.

ಲಕ್ಷ್ಮಣರಾಜುವಿನಷ್ಟು ಪರಿಣತ ನಯವಂಚಕರಲ್ಲದಿದ್ದರೂ ಅದೇ ವರ್ಗಕ್ಕೆ ಸೇರಬಹುದಾದಂತಹ ಇನ್ನೂ ಕೆಲವರು ಹೇಮಾರವರ ಜೀವನವನ್ನು ಪ್ರವೇಶಿಸಲೆತ್ನಿಸಿದರು.

೧೯೬೧ರಲ್ಲಿ ಇನ್ನೂ ಒಂದು ಬಗೆಯ, ಹೆಚ್ಚು ಆಳವಾದ ಪ್ರಯತ್ನವೂ ನಡೆಯಿತು. ಕುಮಾರನೆಂಬವನೊಬ್ಬ ಸೂಟ್‌ಕೇಸುಗಳನ್ನು ರಿಪೇರಿ ಮಾಡುತ್ತ ಅಡ್ಡಾಡುತ್ತಿದ್ದ ವ್ಯಕ್ತಿ ತಾಯಿಯವರನ್ನು ಮಾತಾಡಿಸಿ ತನ್ನ ಅಣ್ಣನಿಗೆ ಕುರುಬನೊಬ್ಬನು ಅದ್ಭುತ ಮಂತ್ರಶಕ್ತಿಯನ್ನು ನೀಡಿದ್ದಾನೆಂದೂ ಅದರಿಂದ "ನಿಮ್ಮ ಮಗಳನ್ನು ಪೂರ್ತಿ ಗುಣಪಡಿಸಲು ಶಕ್ಯವಿದೆ"ಯೆಂದೂ ಹೇಳಿದ. ಅಲ್ಲದೆ, ತನ್ನ ಗುರುವಿಗೆ ಆತ ಕೊಟ್ಟ ಮಾತಿನ ಪ್ರಕಾರ "ಒಂದು ಸಲಕ್ಕೆ ಒಬ್ಬನೇ ರೋಗಿಯನ್ನು ಮಾತ್ರ ಆತ ಆರೈಕೆ ಮಾಡಬಲ್ಲ. ನಿಮ್ಮ ಮಗಳು ತುಂಬ ಸುದೈವಿ! ಇಂಥ ಸಂಕ್ರಮಣ ಕಾಲದಲ್ಲೇ ನನ್ನ ನಿಮ್ಮ ಭೆಟ್ಟಿಯಾದದ್ದೊಂದು ಯೋಗಾಯೋಗವೇ ಸರಿ!" ಎಂದು ಅವರನ್ನು ನಂಬಿಸಿದ. ಅಲ್ಲದೆ ಅದಕ್ಕಾಗಿ ತನಗಾಗಲಿ, ಇತರ ಯಾರಿಗೇ ಆಗಲಿ ಒಂದು ಪೈಸೆಯನ್ನೂ ಕೊಡುವ ಅಗತ್ಯವಿಲ್ಲೆಂದು ಹೇಳಿದನಾತ.

ಆ ದಿನವೇ ರವಿವಾರವಾದ್ದರಿಂದ ತುಂಬ ಅನುಕೂಲ, ಅಂದು ೨೫ ಕೋಳಿ ಮೊಟ್ಟೆಗಳನ್ನು ಬೇಯಿಸಿ ಅವರಿಂದ ತೆಗೆದ ಎಣ್ಣೆಯನ್ನು ರೋಗಿಗೆ ಲೇಪಿಸಬೇಕು. ಆ ಪದಾರ್ಥದಲ್ಲಿ, ವಿಜಯಲಕ್ಷ್ಮಿ ಥಿಯೇಟರ್ ಹಿಂದುಗಡೆ ಇರುವ ಒಂದು ಆಯುರ್ವೇದ ಫಾರ್ಮಸಿಯಲ್ಲಿ ಕೆಲ ಔಷಧಿಗಳನ್ನು ಖರೀದಿಸಬೇಕಾಗುತ್ತದೆಂದೂ ನಂಬಿಸಲಾಯಿತು. ಇಂಥ ವ್ಯವಹಾರಗಳಲ್ಲಿ ಆಗಲೆ ಸಾಕಷ್ಟು ಅನುಭವ ಪಡೆದಿದ್ದ ಭೀಮರಾಯರು ಆ ಫಾರ್ಮಸಿಗೆ ಹೋಗುವಾಗ ತಮ್ಮ ಹಳೆಯ ಮಿತ್ರ ಶ್ರೀ ಸಂಗೋರಾಮ ಎಂಬುವರನ್ನು ಸಂಗಡ ಕರೆದುಕೊಂಡು ಹೋದರು. ಅವರು ಹೋದ ತುಸು ಸಮಯದ ನಂತರ ಕುಮಾರ ತನ್ನ ಅಣ್ಣನೊಂದಿಗೆ ಬಂದ. ಕೆಲವು ಚೂರ್ಣ, ಭಸ್ಮ, ಹಾಗೂ ತೈಲಗಳನ್ನು ಕೊಟ್ಟಂತೆ

ಕುಮಾರನ ಅಣ್ಣ ಹೇಳಿದ. ಅವೆಲ್ಲವುಗಳ ಬೆಲೆಯನ್ನು ಸೇರಿಸಿದಾಗ ರೂ. ೭೬೦೦ ಆಯಿತು! ಭೀಮರಾಯರು ೧೦೧ ರೂಪಾಯಿಗಳನ್ನು ಕೊಟ್ಟು ಒಂದು ತೈಲವನ್ನು ಮಾತ್ರ ಖರೀದಿಸಿ ಇನ್ನುಳಿದದ್ದನ್ನು ಗುರುವಾರ ಪೂರ್ಣ ಹಣ ಕೊಟ್ಟು ಒಯ್ಯುವುದಾಗಿ ಹೇಳಿ ಮರಳಿಬಂದರು. ಕುಮಾರನ ಅಣ್ಣ ಗುರುವಾರ ಬಂದು ಔಷಧಿಯನ್ನು ಸೇವಿಸುವ ಕ್ರಮವನ್ನು ಹೇಳಿಕೊಡುವುದಾಗಿ ಆಶ್ವಾಸನವಿತ್ತು ಹೋದ. ಸುದೈವದಿಂದ ಈ ಬಲೆಯಿಂದಲೂ ಮುಕ್ತರಾಗಲು ಶಕ್ಯವಾಯಿತು.

ಈ ಮಧ್ಯೆಯೂ ಅವರು ವೈದ್ಯ ವಿಜ್ಞಾನದಲ್ಲಿ ಉತ್ತರ ದೊರೆಯಬಹುದೆಂಬ ಆಸೆಯಿಂದ ಇನ್ನೂ ಅನೇಕ ನಿಷ್ಣಾತ ವೈದ್ಯರಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಶುಶ್ರೂಷೆ ಪಡೆದದ್ದಾಗಿದೆ. ಅಲ್ಲದೇ ಮಂತ್ರಾಲಯದ ಪ್ರಭುಗಳಲ್ಲಿ ಅವರಿಗೆ ಅಚಲ ವಿಶ್ವಾಸ. ಒಂದು ವರ್ಷ ಕಾಲ ಅಲ್ಲಿದ್ದು ರಾಯರಿಗೆ ಸೇವೆ ಸಲ್ಲಿಸಿ ಮಾನಸಿಕ ಸಮಾಧಾನವನ್ನೂ ಪಡೆದಿದ್ದಾರೆ.

*

ಪೋಲಿಯೋ ಶರೀರದ ಮುಕ್ಕಾಲು ಭಾಗವನ್ನೆಲ್ಲ ನಿರ್ವೀರ್ಯಗೊಳಿಸಿದಾಗ ಅದೂ ತೀರ ಚಿಕ್ಕ ವಯಸ್ಸಿನಲ್ಲೇ ಕಳೆದ ಆರೋಗ್ಯವನ್ನು ಪುನಃ ಪಡೆಯಲೆತ್ನಿಸುವುದು ಮಾನವ ಸಹಜ ಪ್ರವೃತ್ತಿ. ಅದನ್ನು ಹೇಮಾ ಮತ್ತು ಅವರ ತಂದೆ ತಾಯಿಯರು ತಂತಮ್ಮ ತಾಳ್ಮೆಯನ್ನು ಒರೆಗೆ ಹಚ್ಚಿ ಮಾಡಿದ್ದಾರೆ. ಆದರೆ ಜೀವನಕ್ಕೊಂದು ಅರ್ಥ ಬರುವುದು ಆರೋಗ್ಯವೊಂದರಿಂದಲೇ ಅಲ್ಲ, ಅಂಗ ಊನವಾಗಿದ್ದರೂ ಆ ನ್ಯೂನತೆಯನ್ನು ಗೆದ್ದು ಸಾಮಾನ್ಯ ಬದುಕನ್ನು ಬಾಳಲು ಮಹತ್ತರ ಮನೋಬಲ ಬೇಕು; ಅದರೊಟ್ಟಿಗೆಯೆ ತಾಯಿ ತಂದೆಗಳು ಸುತ್ತಲಿನ ಸಮಾಜ ಜೀವನದಲ್ಲಿ ಅನೇಕ ಹೊಂದಾಣಿಗಳಿಗೆ ಸಿದ್ಧವಾಗಬೇಕು. ಆ ದೃಷ್ಟಿಯಿಂದ ಹೇಮಾ ಸುದೈವಿಯೆನ್ನಬೇಕು. ೧೯೬೧ರಿಂದ ಮುಂದೆ ಐದನೆಯ ವರ್ಗದ ಪರೀಕ್ಷೆ ಮುಗಿಯುವ ವರೆಗೂ ಶಾಲೆಗೆ ಹೋಗದೇ ಮನೆಯಲ್ಲೇ ಅಭ್ಯಾಸ ಮಾಡಿ ಪ್ರತಿ ವರ್ಷವೂ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆರನೆಯ ವರ್ಗದಿಂದ ಮಾತ್ರ ನಿಯಮಿತವಾಗಿ ಶಾಲೆಗೆ ಹೋಗಲಾರಂಭಿಸಿದರು. ಏಳನೆಯ ವರ್ಗದ ಸಾರ್ವತ್ರಿಕ ಪರೀಕ್ಷೆಯಲ್ಲಿ ತೀರ ಸಹಜವಾಗಿ ಪಾಸಾದರು. ಹೈಸ್ಕೂಲು ಶಿಕ್ಷಣ ಮುಗಿಯುವ ವರೆಗೂ ಅವರ ತಾಯಿಯೇ ಅವರನ್ನೆತ್ತಿಕೊಂಡು ಶಾಲೆಗೆ ಕಳಿಸುತ್ತಿದ್ದರು; ಮರಳಿ ಮನೆಗೆ ಕರೆತರುತ್ತಿದ್ದರು. ಎಸ್. ಎಸ್. ಎಲ್. ಸಿ. ಯಲ್ಲಿದ್ದಾಗ ಹೇಮಾ ಹತ್ತು ತಿಂಗಳು ಸೇಟ್ ಮಾರ್ಥಾ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಶುಶ್ರೂಷೆ ಪಡೆದರು. ಹೊರಬಂದಾಗ ಪರೀಕ್ಷೆಗೆ ಒಂದೂವರೆ ತಿಂಗಳು ಮಾತ್ರವಿತ್ತು. ಹಿರಿಯರ ಒತ್ತಾಯಕ್ಕೆ ಕಟ್ಟು ಬಿದ್ದು ಪರೀಕ್ಷೆ ಕೂಡಲು ನಿರ್ಧರಿಸಿದರಾದರೂ ಅವರ ಸೋದರ ಮಾವ ಶ್ರೀ ಜಿ. ಎಸ್. ಜಾಲವಾದಿಯವರು ಅಷ್ಟು ಅಲ್ಪಾವಧಿಯಲ್ಲೇ ಅವರ ವರ್ಷದ ವಿದ್ಯಾಭ್ಯಾಸವನ್ನು ಸಂಗ್ರಹಿಸಿ ಹೇಳಿಕೊಟ್ಟ ಪರಿಣಾಮವೆಂದರೆ ೩೭ ವಿದ್ಯಾರ್ಥಿಯರ ಕ್ಲಾಸಿನಲ್ಲಿ ಪಾಸಾದ ನಾಲ್ವರಲ್ಲಿ ಇವರೂ ಒಬ್ಬರು!

೧೯೭೧ರಲ್ಲಿ ಪ್ರಥಮ ಪಿ. ಯು. ಸಿ. (ಆರ್ಟ್ಸ್)ಗಾಗಿ ಹೇಮಾ ಎ. ಪಿ. ಎಸ್. ಕಾಲೇಜು ಸೇರಿದಾಗ ನಡೆದೊಂದು ಘಟನೆ ಅವರ ಜೀವನದಲ್ಲೇ ಅವಿಸ್ಮರಣೀಯ. ಮಹಡಿಯ ಮೇಲಿದ್ದ ವರ್ಗದ ಕೋಣೆಗೆ ನಿತ್ಯ ಹೋಗಿ ಬರುವುದೇ ಒಂದು ಸಮಸ್ಯೆಯೆನಿಸಿದಾಗ ಪ್ರಾಚಾರ್ಯ ಅನಂತಾಚಾರ್ಯರು ತೀರ ಸುಲಭವಾಗೆಂಬಂತೆ ಅದನ್ನು ಪರಿಹರಿಸಿಬಿಟ್ಟರು. ಅವರು ತಮ್ಮ ಕಚೇರಿಯನ್ನು ಮಹಡಿಗೆ ವರ್ಗಾಯಿಸಿ ಪ್ರಥಮ ಪಿ. ಯು. ಸಿ. ವರ್ಗವನ್ನು ಕೆಳಕ್ಕೆ ತಂದುಬಿಟ್ಟರು. ಮನುಷ್ಯನಲ್ಲಿ ಮನುಷ್ಯರು ಮಾನವೀಯತೆಯನ್ನು ಗುರುತಿಸುವುದು ಇಂಥ ಅನಿರ್ವಚನೀಯ ಕ್ಷಣಗಳಲ್ಲೇ.

ಮರುವರ್ಷದಿಂದ ಬಿ. ಎಂ. ಎಸ್. ವಿಮೆನ್ಸ್ ಕಾಲೇಜಿಗೆ ಹೋಗಲಾರಂಭಿಸಿದ ಅವರು ಒಂದೂ ಪೀರಿಯಡ್ಡನ್ನು ತಪ್ಪಿಸದೆ ಏಕಾಗ್ರಚಿತ್ತದಿಂದ ವಿದ್ಯಾವ್ಯಾಸಂಗ ಪೂರೈಸಿ ೧೯೭೬ ರಲ್ಲಿ ಬಿ. ಎ.ಯನ್ನು ಉತ್ತಮ ಗುಣಾಂಕಗಳೊಂದಿಗೆ ಪೂರೈಸಿದರು. ಅನಂತರ [illegible]

ರಲ್ಲಿ ಹಿಂದಿಯಲ್ಲಿ ವಿಶಾರದ ಪರೀಕ್ಷೆಯನ್ನೂ ಪಾಸಾದರು.

ತಮ್ಮ ವಿದ್ಯಾರ್ಥಿ ಜೀವನದಲ್ಲಿ ತಮಗೆ ನೆರವಾದ, ಪರೋಕ್ಷ - ಅಪರೋಕ್ಷವಾಗಿ ತಮಗೆ ಊರುಗೋಲಾಗಿ ಪರಿಣಮಿಸಿದ ಹಲವರನ್ನು ನೆನೆಪಾಗ ಹೇಮಾರವರ ಕಂಗಳು ಮಂಜುಗಟ್ಟುತ್ತವೆ. ಎಳವೆಯಲ್ಲೇ ಅವರಿಗೆ ಸ್ಫೂರ್ತಿ ನೀಡಿ, ಆತ್ಮವಿಶ್ವಾಸದ ಸೆಲೆ ಒಡೆಯುವಂತೆ ಮಾಡಿದವರು ಪ್ರಾಥಮಿಕ ಶಾಲೆಯ ಶಿಕ್ಷಕಿ ಶ್ರೀಮತಿ ಕಮಲಮ್ಮನವರು. ಮುಂದೆ ಕಾಲೇಜು ದಿನಗಳಲ್ಲಿ ಮೊದಲು ಪ್ರಿ. ಅನಂತಾಚಾರ್ಯರಾದರೆ ಅನಂತರ ಸಮಾಜಶಾಸ್ತ್ರದ ಪ್ರಾಧ್ಯಾಪಿಕೆ ಶ್ರೀಮತಿ ಅಮೀನಾ ಬೇಗಂ ಹೇಮಾರವರನ್ನು ಕೈಹಿಡಿದು ಮುನ್ನಡೆಸಿದ್ದಾರೆ. ಸಹಪಾಠಿಗಳನೇಕರು ಕ್ಲಾಸಿನಿಂದ ಕ್ಲಾಸಿಗೆ ಹೋಗುವುದಕ್ಕೆ, ದಿನದ ಕೊನೆಗೆ ಮರಳಿ ಮನೆಗೆ ಬರುವುದಕ್ಕೆ ಎಷ್ಟೂ ಬೇಸರಿಯದೆ ನೆರವಾಗಿದ್ದಾರೆ.

ಹೇಮಾ ಒಂದು ದೃಷ್ಟಿಯಿಂದ ಪರಮ ಸುದೈವಿಯೆನ್ನಬೇಕು. ತಂದೆ ತಾಯಿಗಳಲ್ಲಿ ಅವರು ದೇವರ ಪ್ರತಿರೂಪವನ್ನೇ ಕಂಡಿದ್ದಾರೆ. "ಅವರಿಬ್ಬರಲ್ಲಿಯ ಸಹನಶೀಲತೆ. ಮಗಳ ಕಲ್ಯಾಣದಲ್ಲಿ ಅಚಲ ನಿಷ್ಠೆ, ಸ್ವಾರ್ಥತ್ಯಾಗಗಳೆದುರು ನಾನು ಕುಬ್ಜಳಾಗಿಬಿಡುತ್ತೇನೆ" ಎಂದು ವಿನಯದಿಂದ ಹೇಳುತ್ತಾರೆ ಹೇಮಾ. ತಂದೆಯ ಸ್ನೇಹಿತರ ಬಳಗವೂ ಬಹು ದೊಡ್ಡದು. ಭೀಮರಾಯರನ್ನು ಕಷ್ಟದಲ್ಲಿದ್ದಾಗ ಅವರ ಬೆಂಬಲಕ್ಕೆ ನಿಂತುದಲ್ಲದೆ ಸದಾಕಾಲವೂ ಅವರನ್ನು ಪ್ರೋತ್ಸಾಹಿಸುತ್ತಲೇ ಇದ್ದಾರೆ ಸ್ನೇಹಿತರು. ಹೇಮಾರ ಸೋದರರು ದೊಡ್ಡವರಾಗುವವರೆಗೂ ಅವರ ಸೋದರ ಮಾವ ಅವರ ನೆರಳಾಗಿಯೇ ಉಳಿದು ಮುನ್ನಡೆಸಿದ್ದಾರೆ. ಈಗ ಅವರ ತಮ್ಮಂದಿರು ಅವರ ಸಹಾಯಕ್ಕೆ ಕೈ ಕಟ್ಟಿಕೊಂಡು ನಿಂತಿರುತ್ತಾರೆ – ಸದಾಕಾಲ. ತಮ್ಮ ನೆರೆಹೊರೆಯ ಬಗ್ಗೆ, ಸ್ನೇಹಿತೆಯರ ಬಗ್ಗೆ ಹೇಮಾ ತಮ್ಮ ಕೃತಜ್ಞತೆಯನ್ನು ಮುಕ್ತ ಮನಸ್ಸಿನಿಂದ ವ್ಯಕ್ತಪಡಿಸುತ್ತಾರೆ.

ಹೇಮಾ ಮಾನಸಿಕವಾಗಿ ತುಂಬ ಉದ್ವಿಗ್ನರಾಗಿ ಭವಿಷ್ಯತ್ತಿನಲ್ಲಿ ಭರವಸೆಯನ್ನೇ ಕಳೆದುಕೊಂಡಿದ್ದಂತಹ ಸಮಯದಲ್ಲಿ ಹೇಮಲತಾ ಅಯ್ಯಂಗಾರರ ಪರಿಚಯವಾಗುತ್ತದೆ. ಅವರಲ್ಲಿ ಆಶೆಯ ಮೊದಲ ಕಿರಣಗಳನ್ನು ಹೇಮಾ ಗುರುತಿಸುತ್ತಾರೆ. ಅವರ ಮೂಲಕವೇ ಶ್ರೀ ಬಿ. ಎಸ್. ಶ್ರೀಧರರ ಪರಿಚಯವಾಗುತ್ತದೆ. ಸ್ವತಃ ಅಂಗವಿಕಲರಾದ ಶ್ರೀಧರ ಸಾಹಸವೇ ವ್ಯಾಪ್ತಿತ್ವಂತಿದ್ದಾರೆ. ಅವರು ತಮ್ಮನ್ನೇ ಒಂದು ಜೀವಂತ ನಿದರ್ಶನವಾಗಿಟ್ಟುಕೊಂಡು, ದೌರ್ಭಾಗ್ಯದಿಂದ ಬಳಲುತ್ತಿರುವವರಿಗೆ ದಾರಿ ತೋರುತ್ತಾರೆ. ಅವರನ್ನು ಹೇಮಾ ಒಬ್ಬ ತತ್ವಜ್ಞಾನಿಗೆಯೇ ಹೋಲಿಸುತ್ತಾರೆ.

ಆದರೆ ಒಮ್ಮೆ ಪದವೀಧರೆಯಾದನಂತರ ಮನೆ ಹಿಡಿದು ಕೂಡಲು ಹೇಮಾರಿಗೆ ಮನಸ್ಸಾಗಲಿಲ್ಲ. ಸಿಕ್ಕರೆ ಏನಾದರೊಂದು ನೌಕರಿ ಮಾಡಬೇಕೆಂಬ ಬಲವಾದ ಆಕಾಂಕ್ಷೆ ಅವರದು. ೧೯೭೭ರಲ್ಲಿ ರಿಜರ್ವ್ ಬ್ಯಾಂಕಿನ ಒಂದು ಟೆಸ್ಟಿನಲ್ಲಿ ಉತ್ತೀರ್ಣರಾದ ನಂತರ ಸಂದರ್ಶನಕ್ಕೆ ಹೋದರು. ಕ್ಯಾಲಿಪರ್ಸ್ ಮತ್ತು ಬಗಲುಕೋಲುಗಳ ಸಹಾಯದಿಂದ ಅವರು ಬಂದುದನ್ನು ಕಂಡು ಸಂದರ್ಶಕರು "ನಿತ್ಯ ತಪ್ಪದೆ ಸಕಾಲಕ್ಕೆ ಕೆಲಸಕ್ಕೆ ಬರಲು ಶಕ್ಯವಾದೀತೆ?" ಎಂದು ಪ್ರಶ್ನಿಸಿದರು. "ನೀವು ನನಗೆ ಅವಕಾಶ ಕೊಟ್ಟು ನೋಡಿ. ಆ ಜವಾಬ್ದಾರಿ ನನ್ನದು" ಎಂದು ಬಂತು ಉತ್ತರ. ಆದರೆ ಅಧಿಕಾರಿಗಳು ಮನಸ್ಸು ಮಾಡಲಿಲ್ಲ.

ಈ ನಿರಾಸೆಯ ನಂತರ ತೆಪ್ಪಗೆ ಕೂಡುವ ಮನಸ್ಸಾಗದೆ ಹೇಮಾ ಬಗಿ ಮಾಸಿಕ, ಸಾಪ್ತಾಹಿಕಗಳಿಂದ ಕೂಡಿದ ಒಂದು ಸರ್ಕ್ಯುಲೇಟಿಂಗ್ ಲೈಬ್ರರಿಯನ್ನು ಪ್ರಾರಂಭಿಸಿದರು. ಅದು ನಡೆಯುತ್ತಿರುವಂತೆಯೇ ಆರನೆಯ ವರ್ಗದಿಂದ ಪಿ.ಯು.ಸಿ.(೧)ರ ವರೆಗಿನ ವಿದ್ಯಾರ್ಥಿಗಳಿಗೆ ಟ್ಯೂಶನ್ ಹೇಳಬೇಕೆಂದು ನಿರ್ಧರಿಸಿ ಹೇಮಾ ಟ್ಯುಟೋರಿಯಲ್ಸ್ ಎಂಬೊಂದು ಸಂಸ್ಥೆಯನ್ನು ಪ್ರಾರಂಭಿಸಿದರು. ಅಲ್ಲಿ ಮೂವರು ಉಚಿತ ವಿದ್ಯಾರ್ಥಿಗಳನ್ನೊಳಗೊಂಡು ೪೦ ಜನ ಹೇಳಿಸಿಕೊಳ್ಳಲು ಬರುತ್ತಿದ್ದರು. ಡಾ. ನರಸಿಂಹಾಚಾರ್ಯರು ಹಾಗು ಅವರ ಪತ್ನಿ ಶ್ರೀಮತಿ ಆಲಮೇಲು ಅವರು ಹೇಮಾರಲ್ಲಿ ಆತ್ಮವಿಶ್ವಾಸದ ಬೀಜವನ್ನೇ ಬಿತ್ತಿದರು. ಶ್ರೀಮತಿ ಸುಲೋಚನಾ

ಸೀತಾರಾಮರವರು ಒಂದು ಚಿಕ್ಕಾಸನ್ನೂ ಬಾಡಿಗೆ ಸ್ವೀಕರಿಸದೇ ಅದಕ್ಕಾಗಿ ಒಂದು ದೊಡ್ಡ ಕೋಣೆಯನ್ನೇ ಕೊಟ್ಟರು.

೧೯೮೨ರಲ್ಲಿ ಅಂಗವಿಕಲರಿಗಾಗಿಯೇ ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರದ ಮೂಲಕ ಬೆಂಗಳೂರು ಪಿ. ಇ. ಟಿ. ಕಚೇರಿಯಲ್ಲಿ ಸಂದರ್ಶನಗಳು ನಡೆದು ಅದರಲ್ಲಿ ಹೇಮಾ ಆಯ್ಕೆಯಾದರು. ಅಂಗವಿಕಲರನ್ನೇ ಕೆಲವು ಸ್ಥಳಗಳಿಗೆ ಆಯ್ಕೆ ಮಾಡಬೇಕೆಂಬ ನಿರ್ಧಾರವನ್ನು ಕೈಕೊಂಡವರು ಡಿವಿಜನಲ್ ಇಂಜನಿಯರ್ ಶ್ರೀ ಲಕ್ಷ್ಮೀನಾರಾಯಣ ಅವರು. ಯಶಸ್ವಿ ತರಬೇತಿಯ ನಂತರ ನೌಕರಿಗೆ ಆರಂಭವಾಯಿತು. ಅವರು ಕೆಲಸದ ಕಚೇರಿ ಮೊದಲ ಕೆಲ ದಿನ ಚಾಮರಾಜ ಪೇಟೆಯಲ್ಲಿ ಕಟ್ಟಡದ ಮೊದಲ ಮಾಳಿಗೆಯಲ್ಲಿದ್ದರೆ ಮುಂದೆ ಆ ಕಚೇರಿ ಆನಂದರಾವ್ ಸರ್ಕಲ್ಲಿನಲ್ಲಿ ಕಾರ್ಪೊರೇಶನ್ ಬ್ಯಾಂಕಿನ ಐದನೆಯ ಅಂತಸ್ತಿಗೆ ಹೋಯಿತು. ಅಲ್ಲಿಗೆ ಹೋಗಿ ಬರುವುದೇ ಒಂದು ಯಜ್ಞ ಮಾಡಿದಷ್ಟು ಸಾಹಸವಾಗುತ್ತಿತ್ತು. ಆಗ ಟೆಲಿಕಮ್ಯುನಿಕೇಶನ್ಸ್ ಪ್ರೊಜೆಕ್ಟ್ ಜನರಲ್ ಮ್ಯಾನೇಜರಾಗಿದ್ದ ಶ್ರೀ ವಿ. ಎಸ್. ಮಣಿಯವರ ಗಮನಕ್ಕೆ ಹೇಮಾರ ಈ ನಿತ್ಯ ಪ್ರಯಾಸ ಬಂದಾಗ ಅವರು ಹನುಮಂತನಗರದಲ್ಲಿ ಹೇಮಾರ ಮನೆಗೆ ಸಮೀಪವೇ ಇರುವ ತಮ್ಮ ಒಂದು ಕಚೇರಿಯಲ್ಲಿ ವಿಶೇಷ ಹುದ್ದೆಯೊಂದನ್ನು ಸೃಷ್ಟಿಸಿ ಅವರನ್ನು ಅಲ್ಲಿಗೆ ವರ್ಗಮಾಡಿದರು.

ಕಾನೂನು ಕುರುಡಂತೆ. ಎಷ್ಟೋ ಸಲ ಕಾನೂನಿಗಿಂತ ಅದನ್ನು ನಿತ್ಯ ಜಾರಿಯಲ್ಲಿ ತರುವ ಮನುಷ್ಯರೇ ಕುರುಡರಾಗಿರುತ್ತಾರೆಂಬ ಅನುಭವ ಹೇಮಾರಿಗೆ ಕೆಲ ಸಲ ಬಂದಿದೆ. ಅವರು ಕೆಲಸಕ್ಕೆ ಸೇರಿದ ಹೊಸತರಲ್ಲಿ ಚಲನವಲನಕ್ಕೆ ಒಂದು ಗಾಲಿ ಖುರ್ಚಿ ಅಗತ್ಯವಾಯಿತು. ನಮ್ಮ ದೇಶದಲ್ಲಿ ತಯಾರಾದ ಇಂಥ ಖುರ್ಚಿಗಿಂತ ಹೊರಗಡೆಯಿಂದ ಆಮದು ಮಾಡಿಕೊಂಡಂಥದು ಹೆಚ್ಚು ಕ್ಷೇಮಕರವೆಂದು ಒಂದನ್ನು ವಿದೇಶದಿಂದ ತರಿಸಲು ಅವರು ನಿರ್ಧರಿಸಿದರು. ಆದರೆ ಅದಕ್ಕೆ ಆಗ ೪೦೦೦ ರೂಪಾಯಿಗಳು ಬೇಕಿತ್ತು. ಸ್ವಂತದ ಗಳಿಕೆ ಸಾಕಾಗುವಷ್ಟಿಲ್ಲದಿದ್ದುದರಿಂದ ಅಂಗವಿಕಲರ ಕ್ಷೇಮನಿಧಿಗೆ ಸಾಲಕ್ಕಾಗಿ ಅರ್ಜಿ ಮಾಡಿದರೆ, “ಆ ಮಾತಿಗೆ ನಾಲ್ಕು ವರ್ಷಗಳು ಕಳೆದರೂ ನನ್ನ ಅರ್ಜಿಯು ಇತ್ಯರ್ಥವಾಗಿಲ್ಲ,” ಎಂದವರು ಹೇಳುತ್ತಾರೆ.

ಅವರ ಒಂದು ಗಾಲಿ ಖುರ್ಚಿ ಒಂದು ಅಪಘಾತಕ್ಕೆ ಸಿಕ್ಕು ಅದರ ಒಂದು ಗಾಲಿ ಪೂರ್ತಿ ಮುದ್ದೆಯಾಗಿ ಬಿಟ್ಟಿತು. ನಾಲ್ಕು ಸಾವಿರ ರೂಪಾಯಿ ಬೆಲೆಯ ಈ ವಿದೇಶಿ ಗಾಲಿ ಖುರ್ಚಿಯ ಗಾಲಿಗಳಿಗೆ ಎರಡು ಸಾವಿರ. ಅಷ್ಟು ಕೊಟ್ಟು ತರಿಸಿದರೆ ಅದರ ಮೇಲೆ ಕಸ್ಟಮ್ ಇಲಾಖೆಯವರು ವಿಧಿಸಿದ ಆಯಾತ ಸುಂಕ ರೂ. ೨,೩೦೦! ಸುಂಕದ ವಿಷಯದಲ್ಲಿ ವಿನಾಯತಿ ನೀಡಬೇಕೆಂದು ಕಸ್ಟಮ್ಸ್ ಕಲೆಕ್ಟರಿಗೆ ಬಿನ್ನವಿಸಿದರೂ ಅವರಿಂದ ಉತ್ತರವಿಲ್ಲ. ಆಮೇಲೆ ತಿಳಿಯಿತು ಸುಂಕ ಬೋರ್ಡು ಈ ಪ್ರಕರಣವನ್ನು ಶಿಫಾರಿಸಿನೊಂದಿಗೆ ಕೇಂದ್ರ ಅರ್ಥಮಂತ್ರಿ ಶಾಖೆಗೆ ಕಳಿಸಿದೆಯಂತೆ. ಆದರೆ ಜಗತ್ತೆಲ್ಲ ಅಂಗವಿಕಲರ ವರ್ಷವನ್ನಾಚರಿಸುತ್ತಿರುವಾಗಲೂ ದಿಲ್ಲಿಯಿಂದ ಉತ್ತರ ಕೂಡ ಬರಲಿಲ್ಲ.

ವೈಯಕ್ತಿಕ ಜೀವನದಲ್ಲಿ ಹೇಮಾ ಸಮಯವನ್ನು ಎಷ್ಟೂ ವ್ಯರ್ಥ ಹೋಗಗೊಡುವುದಿಲ್ಲ. ಸಾಕಷ್ಟು ಓದುತ್ತಾರೆ; ಕಿರುಗವನಗಳನ್ನು ಬರೆಯುತ್ತಾರೆ; ಗ್ರೀಟಿಂಗ್ ಕಾರ್ಡುಗಳನ್ನು ತಯಾರಿಸುತ್ತಾರೆ. ಹೆಣಿಕೆ ಹಾಕುವ ಹವ್ಯಾಸ ಅವರಿಗೆ ಮೈಗೂಡಿಬಿಟ್ಟಿದೆ. ಸೂಕ್ಷ್ಮ ರಂಗವಲಿಯನ್ನು ಅವರು ಹಾಕಬಲ್ಲರು. ಕೂತಲ್ಲೇ ಆಡಬಹುದಾದ ಚದುರಂಗ, ಕೇರಮ್ಮುಗಳಲ್ಲಿ ಅವರಿಗೆ ಪ್ರಾವೀಣ್ಯವಿದೆ. ಅಡಿಗೆ ಮಾಡುವುದರಲ್ಲಿ ಅವರದು ಎತ್ತಿದ ಕೈ. ರುಚಿಯಾದ ತಿಂಡಿಗಳನ್ನು ತಯಾರಿಸುವಲ್ಲಿ ಅವರನ್ನು ನೋಡಿದರೆ ಅನ್ನಪೂರ್ಣೆಯ ನೆನಪೇ ಬರಬೇಕು. ದೇವರು ಅವರಿಗೆ ಮಧುರ ಕಂಠವನ್ನೂ ಕೊಟ್ಟಿದ್ದಾನೆ: ಸುಂದರವಾಗಿ ಹಾಡುತ್ತಾರೆ. ✻

ಪುಸ್ತಕ ವಿಭಾಗ

ಅಲೈಸ್‌ನಂಥ ನಗರ



ಮೂಲ: ನೆವಿಲ್ ಶ್ಯೂಟ್
ಕನ್ನಡಕ್ಕೆ: ಗೀತಾ ಮುರಲಿ

ಆ್ಯಲಿಸ್‌ನಂಥ ಶಹರ

೧೯೪೨. ಜಪಾನು ದಾಳಿಮಾಡಿ ಮಲಯಾ – ಸುಮಾತ್ರಾಗಳನ್ನು ವಶಪಡಿಸಿಕೊಂಡ ಸಂದರ್ಭ. ಆಗ ಯುದ್ಧ ಕೈದಿಗಳಾದ ಎಂಬತ್ತು ಜನ ಡಚ್ ಮಹಿಳೆಯರು, ಮಕ್ಕಳು ಮರಿಗಳ ಸಹಿತ ತುಂಬ ಯಾತನೆ ಅನುಭವಿಸಿದರು. ಎರಡೂವರೆ ವರ್ಷಗಳವರೆಗೆ ದ್ವೀಪದ ತುಂಬ ದಿಕ್ಕೆಡಿಗಳಾಗಿ ಕಾಲ್ನಡಿಗೆಯಿಂದ ಅಲೆದಾಡಬೇಕಾಯಿತು. ಅವರ ಕಷ್ಟ ಕಾಲ ಮುಗಿದಾಗ ಬದುಕುಳಿದವರು ಎಂಟ್ಹತ್ತು ಮಹಿಳೆಯರು ಮಾತ್ರ.

ನೆವಿಲ್ ಶ್ಯೂಟ್ ಬರೆದ 'ಎ ಟೌನ್ ಲೈಕ್ ಆ್ಯಲಿಸ್' ಮೇಲೆ ಹೇಳಿದ ಘಟನೆಗಳನ್ನಾಧರಿಸಿ ಬರೆದ ಒಂದು ಹೃದಯಸ್ಪರ್ಶಿ ಕಾದಂಬರಿ. ಆ ಮಹಿಳೆಯರಲ್ಲಿ ದಿಟ್ಟೆಯೆನಿಸಿದ ಒಬ್ಬ ಯುವತಿಯ ಸಾಹಸ ಕಾರ್ಯಗಳನ್ನಿಲ್ಲಿ ಶ್ಯೂಟ್ ಚಿತ್ರಿಸಿದ್ದಾನೆ.

೧

ಹೆಂಗಸರೆಲ್ಲ ಅಲೌಕಿಕ ಪ್ರಾಣಿಗಳು, ಹಣಕಾಸಿನ ವಿಷಯದಲ್ಲಿ ಜವಾಬ್ದಾರಿಯಿಲ್ಲದವರು, ಹಣವಿನಿಯೋಗದಲ್ಲಿ ತಲೆಯಿಲ್ಲದವರು; ವಂಚಕರಿಗೆ ಬಲಿ ಬೀಳುವವರು'—ಎಂಬುದು ಡುಗ್ಲಾಸ್ ಮೆಕ್‌ಫ್ಯಾಡನ್ನನ ಸ್ಥಿರವಾದ ಅಭಿಪ್ರಾಯವಾಗಿತ್ತು. ಇಪ್ಪತ್ತೊಂದರ ಪ್ರಾಪ್ತವಯಸ್ಕಳಾದಾಗಲೂ ಹೆಣ್ಣಿಗೆ ಸ್ವಂತ ಆಸ್ತಿಯನ್ನು ನೋಡಿಕೊಳ್ಳುವುದು ಅಶಕ್ಯ ಎಂಬುದು ಆತನ ಅಭಿಪ್ರಾಯ. ಆದ್ದರಿಂದಲೆ ತನ್ನ ಆಸ್ತಿಪಾಸ್ತಿಯೆಲ್ಲ ತನ್ನ ಸೋದರಿಯ ಮಗಳು ಜೀನ್ ಪೇಜಟ್‌ಳಿಗೆ ಸಲ್ಲತಕ್ಕದೆಂದು ಮೃತ್ಯುಪತ್ರದಲ್ಲಿ ನಮೂದಿಸಿದ್ದರೂ, ಆಕೆ ಮೂವತ್ತೈದರ ಪ್ರಾಯಕ್ಕೆ ಬಂದ ನಂತರವೇ ಅದಕ್ಕೆ ಸಂಪೂರ್ಣ ಬಾಧ್ಯಸ್ಥಳೆಂದೂ ಸ್ಪಷ್ಟಪಡಿಸಿದ್ದ. ಅಲ್ಲಿಯವರೆಗೆ ಸಲಹೆಗಾರ ವಕೀಲನಾಗಿರುವ ನನ್ನನ್ನು ಅದರ ಪಾರುಪತ್ಯಗಾರನೆಂದು ನೇಮಿಸಿದ್ದ.

ಡುಗ್ಲಾಸ್ ಮೆಕ್‌ಫ್ಯಾಡನ್ನನದು ಪಿತ್ರಾರ್ಜಿತ ಆಸ್ತಿ. ಅದರ ಆದಾಯ ಇಪ್ಪತ್ತು ಸಾವಿರ ಪೌಂಡುಗಳಿಗೆ ಮೇಲ್ಪಟ್ಟದ್ದೆಂಬುದನ್ನು ನಾನು ಬಲ್ಲೆ. ಆತನನ್ನು ನಾನು ಮೊದಲ ಸಲ ಭೇಟಿಯಾದದ್ದು ೧೯೩೫ರಲ್ಲಿ. ಆಗ ಆತ ಸುಮಾರು ಐವತ್ತರ ಪ್ರಾಯದವ. ಅಂದರೆ ನನಗಿಂತ ಹತ್ತು ವರ್ಷ ಕಿರಿಯ. ಆದರೂ ಎಂಬತ್ತರ ವೃದ್ಧನಷ್ಟು ಕೃಶಕಾಯನಾಗಿ ಕಾಣಿಸುತ್ತಿದ್ದ. ತನ್ನ ಮೃತ್ಯುಪತ್ರದ ಬಗ್ಗೆ ಚರ್ಚಿಸಲು, ಅದನ್ನು ನೋಂದಾಯಿಸಲು ಅಂದು ನನ್ನನ್ನು ಕರೆಸಿದ್ದ. ಅವನಿಗೆ ಹೆಚ್ಚು ಸಂಬಂಧಿಕರಿರಲಿಲ್ಲ. ಒಬ್ಬಳೇ ಸೋದರಿ. ಅವಳಿಗೆ ಇಬ್ಬರು ಮಕ್ಕಳು – ಡೋನಾಲ್ಡ್ ಎಂಬ ಮಗ, ಜೀನ್ ಎಂಬ ಮಗಳು. ಮೃತ್ಯುಪತ್ರ ಬರೆಯಲು ನೀಡಿದೆ. ಅನಂತರ ನಾನು ಅವನನ್ನು ಕಾಣಲಿಲ್ಲ. ಮುಂದೆ ಅವನ ಕುರಿತು ಒಮ್ಮೆಯೂ ಯೋಚಿಸಲಿಲ್ಲ. ನನ್ನ ವೈಯಕ್ತಿಕ ಕಾರ್ಯಕ್ರಮಗಳು, ಪತ್ನಿಯ ಮರಣ ದುಃಖ, ಯುದ್ಧಕಾಲದ ಅನುಭವಗಳ ಗೊಂದಲದಲ್ಲಿ ಎಷ್ಟೋ ವರ್ಷ ಆತನ ಅಸ್ತಿತ್ವವನ್ನೂ ಮರೆತು ಬಿಟ್ಟೆ.

೧೯೪೮ರಲ್ಲಿ, ಒಂದು ದಿನ, ಆತ ತೀರಿಕೊಂಡನೆಂದು ನನಗೆ ಸುದ್ದಿ ಬಂದಾಗ, ಹದಿಮೂರು ವರ್ಷದ ಹಿಂದಿನ ದಾಖಲೆಗಳನ್ನು ಹೊರತೆಗೆದು ತಿರುವಿ ಹಾಕಿದೆ. ಆತನ ವಾರಸು

ದಾರಳಾದ ಜೀನ್ ಪೇಜಟ್ಟಳಿಗಾಗಿ ಹುಡುಕಾಡಿದೆ. ಆಕೆ ಕೆಲ ವರ್ಷ ಮಲಯಾದಲ್ಲಿದ್ದಳೆಂದು ನನಗೆ ಗೊತ್ತಿತ್ತು. ಸದ್ಯ ಲಂಡನ್ನಿನಲ್ಲಿಯೇ ಇರುವಳೆಂದು ಗೊತ್ತಾದಾಗ ಅವಳಿಗೊಂದು ಪತ್ರ ಬರೆದು ಎಲ್ಲವನ್ನೂ ತಿಳಿಸಿ, ಹೆಚ್ಚಿನ ಮಾಹಿತಿಗಾಗಿ ಸ್ವತಃ ಬಂದು ನನ್ನನ್ನು ಭೇಟಿ ಆಗಬಹುದೆಂದು ಸೂಚಿಸಿದೆ.

ಮರುದಿನ ಆಕೆ ನನಗೆ ಫೋನು ಮಾಡಿದಳು. ಬರುವ ಶನಿವಾರ ಬೆಳಿಗ್ಗೆ ಹತ್ತೂವರೆ ಗಂಟೆಗೆ ಆಕೆ ನನ್ನನ್ನು ಭೇಟಿಯಾಗಬಹುದೆಂದು ಸೂಚಿಸಿದೆ. ಅಂದು ವೇಳೆಗೆ ಸರಿಯಾಗಿ, ಜೀನ್ ಪೇಜಟ್ ನನ್ನ ಮುಂದೆ ಪ್ರತ್ಯಕ್ಷಳಾದಳು. ಇಪ್ಪತ್ತೇಳರ ಪ್ರಾಯದ ಯುವತಿ. ಮಧ್ಯಮ ಎತ್ತರ. ಕಪ್ಪು ಕೂದಲು. ಶಾಂತ, ಅಂದವಾದ ಮುಖಲಕ್ಷಣ. ಆಕೆಯ ಪ್ರಶಾಂತ ಮುಖಮುದ್ರೆ ತುಂಬಾ ಸೊಗಸಾಗಿ ಕಂಡಿತು. ಕಪ್ಪುನೀಲಿ ವರ್ಣದ ಅಚ್ಚುಕಟ್ಟಾದ ಉಡುಪು ಧರಿಸಿದ್ದಳು. ಹಸ್ತಲಾಘವ ನೀಡಿ, ನನ್ನ ಮೇಜಿನ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತಳು. ಆಕೆ ಡುಗ್ಲಾಸ್ ಮೆಕ್‌ಫ್ಯಾಡನ್ನನ ಸೋದರಿಯ ಮಗಳೆಂಬುದನ್ನು ಆಕೆ ತಂಧ ಕಾಗದ ಪತ್ರಗಳಿಂದ ಖಚಿತಪಡಿಸಿಕೊಂಡು, ಅವಳಿಗೆ ಆತನ ಮೃತ್ಯುಪತ್ರದ ವಿವರಗಳನ್ನು ತಿಳಿಸಿ ಹೇಳಿದೆ.

ಆಕೆ ಅನುಮಾನಿಸುತ್ತ "ನಾನು ತುಂಬಾ ಮಬ್ಬು ಮಿ. ಸ್ಟ್ರಾಶನ್, ನನಗೆ ಇದೆಲ್ಲ ಅರ್ಥವಾಗುತ್ತಿಲ್ಲ...ಅಂದರೆ...ನೀವು ಹೇಳುತ್ತಿರುವದು...ಅಂಕಲ್ ಡುಗ್ಲಾಸ್‌ನ ಆಸ್ತಿಗೆಲ್ಲ ನಾನು ವಾರಸುದಾರಳೆ?" ಎಂದಳು.

"ಹೌದು; ಆದರೆ ೧೯೫೭ರವರೆಗೆ ನಿನಗೆ ಅದರ ಆದಾಯವಷ್ಟೇ ಸಿಗುವುದು. ಎಂಟು ವರ್ಷಗಳ ನಂತರ ಮಾತ್ರ ಅಸಲು ಹಣ ನಿನ್ನ ಕೈಗೆ ಬರುವದು."

"ಎಷ್ಟು?"

ನಾನು ಕಾಗದ ಪತ್ರಗಳನ್ನು ಪರಿಶೀಲಿಸಿ ಲೆಕ್ಕ ಹಾಕಿದೆ. "ಸದ್ಯದ ಬೆಲೆಯ ಪ್ರಕಾರ, ಸುಮಾರು ಐವತ್ತು ಸಾವಿರ ಪೌಂಡುಗಳಷ್ಟು ಆಗಬಹುದು" ಎಂದೆ.

ಆಕೆ, ಅಪನಂಬಿಕೆಯಿಂದ ನನ್ನ ಮುಖವನ್ನು ತುಸು ತಡೆದು, "ಈ ನಿಮ್ಮ ಪಾರುಪತ್ಯ-

ದಿಟ್ಟಿಸಿ, "ಐವತ್ತು ಸಾವಿರ ಪೌಂಡುಗಳು! ಅದರಲ್ಲಿ ಒಂದು ವರ್ಷಕ್ಕೆ ಎಷ್ಟು ಉಳಿಯಬಹುದು?" ಆಕೆ ಕೇಳಿದಳು.

ನಾನು ಮತ್ತೆ ಲೆಕ್ಕ ಹಾಕಿದೆ. ಖರ್ಚೆಲ್ಲ ಹೋಗಲಾಗಿ ನಿನ್ನ ಕೈಗೆ ಸುಮಾರು ಒಂದು ಸಾವಿರ ಪೌಂಡುಗಳಷ್ಟು ಉಳಿಯಬಹುದು.

"ಓಹ್!"... ಎಂದು ಸುಮ್ಮನಾಗಿ, ತನ್ನ ಮುಂದಿನ ಮೇಜು ದಿಟ್ಟಿಸುತ್ತ ಕುಳಿತಳು. ಅನಂತರ ನನ್ನತ್ತ ನೋಡಿ, ನಸುನಕ್ಕು, "ಇದೆಲ್ಲ ಜೀರ್ಣಿಸಿಕೊಳ್ಳಲು ಸ್ವಲ್ಪ ಸಮಯ ಬೇಕು. ನೋಡಿ, ಇಷ್ಟು ದಿನವೆಲ್ಲ ನಾನು ಹೊಟ್ಟೆಪಾಡಿಗಾಗಿ ದುಡಿದವಳು. ಮದುವೆಯಾಗುವವರೆಗೂ ನಾನು ದುಡಿದೇ ಹೊಟ್ಟೆತುಂಬಿಸಿಕೊಳ್ಳಬೇಕಾಗುವುದೆಂದು ತಿಳಿದಿದ್ದೆ. ಆದರೆ ಈಗ ಪರಿಸ್ಥಿತಿ ಬದಲಾಯಿತು. ನಾನು ಕೆಲಸಕ್ಕೆ ಹೋಗುವ ಅವಶ್ಯಕತೆಯೇ ಇಲ್ಲ. ನನಗೆ ಇಷ್ಟವಿದ್ದರೆ ಮಾತ್ರ ದುಡಿಯಬಹುದು, ಅಲ್ಲವೆ?"

"ಹೌದು," ನಾನು ಸಮ್ಮತಿಸಿದೆ.

"ಆದರೆ, ಆಫೀಸಿಗೇ ಹೋಗದಿದ್ದರೆ, ವೇಳೆಯನ್ನು ಹೇಗೆ ಕಳೆಯಬೇಕೋ ಗೊತ್ತಾಗುತ್ತಿಲ್ಲ."

"ಹಾಗಾದರೆ ಆಫೀಸಿಗೇ ಹೋಗಬೇಕು."

ಆಕೆ ನಗುತ್ತ, "ಹೌದು, ಅಷ್ಟೆ" ಅಂದಳು.

ನಾನು ಕುರ್ಚಿಯಲ್ಲಿ ಒರಗಿ ಕುಳಿತು, "ನೋಡು, ಪೇಜಟ್, ಅವಸರದಲ್ಲಿ ಯಾವ ಕಾರ್ಯವನ್ನೂ ಮಾಡಕೂಡದು, ನಿನಗೊಂದು ಕಿವಿ ಮಾತು. ಸದ್ಯ ನಿನ್ನ ಉದ್ಯೋಗ ಬಿಡಬೇಡ. ನಿನ್ನ ಕೈಗೆ ಆ ಹಣ ಬರಬೇಕಾದರೂ ಕೆಲವು ತಿಂಗಳಾಗಬಹುದು... ಈಗ ನೀನು ಏನು ಮಾಡುತ್ತಿ?"

"ನಾನೊಬ್ಬ ಶಾರ್ಟ್‌ಹ್ಯಾಂಡ್ ಟೈಪಿಸ್ಟ್. ನಮ್ಮ ಸಂಸ್ಥೆಯ ಮ್ಯಾನೇಜರನ ಕಾರ್ಯದರ್ಶಿನಿ. ಅಲ್ಲಿದ್ದು ಈಗ ಸುಮಾರು ಎರಡು ವರ್ಷವಾಯಿತು. ಅದಕ್ಕೆ ಮೊದಲು ನಾನು ಮಲಯಾದಲ್ಲಿದ್ದದ್ದು ನಿಮಗೆ ಗೊತ್ತಿರಬಹುದು. ಅಲ್ಲಿ ಮೂರೂವರೆ ವರ್ಷ ಯುದ್ಧ ಕೈದಿ ಆಗಿದ್ದೆ. ಅಲ್ಲಿಂದ ಇಂಗ್ಲಂಡಿಗೆ ಮರಳಿ ಬಂದ ನಂತರ ಈ ಕೆಲಸಕ್ಕೆ ಸೇರಿಕೊಂಡೆ," ಎಂದು

ಗಾರಿಕೆಯ ವಿಷಯ ಸ್ವಲ್ಪ ತಿಳಿಸಿ ಹೇಳುವಿರಾ? ಏಕೆಂದರೆ ಕಾನೂನಿನ ಬಗ್ಗೆ ನನಗೇನೂ ಗೊತ್ತಿಲ್ಲ."

"'ಹಣದ ವಿಷಯದಲ್ಲಿ ಹೆಂಗಸರಿಗೆ ಏನೂ ತಿಳಿಯದು' ಎಂದು ನಿನ್ನ ಸೋದರ ಮಾವ ಭಾವಿಸಿದ್ದ. ಆದ ಕಾರಣ, ಸಾಧ್ಯವಿದ್ದಷ್ಟು ಹಣವನ್ನು ಕಾಯ್ದಿಟ್ಟು ನೀನು ಮೂವತ್ತೈದರ ಪ್ರಾಯಕ್ಕೆ ಬಂದ ನಂತರ ನಿನಗೆ ಬಡ್ಡಿಸಹಿತ-ವಾಗಿ ಅದನ್ನು ಒಪ್ಪಿಸುವುದು ನನ್ನ ಹೊಣೆ."

"ನಾನು ಐವತ್ತು ಸಾವಿರ ಪೌಂಡುಗಳನ್ನೆಲ್ಲಾ ಒಮ್ಮೆಲೆ ಖರ್ಚು ಮಾಡಿಬಿಡಬಹುದೆಂದು ಅಂಕಲ್ ಡುಗ್ಲಾಸನಿಗೆ ಭಯವಾಗಿರಬೇಕು."

"ಹೌದು; ಅದಕ್ಕೆ ಸಧ್ಯ ನಿನಗೆ ಬಡ್ಡಿಯಷ್ಟೇ ದೊರೆಯುವುದು. ಆದರೆ ಒಂದು ವೇಳೆ ನಿನಗೆ ಹೆಚ್ಚು ಹಣ ಬೇಕಾದರೆ, ಅಸಲಿನಿಂದ ನೀಡಲು ನನಗೆ ಹಕ್ಕು ಇದೆ."

"ಅಂದರೆ... ನನಗೆ ಉಚಿತವಾದೊಂದು ಕಾರಣಕ್ಕೇನಾದರೂ ದೊಡ್ಡ ರಕಮು ಬೇಕಾದರೆ ನೀವು ಕೊಡಲು ಸಾಧ್ಯವೆ?"

"ಹೌದು; ಅಸ್ವಾಸ್ಥ್ಯ, ಇತ್ಯಾದಿ ಕಾರಣ-ಗಳಿದ್ದರೆ ನಿನಗೆ ಹೆಚ್ಚಿನ ಹಣ ಸಿಗಬಹುದು."

"ಧನ್ಯವಾದ" ಎಂದು ಮುಗುಳು ನಗುತ್ತ ಎದ್ದು ಹೊರಡಲು ಅನುವಾದ ಆಕೆಗೆ ಇನ್ನೇ-ನಾದರೂ ವಿಷಯ ಚರ್ಚಿಸುವುದಿದ್ದರೆ, ಬುಧ-ವಾರ ಸಂಜೆ ಮತ್ತೆ ನನ್ನ ಭೇಟಿಯಾಗಬಹು-ದೆಂದು ಹೇಳಿದೆ.

ಬುಧವಾರ ಆಕೆ ಬಂದಳು. ಆಕೆಯ ಬಗ್ಗೆ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಬೇಕಾ-ಗಿತ್ತಾದ್ದರಿಂದ ಅವಳನ್ನು ನನ್ನ ಕ್ಲಬ್ಬಿಗೆ ಕರೆದು ಕೊಂಡು ಹೋದೆ. ಪಾನೀಯಗಳನ್ನು ತರಿಸಿ, ಊಟದ ಸರಬರಾಜು ಮಾಡಿದೆ. ಸಿಗರೇಟು ಹೊತ್ತಿಸಿಕೊಂಡು, ಸುಖಾಸೀನನಾಗಿ ಅವ-ಳೊಡನೆ ಮಾತಿನಲ್ಲಿ ತೊಡಗಿದೆ. "ಈ ಆಕಸ್ಮಿಕ ಲಾಭವನ್ನು ಹೇಗೆ ಅನುಭವಿಸಿದೆ? ಬಲು ಷೋಕಿ ಯಿಂದಲೇ ಇರಬೇಕು, ಅಲ್ಲವೇ?"

"ಇಲ್ಲ," ಎಂದಾಕೆ ತಲೆ ಅಲ್ಲಾಡಿಸಿದಳು. "ನನ್ನ ಸಹೋದ್ಯೋಗಿ ಸ್ನೇಹಿತೆಯೊಡನೆ ಊಟ ಮಾಡಿ, ಸಂಜೆ ಅವಳ ಜತೆ ಸಿನಿಮಾ ನೋಡಿದೆ, ಅಷ್ಟೇ.

"ನಿನ್ನ ಒಳ್ಳೆ ಅದೃಷ್ಟದ ವಿಷಯವನ್ನು ಅವ-ಳಿಗೆ ಹೇಳಿದೆಯಾ?"

"ಇಲ್ಲ, ನಾನಿನ್ನೂ ಯಾರಿಗೂ ಹೇಳಿಲ್ಲ." ಎಂದು ತುಸು ತಡೆದು, ಪಾನೀಯವನ್ನು ಗುಟುಕರಿಸಿ, ನಗುತ್ತಲೇ ಂದಳು, "ಅದೆಲ್ಲ ಒಂದು ಕಲ್ಪನಾತೀತ ಕಥೆಯಂತೆಯೇ ಅನಿಸುತ್ತದೆ. ನನಗಂತೂ ನಿಜವೆಂದು ನಂಬಲೂ ಆಗುತ್ತಿಲ್ಲ."

"ನಿನ್ನ ಮೊದಲ ಚೆಕ್ಕು ಕೈ ಸೇರಿದಾಗಲಾ-ದರೂ ನಿಜವೆಂದು ಒಪ್ಪುವೆಯಷ್ಟೆ! ಆಮೇಲೆ ನಿನ್ನ ಕೆಲಸಕ್ಕೆ ಶರಣು ಹೊಡೆಯುವಿಯಾ?"

"ಇಲ್ಲ. ಸಧ್ಯಕ್ಕೇನೂ ಬಿಡುವುದಿಲ್ಲ. ನನಗೆ ಒಳ್ಳೆಯ ಕೆಲಸವನ್ನು ಮುಂದುವರಿಸಿಕೊಂಡೇ ಹೋಗಬೇಕೆಂಬಾಸೆ ಇದೆ. ಸಧ್ಯ ನಾನು ಕೆಲಸ-ಕ್ಕಿರುವ ಸಂಸ್ಥೆ, ಮಹಿಳೆಯರ ಚರ್ಮದ ಕೈ-ಚೀಲ, ಪಾದರಕ್ಷೆ, ಚಿಕ್ಕ ಅಲಂಕಾರ ಪೆಟ್ಟಿಗೆ-ಗಳನ್ನು ತಯಾರಿಸಿ ಮಾರುವ ಕಾರ್ಯಾಲಯ. ಜೀವನೋಪಾಯವೆಂದು ಅಲ್ಲಿ ದುಡಿಯಬಹು-ದಷ್ಟೇ. ಆದರೆ ಈಗ, ಇಷ್ಟೆಲ್ಲ ಹಣ ಸಿಗುವಾಗ ನನಗಲ್ಲಿ ಕೆಲಸ ಮಾಡುವುದು ಅಸಾಧ್ಯವೆನಿಸು-ತ್ತದೆ. ನಾನು ಬೇರೇನಾದರೂ ಸಾರ್ಥಕವೆನಿ-ಸುವ ಕಾರ್ಯ ಕೈಕೊಳ್ಳಬೇಕು... ಯಾವುದೆಂದು ಮಾತ್ರ ತಿಳಿಯುತ್ತಿಲ್ಲ. ನಾನು ಹೆಚ್ಚಿಗೆ ಕಲಿತವಳೂ ಅಲ್ಲ. ಶಾರ್ಟ್ ಹ್ಯಾಂಡ್, ಟೈಪಿಂಗ್ ಹೊರತು ನನಗೆ ಇನ್ಯಾವ ಕಸಬೂ ಗೊತ್ತಿಲ್ಲ."

ನಾನೊಂದು ಕ್ಷಣ ವಿಚಾರ ಮಾಡಿದೆ. "ಮಿಸ್ ಪೇಜಟ್, ನಿನಗೊಂದು ಅತ್ಯಂತ ವೈಯಕ್ತಿಕವಾದ ಪ್ರಶ್ನೆಯನ್ನು ಕೇಳಬಹುದೇ?"

"ಕೇಳಿ."

"ಸಧ್ಯದಲ್ಲೇ ನೀನೇನಾದರೂ ಮದುವೆ-ಯಾಗುವ ಸಂಭವವಿದೆಯೇ?"

ಆಕೆ ನಸುನಕ್ಕಳು. "ಇಲ್ಲ ಅದು ಅಸಂಭವವೇ ಅನ್ನಬಹುದು... ನಿಶ್ಚಿತವಾಗಿ ಹೇಳಲಾರೆ, ಆದರೆ ಬಹುಶಃ ಇಲ್ಲ, ಎಂದೆನಿಸುತ್ತದೆ."

"ಹಾಗಾದರೆ ವಿಶ್ವವಿದ್ಯಾಲಯ ಸೇರಿ ಅಭ್ಯಾಸ ವನ್ನು ಮುಂದುವರಿಸಬಹುದಲ್ಲ."

"ಓಹ್, ನಾನು ಅಂಥದೆಲ್ಲ ಅಭ್ಯಾಸ

ಮಾಡುವಷ್ಟು ಜಾಣಳಲ್ಲ. ಮೇಲಾಗಿ ನನಗೀಗ ಸಾಕಷ್ಟು ವಯಸ್ಸಾಗಿದೆ."

"ನಿನಗೆ ಅಷ್ಟೇನೂ ವಯಸ್ಸಾಗಿಲ್ಲ."

"ನನ್ನ ಸಹೋದ್ಯೋಗಿ ತರುಣಿಯರೊಂದಿಗೆ ಹೋಲಿಸಿದರೆ, ನನಗೆ ಎಪ್ಪತ್ತರ ಪ್ರಾಯ ಅನಿಸುತ್ತದೆ" ಅಂದಳು ಗಂಭೀರವಾಗಿ.

ಇನ್ನು ಅವಳ ಯುದ್ಧಾನುಭವವನ್ನು ಸ್ವಲ್ಪ ಅರಿತುಕೊಳ್ಳೋಣವೆಂದು ಕೇಳಿದೆ; "ಯುದ್ಧ ಸಮಯದ ನಿನ್ನ ಅನುಭವವನ್ನು ಸ್ವಲ್ಪ ಹೇಳಲ್ಲ ...ಆಗ ನೀನು ಮಲಯಾದಲ್ಲಿ ಇದ್ದೆಯಲ್ಲವೇ?"

ಹೌದೆಂದು ಗೋಣು ಹಾಕಿದಳು. "ಅಲ್ಲಿಯೊಂದು ಆಫೀಸಿನಲ್ಲಿ ಟೈಪಿಸ್ಟ್ ಆಗಿದ್ದೆ."

"ಯುದ್ಧ ವೇಳೆಯಲ್ಲಿ ಏನಾಯಿತು? ನೀನು ಕೈದಿ ಆಗಿದ್ದೆಯಾ?"

"ಹೌದು."

"ಶಿಬಿರದಲ್ಲಿ ಇದ್ದೆಯೇನು?"

"ಇಲ್ಲ... ಒಂದು ರೀತಿ ಸ್ವತಂತ್ರವಾಗಿದ್ದೆ ಅನ್ನಬಹುದು..." ಎಂದು ವಿಷಯ ಬದಲಾಯಿಸುತ್ತ, ನನ್ನನ್ನು ಕೇಳಿದಳು "ಇಲ್ಲಿ ನಿಮ್ಮ ಪರಿಸ್ಥಿತಿ ಹೇಗಿತ್ತು? ಆಗ ನೀವು ಲಂಡನ್ನಿನಲ್ಲಿಯೇ ಇರುತ್ತಿದ್ದಿರಾ?"

ತನ್ನ ಯುದ್ಧಕಾಲದ ಅನುಭವಗಳ ಕುರಿತು ಅವಳಿಗೆ ಮಾತಾಡಲು ಇಷ್ಟವಿಲ್ಲವೇನೊ ಎಂದೆನಿಸಿತು. ಅದಕ್ಕಾಗಿ ಅವಳನ್ನು ಒತ್ತಾಯ ಪಡಿಸಬಾರದೆಂದುಕೊಂಡು, ನನ್ನ ಕುಟುಂಬ, ಮಕ್ಕಳು, ಮೊಮ್ಮಕ್ಕಳು ಮುಂತಾದ ವಿವರ ಹೇಳಿ, ಮತ್ತೆ ಆಕೆಯ ವಿಚಾರ ಆರಂಭಿಸಿದೆ. ಆಕೆ ತನಗೆ ಬರುವ ವಾರ್ಷಿಕ ಆದಾಯದಿಂದ ಒಂದು ಸ್ವಂತ ಮನೆ ಕೊಂಡುಕೊಂಡು ಸುಖವಾಗಿರಬಹುದೆಂದೂ ಸೂಚಿಸಿದೆ. ವಿದೇಶ ಸಂಚಾರ ಮಾಡಲೂ ಸಾಕಷ್ಟು ಹಣ ಉಳಿಯಬಹುದಿತ್ತು.

"ಆದರೆ ನಾನು ಯಾವುದಾದರೂ ಕೆಲಸದಲ್ಲಿ ತೊಡಗಬೇಕು" ಅಂದಳು.

"ಎಷ್ಟೋ ಧರ್ಮಾರ್ಥ ಸಂಸ್ಥೆಗಳಿವೆ, ಅಲ್ಲಿ ಸಂಬಳವಿಲ್ಲದೆ ಟೈಪಿಸ್ಟ್ ಆಗಬಹುದು... ಅಥವಾ ಆಸ್ಪತ್ರೆಯಲ್ಲಿ ಧರ್ಮಾದಾಯ ವಿನಿಯೋಗಿಯಂತೆಯೂ ಕೆಲಸ ಮಾಡಬಹುದು."

ಅದ್ಯಾವುದೂ ಅವಳ ಮನಸ್ಸಿಗೆ ಬರಲಿಲ್ಲ. ಸಂಗೀತ, ಸಾಹಿತ್ಯ, ಕಲೆಯಲ್ಲಿಯೂ ಅವಳಿಗೆ ಹೆಚ್ಚು ಆಸಕ್ತಿ ಇದ್ದಂತಿರಲಿಲ್ಲ. ಮುಂದೊಂದು ಗಂಟೆಯವರೆಗೆ ಮಾತಾಡಿ, ಆಕೆ ಹೊರಡುವಾಗ, "ಏನೇ ಆದರೂ ಅವಸರದಲ್ಲಿ ಏನನ್ನೂ ಮಾಡಬೇಡ" ಎಂದು ಎಚ್ಚರಿಸಿದೆ.

ನಂತರದ ಕೆಲವು ವಾರಗಳಲ್ಲಿ ನಾವು ಅನೇಕ ಬಾರಿ ಭೆಟ್ಟಿಯಾದೆವು. ನಾನು ಆಕೆಯನ್ನು ಜೀನ್ ಎಂದು ಆತ್ಮೀಯವಾಗಿ ಕರೆಯುತ್ತಿದೆ. ಅವಳಿಗಾದರೋ, ನನ್ನಲ್ಲಿ ತುಂಬಾ ವಿಶ್ವಾಸ, ಆದರ ಭಾವ. ಬೇಸಿಗೆಯ ಆರಂಭದಲ್ಲಿ ಅವಳಿಗೆ ಮೊದಲ ಚೆಕ್ಕನ್ನು ಕಳಿಸಿದೆ. ಆಗಾಕೆ ಇನ್ನೂ ತನ್ನ ಮೊದಲಿನ ಉದ್ಯೋಗವನ್ನು ಬಿಟ್ಟಿರಲಿಲ್ಲ.

ಏಪ್ರಿಲ್ ತಿಂಗಳಲ್ಲಿ ಒಂದು ದಿನ ಎಂದಿನಂತೆ ಹರಟುತ್ತಲಿದ್ದೆವು. ಆಕೆ ತುಸು ಅನ್ಯಮನಸ್ಕಳಾಗಿ ಕಂಡಳು. ಕಾಫಿ ಕುಡಿಯುತ್ತಿರುವಾಗ, ಒಮ್ಮೆಲೆ "ಮಿ. ಸ್ಟ್ರಾಶನ್ ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ" ಎಂದಳು.

"ಹೌದೇ? ಏನದು?"

ಆಕೆ ಅನುಮಾನಿಸಿದಳು, "ನಿಮಗೆ ವಿಚಿತ್ರವೆನಿಸಬಹುದು. ಹಣವನ್ನು ಹೀಗೆಲ್ಲ ಖರ್ಚು ಮಾಡುವುದು ಮೂರ್ಖತನ ಅನ್ನಬಹುದು. ಆದರೂ, ನನಗೆ ಅದನ್ನೇ ಮಾಡುವ ಇಷ್ಟ. ಏನೆಂದು ಹೇಳಿಬಿಡಲೆ?"

"ಹೇಳು ಜೀನ್, ಏನು ಮಾಡಬೇಕೆನ್ನುತ್ತೀ?"

"ನಾನು ಮಲಯಾಕ್ಕೆ ತಿರುಗಿ ಹೋಗುತ್ತೇನೆ. ಅಲ್ಲಿ ಒಂದು ಬಾವಿಯನ್ನು ತೋಡಿಸಬೇಕಾಗಿದೆ."

ನಮ್ಮಲ್ಲಿ ದೀರ್ಘ ಮೌನ ಆವರಿಸಿತು. ನಾನು ಆಶ್ಚರ್ಯದಿಂದ ಮೂಕನಾಗಿಬಿಟ್ಟೆ. ನನ್ನ ಮೌನವನ್ನಾಕೆ ಆಕ್ಷೇಪವೆಂದು ಭಾವಿಸಿಕೊಂಡಳೇನೊ. ನನ್ನತ್ತ ಮುಂದೆ ಬಾಗಿ, "ಹೌದು, ಇದು ನಿಮಗೆ ವಿಪರೀತ ಅನಿಸಿರಬೇಕು. ನಿಮಗೆಲ್ಲವನ್ನೂ ಹೇಳಲೆ?"

"ಹೇಳು, ನಿನ್ನ ಯುದ್ಧಾನುಭವಗಳಿಗೆ ಸಂಬಂಧಿಸಿದೆಯೋ?" ಎಂದು ಕೇಳಿದೆ.

"ಹೌದು. ಇಷ್ಟು ದಿನ ನಿಮಗೆ ಹೇಳಲಿಕ್ಕಾಗಿಲ್ಲ. ಓಹ್, ಅದೆಲ್ಲ ಒಂದು ದುಃಸ್ವಪ್ನದಂತಿದೆ."

"ಹಾಗಾದರೆ ಅದನ್ನು ಮರೆತುಬಿಡುವುದು

ವಾಸಿಯಲ್ಲವೆ?"

"ಇಲ್ಲ. ಈ ಹಣ ಸಿಕ್ಕ ಮೇಲೆ ಮರೆಯುವು-ದಂತೂ ಸಾಧ್ಯವಿಲ್ಲ. ನಿಮಗೆ ಎಲ್ಲಾ ಹೇಳಬಯಸುತ್ತೇನೆ."

ಹೊರಗಡೆ ಆಕಾಶದಲ್ಲಿ ಕಪ್ಪುಮೋಡ ಕವಿದು, ಮಳೆ ಧಾರಾಕಾರವಾಗಿ ಸುರಿಯತೊಡಗಿತ್ತು. ಕೋಣೆಯಲ್ಲಿ ಬೆಂಕಿಗೂಡಿನ ಜ್ವಾಲೆಗಳಿಂದ ಬೆಚ್ಚ-ಗಿನ ಹವೆ ಆವರಿಸಿತ್ತು. ಅವಳು ಶಾಂತವಾಗಿ ತನ್ನ ಕಟು ಅನುಭವದ ಕಥೆಯನ್ನು ಅರುಹಿದಳು.

೨

ಜೀನಳ ಬಾಲ್ಯ ಇಂಗ್ಲಂಡಿನಲ್ಲಿ ಕಳೆದಿತ್ತು. ಸೌಥಾಂಪ್ಟನ್ನಿನಲ್ಲಿ ತನ್ನ ತಾಯಿ, ಅಣ್ಣ ಡೊನಾಲ್ಡ್‌ನೊಡನೆ ವಾಸಿಸುತ್ತಿದ್ದ ದಿನಗಳಲ್ಲಿ ಆಕೆ ಶಾಲಾ ಬಾಲಿಕೆಯಾಗಿದ್ದಳು. ಅದಕ್ಕೆ ಮೊದಲು ಅವರು ಮಲಯಾದಲ್ಲಿ ಇರುತ್ತಿದ್ದರಂತೆ. ಅವರ ತಂದೆ ಅಲ್ಲಿ ಒಂದು ರಬ್ಬರ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದ. ಹನ್ನೊಂದು ವರ್ಷದ ಜೀನ್, ಹದಿನಾಲ್ಕು ವರ್ಷದ ಡೊನಾಲ್ಡ್ ಹಾಗೂ ತಾಯಿಯೊಂದಿಗೆ ಇಂಗ್ಲಂಡಿಗೆ ಹಿಂದಿರುಗಿದ್ದಳು. ಕೆಲ ವರ್ಷಗಳ ಬಳಿಕ ತಂದೆ ಮಲಯಾದಲ್ಲಿ ಮೋಟರ್ ಅಪಘಾತದಲ್ಲಿ ಸತ್ತುಹೋದ.

ಸೌಥಾಂಪ್ಟನ್ನಿನಲ್ಲಿ ತಾನು ಕಳೆದ ದಿನಗಳು ಸುಖಕರವಾಗಿದ್ದವೆಂದು ಜೀನ್ ಸ್ಮರಿಸಿದಳು. ಶಾಲೆ ಬಿಟ್ಟ ನಂತರ ಆಕೆ ಟೈಪಿಂಗ್, ಶಾರ್ಟ್‌ಹ್ಯಾಂಡ್ ಕಲಿತುಕೊಂಡಿದ್ದಳು. ಅಷ್ಟರಲ್ಲಿ ಅವಳ ಅಣ್ಣ ಮಲಯಾದಲ್ಲಿ ತನ್ನ ತಂದೆ ಕೆಲಸಮಾಡು-ತ್ತಿದ್ದ ಸಂಸ್ಥೆಯಲ್ಲಿಯೇ ಉದ್ಯೋಗ ಕೈಕೊಂಡಿದ್ದ. ಜೀನಳಿಗೂ ಅಲ್ಲಿ ಕಾರ್ಯದರ್ಶಿನಿಯ ಕೆಲಸ ಮಾಡಲು ಕರೆ ಬಂದಿತು. ಅದಕ್ಕೆ ಒಪ್ಪಿಕೊಂಡು ೧೯೩೯ರ ಚಳಿಗಾಲದಲ್ಲಿ ಆಕೆ ಮಲಯಾಕ್ಕೆ ಹೋದಳು.

ಆಗ ಜೀನ್ ಹತ್ತೊಂಭತ್ತರ ಯುವತಿ. ಮಲಯಾದಲ್ಲಿಯ ಜೀವನ ಸುಖಮಯವಾಗಿತ್ತು. ಕೌಲಾಲಂಪುರದಲ್ಲಿ ಅವಳ ಉದ್ಯೋಗ ಸುಲಭವಾಗಿತ್ತು, ಸಾಕಷ್ಟು ವಿರಾಮವಿರುತ್ತಿತ್ತು. ನಿತ್ಯ ನೃತ್ಯ ಸಮಾರಂಭಕ್ಕೋ, ಒಂದಿಲ್ಲೊಂದು ಔತಣಕೂಟಕ್ಕೋ ಹೋಗಿ ಆನಂ-ದಿಸಬಹುದಿತ್ತು. ಅವಳ ವಾಸ್ತವ್ಯಕ್ಕಾಗಿ ಒಂದು ಒಳ್ಳೇ ಸುರಕ್ಷಿತ ಕೊಠಡಿಯಿತ್ತು. ದೇಶೀಯ ಭಾಷೆ ಗೊತ್ತಿರುವದು ಅನುಕೂಲವೇ ಆಗಿತ್ತು. ಸೇವಕರ ಕೊರತೆ ಇರಲಿಲ್ಲ. ಹೀಗೆ ಒಂದೂವರೆ ವರ್ಷಕಾಲ ನೆಮ್ಮದಿಯಿಂದಲೇ ಗತಿಸಿತು.

ಅನಂತರ ೧೯೪೧ರಲ್ಲಿ ಯುದ್ಧಾರಂಭದ ವಾರ್ತೆ ಬಂತು. ಜಪಾನಿ ಸೈನಿಕರು ಉತ್ತರ ಮಲಯಾದಲ್ಲಿ ನುಗ್ಗಿದರು. ಬಹು ಬೇಗನೆ ಇಡೀ ದ್ವೀಪಕಲ್ಪವನ್ನು ಆಕ್ರಮಿಸುತ್ತ ದಕ್ಷಿಣದಲ್ಲಿ ಕೌಲಾಲಂಪುರದತ್ತ ಸಾಗುತ್ತಿದ್ದರು. ಮಹಿಳೆಯರು, ಮಕ್ಕಳನ್ನೆಲ್ಲ ಸಿಂಗಾಪುರಕ್ಕೆ ರವಾನೆ ಮಾಡುವ ಏರ್ಪಾಟುಗಳು ನಡೆದವು. ಜೀನ್ ಕೆಲಸ ಮಾಡುತ್ತಿದ್ದ ಆಫೀಸು ಕೂಡ ಮುಚ್ಚಲ್ಪಟ್ಟಿತು. ಆಕೆಗೂ ಸಿಂಗಾಪುರಕ್ಕೆ ಹೋಗಿ, ಅಲ್ಲಿಂದ ಇಂಗ್ಲಂಡಿಗೆ ಮರಳಿ ಹೋಗಬೇಕೆಂಬ ಆದೇಶ ಬಂತು.

ಆದರೆ ಜೀನ್ ಸಿಂಗಾಪುರಕ್ಕೆ ಹೋಗಲಿಲ್ಲ. ಬದಲಾಗಿ ಇಪ್ಪತ್ತು ಮೈಲಿ ದೂರದ ಬಾಟು ಟಾಸಿಕ ಎಂಬ ಊರಿಗೆ ಹೋದಳು. ಅಲ್ಲಿ ಅವಳ ಆಪ್ತ ಸ್ನೇಹಿತರಾದ ಹೊಲ್ಲಂಡ್ ದಂಪತಿಗಳು ವಾಸಿಸುತ್ತಿದ್ದರು. ಆಕೆ ಹೊಸದಾಗಿ ಮಲಯಾಕ್ಕೆ ಬಂದಾಗ, ಅವರು ಜೀನ್‌ಳಿಗೆ ತಮ್ಮ ಮನೆಯಲ್ಲಿ ತುಂಬಾ ಆತಿಥ್ಯ ನೀಡಿದ್ದರು. ಬಿಲ್ ಹೊಲ್ಲಂಡ್ ನಲವತ್ತರ ಪ್ರಾಯದವ. ತಗಡು ಕಾರಖಾನೆಯ ಮ್ಯಾನೇಜರ್ ಆಗಿದ್ದ. ಆತನ ಪತ್ನಿ ಐಲೀನ್ ಸುಮಾರು ಮೂವತ್ತೈದು ವರ್ಷದ ಮಹಿಳೆ. ಅವರಿಗೆ ಮೂವರು ಮಕ್ಕಳು. ಕೊನೆಯ ಮಗುವಿಗೆ ಕೇವಲ ಹತ್ತು ತಿಂಗಳು.

ಜೀನ್ ಅವರ ಮನೆ ಮುಟ್ಟಿದಾಗ, ಅಲ್ಲಿಯೂ ಬಹಳೇ ಗೊಂದಲ ನಡೆದಿತ್ತು. ಹಿಂದಿನ ದಿನ ಅವರಿಗೂ ಸಿಂಗಾಪುರಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. ಮನೆಯ ಸಾಮಾನೆಲ್ಲ ಅಸ್ತವ್ಯಸ್ತವಾಗಿ ಬಿದ್ದುಬಿಟ್ಟಿದ್ದವು. ಮಕ್ಕಳು ಗಾಬರಿಗೊಂಡು ಕಿರಿಕಿರಿ ಮಾಡುತ್ತಿದ್ದವು. ಮರುದಿನ ಮುಂಜಾನೆ ಬೇಗನೆ ಹೊರಡುವದೆಂದು ಅವರಾಗಲೇ ನಿಶ್ಚಯಿಸಿದ್ದರು.

ನಸುಕಿನಲ್ಲಿಯೇ ಎದ್ದು, ಕಾರಿನಲ್ಲಿ ಸಾಮಾನೆಲ್ಲ ಸೇರಿಸಿ ಹೊರಟವಾಯಿತು. ಐದು ಮೈಲಿ

ಖುಷ್ಟೇ ಹೋದಾಗ, ಕಾರಿನ ಗಾಲಿ ಪಂಕ್ಚರ್ ಆಗಿ ಅದನ್ನು ಅಲ್ಲಿಯೇ ಬಿಟ್ಟುಬಿಡಬೇಕಾಯಿತು. ತಿರುಗಿ ಮನೆಗೆ ಹೋಗುವುದೇ ಲೇಸೆಂದು ಕಷ್ಟಪಟ್ಟು ನಡೆದುಕೊಂಡು ಮನೆ ಸೇರಿದರು.

ಮಧ್ಯಾಹ್ನ ವೇಳೆ ಕು ಆಲಾ ಪಾನೊಂಗಕ್ಕೆ ಹೋಗುವ ಟ್ರಕ್ಕೊಂದು ಅಲ್ಲಿಗೆ ಬಂತು. ಅದರಲ್ಲಿ ಸುಮಾರು ನಲವತ್ತು ಜನರು ತುಂಬಿದ್ದರು. ಜಪಾನೀಯರು ಕೇವಲ ಐವತ್ತು ಮೈಲಿ ದೂರವಲ್ಲಿರುವರೆಂದು ತಿಳಿಯಿತು. ಜೀನ್ ಹಾಗೂ ಹೊಲ್ಲಂಡ್ ಕುಟುಂಬದವರು ಆ ವಾಹನದಲ್ಲಿ ಹತ್ತಿದರು. ಕು ಆಲಾ ಪಾನೊಂಗದಲ್ಲಿಯ ಜಿಲ್ಲಾಧಿಕಾರಿಯ ಕಚೇರಿಯನ್ನು ತಲುಪಿದರು.

ಸಂಜೆಯ ಹೊತ್ತಿಗೆ ಸಶಸ್ತ್ರ ಜಪಾನಿ ಸೈನಿಕರು ಅಲ್ಲಿಯೂ ಧುಮುಕಿದರು. ಜಿಲ್ಲಾಧಿಕಾರಿಯನ್ನು ಬಂಧಿಸಿ, ಆತನ ಕಚೇರಿಯ ಹೊರಾಂಗಣದಲ್ಲಿ ಕುಳಿತಿರುವ ಜನರನ್ನೆಲ್ಲ ಕೈದು ಮಾಡಿದರು. ಅಂದು ರಾತ್ರಿಯನ್ನು ಅಲ್ಲಿಯೇ ಕಳೆಯಬೇಕಾಯಿತು. ಊಟವಿಲ್ಲ; ಮಲಗಲು ಹಾಸಿಗೆಗಳಿಲ್ಲ. ಮೇಲಾಗಿ ಸೊಳ್ಳೆಗಳ ವಿಪರೀತ ಕಾಟ. ಮಕ್ಕಳೆಲ್ಲ ಅಳುತ್ತ ಚಡಪಡಿಸುತ್ತಿದ್ದವು. ಮಹಿಳೆಯರಿಗೆ ನೆಲದ ಮೇಲೆ ನಿದ್ರೆಬಾರದೆ, ಬೆಳಕು ಹರಿಯುವ ದಾರಿಯನ್ನೆ ನೋಡುತ್ತಿದ್ದರು.

ಮರುದಿನ ಮುಂಜಾನೆ ಕ್ಯಾ. ಯೋನಿಯಾಟಾ ಎಂಬೊಬ್ಬ ಜಪಾನಿ ಸೈನ್ಯಾಧಿಕಾರಿ ಬಂದು ಅವರ ವಿಚಾರಣೆಯನ್ನು ನಡೆಸಿದ. ಅನಂತರ ಪುರುಷರನ್ನು ಬೇರೆಡೆ ಕೈದಿ ಶಿಬಿರಕ್ಕೆ ಕಳಿಸಲಾಗುವದೆಂದು ಹೇಳಿದ. ಮಹಿಳೆಯರು, ಮಕ್ಕಳು ಅಲ್ಲಿಯೇ ಇರಬೇಕು, ಅವರ ಮೇಲೇನೂ ತಾವು ದಾಳಿ ಮಾಡುವದಿಲ್ಲ, ಎಂದೂ ಹೇಳಿದ. ಇವರೆಲ್ಲ ನಿರುಪಾಯರಾಗಿ, ಹತಾಶರಾಗಿ ಸುಮ್ಮನೆ ಕುಳಿತರು.

ಕೆಲ ಹೊತ್ತಾದ ಮೇಲೆ ಒಬ್ಬ ಜಪಾನಿ ಸೈನಿಕ ಎರಡು ಒಕೀಟಿನಲ್ಲಿ ಅವರಿಗೆ ಆಹಾರ ತಂದಿಟ್ಟ. ಒಂದರಲ್ಲಿ ಮೀನಿನ ತಿಳಿನೀರು ಸಾರು, ಇನ್ನೊಂದರಲ್ಲಿ ತಿನ್ನಲು ಹೇಸಿಕೆಯಾಗುವಂಥ ಅನ್ನ. ನಿರ್ವಾಹವಿಲ್ಲದೆ ಅವನ್ನೇ ಹಂಚಿಕೊಂಡು ಹೇಗೋ ತಿಂದರು. ಮಧ್ಯಾಹ್ನದ ವೇಳೆ ಸೈನಿಕರು ಒಂದು ಗಂಡಸರನ್ನು ಕರೆದೊಯ್ದರು. ಬಿಲ್ ಹೊಲ್ಲಂಡ್ ಹೋಗುವಾಗ, ತೇವಗೊಂಡ ಕಣ್ಣುಗಳಿಂದ ವಿದಾಯ ಹೇಳಿ, ತನ್ನ ಮಡದಿ ಮಕ್ಕಳ ಜೊತೆಗೇ ಇರಬೇಕೆಂದು ಜೀನಳನ್ನು ವಿನಂತಿಸಿಕೊಂಡ.

ಅಂದು ರಾತ್ರಿಯೂ ಅದೇ ಅವಸ್ಥೆ. ಸಾಯಂಕಾಲ ಮತ್ತೊಮ್ಮೆ ಮೀನಿನ ಸಾರು ಬಂತು. ಆದರೆ ಮಲಗಲು ಹಾಸಿಗೆ, ಹೊದಿಕೆ, ಸೊಳ್ಳೆ ಪರದೆ ಇವಾವೂ ಇರಲಿಲ್ಲ. ಈ ಕೊರತೆಗಳ ಕುರಿತು ಒಬ್ಬ ದಿಟ್ಟ ಮಹಿಳೆ ದೂರಿದಾಗ, ಕ್ಯಾ. ಯೋನಿಯಾಟಾ ಕ್ರೋಧಾವಿಷ್ಟನಾಗಿ, "ಇಂಥ ಉದ್ಧಟ ವಿಚಾರ ಬಿಟ್ಟುಬಿಡಿ. ಜಪಾನಿ ಸ್ತ್ರೀಯರು ಚಾಪೆಯ ಮೇಲೆಯೆ ಮಲಗುವುದು. ನೀವೂ ಹಾಗೇ ಮಲಗಿರಿ" ಎಂದು ಗದರಿಸಿದ.

"ಆದರೆ ನಾವು ಆಂಗ್ಲರು. ಪಶುಗಳ ಹಾಗೆ ನೆಲದ ಮೇಲೆ ಮಲಗುವದಿಲ್ಲ!" ಎಂದಳು ಆಕೆ ಕ್ರೋಧದಿಂದ.

ಆತನ ಕಣ್ಣುಗಳು ಕಠೋರವಾದವು. ಅವಳ ಮುಖದ ಮೇಲೆ ನಾಲ್ಕು ಬಿರುಸೇಟು ಕೊಟ್ಟ. "ಬಹಳ ದುಷ್ಟ ವಿಚಾರಗಳು" ಎಂದಂದು, ತಿರುಗಿ ಹೋದ.

ಆ ಕಚೇರಿ ಕೋಣೆಗಳಲ್ಲಿ ಅವರು ನಲವತ್ತೊಂದು ದಿನ ಕಳೆದರು. ಒಳ್ಳೆ ಆಹಾರವಿಲ್ಲ. ಸಾಕಷ್ಟು ನಿದ್ರೆ ಇಲ್ಲ. ನೀರು ಸಹ ಅಪರೂಪ. ಆದರೂ ತಮ್ಮ ಅಭಾವಗಳ ಬಗ್ಗೆ ದೂರಿಡುವದು ವ್ಯರ್ಥ; ಅಪಾಯಕರವೂ ಎಂದು ಅರಿತರು. ಕ್ರಮೇಣ ಆ ಕಷ್ಟ, ಕ್ಲೇಶಗಳೆಲ್ಲ ರೂಢಿಯಾದವು. ಆದರೆ ಒಂದು ವಾರದ ನಂತರ ಮಲೇರಿಯಾ, ಡಿಸೆಂಟರಿ ರೋಗಗಳಿಂದ ಪೀಡಿತರಾದರು. ಅವರಿಗೆ ಯಾವ ಔಷಧಿಗಳು, ವೈದ್ಯಕೀಯ ಸೌಕರ್ಯಗಳನ್ನು ಪೂರೈಸಲಾಗಲಿಲ್ಲ. ಬಹಳಷ್ಟು ಸ್ತ್ರೀಯರು ಸೋತು ಸಣ್ಣಗಾದರು.

ಮಕ್ಕಳು ವ್ಯಾಧಿಗ್ರಸ್ತವಾದವು. ಎಂಟು ವರ್ಷದ ಹುಡುಗಿಯೊಂದು ರೋಗಕ್ಕೆ ಬಲಿಯಾದಾಗ, ಎಲ್ಲರೂ ಮರಣದ ದುಃಸ್ವಪ್ನದಿಂದ

ಭಯಾಕ್ರಾಂತರಾದರು. ಜೀನಳೂ ತುಂಬಾ ನಿಃಶಕ್ತಳಾಗಿದ್ದಳು. ಆಕೆ ಐಲೀನ್ ಹೊಲ್ಲಂಡಳ ಜತೆಗಿದ್ದು, ಅವಳ ಮಕ್ಕಳನ್ನು ಸಂಭಾಳಿಸುವದರಲ್ಲಿ ಸಹಾಯ ಮಾಡುತ್ತಿದ್ದಳು.

ಹೀಗೇ ಜೀವನ ಸಾಗಿತು. ಒಂದೂವರೆ ತಿಂಗಳ ನಂತರ, ಕ್ಯಾ. ಯೋನಿಯಾಟಾ ಮತ್ತೆ ತನಿಖೆಗಾಗಿ ಬಂದ. ಬಳಲಿದ ಮಹಿಳೆಯರು. ನಿರ್ವಿಣ್ಣ ಮಕ್ಕಳ ಸಮೂಹದೆದುರು ನಿಂತು "ಮಹಿಳೆಯರೇ, ವಿಜಯೀ ಜಪಾನಿ ಸೈನ್ಯ ಮಲಯಾವನ್ನು ಮುಕ್ತ ಮಾಡಿದೆ. ಸಿಂಗಾಪುರದಲ್ಲಿ ಕೈದಿ ಶಿಬಿರಗಳನ್ನು ರಚಿಸಲಾಗುತ್ತಿದೆ. ನೀವೆಲ್ಲ ಅಲ್ಲಿಗೆ ಹೋಗಬೇಕು. ನಾಳೆ ಇಲ್ಲಿಂದ ಕೌಲಾಲಂಪುರಕ್ಕೆ ಹೊರಡಿ. ಅಲ್ಲಿಂದ ಸಿಂಗಾಪುರವರೆಗೆ ರೈಲು ಇದೆ. ಸಿಂಗಾಪುರದಲ್ಲಿ ನೀವು ಸುಖವಾಗಿರುವಿರಿ. ಧನ್ಯವಾದ" ಎಂದ.

ಪಾನೊಂಗಾದಿಂದ ಕೌಲಾಲಂಪುರ ನಲವತ್ತೇಳು ಮೈಲುಗಳ ದಾರಿ. ಆ ದಿಟ್ಟ ಮಹಿಳೆ ಮತ್ತೆ ಕೇಳಿದಳು: "ಕೌಲಾಲಂಪುರವರೆಗೆ ನಾವು ಹೇಗೆ ಹೋಗುವದು? ಟ್ರಕ್ ಇದೆಯೇ?"

"ಇಲ್ಲ. ಟ್ರಕ್ ಇಲ್ಲ. ನಡೆದುಕೊಂಡೇ ಹೋಗಿ. ಏನೂ ಕಷ್ಟವಿಲ್ಲ. ದಿನಾಲೂ ಸಾಧ್ಯವಿದ್ದಷ್ಟು ನಡೆಯಿರಿ. ಜಪಾನಿ ಸೈನಿಕ ನಿಮ್ಮ ಜತೆಗಿರುವ,ಸಹಾಯ ಮಾಡುವ."

"ಈ ಮಕ್ಕಳನ್ನು ಕಟ್ಟಿಕೊಂಡು ನಮಗೆ ನಡೆಯುವದು ಅಸಾಧ್ಯ. ನಮಗೊಂದು ಟ್ರಕ್ ಬೇಕೇಬೇಕು."

ಈ 'ದುಷ್ಟ' ವಿಚಾರಗಳಿಂದ ಆತನ ಮುಖ ಬಿಗುವಾಯಿತು. "ನೀವು ನಡೆಯಲೇಬೇಕು" ಎಂದು ಪುನರುಚ್ಚರಿಸಿ, ಹೊರಟು ಹೋದ.

ಎಲ್ಲರೂ ದಿಗ್ಭ್ರಾಂತರಾದರು. ದಿನವಿಡೀ ಹತಾಶರಾಗಿ ಕುಳಿತುಬಿಟ್ಟರು. ಆದರೆ ಹೊರಡದೆ ಗತ್ಯಂತರವಿರಲಿಲ್ಲ. ಮೆಲ್ಲನೆ ಎದ್ದು, ಅವಶ್ಯವಿದ್ದಷ್ಟು ಸಾಮಾನುಗಳನ್ನು ಜೋಡಿಸಿಕೊಳ್ಳಲು ಪ್ರಯತ್ನಿಸಿದರು. ಮರುದಿನ ನಸುಕಿನಲ್ಲಿಯೇ ಅನ್ನ ಬಂದಿತು. ಎಂಟು ಗಂಟೆಗೆ ನಾಲ್ಕು ಸೈನಿಕರೊಂದಿಗೆ ಕ್ಯಾ. ಯೋನಿಯಾಟಾ ಪ್ರತ್ಯಕ್ಷನಾಗಿ "ಇನ್ನು ಹೊರಡಿರಿ. ಇಂದು ಏಯರ್ ಪೆಂಟಿಸ್‌ವರೆಗೆ ನಡೆಯಿರಿ. ಏನೂ ತೊಂದರೆಯಿಲ್ಲ. ಅಲ್ಲಿ ಒಳ್ಳೆ ಊಟ ಸಿಗುವದು."

ಅದು ಸುಮಾರು ಹದಿನೈದು ಮೈಲು ದೂರದ ಊರು. ಎಷ್ಟೋ ಮಹಿಳೆಯರಿಗೆ ಅಲ್ಲಿಗೆ ಹೋಗಿ ಮುಟ್ಟುವೆವೆ ಎಂದೂ ನಿರಾಶೆಯಾಗಿತ್ತು. ಕೊನೆಗೊಮ್ಮೆ ಹೊರಡಬೇಕಾದರೆ ಮತ್ತೊಂದು ಗಂಟೆಯಾಯಿತು. ತಮ್ಮ ಗಂಟು ಮೂಟೆಗಳನ್ನು ಹೊತ್ತು, ಚಿಕ್ಕ ಮಕ್ಕಳನ್ನು ಎತ್ತಿಕೊಂಡು, ಗುಂಪಾಗಿ ಹೊರನಡೆದರು. ಮೇಲೆ ಉರಿಯುವ ಸೂರ್ಯನ ಕಿರಣಗಳು, ಕೆಳಗೆ ಸುಡುವ ಡಾಂಬರು ರಸ್ತೆ. ಮುಂದಿಬ್ಬರು, ಹಿಂದಿಬ್ಬರು ಜಪಾನಿ ಸೈನಿಕರ ಕಾವಲು. ಮರಗಳ ಆಶ್ರಯವನ್ನು ಹುಡುಕುತ್ತ, ಮೆಲ್ಲನೆ ಸಾಗಿದರು. ಗಂಟೆಗೊಮ್ಮೆ ಅಲ್ಲಲ್ಲಿ ನಿಂತು, ಕುಳಿತು, ದಣಿವು ಆರಿಸಿಕೊಳ್ಳುತ್ತಿದ್ದರು. ದಿನ ಕಳೆದಂತೆ, ಮಹಿಳೆಯರ ಕಾಲುಗಳು ನೋವಿನಿಂದ ಆಳುತ್ತ ಪಾದಗಳು ಊದಿಕೊಂಡು, ಪಾದರಕ್ಷೆ ಧರಿಸಿ ನಡೆಯುವದು ಬಹು ಕಷ್ಟವಾಯಿತು. ಅವುಗಳನ್ನು ಬಿಸಾಕಿ ಬರಿಗಾಲಿನಿಂದ ನಡೆಯ ಹತ್ತಿದರು. ಅಂತೂ ಸಂಜೆಯ ಹೊತ್ತಿಗೆ ಏಯರ್ ಪೆಂಟಿಸ್ ಗ್ರಾಮವನ್ನು ಸೇರಿದರು. ಅಲ್ಲಿಯೊಂದು ಚಪ್ಪರದಲ್ಲಿ ರಾತ್ರಿಯಿರುವ ಏರ್ಪಾಟಾಗಿತ್ತು. ದಣಿದು, ಧೂಳಿಮಯವಾದ ಮಹಿಳೆಯರು ನೆಲದ ಮೇಲೆ ಕುಸಿದುಬಿಟ್ಟರು. ಅವರಿಗೆ ಊಟೋಪಹಾರ ಮಾಡುವ ಶಕ್ತಿ, ಹಸಿವು ಸಹ ಇರಲಿಲ್ಲ. ರಾತ್ರಿ ಮಲಗಿದಾಗ ಮೈಮೇಲೆಲ್ಲ ಇಲಿಗಳು ಓಡಾಡುತ್ತಿದ್ದರಿಂದ ನಿದ್ರೆಯೂ ಬರಲಿಲ್ಲ.

ಮರುದಿನ ಮುಂಜಾನೆ ಮತ್ತೆ ಪ್ರಯಾಣ ಆರಂಭ. ಹಿಂದಿನ ದಿನದ ಆಯಾಸದಿಂದ ಅವರ ಕೈಕಾಲುಗಳು ಸೆಟೆದಂತಾಗಿ ನಡೆಯುವದು ಅಸಾಧ್ಯವಾದರೂ ಕಾವಲುಗಾರರು ಅವರನ್ನು ಅಟ್ಟಿಕೊಂಡು ಹೊರಟರು. ಅಂದು ಅಷ್ಟೇ ಬವಣೆ ಪಡುತ್ತ ಹತ್ತು ಮೈಲಿ ದೂರವಿರುವ ಆಸಹನ್ ಎಂಬ ಮುಂದಿನ ಊರನ್ನು ತಲುಪಿದರು. ಹೀಗೆ ನಡೆಯುವದು ಅವರ ನಿತ್ಯಕ್ರಮವಾಯಿತು. ಬಳಿಕ ಕಾವಲುಗಾರರಿಗೆ ಹೇಳಿಕೊಂಡು ದಿನ ಬಿಟ್ಟು ದಿನ ನಡೆಯ

ಹತ್ತಿದರು. ದಿನದಿನಕ್ಕೂ ಕ್ಷೀಣವಾಗುತ್ತ ಅವರ ಪ್ರಯಾಣ ನಿಧಾನವಾಗಹತ್ತಿತು. ಒಂದೆರಡು ತಿಂಗಳಲ್ಲಿ ಅವರು ಮಿತಿಮೀರಿ ನಿರ್ವಿಣ್ಣರಾಗಿ, ವ್ಯಾಧಿಗ್ರಸ್ಥರಾಗಿದ್ದರು. ಅನೇಕ ಮಹಿಳೆಯರು, ಮಕ್ಕಳು ಮರಣಹೊಂದಿದರು. ಸತ್ತವರನ್ನು ಅಲ್ಲಿಯೇ ಮಣ್ಣುಗೂಡಿಸಿ, ಮತ್ತೆ ಮುಂದೆ ಸಾಗುತ್ತಿದ್ದರು. ಬಿಸಿಲಿನಿಂದ ಅವರ ಮೈ ಕಂದುಬಣ್ಣಕ್ಕೆ ತಿರುಗಿತ್ತು. ಆಹಾರವಿಲ್ಲದೆ ನಿತ್ರಾಣರಾಗಿದ್ದರು. ಏನಾದರೂ ಹಣ್ಣು ಹಂಪಲು, ಔಷಧಿಗಳನ್ನು ಕೊಳ್ಳಲೂ ಅವರ ಹತ್ತಿರ ಹಣವಿರಲಿಲ್ಲ. ಅವರು ತೊಟ್ಟ ಬಟ್ಟೆಗಳೆಲ್ಲ ಚಿಂದಿಯಾಗಿ, ಒಗೆಯಲು ಸಾಬೂನಿಲ್ಲದೆ ಕೊಳಕಾಗಿದ್ದವು. ಜೇನ್ ಒಂದು 'ಸರೊಂಗ್' (ಲುಂಗಿ) ಕೊಂಡು, ಅದನ್ನು ತನ್ನ ಹರಿದ ಅಂಗಿಯ ಮೇಲೆ ಲಂಗದಂತೆ ಧರಿಸುತ್ತಿದ್ದಳು. ಈ ದೇಶೀಯ ಉಡುಪಿಗೆ ಉಳಿದ ಸ್ತ್ರೀಯರು

ಮೊದಲು ಅಸಹ್ಯಪಟ್ಟರೂ ಬೇರೆದಾರಿಯಿಲ್ಲದೆ ಕ್ರಮೇಣ ತಾವೂ ಅದೇ ರೀತಿಯ ಬಟ್ಟೆ ಧರಿಸ ತೊಡಗಿದರು.

ಮತ್ತೆರಡು ತಿಂಗಳ ನಂತರ, ಒಬ್ಬ ಜಪಾನಿ ಸೈನ್ಯಾಧಿಕಾರಿ ಬಂದು ಸಿಂಗಾಪುರದಲ್ಲಿ ಕೈದಿಶಿಬಿರಗಳೇ ಇಲ್ಲದ್ದರಿಂದ ಅವರೆಲ್ಲ ಕುಆನ್‌ಟಾನ್‌ಗೆ ಹೋಗಬೇಕೆಂದು ಆದೇಶಿಸಿದ. ಕುಆನ್‌ಟಾನ್ ಪೂರ್ವ ಕರಾವಳಿಯಲ್ಲಿರುವ ಊರು. ಅಲ್ಲಿಗೆ ಸೇರಲು ನೂರಾರು ಮೈಲುಗಳನ್ನು ಕ್ರಮಿಸಬೇಕಿತ್ತು. ಆ ದಿಕ್ಕಿನಲ್ಲಿ ದಿನಾಲು ಎಂಟು ಹತ್ತು ಮೈಲು ನಡೆಯುತ್ತ ಒಂದು ವಾರ ಕಳೆಯಿತು. ಮಾರ್ಗದಲ್ಲಿ ಅನೇಕ ಮಕ್ಕಳು ಜ್ವರ ಬಾಧೆಯಿಂದ ಅಸು ನೀಗಿದವು. ಆದರೆ ಅವರು ಸಾವಿನ ವಿಷಯದಲ್ಲಿ ಈಗ ಕಲ್ಲೆದೆಯವರಾಗಿದ್ದರು. ಶೋಕಿಸುತ್ತ ಕೂಡುವುದಕ್ಕೆ ಅವರಿಗೆ ಶಕ್ತಿಯೂ ಇರಲಿಲ್ಲ; ವ್ಯವಧಾನವೂ ಇರಲಿಲ್ಲ. ಮೃತದೇಹವನ್ನು ಮಣ್ಣುಗೂಡಿಸಿ ಮತ್ತೆ ಮುನ್ನಡೆಯುತ್ತಿದ್ದರು. ಐಲೀನ್ ಪೊಲ್ಲಾಡಳೂ ಒಂದು ದಿನ ತೀರಿಕೊಂಡಳು. ಅವಳ ಚಿಕ್ಕ ಮಗುವಿನ ಹೊಣೆ ಜೀನಳದೇ ಆಯಿತು. ಮಗುವನ್ನು ಸೊಂಟದ ಮೇಲೆ ಹೇರಿಕೊಂಡು ನಡೆಯ ತೊಡಗಿದಳು ಜೀನ್.

ಅನಂತರ ಬಂದ ಜವಳು ಪ್ರದೇಶದಲ್ಲಿ ಅವರು ಮತ್ತಿಷ್ಟು ರೋಗಗ್ರಸ್ತರಾದರು. ಜೀನಳಿಗೂ ಮಲೇರಿಯಾ ಜ್ವರ ಬಾಧಿಸಿತು. ತಲೆ ಸುತ್ತುತ್ತಿತ್ತು, ಕಣ್ಣು ಕತ್ತಲೆಗೂಡುತ್ತಿತ್ತು. ಆದರೂ ಮಗುವನ್ನು ಎತ್ತಿಕೊಂಡು ಆಕೆ ಹಾಗೇ ತಡಪರಿಸುತ್ತ ನಡೆಯಬೇಕಾಯಿತು. ಹನ್ನೊಂದು ದಿನಗಳ ನಂತರ ಆ ಅಪಾಯಕಾರಿ ವಾತಾವರಣದ ಊರುಗಳನ್ನು ದಾಟಿ, ಕುಆನ್‌ಟಾನ್ ಸಮೀಪಿಸುತ್ತಲಿದ್ದರು. ಮಾರನ್ ಎಂಬ ಗ್ರಾಮದಲ್ಲಿ ಹಾಯುವಾಗ, ದಾರಿಯಲ್ಲಿ ರೈಲು ಕಂಬಿಗಳನ್ನೂ, ಮರದ ತುಂಡುಗಳನ್ನೂ ಹೇರಿದ್ದ ಎರಡು ಟ್ರಕ್ಕುಗಳನ್ನು ಕಂಡರು. ಒಂದು ಟ್ರಕ್ ಕೆಟ್ಟು ನಿಂತಿತ್ತು. ಕೆಳಗಡೆ ಇಬ್ಬರು ಕೆಲಸಗಾರರು ಅಡ್ಡಬಿದ್ದು ರಿಪೇರಿ ನಡೆಸಿದ್ದರು. ಅವರು ಬಿಳಿಯರು! ಕಳೆದ ಐದು ತಿಂಗಳಲ್ಲಿ ಪ್ರಥಮ ಬಾರಿಗೆ ಅವರಿಗೆ ಬಿಳಿಯರ ದರ್ಶನ. ದಾಪುಗಾಲು ಹಾಕುತ್ತ ಹೋಗಿ ಟ್ರಕ್ಕುಗಳನ್ನು ಸುತ್ತುವರೆದರು.

ಅವರ ಬರಿಗಾಲು, ಲಂಗಗಳ ಅಂಚುಗಳನ್ನಷ್ಟೇ ಕಂಡು ರಿಪೇರಿ ಮಾಡುವವರು, ತಮಗೆ ಬೆಳಕು ಅಡ್ಡವಾಗಿದ್ದರಿಂದ ಇಂಗ್ಲೀಷಿನಲ್ಲಿ ಅವರಿಗೆ ಅವಾಚ್ಯ ಮಾತನ್ನಾಡಿದರು. ಕೂಡಲೆ ಗುಂಪಿನಲ್ಲಿ ಒಬ್ಬ ಮಹಿಳೆ "ಏನಯ್ಯ, ಇಂಥ ಕೆಟ್ಟ ಮಾತು ಆಡಬೇಡ!" ಎಂದಳು ಇಂಗ್ಲೀಷಿನಲ್ಲಿಯೆ.

ತಕ್ಷಣ ಅವರಿಬ್ಬರೂ ಟ್ರಕ್ ಕೆಳಗಡೆಯಿಂದ ಸರಿದು ಬಂದು, ಆ ಮಹಿಳೆಯರು, ಮಕ್ಕಳ ಸಮೂಹವನ್ನು ದಿಟ್ಟಿಸುತ್ತ ಕುಳಿತರು. ಅವರ ಕಂದು ಮೈಬಣ್ಣ, ಲುಂಗಿಗಳು, ಬರಿಗಾಲುಗಳನ್ನು ಆಶ್ಚರ್ಯಚಕಿತರಾಗಿ ಅವಲೋಕಿಸುತ್ತ, "ಯಾರದು ? ಯಾರು ನಿಮ್ಮಲ್ಲಿ ಇಂಗ್ಲೀಷು ಮಾತನಾಡಿದ್ದು ?" ಎಂದೊಬ್ಬ ಕೇಳಿದ.

"ನಾವೆಲ್ಲರೂ ಆಂಗ್ಲರೇ" ಜೀನ್ ನಗುತ್ತ ಹೇಳಿದಳು.

ಆತ ಅವಳ ಕಂದು ಬಣ್ಣದ ಮುಖ, ಕಪ್ಪು ಕೂದಲಿನ ಒಂದು ಜಡೆ, ಮಾಸಿದ ಲುಂಗಿ, ಸೊಂಟದ ಮೇಲಿರುವ ಕಂದುಬಣ್ಣದ ಮಗು–ಎಲ್ಲವನ್ನೂ ನೆಟ್ಟದೃಷ್ಟಿಯಿಂದ ನೋಡಿದ.

"ಮಿಶ್ರ ಜಾತಿಯವರೇ?" ಎಂದು ಕೇಳಿದ.

"ಇಲ್ಲ, ಅಪ್ಪಟ ಆಂಗ್ಲರು. ನಾವು ಕೈದಿಗಳಾಗಿದ್ದೇವೆ."

ಆತ ಎದ್ದು ನಿಂತ. ಸುಮಾರು ಇಪ್ಪತ್ತೇಳು, ಇಪ್ಪತ್ತೆಂಟು ವರ್ಷದ ಒಳ್ಳೆ ಸದೃಢ ಯುವಕ ಆತ. ಆತನ ವ್ಯಕ್ತಿತ್ವ ಅವಳಲ್ಲಿ ಏನೋ ಪರಿಣಾಮ ಬೀರಿತು. ಆತನ ಆಂಗ್ಲ ಭಾಷೆಯ ಉಚ್ಚರಣೆಯಲ್ಲಿ ತುಸು ವ್ಯತ್ಯಾಸವನ್ನು ಗಮನಿಸಿ, "ನೀವೂ ಆಂಗ್ಲ ಕೈದಿಗಳೇ?" ಎಂದು ಕೇಳಿದಳು.

ಆತ ಮುಗುಳು ನಕ್ಕು "ಇಲ್ಲ. ನಾವು ಆಸ್ಟ್ರೇಲಿಯದವರು. ಈ ಟ್ರಕ್ಕುಗಳಲ್ಲಿ ರೈಲು ಹಳಿ ಇತ್ಯಾದಿ ಸಾಮಗ್ರಿಗಳನ್ನು ಕುಆನ್‌ಟಾನ್‌ನಿಂದ ಸಮುದ್ರ ತೀರದತ್ತ ಸಾಗಿಸುತ್ತಿದ್ದೇವೆ" ಎಂದ.

"ನಾವೂ ಕುಆನ್‌ಟಾನ್‌ನಲ್ಲಿರುವ ಕೈದಿಶಿಬಿರಕ್ಕೆ ಹೊರಟಿದ್ದೇವೆ."

"ಕುಆನ್‌ಟಾನ್‌ನಲ್ಲಿ ಸ್ತ್ರೀ ಕೈದಿಗಳ ಶಿಬಿರವಿಲ್ಲವಲ್ಲ. ನಿಮಗೆ ಇದೆಯೆಂದು ಯಾರು ಹೇಳಿದರು?"

"ಜಪಾನೀಯರು...ಹಾಗಾದರೆ ಅದು ಮತ್ತೆ ಸುಳ್ಳು..." ಎಂದು ನಿಟ್ಟುಸಿರೆಳೆದಳು.

"ನೀನು ಆಂಗ್ಲ ಸ್ತ್ರೀಯ ಹಾಗೆ ಕಾಣಿಸುವದೇ ಇಲ್ಲ" ಎಂದು ನಸುನಕ್ಕು ಆತ "ನೀವೆಲ್ಲ ಎಲ್ಲಿಂದ ಬಂದಿರುವಿರಿ?" ಕೇಳಿದ.

"ಪಾನೊಂಗದಿಂದ"

"ನಡೆದುಕೊಂಡೆ"?

"ಹೌದು. ಕುಆನ್‌ಟಾನ್‌ವರೆಗೆ ದಂಡಯಾತ್ರೆ ಮಾಡಿಸುತ್ತಿದ್ದಾರೆ."

"ಓಹ್" ಎಂದು ಉದ್ಗರಿಸಿದ. "ನಿಮ್ಮ ಊಟ ಇತ್ಯಾದಿ?"

"ರಾತ್ರಿ ಯಾವುದಾದರೂ ಹಳ್ಳಿಯಲ್ಲಿ ಉಳಿದುಕೊಳ್ಳುತ್ತೇವೆ. ಸಿಕ್ಕಿದ್ದು ತಿನ್ನುತ್ತೇವೆ."

"ನಿಮಗೆ ರೋಗಾದಿಗಳಾದರೆ ಏನು ಗತಿ?"

"ಏನೂ ಇಲ್ಲ ಜೀವಚ್ಛವವಾಗಿ ಬದುಕಿ ಉಳಿಯುತ್ತೇವೆ, ಇಲ್ಲವೆ ಸಾಯುತ್ತೇವೆ. ಔಷಧಿಗಳಿಲ್ಲದೆ ಈಗ ನಮ್ಮಲ್ಲಿ ಅರ್ಧದಷ್ಟು ಜನ ಸತ್ತುಹೋಗಿದ್ದಾರೆ," ಜೀನ್ ನೊಂದುಕೊಂಡು ನುಡಿದಳು.

"ಈ ರಾತ್ರಿ ಇಲ್ಲಿಯೇ ಇರುವಿರಾ?"

"ಹೌದು."

ಆತ ಸ್ವಲ್ಪ ವಿಚಾರಮಗ್ನನಾದ. "ನಿಮಗೆ ಏನಾದರೂ ಔಷಧಿ ಬೇಕಿದ್ದರೆ ಹೇಳಿ ತಂದು ಕೊಡುತ್ತೇನೆ" ಅಂದ. ನಂತರ "ದುಡ್ಡು ಇದೆಯೇ?"

"ಎಲ್ಲಾ ಖರ್ಚಾಗಿದೆ. ಏನೋ ಚೂರು ಪಾರು ಉಳಿದ ಉಂಗುರ, ಓಲೆಗಳನ್ನು ಮಾರಬಹುದಷ್ಟೆ."

"ಅದೇನೂ ಬೇಡ. ನೋಡೋಣ...ಅನಂತರ ಭೆಟ್ಟಿ ಆಗುತ್ತೇನೆ" ಎಂದು ಹೇಳಿ ಹೋದ.

ಅಂದು ರಾತ್ರಿ ಜೀನಳ ತಂಡದವರು ಆ ಹಳ್ಳಿಯ ಶಾಲೆಯ ಕೋಣೆಯೊಂದರಲ್ಲಿ ಉಳಿದುಕೊಂಡಿದ್ದರು. ಸುಮಾರು ಹತ್ತುಗಂಟೆಗೆ ಕಾವಲುಗಾರರು ಮಲಗಿದ ಮೇಲೆ, ಆತ ಬಾಗಿಲ ಬಳಿ ಹೋಗಿ ಮೆಲ್ಲನೆ ಕರೆದ. "ಮಧ್ಯಾಹ್ನ ನನ್ನೊಂದಿಗೆ ಮಾತನಾಡಿದಾಕೆ ಯಾರು? ಮಗುವನ್ನೆತ್ತಿಕೊಂಡಿದ್ದಳಲ್ಲ..."

ಜೀನ್ ಎದ್ದು ಬಂದಳು. ಆಕೆಗೆ ಕ್ವಿನೈನ್ ಮಾತ್ರೆಗಳು, ಚರ್ಮದ ಮುಲಾಮು ಇತ್ಯಾದಿ ಔಷಧಿಗಳ ಪೊಟ್ಟಣಗಳನ್ನು ಕೊಟ್ಟ. "ದುಡ್ಡೆಷ್ಟು?" ಎಂದಾಕೆ ಕೇಳಿದಾಗ,

"ಪರವಾಯಿಲ್ಲ" ಎಂದು ನಕ್ಕು, "ಅವರ ಬೆಲೆಯನ್ನು ಜಪಾನೀಯರೆ ತೆತ್ತಿದ್ದಾರೆ– ಟ್ರಕ್ಕಿನಲ್ಲಿನ ಮೂರು ಗ್ಯಾಲನ್ ಪೆಟ್ರೋಲ್ ಮಾರಿ ತಂದೆ" ಎಂದು ಹೇಳಿದ.

"ಇಂದು ರಾತ್ರಿ ನಿಮ್ಮ ವಸತಿಯೂ ಇಲ್ಲಿಯೇ ಏನು?" ಕೇಳಿದಳು ಜೀನ್.

"ಹೌದು. ಟ್ರಕ್ಕು ಮುಂದೆ ಹೊರಡದಂತೆ ಪೂರ್ತಿ ಕೆಡಿಸಿಬಿಟ್ಟಿದ್ದೇನೆ" ಆತ ನಗುತ್ತಲೆಂದ.

ಆಕೆ ಅಲ್ಲಿಯೇ ಮೇಲಿನ ಮೆಟ್ಟಲಿನ ಮೇಲೆ ಕುಳಿತಳು. ಆತ ನೆಲದ ಮೇಲೆ ಕುಕ್ಕುರುಗಾಲಿನಲ್ಲಿ ಕುಳಿತ. ಇಬ್ಬರೂ ಮಾತಿಗೆ ತೊಡಗಿದರು.

"ಆಸ್ಟ್ರೇಲಿಯದಲ್ಲಿಯೂ ನೀನು ಟ್ರಕ್ ಚಾಲಕನೇ?"

"ಇಲ್ಲಿಲ್ಲ. ಅಲ್ಲಿ ನಾನೊಬ್ಬ ರಿಂಗರ್."

"ಅಂದರೆ?"

"ಕೃಷಿ ಕ್ಷೇತ್ರದಲ್ಲಿ ಪ್ರಾಣಿ ಸಂಗೋಪನ ಕಾರ್ಯ" ಎಂದು ತನ್ನ ಉದ್ಯೋಗದ ವಿವರಣೆ ನೀಡಿದ. "ಆಸ್ಟ್ರೇಲಿಯದ ಮಧ್ಯ ಭಾಗದಲ್ಲಿ 'ಆ್ಯಲಿಸ್ ಸ್ಪ್ರಿಂಗ್ಸ್' ಎಂಬ ಶಹರವಿದೆ. ಅದರ ಹತ್ತಿರವೇ ನಮ್ಮ ಕೃಷಿಕ್ಷೇತ್ರ – ವೊಲ್ಲಾರಾ ಎಂಬ ಹೆಸರಿನದು. ಎರಡು ಸಾವಿರದ ಏಳು ನೂರು ಚದರ ಮೈಲುಗಳ ಭೂಮಿ. ಅದರಲ್ಲಿ ಸುಮಾರು ಹದಿನೈದು ಸಾವಿರ ದನಕರುಗಳ ಪಾಲನೆ, ಪೋಷಣೆಯನ್ನು ಮಾಡುತ್ತೇವೆ. ನೂರಾರು ಕುದುರೆಗಳು ಇವೆ. ನಮ್ಮ ವೊಲ್ಲಾರಾ ಶುದ್ಧ ಒಕ್ಕಲುತನದ ಊರು, ಕುಗ್ರಾಮ. ಆದರೆ ಆ್ಯಲಿಸ್ ಶಹರ ಹಾಗಿಲ್ಲ. ಬಲು ಚೆನ್ನಾಗಿದೆ. ಅಲ್ಲಿ ಎಲ್ಲಾ ಆಧುನಿಕ ಸೌಕರ್ಯಗಳೂ ಸಿಗುತ್ತವೆ."

ಜೀನ್ ಆತನ ವೃತ್ತಾಂತವನ್ನು ಬಹಳೇ ಆಸ್ಥೆಯಿಂದ ಕೇಳುತ್ತಿದ್ದಳು. ಹೀಗೇ ಮಾತನಾಡುತ್ತ ಒಂದು ಗಂಟೆಯು ಮೇಲಾಯಿತು. ತುಂಬಾ ಹೊತ್ತಾಯಿತೆಂದು ಆತ ಹೋಗಲು ಎದ್ದು ನಿಂತ. ಆಕೆಯೂ ಎದ್ದು, "ನೀನು ತಂದುಕೊಟ್ಟ ಔಷಧಿಗಾಗಿ ತುಂಬಾ ಧನ್ಯವಾದಗಳು.

ನಿನ್ನ ಹೆಸರೇನು?" ಕೇಳಿದಳು.

"ಜೋ ಹಾರ್ಮನ್. ನಾನೊಬ್ಬ ಸಾರ್ಜಂಟ್; ರಿಂಗರ್ ಹಾರ್ಮನ್ ಎಂದೂ ಕರೆಯುವದುಂಟು."

"ನನ್ನ ಹೆಸರು ಜೀನ್ ಪೇಜಟ್." ಎಂದು ಹೇಳಿ "ಗುಡ್ ನೈಟ್" ಎಂದು ಆತನ ಕೈ ಕುಲುಕಿದಳು. ಆ ಹಸ್ತಲಾಘವದಲ್ಲಿ ಆಕೆಗೆ ಬಲು ಸಮಾಧಾನವೆನಿಸಿತು.

"ಇನ್ನೇನಾದರೂ ಬೇಕಿದ್ದರೆ ಹೇಳಿ, ನಾಳೆ ತರುತ್ತೇನೆ." ಅವನೆಂದ.

ತಮಗೆ ಅತಿ ಅವಶ್ಯವಾಗಿದ್ದ ಸಾಬೂನು ಬೇಡಿದಳು. ಮರುದಿನ ಸಂಜೆ ಒಬ್ಬ ಸ್ಥಳೀಯ ಹುಡುಗಿ ಸಾಬೂನಿನ ಪೊಟ್ಟಣ ತಂದು ಕೊಟ್ಟಳು. ಅದರ ಮೇಲೆ 'ಮಿಸೆಸ್ ಪೇಜಟ್' ಎಂದು ಬರೆಯಲಾಗಿತ್ತು. ಜೀನ್ ವಿವಾಹಿತೆ, ಮಗುವಿನ ತಾಯಿ, ಎಂದಾತ ತಿಳಿದಿದ್ದ.

ಮಾರನೆಯ ದಿನ ಅವರು ಬರ್ಕ್‌ಫೋರ್ ಎಂಬ ಊರನ್ನು ತಲಪಿದರು. ಅಲ್ಲಿ ಮತ್ತೆ ಜೋ ಹಾರ್ಮನ್ನನ ಟ್ರಕ್ಕುಗಳು ರೈಲು ಸಾಮಗ್ರಿಗಳನ್ನು ಹೇರಿಕೊಂಡು ಬಂದವು. ಸಾಬೂನಿಗೋಸ್ಕರ ಧನ್ಯವಾದ ಹೇಳಿ, ಜೀನ್ ಅದರ ದುಡ್ಡೆಷ್ಟು ಎಂದು ವಿಚಾರಿಸಿದಳು.

"ಓಹ್, ನಾನು ಅದಕ್ಕೆ ದುಡ್ಡು ಕೊಟ್ಟು ಕೊಂಡಿಲ್ಲ. ಒಬ್ಬ ಜಪಾನಿ ಸೈನಿಕನ ಬೂಟು-ಗಳನ್ನು ಕದ್ದು ಅಂಗಡಿಯಲ್ಲಿ ಕೊಟ್ಟು ಅವುಗಳ ಬದಲಾಗಿ ಸಾಬೂನು ಪಡೆದೆ" ಎಂದು ನಕ್ಕ.

ಅನಂತರ ಅವರು ಮತ್ತೆ ಹರಟೆಯಲ್ಲಿ ತೊಡಗಿದರು. ಆತ ತನ್ನ ಕೃಷಿಕ್ಷೇತ್ರ ಅದರ ವ್ಯವಸ್ಥಾಪಕ, ಮತ್ತಿತರ ಕೆಲಸಗಾರರು, ಆಸ್ಟ್ರೇಲಿಯ ಹಾಗೂ ಆ್ಯಲಿಸ್ ನಗರದ ಕುರಿತು ಹೇಳಿದ. ಆಕೆ ಇಂಗ್ಲಂಡಿನಲ್ಲಿ ತಾನಿದ್ದ ಸೌಥಾಂಪ್ಟನ್, ಇತ್ಯಾದಿ ಸಂಗತಿಗಳನ್ನು ಹೇಳಿ-ದಳು. ದೇಶ ಭ್ರಷ್ಟರಾದ ಇಬ್ಬರಲ್ಲಿಯೂ ಹೊರಡುವಾಗ, ಒಂದು ಥರದ ಆತ್ಮೀಯತೆ ಮೂಡಿತು. ಆತ "ನೀವೆಲ್ಲರೂ ಬಹಳ ಸೊರ-ಗಿದ್ದೀರಿ. ಪಾಪ, ನಿಮಗೆ ಒಳ್ಳೆ ಆಹಾರವಿಲ್ಲ. ಮುಂದಿನ ಸಲ ಬರುವಾಗ ನಿಮಗೆ ಕೋಳಿ ಮರಿಗಳನ್ನು ತರುತ್ತೇನೆ" ಎಂದ.

"ನೀನೇನೂ ತೊಂದರೆಪಟ್ಟುಕೊಳ್ಳಬೇಡ. ಅದೂ ಕಳ್ಳತನದ ವ್ಯವಹಾರವೇ?"

"ಹೇಗಾದರೂ ತರುತ್ತೇನೆ. ನೀನೇನೂ ಚಿಂತಿಸಬೇಡ."

ಮರುದಿನ ಸಂಜೆ ಒಬ್ಬ ಸ್ಥಳೀಯ ಬಾಲಕ ಬಂದು ಜೀನ್‌ಳಿಗೆ ಒಂದು ಹಸಿರು ಚೀಲವನ್ನು ಕೊಟ್ಟ. ಅದರಲ್ಲಿ ಐದು ಕಪ್ಪು ಜೀವಂತ ಕೋಳಿಮರಿಗಳಿದ್ದವು.

ಅಂದು ರಾತ್ರಿ ಅವರಿಗೆಲ್ಲ ಮೃಷ್ಟಾನ್ನ ಭೋಜನವಾಯಿತು. ತಮ್ಮ ಕಾವಲುಗಾರರಿಗೂ ಒಂದು ಕೋಳಿಮರಿಯನ್ನು ಅದೇ ಚೀಲದಲ್ಲಿಟ್ಟು ಅಡಿಗೆ ಮಾಡಿಕೊಳ್ಳಲು ಕೊಟ್ಟರು.

ಆ ದಿನ ಕುಆನ್‌ಟಾನ್‌ನಲ್ಲಿ ಭಾರಿ ಗಲಾಟೆ ನಡೆಯಿತು. ಅಲ್ಲಿದ್ದ ಕ್ಯಾ. ಸುಗಾವೋನ ಮನೆಯಲ್ಲಿಯ ವಿಶಿಷ್ಟ ಕಪ್ಪು ಕೋಳಿಮರಿಗಳಲ್ಲಿ ಐದು ಮರಿಗಳು ಕಣ್ಮರೆಯಾಗಿದ್ದವು! ಅವುಗಳಿಗೆ ಕಾಳು ಇಡುವ ಹಸಿರು ಚೀಲ ಸಹ ಮಾಯ-ವಾಗಿತ್ತು. ಕ್ಯಾ. ಸುಗಾವೋ ಬಲು ಸಿಡುಕಿನ ಸ್ವಭಾವದವ. ಮಿಲಿಟರಿ ಪೋಲೀಸರಿಗೆ ಹೇಳಿ, ಕಳವಿನ ಮಾಲು ಸಿಗುವವರೆಗೆ ತನಿಖೆ ಮಾಡಬೇಕೆಂದು ಆಜ್ಞಾಪಿಸಿದ. ಕೂಡಲೆ ಅವರು ಟ್ರಕ್ ಚಾಲಕರನ್ನೇ ಶಂಕಿಸಿದರು. ಅವರ ಶಿಬಿರವನ್ನು ಶೋಧಿಸಿದರು. ಆದರೆ ಅಲ್ಲಿ ಯಾವ ಕುರುಹುಗಳಿರಲಿಲ್ಲ.

ಹಾಗೇ ಶೋಧಿಸುತ್ತ ಹೊರಟರು. ದಾರಿ-ಯಲ್ಲಿ ಮಹಿಳೆಯರ ತಂಡವೊಂದು ಕಂಡಿತು. ಅವರ ಮುಂದುಗಡೆ ನಡೆಯುತ್ತಿದ್ದ ಜಪಾನಿ ಕಾವಲುಗಾರನ ಭುಜದ ಮೇಲೆ ಒಂದು ಹಸಿರು ಚೀಲವಿತ್ತು. ಪೋಲೀಸರು ಗಕ್ಕನೆ ಜೀಪು ನಿಲ್ಲಿಸಿ ವಿಚಾರಣೆ ನಡೆಸಿದರು. ಎರಡು ಗಂಟೆಗಳವರೆಗೆ ಜೀನ್ ತನ್ನದೇ ಹಟ ಹಿಡಿದಳು: ಆಸ್ಟ್ರೇಲಿಯದ ಟ್ರಕ್ ಚಾಲಕ ತನಗೆ ಕೊಟ್ಟ ದುಡ್ಡಿನಿಂದ ತಾನು ಆ ಕೋಳಿಮರಿಗಳನ್ನು ಖರೀದಿಸಿದ್ದೇನೆಂದು ಸಾಧಿಸಿದಳು. ಅವಳ ಮುಖಕ್ಕೆ ಹೊಡೆದರು. ಕಾಲುಗಳಿಗೆ ಒದ್ದರು. ಬರಿಯ ಪಾದಗಳನ್ನು ಬೂಟುಗಾಲಿನಿಂದ ತುಳಿದರು.

ಅಷ್ಟರಲ್ಲಿ ಜೋ ಹಾರ್ಮನ್ನನ ಟ್ರಕ್ಕು ಅಲ್ಲಿಗೆ

ಬಂದು ನಿಂತಿತು. ಹಾರ್ಮನ್ನನನ್ನು ಬಂಧಿಸಿ ಅವಳೆದುರು ತಂದು ನಿಲ್ಲಿಸಿದರು. "ಕಳವು ಮಾಡಿದ್ದು ಈತನೇ ಅಲ್ಲವೇ?" ಎಂದು ಗದರಿಸಿದರು.

ಜೀನ್ ಹತಾಶಳಾಗಿ ಹೇಳಿದಳು. "ಜೋ, ನೀನು ಕೊಟ್ಟ ನಾಲ್ಕು ಡಾಲರುಗಳಿಂದ ಆ ಕೋಳಿಮರಿಗಳನ್ನು ನಾನೇ ಕೊಂಡು ತಂದೆ ಎಂದು ಎಷ್ಟು ಹೇಳಿದರೂ ಇವರು ನಂಬುತ್ತಿಲ್ಲ."

ಆತ ಅವಳ ರಕ್ತಮಯವಾದ ಮುಖ, ಕೈಕಾಲುಗಳನ್ನು ನೋಡಿದ. ಬಳಿಕ, ಪೋಲೀಸರತ್ತ ತಿರುಗಿ, ಸಿಟ್ಟಿನಿಂದೆಂದ, "ಆಕೆಯನ್ನು ಸುಮ್ಮನೆ ಬಿಟ್ಟುಬಿಡಿ ಬದ್ಮಾಷ ಸೂಳೆಮಕ್ಕಳೇ, ಹೌದು, ನಾನೇ ಆ ಕೋಳಿಮರಿಗಳನ್ನು ಕದ್ದು ಅವಳಿಗೆ ಕೊಟ್ಟೆ. ಏನು ಮಾಡುವಿರಿ?"

ನನ್ನ ಕೊಠಡಿಯಲ್ಲಿ ಮಬ್ಬುಗತ್ತಲೆ ಆವರಿಸುತ್ತಲಿತ್ತು. ಹೊರಗಡೆ ಇನ್ನೂ ಮಳೆ ಬೀಳುತ್ತಿತ್ತು. ಆ ಹುಡುಗಿ ತನ್ನ ದುಃಖಸ್ಮರಣೆಗಳಲ್ಲಿ ನಿಮಗ್ನಳಾಗಿ, ಬೆಂಕಿಯ ಜ್ವಾಲೆಗಳನ್ನು ಸುಮ್ಮನೆ ದಿಟ್ಟಿಸುತ್ತಿದ್ದಳು. ತುಸು ಹೊತ್ತಾದ ಮೇಲೆ ಮೆಲ್ಲನೆ ಅಂದಳು. "ಆತನನ್ನು ಶಿಲುಬೆಗೇರಿಸಿದರು. ನಮ್ಮನ್ನೆಲ್ಲ ಕುಆನ್‌ಟಾನ್‌ಗೆ ಕರೆದೊಯ್ದರು. ಅಲ್ಲಿ ಒಂದು ಮರಕ್ಕೆ ಆತನನ್ನು ಕಟ್ಟಿ, ಕೈಗಳನ್ನು ಚಾಚಿ, ಅಂಗೈಗಳಲ್ಲಿ ಮಳೆ ನೆಟ್ಟು, ಸಾಯುವಂತೆ ಥಳಿಸಿದರು. ನಾವು ಅಲ್ಲಿಯೇ ನಿಂತು ಆ ಭೀಕರ ದೃಶ್ಯವನ್ನು ನೋಡಬೇಕೆಂದು ಕಟ್ಟಪ್ಪಣೆ ಮಾಡಿದರು" ಎಂದು ಕೆಲಕ್ಷಣ ತಲೆ ತಗ್ಗಿಸಿ, ಸುಮ್ಮನಾದಳು.

"ನನಗೆ ತುಂಬಾ ವಿಷಾದವೆನಿಸುತ್ತದೆ, ಜೀನ್" ಅಂದೆ.

ತಲೆಯೆತ್ತಿ ಖಿನ್ನಳಾಗಿ ನುಡಿದಳು. "ಏನಿಲ್ಲ; ಅದೆಲ್ಲ ಒಂದು ಯುದ್ಧಘಟನೆಯಂತೆಯೇ. ಅದಾಗಿ ಈಗ ಆರು ವರ್ಷ ಕಳೆದಿದೆ. ಎಲ್ಲಾ ಮುಗಿದು, ಮರೆತು ಹೋದಂತಾಗಿದೆ." ಎಂದು ಮತ್ತೆ ಮುಂದುವರೆದಳು.

ಕುಆನ್‌ಟಾನ್‌ನಲ್ಲಿ ಕೈದಿ ಶಿಬಿರವೂ ಇರಲಿಲ್ಲ. ಅವರು ಜಪಾನೀಯರ ರೋಷಕ್ಕೊಳಗಾಗಿದ್ದರು. "ನೀವು ಬಹಳೇ ನೀಚರು. ನಿಮ್ಮನ್ನು ಕೋಟಾಬಾಹ್ರುವಿಗೆ ಕಳಿಸುತ್ತೇನೆ. ಅಲ್ಲಿಗೆ ನಡೆಯಿರಿ" ಎಂದು ಕ್ಯಾ. ಸುಗಾವೋ ಅವರನ್ನು ಒಬ್ಬ ಕಾವಲುಗಾರನೊಂದಿಗೆ ಅಲ್ಲಿಂದ ಅಟ್ಟಿದ. ಆ ಭೀಷಣ ಸ್ಥಳದಿಂದ ಅವರು ಬೇಗನೆ ಕಾಲು ಕಿತ್ತಬೇಕೆಂದು ಅದೇ ಮಧ್ಯಾಹ್ನ ಅಲ್ಲಿಂದ ಲಗುಬಗೆಯಿಂದ ಹೊರಟರು.

ಕುಆನ್‌ಟಾನ್‌ನಿಂದ ಕೋಟಾಬಾಹ್ರುವಿಗೆ ಎರಡು ನೂರು ಮೈಲುಗಳ ದಾರಿ. ಅಲ್ಲಿಗೆ ತಲುಪಲು ಎರಡು ತಿಂಗಳಾದರೂ ಬೇಕೆಂದು ಜೀನ್ ಎಣಿಸಿದಳು. ಮೊದಲಿನಂತೆಯೇ ಮತ್ತೆ ಪ್ರಯಾಣ ಮುಂದುವರಿಯಿತು. ದಿನವೆಲ್ಲ ನಡೆಯುವುದು, ಸಂಜೆಗೆ ಒಂದು ಹಳ್ಳಿಯಲ್ಲಿ ಉಳಿದುಕೊಳ್ಳುವದು. ಆದರೆ ಈಗ ಕ್ರಮಿಸುತ್ತಿದ್ದ ಈಶಾನ್ಯ ಪ್ರದೇಶ ಆರೋಗ್ಯಕರವಾಗಿತ್ತು. ಅವರು ರೋಗಮುಕ್ತರಾಗಿ, ಪ್ರಕೃತಿ ಸುಧಾರಿಸುತ್ತಿತ್ತು. ಈ ಆರು ತಿಂಗಳ ಪ್ರವಾಸದಲ್ಲಿ ಅವರು ಸಾಕಷ್ಟು ಅನುಭವಿಗಳಾಗಿದ್ದರು. ಎಲ್ಲರ ಮನಸ್ಸಿನಲ್ಲಿಯೂ ಭೀಕರ ದುರ್ಘಟನೆ ಸದಾ ಕೊರೆಯುತ್ತಿತ್ತು. ಆದರೆ ಯಾರೂ ಆ ವಿಷಯ ಮಾತನಾಡುತ್ತಿರಲಿಲ್ಲ. ತಮಗೋಸ್ಕರ ಶಿಲುಬೆ ಶಿಕ್ಷೆಗೆ ಬಲಿಯಾದ ಆ ಆಸ್ಟ್ರೇಲಿಯದ ಯುವಕ ಯೇಸುಕ್ರಿಸ್ತನ ಅವತಾರವೇ ಎಂದೊಬ್ಬ ಮಹಿಳೆಯ ಭಾವನೆಯಾಗಿದ್ದಿತು. ಜೀನಳ ದುಃಖವೂ ಅಪಾರವಾಗಿದ್ದಿತು.

ಒಂದೂವರೆ ತಿಂಗಳ ನಂತರ ಕುಆಲಾ ತೆಲಂಗ್ ಎಂಬ ಹಳ್ಳಿಯನ್ನು ಸೇರಿದರು. ಮುಂದೆ ಇನ್ನೂ ಅರ್ಧದಾರಿ ಹೋಗಬೇಕಿತ್ತು. ಅಲ್ಲಿ ಅವರ ಜಪಾನಿ ಕಾವಲುಗಾರನಿಗೆ ಜ್ವರ ಬಂದು ಹಾಸಿಗೆ ಹಿಡಿದ. ಒಂದೆರಡು ದಿನದಲ್ಲಿ ಆತ ಮರಣ ಹೊಂದಿದ. ಬಳಿಕ ಅವರದು ವಿಚಿತ್ರ ಪರಿಸ್ಥಿತಿಯಾಯಿತು. ಕಾವಲುಗಾರನಿಲ್ಲದೆ ಕೈದಿಗಳು ಮುಂದೆ ಸಾಗುವಂತಿಲ್ಲ. ಸ್ತ್ರೀಯರೆಲ್ಲ ಕೂಡಿ ವಿಚಾರ ಮಾಡಿದರು. ಅದೇ ಊರಲ್ಲಿ ಉಳಿದುಕೊಂಡು ಭತ್ತದ ಗದ್ದೆಗಳಲ್ಲಿ ಕೆಲಸ ಮಾಡಿದರಾಯಿತೆಂದು ಉಪಾಯ ಮಾಡಿದರು. ಅದರಂತೆ ಆ ಗ್ರಾಮದ ಮುಖ್ಯಸ್ಥನಾದ ಮಾತ ಅಮೀನ ಎಂಬಾತನೆದುರು ಜೀನ್ ತನ್ನ ಕಥೆಯೆಲ್ಲವನ್ನು ತೋಡಿಕೊಂಡು, ತಮಗೆ ಅಲ್ಲಿ ಇರಲು ಅನುಮತಿ ನೀಡಬೇಕೆಂದು ದೈನ್ಯದಿಂದ ಬೇಡಿಕೊಂಡಳು.

ಮೊದಲು ಆತ ಆ ಪ್ರಸ್ತಾಪಕ್ಕೆ ಒಪ್ಪಲಿಲ್ಲ. ಆಕೆ ಆತನ ಮನವೊಲಿಸಲು ಪ್ರಯತ್ನಿಸಿದಳು. "ಸ್ತ್ರೀಯರಿಗೆ ದಯೆ ತೋರಿ, ಸಹಾಯ ನೀಡಿದರೆ ಭಗವಂತ ಸಂತುಷ್ಟನಾಗುವ" ಎಂದು ತಾನು ಕೇಳಿದ ಕುರಾನಿನಲ್ಲಿನ ಉಲ್ಲೇಖವನ್ನು ಎತ್ತಿ ಹೇಳಿದಳು. ಅವಳ ಬುದ್ಧಿವಂತಿಕೆಗೆ ಮೆಚ್ಚಿ, ಆತ ಊರಿನ ಪಂಚಾಯತಿ ಸೇರಿಸಿ, ವಿಚಾರ ಮಾಡಿದ. ಕಟ್ಟಕಡೆಗೆ ಅವರಿಗೆ ಅಲ್ಲೇ ಉಳಿಯಲು ಅನುಮತಿ ದೊರಕಿತು.

ಮರುದಿನ ಜೀನ್ ಮತ್ತು ಸಂಗಡಿಗರು ಹಳ್ಳಿಯ ಹೆಣ್ಣುಮಕ್ಕಳೊಂದಿಗೆ ಭತ್ತದಗದ್ದೆಯ ಕೆಲಸಕ್ಕೆ ಹೋದರು, ಕೆಸರಿನಲ್ಲಿ ನಿಂತು ಹುಲ್ಲಿನ ಕಸಕಡ್ಡಿ ಕೀಳುವುದು, ಸಸಿಗಳನ್ನು ನೆಡುವುದು, ನೀರು ಬಿಡುವುದು, ಪೈರು ಕೊಯ್ಯುವುದು, ಮುಂತಾದ ಕೃಷಿಕಾರ್ಯ ಮಾಡಹತ್ತಿದರು. ಆಗ ಅವರಲ್ಲಿ ಕ್ಷೀಣರಾದವರೆಲ್ಲ ಅಸುನೀಗಿ, ಕೇವಲ ಗಟ್ಟಿಗರಾದ ಏಳು ಜನ ಸ್ತ್ರೀಯರು, ಹತ್ತು ಮಕ್ಕಳು ಬದುಕಿ ಉಳಿದಿದ್ದರು.

"ಹೀಗೆ ಮೂರು ವರ್ಷ ಕಳೆದವು" ಜೀನ್ ವಿವರಿಸಿದಳು. "ಅಲ್ಲಿಯ ಹೆಂಗಸರು ತುಂಬಾ ಸಹೃದಯಿಗಳಾಗಿದ್ದರು. ಫಾತಿಮಾ, ರೆಹಾನಾ ಎಂಬ ಹುಡುಗಿಯರಂತೂ ನನಗೆ ಬಲು ಆತ್ಮೀಯ ರಾಗಿದ್ದರು. ನಮಗೆಲ್ಲಾ ಕೆಲಸವನ್ನು ತೋರಿಸಿ-ಕೊಡುತ್ತಿದ್ದರು. ಅವರೆಲ್ಲ ನಮಗೆ ಆಶ್ರಯ ನೀಡದಿದ್ದರೆ ಸಾವು ಸತ್ತುಹೋಗುತ್ತಿದ್ದೆವೇನೊ. ಅದಕ್ಕೆ ನಾನು ಅವರ ಉಪಕಾರ ತೀರಿಸ ಬೇಕೆನ್ನುತ್ತೇನೆ. ಆ ಊರಿನಲ್ಲಿ ಸಿಹಿನೀರಿನ ಬಾವಿ ಇರಲಿಲ್ಲ. ಕುಡಿಯುವ ನೀರಿನ ಝರಿ ಒಂದು ಮೈಲು ದೂರವಿದೆ. ದಿನಾಲು ಮುಂಜಾನೆ, ಸಂಜೆಗೆ ಹೋಗಿ ಬಿಂದಿಗೆಯಲ್ಲಿ ನೀರು ಹೊತ್ತು ತರಬೇಕು. ಊರಿನಲ್ಲಿಯೇ ಬಾವಿ ಇದ್ದರೆ, ನಿತ್ಯ ಅವರಿಗೆ ನಾಲ್ಕು ಮೈಲುಗಳ ಓಡಾಟ ತಪ್ಪು-ವದು. ಆದ ಕಾರಣ ನಾನಲ್ಲಿಗೆ ಹೋಗಿ ಈ ಬಾವಿ ತೋಡಿಸಬೇಕೆನ್ನುತ್ತೇನೆ. ನನ್ನ ಮನಸ್ಸಿನ ಸಮಾಧಾನಕ್ಕಾಗಿ... ನಿಮಗೆ ಇದೆಲ್ಲ ಮೂರ್ಖ-ತನ ಅನಿಸುತ್ತದಲ್ಲವೇ?"

"ಇಲ್ಲ; ಹಾಗೇನನಿಸುವದಿಲ್ಲ. ಆದರೆ ಅಷ್ಟು ದೂರ ಪ್ರವಾಸ ಮಾಡಿಬರುವದಕ್ಕೆ ನಿನ್ನ ಆದಾಯದಲ್ಲಿ ದೊಡ್ಡ ಕಡಿತವಾಗುವದೆಂಬ ಚಿಂತೆ."

"ನನಗೆ ಗೊತ್ತು. ದುಡ್ಡಿನ ಕೊರತೆಯಾದರೆ ಸಿಂಗಾಪೂರದಲ್ಲಿ ಏನಾದರೂ ಉದ್ಯೋಗ ಮಾಡುವೆ."

"ನೀನು ಮಲಯಾದಲ್ಲಿಯೇ ಏಕೆ ನೆಲೆಸಲಿಲ್ಲ? ಅಲ್ಲಿ ಚೆನ್ನಾಗಿ ಹೊಂದಿಕೊಂಡಿದ್ದೆಯಲ್ಲವೇ?" ಕುತೂಹಲದಿಂದ ಕೇಳಿದೆ.

"ಆ ಮೂರು ವರ್ಷಗಳಲ್ಲಿ ಇಂಗ್ಲಂಡಿಗೆ ಮರಳಿ ಬರಲು ಮನಸ್ಸು ಹಾತೊರೆಯು ತ್ತಿತ್ತು. ಯುದ್ಧ ಮುಗಿದ ಕೂಡಲೇ ನಮ್ಮನ್ನು ಕೋಟಾಬಾಹ್ರುವಿಗೆ ಟ್ರಕ್ಕಿನಲ್ಲಿ ಕರೆದೊಯ್ದರು. ಅಲ್ಲಿಂದ ಪ್ಲೇನಿನಲ್ಲಿ ಸಿಂಗಾಪೂರಕ್ಕೆ ಕಳಿಸಿದರು. ಅಲ್ಲಿ ನನಗೆ ಬಿಲ್ ಹೊಲ್ಲಂಡನ ಭೇಟಿಯಾಯಿತು. ಆತನ ಮಡದಿ ಮಕ್ಕಳು ತೀರಿಕೊಂಡ ವಿಷಾದದ ವಾರ್ತೆ ಹೇಳಿ ಉಳಿದೊಬ್ಬ ಮಗು ರೊಬಿನ್ನನನ್ನು ಆತನಿಗೆ ಒಪ್ಪಿಸಿದೆ. ನಾಲ್ಕು ವರ್ಷದ ಆ ಮಗು ನನ್ನನ್ನೇ ತನ್ನ ತಾಯಿ ಎಂದು ತಿಳಿದಿತ್ತು. ಬಿಲ್ ಹೊಲ್ಲಂಡ ಸಹ ತನ್ನನ್ನು ಮದುವೆಯಾಗೆಂದು ನನ್ನೊಂದಿಗೆ ಕೇಳಿಕೊಂಡ. ಆದರೆ ನನಗದು ಅಸಾಧ್ಯವೆನಿಸಿತು...ಇಲ್ಲಿ ಮರಳಿದ ನಂತರ ನನ್ನ ತಾಯಿ ತೀರಿಕೊಂಡ ವಾರ್ತೆ ತಿಳಿಯಿತು. ನನ್ನ ಸೋದರ ಡೊನಾಲ್ಡ್ ಯುದ್ಧ ಕೈದಿಯಾಗಿ ಬರ್ಮಾ – ಸಯಾಮ್ ರೈಲು ಮಾರ್ಗದ ಕೆಲಸ ನಡೆಯುತ್ತಿದ್ದಾಗ ಮೃತಪಟ್ಟಿದ್ದನೆಂದು ಸಿಂಗಾಪುರದಲ್ಲಿಯೇ ತಿಳಿದಿತ್ತು. ನಂತರ ಈ ಉದ್ಯೋಗಕ್ಕೆ ಸೇರಿದೆ. ಇಷ್ಟು ದಿನ ಸುಖವಾಗಿದ್ದೆ, ಅನ್ನಬಹುದು."

"ಈಗ ನೀನು ಮಲಯಾಕ್ಕೆ ಹೋಗಲೇ ಬೇಕೇ?"

"ಹೌದು. ಅಂದರೆ ಮಾತ್ರ ನನ್ನ ಮನಕ್ಕೆ ತೃಪ್ತಿ. ನನಗೆ ಬಂದ ಹಣವನ್ನು ಮುಂದೆ ಮುಕ್ತ ಮನಸ್ಸಿನಿಂದ ಉಪಭೋಗ ಮಾಡ ಬಹುದು."

ಅವಳ ದೃಢ ನಿರ್ಧಾರವನ್ನು ಗಮನಿಸಿ, ನಾನು ಅವಳಿಗೆ ಅಡ್ಡಬರಲಿಲ್ಲ. ಕೆಲ ದಿನಗಳ ಬಳಿಕ ಆಕೆ ತನ್ನ ಉದ್ಯೋಗಕ್ಕೆ ರಾಜೀನಾಮೆ

ಕೊಟ್ಟಳು. ಒಂದೂವರೆ ತಿಂಗಳ ನಂತರ, ಜೀನ್ ಮಲಯಾಕ್ಕೆ ಹೊರಡುವ ಹಡಗವನ್ನು ಹತ್ತಿದಳು. ಬೇಗನೆ ತಿರುಗಿ ಬರಬೇಕೆಂದು ಹೇಳಿ, ಭಾರವಾದ ಹೃದಯದಿಂದ ಅವಳನ್ನೂ ಬೀಳ್ಕೊಟ್ಟೆ.

೩

ಮಲಯಾ ಮುಟ್ಟಿದ ನಂತರ ಜೀನ್ ನನಗೆ ಪತ್ರ ಬರೆದು ಅಲ್ಲಿಯ ಸಮಾಚಾರವೆಲ್ಲವನ್ನೂ ತಿಳಿಸಿದಳು. ವಿಮಾನದಲ್ಲಿ ಸಿಂಗಾಪೂರದಿಂದ ಕೋಟಾಬಾಹ್ರುವಿಗೆ, ಅಲ್ಲಿಂದ ಜೀಪಿನಲ್ಲಿ ಕು ಆಲಾ ತೆಲಂಗ್ ತಲುಪಿದಾಗ ಕತ್ತಲೆಯಾಗಿತ್ತು. ಗ್ರಾಮದ ಮುಖ್ಯಸ್ಥ ಮಾತ ಅಮೀನನ ಮನೆಗೆ ಹೋಗಿ, ಆತನಿಗೆ ಕೈ ಜೋಡಿಸಿ ವಂದಿಸಿ, ದೇಶಿಯ ಭಾಷೆಯಲ್ಲಿ ನುಡಿದಳು: "ನಾನು ತಿರುಗಿ ಬಂದಿದ್ದೇನೆ, ಮಾತ ಅಮೀನ. ಆಂಗ್ಲ ಸ್ತ್ರೀಯರು ತಮ್ಮ ಗರಜು ತೀರಿದಾಗ ನಿಮ್ಮನ್ನು ಮರೆತುಬಿಟ್ಟಿದ್ದೇವೆಂದು ತಿಳಿಯಬೇಡಿ."

"ನೀವು ಹೊರಟು ಹೋದ ಮೇಲೆ ನಾವೂ ನಿಮ್ಮನ್ನು ಬಹಳೇ ನೆನೆಸಿ, ನಿಮ್ಮ ಕುರಿತು ಮಾತನಾಡಿದ್ದೇವೆ" ಅವನೆಂದ.

ಊರಿನ ಜನರೆಲ್ಲ ಬಂದು ಅವಳ ಸುತ್ತ ನೆರೆದರು. ಅವಳ ಸ್ನೇಹಿತೆ ಫಾತಿಮಾ ಈಗ ಮದುವೆಯಾಗಿ, ಎರಡು ಮಕ್ಕಳ ತಾಯಿಯಾಗಿದ್ದಳು. ಜೀನಳನ್ನು ಸಂತೋಷದಿಂದ ಸ್ವಾಗತಿಸಿ, ತನ್ನ ಪತಿಯ ಪರಿಚಯವನ್ನು ಮಾಡಿಸಿದಳು. ರೆಹಾನಾ, ಸಫೀರಾ, ವೃದ್ಧೆ ಜುಬೇದಾ–ಎಲ್ಲರನ್ನೂ ಕಂಡಳು. ಅಂದು ರಾತ್ರಿ ಫಾತಿಮಾನ ಮನೆಯಲ್ಲಿಯೇ ಊಟ ಮಾಡಿ, ಚಾಪೆಯ ಮೇಲೆ ನಿದ್ರೆ ಹೋದಳು.

ಮರುದಿನ ಮುಂಜಾನೆ ಅಡಿಗೆ ಮನೆಯಲ್ಲಿ ಕುಳಿತು ಹೆಣ್ಣು ಮಕ್ಕಳ ಜೊತೆ ಹರಟುತ್ತಿದ್ದಳು. ಇಂಗ್ಲಂಡಿನಲ್ಲಿ ತನ್ನ ಉದ್ಯೋಗ, ತನಗೆ ದೊರೆತ ಆಕಸ್ಮಿಕ ಲಾಭದ ವಿಷಯವನ್ನು ತಿಳಿಸಿದಳು. ತಾನು ಅವರ ಸೌಹಾರ್ದತೆಯನ್ನು ಸದಾ ಸ್ಮರಿಸುತ್ತಿದ್ದೆನೆಂದೂ, ಅದಕ್ಕೆ ಅವರಿಗೊಂದು ಕೃತಜ್ಞತೆಯ ಕಾಣಿಕೆಯನ್ನು ಕೊಡಲು ಬಂದಿರುವೆನೆಂದೂ ಹೇಳಿದಳು. ಈ ಕಾಣಿಕೆ ಕೇವಲ ಹೆಣ್ಣು ಮಕ್ಕಳಿಗಾಗಿ; ಒಬ್ಬ ಸ್ತ್ರೀಯಿಂದ ಅವರೆಲ್ಲ ಸ್ತ್ರೀಯರಿಗೊಂದು ಉಡುಗೊರೆ, ಎಂದು ಹೇಳಿದಳು. ಅಲ್ಲಿ ನೆರೆದ ಹೆಂಗಸರು ಹರ್ಷದಿಂದ ಹಿಗ್ಗಿ, ಉತ್ಸಾಹದಿಂದ ಗುಜುಗುಜು ಮಾತನಾಡಿದರು.

ಜೀನ್ ಮುಂದುವರೆದಳು: "ಝರಿಯಿಂದ ನೀರು ತರುವದು ನಿಮಗೆಷ್ಟು ಕಷ್ಟವೆಂದು ನಾನು ಬಲ್ಲೆ. ಅದಕ್ಕೇ ಈ ಊರಿನ ಮಧ್ಯದಲ್ಲಿ ಒಂದು ಬಾವಿಯನ್ನು ತೋಡಿಸಬೇಕೆಂದು ನನ್ನ ವಿಚಾರ. ನಿಮಗೆ ಬೇಕಾದಾಗ, ಮನೆಯಿಂದ ಹತ್ತು ಹೆಜ್ಜೆ ನಡೆದು ಬಂದರೆ ಸಿಹಿ ನೀರು ಸಿಗುವದು. ಸುತ್ತಲೂ ನೀವು ಕುಳಿತುಕೊಳ್ಳಲು ನುಣುಪಾದ ಹಾಸುಗಲ್ಲಿನ ಕಟ್ಟೆ. ಹತ್ತಿರದಲ್ಲೇ ಬಟ್ಟೆ ಒಗೆಯಲು ಒಂದು ಕಲ್ಲು, ಸಿಮೆಂಟಿನ ಚಿಕ್ಕ ಮನೆ. ಗಂಡಸರಿಂದ ಏಕಾಂತವಾಗಿರಲು ಸುತ್ತಲೂ ಒಂದು ಎತ್ತರದ ಗೋಡೆ. ಇದಕ್ಕೆಲ್ಲ ನಿಮ್ಮ ಅಭಿಪ್ರಾಯ, ಸೂಕ್ತ ಸಲಹೆಗಳನ್ನು ನೀಡಬೇಕು. ಇದು ಸ್ತ್ರೀಯರಿಗಾಗಿಯೇ ಮಾಡಿದ ಒಂದು ಯೋಜನೆ. ಅವರ ಮಾತಿಗೆ ಪುರುಷರು ಒಪ್ಪಬೇಕು."

ಎಲ್ಲರೂ ಹರ್ಷಪುಲಕಿತರಾದರು. ಗುಂಪಿನಲ್ಲಿ ಗುಜುಗುಜು ಹೆಚ್ಚಿತು. ಆದರೆ ಗಂಡಸರು ಈ ಹೊಸ ಯೋಜನೆಗೆ ಒಪ್ಪುವರೋ, ಎಂದು ಸಂದೇಹಪಟ್ಟರು. ಅದಕ್ಕೆ ಅಂದು ಸಂಜೆ ಜೀನ್ ಮತ್ತೆ ಮುಖ್ಯಸ್ಥನನ್ನು ಭೇಟಿಯಾಗಿ ಆತನೊಡನೆ ಈ ವಿಷಯವನ್ನು ಚರ್ಚಿಸಿದಳು. ಆತ ಮತ್ತೆ ಅನುಮಾನಿಸಿದ. "ಹಿಂದಿನ ಕಾಲದ ಹೆಂಗಸರೆಲ್ಲ ಝರಿಯಿಂದಲೇ ನೀರು ತರುತ್ತಿದ್ದರು. ಇದೆಲ್ಲ ಸೌಕರ್ಯ ಸಿಕ್ಕರೆ, ಈಗಿನವರಿಗೆ ಕಣ್ಣು ನೆತ್ತಿಯ ಮೇಲೆ ಏರುತ್ತವೆ" ಅಂದ.

"ಈ ಬಾವಿಯ ಸೌಕರ್ಯವಿದ್ದರೆ, ನೀವೆಲ್ಲ ಪುರುಷರ ಸೇವೆ ಮಾಡಲು ಅವರಿಗೆ ಹೆಚ್ಚು ಸಮಯ ಸಿಗಬಹುದಲ್ಲವೆ?" ಜೀನ್ ವಾದಿಸಿದಳು.

"ಸ್ತ್ರೀ–ಪುರುಷರ ಜೀವನವನ್ನು ದೇವರು ಕ್ರಮಬದ್ಧವಾಗಿಯೆ ರೂಪಿಸಿದ್ದಾನೆ."

"ಆದರೆ ಹೆಣ್ಣು ಮಕ್ಕಳಿಗೆ ದಯೆ ತೋರಿದರೆ, ಭಗವಂತ ಸಂತುಷ್ಟನಾಗುವನೆಂದು ಕುರಾನಿನಲ್ಲಿ

ಬರೆದಿಲ್ಲವೆ? ಅವರಿಗೆ ಈ ಬಾವಿಯನ್ನು ಕರುಣಿಸಬೇಕು." ಎಂದಳು ನಗುತ್ತ.

ಆತ ಜೋರಾಗಿ ನಕ್ಕ. "ನೀನು ಬಲು ಜಾಣೆ. ಸರಿ; ಊರಿನ ಪಂಚಾಯತಿಯೊಡನೆ ಈ ವಿಷಯವನ್ನು ಚರ್ಚಿಸುವೆ" ಎಂದ.

ಎರಡು ದಿನ ಗಂಡಸರೆಲ್ಲ ಸಭೆ ಸೇರಿ ಚರ್ಚಿಸಿ ಕೊನೆಗೆ ಊರಿನ ಮಧ್ಯೆ ಬಾವಿಯನ್ನು ತೋಡಲು ಸಮ್ಮತಿಸಿದರು. ಬಾವಿ ತೋಡುವದು ಒಂದು ಕುಶಲ ಕಸಬು; ಅದರಲ್ಲಿ ನುರಿತವರು ಕುಆನ್‌ಟಾನಿನ ಹತ್ತಿರದಲ್ಲಿರುವ ಸುಲೆಮಾನ್ ಎಂಬ ವೃದ್ಧ ಮತ್ತು ಆತನ ಇಬ್ಬರು ಮಕ್ಕಳು, ಯಾಕೂಬ್ ಹಾಗೂ ಹುಸೇನ್. ಈ ಕಾರ್ಯಕ್ಕಾಗಿ ಅವರನ್ನು ಅಲ್ಲಿಂದ ಕರೆಸಲಾಯಿತು. ಸಿಮೆಂಟು, ಕಲ್ಲು ಹೀಗೆ ಎಲ್ಲ ಸಾಮಗ್ರಿ ಸಿದ್ಧವಾಯಿತು.

ಮೂರು ವಾರಗಳ ನಂತರ ಕೆಲಸ ಆರಂಭವಾಯಿತು. ಕೆಲಸಗಾರರು ನಸುಕಿನಿಂದ ಮುಚ್ಚಂಜೆಯವರೆಗೆ ದುಡಿಯುತ್ತಿದ್ದರು. ವೃದ್ಧ ಸುಲೆಮಾನ್ ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲ ಓಡಾಡುತ್ತಿದ್ದರಿಂದ, ಬಹಳಷ್ಟು ಸುದ್ದಿ ತಿಳಿಯುತ್ತಿತ್ತು. ಒಂದು ಮಧ್ಯಾಹ್ನ ಜೇನ್ ಆತನೊಡನೆ ಮಾತಿನಲ್ಲಿ ತೊಡಗಿದಾಗ, ಕ್ಯಾ. ಸುಗಾವೋನ ವಿಷಯ ಬಂದಿತು. "ಆತ ದುಷ್ಟ, ಅನೇಕರಿಗೆ ಚಿತ್ರಹಿಂಸೆ ನೀಡಿದ" ಎಂದ ಸುಲೇಮಾನ. "ಹೌದು; ಹಾಗೂ ಅಂಥದೊಂದು ದುರ್ಘಟನೆಯನ್ನು ವೀಕ್ಷಿಸಿದೆ. ನಾವು ಕೈದಿಗಳಾಗಿ ಉಪವಾಸ, ಅನಾರೋಗ್ಯದಿಂದ ಬಳಲುತ್ತಿದ್ದೆವು. ಆಗ ಮತ್ತೊಬ್ಬ ಬಿಳಿಯ ಕೈದಿಯಾಗಿದ್ದವ ನಮಗೆ ಸಹಾಯ ಮಾಡಿದ. ಅದಕ್ಕೆ ಆತನಿಗೆ ಶಿಲುಬೆ ಶಿಕ್ಷೆ ವಿಧಿಸಿದ" ಎಂದಳು ಜೇನ್.

"ಹೌದು; ನನಗದು ನೆನಪಿದೆ ಆತ ಕುಆನ್‌ಟಾನಿನಲ್ಲಿಯ ಆಸ್ಪತ್ರೆಯಲ್ಲಿದ್ದ." ಜೇನ್ ಆಶ್ಚರ್ಯದಿಂದ ಆತನ ಮುಖವನ್ನು ದಿಟ್ಟಿಸಿದಳು. "ಅಜ್ಜ, ಆತ ಆಸ್ಪತ್ರೆಯಲ್ಲಿದ್ದದ್ದು ಯಾವಾಗ? ಆತ ಅಂದೇ ಸತ್ತು ಹೋದನಲ್ಲವೆ?"

"ನನ್ನ ಮಗನಿಗೆಲ್ಲ ಗೊತ್ತಿದೆ" ಎಂದು ಬಾವಿಯ ತಳದಲ್ಲಿ ಕೆಲಸ ಮಾಡುತ್ತಿದ್ದ ಯಾಕೂಬನನ್ನು ಕೇಳಿದ—"ಶಿಲುಬೆ ಶಿಕ್ಷೆಗೆ ಗುರಿಯಾದ ಬಿಳಿಯ ಸೈನಿಕ ಬದುಕಿದನೋ, ಸತ್ತನೋ?"

"ಆತ ಬದುಕಿದ" ಯಾಕೂಬ ಕೆಳಗಿನಿಂದ ಉತ್ತರಿಸಿದ. ಬಳಿಕ ಮೇಲೆ ಹತ್ತಿ ಬಂದು ಅದರ ವೃತ್ತಾಂತವನ್ನು ವಿವರಿಸಿದ: "ಅಂದು ಸಂಜೆ, ಶಿಲುಬೆ ಶಿಕ್ಷೆ ಪಡೆದವನು ಇನ್ನೂ ಜೀವಂತವಿರುವನೆಂದು ಕ್ಯಾ. ಸುಗಾವೋನಿಗೆ ಸೈನಿಕನೊಬ್ಬ ಬಂದು ತಿಳಿಸಿದ. ಈ ವಿಚಿತ್ರವನ್ನು ನೋಡಲು ಕ್ಯಾ. ಸುಗಾವೋ ಸ್ವತಃ ಅಲ್ಲಿಗೆ ಹೋದ. ಮರದ ಮೇಲೆ ದೇಹ ಇನ್ನೂ ನೇತಾಡುತ್ತಿತ್ತು. ಬೆನ್ನು ಕೈಕಾಲುಗಳ ಮೇಲಿನ ರಕ್ತವೆಲ್ಲ ಹರಿದು ಕೆಳಗೆ ನೆಲದ ಮೇಲೆ ಬಿದ್ದು ಕಪ್ಪಾಗಿ ಹೆಪ್ಪುಗಟ್ಟಿತ್ತು. ಸುತ್ತೆಲ್ಲ ನೊಣಗಳು ಮುಕುರಿದ್ದವು. ಆದರೂ ಆತ ನಿಜಕ್ಕೂ ಇನ್ನೂ ಜೀವಂತವಿದ್ದ! ಕ್ಯಾ. ಸುಗಾವೋ ಸಮೀಪಿಸಿದೊಡನೆ ಕಣ್ಣು ತೆರೆದು ಅವನನ್ನು ಗುರುತಿಸಿದಂತೆನಿಸಿತು. ಅದಕ್ಕೆ ಕ್ಯಾ. ಸುಗಾವೋ ಕೇಳಿದ: "ಸಾಯುವ ಮುಂಚೆ ನಿನಗೆ ನಾನೇನಾದರೂ ಕೊಡಬಹುದೇ?"

"ಬದ್ಮಾಶ್ ಸೂಳೆಯಮಗನೆ, ನನಗೆ ನಿನ್ನದೊಂದು ಕಪ್ಪು ಕೋಳಿ ಮರಿ, ಒಂದು ಶೀಷೆ ಬೀರ್ ಬೇಕು" ಎಂದಾತ ಸ್ಪಷ್ಟವಾಗಿ ನುಡಿದ.

ಸಾಯುತ್ತಿರುವಾತನ ಬೇಡಿಕೆಯನ್ನು ಪೂರೈಸುವದು ತನ್ನ ಧರ್ಮ, ಕರ್ತವ್ಯಕರ್ಮ ಎಂದು ಕ್ಯಾ. ಸುಗಾವೋನ ನಂಬಿಕೆ. ತನ್ನ ಸೇವಕನಿಗೆ ಒಂದು ಶೀಷೆ ಬೀರ್ ತರಹೇಳಿದ. ಆದರೆ ಅಂದು ಮನೆಯಲ್ಲಿ ಬೀರ್ ತೀರಿತ್ತು. ಸಮಗ್ರ ಕುಆನ್‌ಟಾನ್ ಊರಲ್ಲಿ ಎಲ್ಲೆಲ್ಲಿ ಹುಡುಕಿದರೂ ಒಂದು ಶೀಷೆ ಬೀರ್ ಸಿಗಲಿಲ್ಲ. ಅದಕ್ಕೆ ಉಳಿದಿದ್ದ ತನ್ನದೊಂದೇ ಕಪ್ಪು ಕೋಳಿ ಮರಿಯನ್ನು ಬಲಿಕೊಡುವದೂ ವ್ಯರ್ಥವೆನಿಸಿತು. ಹಾಗಾಗಿ ಮೃತ್ಯುಮುಖದಲ್ಲಿರುವ ಮಾನವನ ಅಭೀಷ್ಟಪೂರ್ತಿ ಮಾಡುವದು ಅಶಕ್ಯ; ಕಾರಣ ಆತನ ಮರಣವನ್ನು ನಿವಾರಿಸುವದೇ ಲೇಸು, ಎಂದು ಯೋಚಿಸಿದ ಕ್ಯಾ. ಸುಗಾವೋ ಒಬ್ಬ ಸೈನಿಕನನ್ನು ಕರೆದು ಆತನಿಗೆ ಸ್ಟ್ರೆಚರ್ ತೆಗೆದುಕೊಂಡು ಹೋಗಿ, ಮರದಿಂದ ಆ ಘಾಸಿಗೊಂಡ ದೇಹ

ವನ್ನು ಮೆಲ್ಲನೆ ಕೆಳಗಿಳಿಸಿ ಆಸ್ಪತ್ರೆಗೆ ಸಾಗಿಸಲು ಆದೇಶಿಸಿದ.

ಹಾರ್ಮನ್ ಬದುಕಿದನೆಂಬ ವಾರ್ತೆಯನ್ನು ಕೇಳಿದ ಕೂಡಲೆ ಜೀನಳಿಗೆ ಮುಚ್ಚಿದ ಬಾಗಿಲು ತೆರೆದಂತಾಯಿತು. ಸುಮ್ಮನೆ ಅಲ್ಲಿಂದ ಎದ್ದು ಹೋಗಿ, ಮರದ ನೆರಳಲ್ಲಿ ಕುಳಿತು ಈ ನಂಬ ಲಸಾಧ್ಯವಾದ ಶುಭ ಸಮಾಚಾರವನ್ನು ಕುರಿತು ಯೋಚಿಸಿದಳು. ಕಳೆದ ಆರು ವರ್ಷ ತಾನು ನಡೆಯುತ್ತಿದ್ದ ಕತ್ತಲು ಕವಿದ ಸುರಂಗ ಮಾರ್ಗ ದಿಂದ ಒಮ್ಮೆಲೇ ಹೊರಬಿದ್ದಂತೆನಿಸಿತು. ಆ ಹೊಂಬಣ್ಣದ ಸೂರ್ಯಕಿರಣಗಳು, ಆ ನೀಲಾಕಾಶ, ಆ ಶುಭ್ರ ಸಮುದ್ರತೀರ—ಎಲ್ಲವನ್ನೂ ನೋಡುವದು ಅತೀವ ಉತ್ಕರ್ಷವೆ ಅನಿಸಿತು.

ನಂತರ ಜೋ ಹಾರ್ಮನ್ ಎಲ್ಲಿರುವನೆಂದು ಶೋಧ ನಡೆಸಿದಳು. ಅವನಿದ್ದ ಆಸ್ಪತ್ರೆಯಲ್ಲಿ ವಿಚಾರಿಸಿದಳು. ಅಲ್ಲಿಯೊಬ್ಬ ನರ್ಸ್ ಆತನ ಸಮಾಚಾರವನ್ನು ಸ್ವಲ್ಪ ಹೇಳಿದಳು. ಆಸ್ಪತ್ರೆಗೆ ತಂದಾಗ ಆತನ ಅವಸ್ಥೆ ಅತೀವ ಶೋಚನೀಯ ವಾಗಿತ್ತು. ವಿಸ್ಮೃತಿಯಲ್ಲಿ ಸದಾ ಏನೋ ಬಡ ಬಡಿಸುತ್ತಿದ್ದ. ಮೂರು-ನಾಲ್ಕು ತಿಂಗಳಾದ

ಬಳಿಕ ಗಾಯಗಳು ಮಾಯುತ್ತ, ಪ್ರಕೃತಿ ಸುಧಾರಿಸಹತ್ತಿತ್ತು. ಆ ವೇಳೆ ಜೇನಳ ಬಗ್ಗೆ ಬಹಳ ವಿಚಾರಿಸುತ್ತಿದ್ದನಂತೆ. ಆತನ ಗಾಯಗಳೆಲ್ಲ ಪೂರ್ತಿ ವಾಸಿಯಾದ ಮೇಲೆ ಆತನನ್ನು ಸಿಂಗಾಪೂರದ ಕೈದಿ ಶಿಬಿರಕ್ಕೆ ಕಳಿಸಿದ್ದರು. ತದನಂತರ ಅವನೆಲ್ಲಿಗೆ ಹೋದ, ಸದ್ಯ ಎಲ್ಲಿರುವನೆಂದು ಯಾರಿಗೂ ಗೊತ್ತಿರಲಿಲ್ಲ.

ಜೇನ್ ನನಗೊಂದು ಸುದೀರ್ಘ ಪತ್ರ ಬರೆದು ಇದೆಲ್ಲ ಸಂಗತಿಯನ್ನು ತಿಳಿಸಿದಳು. ಬಾವಿ ತೋಡುವ ಕಾರ್ಯಕ್ರಮ ಯಶಸ್ವಿಯಾಗಿ ಮುಕ್ತಾಯಗೊಂಡಿತ್ತು. ಇನ್ನು ಆಕೆ ಹಾರ್ಮನ್ನನನ್ನು ನೋಡಲೇಬೇಕಾಗಿತ್ತು. ಆತನನ್ನು ನೋಡಲು ಆಕೆ ಮಲಯಾದಿಂದ ಆಸ್ಟ್ರೇಲಿಯಕ್ಕೆ ಪ್ರಯಾಣ ಬೆಳೆಸಿದಳು.

*

ಒಂದು ವಾರದ ನಂತರ ನನ್ನ ಕಚೇರಿಯಲ್ಲಿ ಹಾರ್ಮನ್ ಎಂಬ ಹೊಸಬ ವ್ಯಕ್ತಿ ನನ್ನ ಭೇಟಿಯಾಗಲು ಬಂದಿರುವನೆಂದು ನನ್ನ ಗುಮಾಸ್ತ ಬಂದು ಹೇಳಿದಾಗ ನನಗೆ ಆಶ್ಚರ್ಯವೂ ಕೌತುಕವೂ ಆಯಿತು.

ಜೋ ಹಾರ್ಮನ್ ನನ್ನ ಕೋಣೆಯಲ್ಲಿ ಪ್ರವೇಶಿಸುತ್ತಿದ್ದಂತೆ ಆತನನ್ನು ಲಕ್ಷ್ಯ ಕೊಟ್ಟು ನೋಡಿದೆ. ತೆಳ್ಳಗೆ, ಎತ್ತರ ನಿಲುವಿನ, ಸುಮಾರು ಮೂವತ್ತೈದರ ತರುಣ. ತಿಳಿವರ್ಣದ ಕೂದಲು, ತೀಕ್ಷ್ಣ ನೀಲಿ ಕಣ್ಣುಗಳು. ಮುಖ ಕೆಂಪು ಬಣ್ಣ ತಾಳಿದ್ದರೂ, ಚರ್ಮ ನಿಚ್ಚಳವಾಗಿತ್ತು. ರೂಪವಂತನಾಗಿರದಿದ್ದರೂ, ಸುಲಕ್ಷಣಯುತ ಮುಖಚರ್ಯೆ. ಹೊಸ ಬಟ್ಟೆಗಳನ್ನು ಧರಿಸಿದ್ದ. ನಡಿಗೆ ಅಷ್ಟು ನಿರಾಯಾಸಕರವಾಗಿರಲಿಲ್ಲವೆಂದು ಗಮನಿಸಿದೆ. ಏನೋ ಪೇಚಾಟದಲ್ಲಿದ್ದಂತೆ ಕಾಣಿಸಿದ.

ನನ್ನ ಕೈಕುಲುಕಿ, ಕುರ್ಚಿಯಲ್ಲಿ ಕುಳಿತ. ಸ್ವಲ್ಪ ಅನುಮಾನಿಸುತ್ತ, "ಮಿಸ್ ಜೇನ್ ಪೇಜಟ್‌ಳ ವಿಷಯ. ನೀವು ನನಗೆ ಏನಾದರೂ ಮಾಹಿತಿ ಹೇಳುವಿರೋ ಅಂತ ಬಂದಿದ್ದೇನೆ. ಅವಳ ವಿಳಾಸವನ್ನು ಕೊಡಬಹುದೇ?"

"ಮಿಸ್ ಪೇಜಟ್ ನನ್ನ ಪಕ್ಷಗಾರಳು ನಿಜ" ಮುಗುಳುನಗುತ್ತಲೆಂದೆ. "ಆದರೆ ಅವಳ ವ್ಯವಹಾರವೆಲ್ಲವನ್ನು ಗುಟ್ಟಾಗಿಡಬೇಕಾಗುತ್ತದೆ... ನೀನು ಅವಳ ಸ್ನೇಹಿತನೆ?"

ಆತನಿಗೆ ಮತ್ತಿಷ್ಟು ಮುಜುಗರವಾದಂತಾಯಿತು. "ಅವಳು ನನಗೆ ಪರಿಚಿತಳೆನ್ನಬಹುದು. ಮಲಯಾದಲ್ಲಿ ಯುದ್ಧ ಸಂದರ್ಭದಲ್ಲಿ ಒಮ್ಮೆ ಭೇಟಿಯಾಗಿದ್ದೆವು. ನಾನು ಯಾರೆಂದು ನಿಮಗೆ ಹೇಳುವೆ—ನಾನು ಆಸ್ಟ್ರೇಲಿಯದವ. ವಿಲ್‌ಸ್ಟೌನ್ ಹತ್ತಿರ ಮಿಡ್‌ಹರ್ಸ್ಟ್ ಎಂದು ನನ್ನ ಕೃಷಿ ಕ್ಷೇತ್ರದ ಹೆಸರು."

"ನೀನು ಸ್ವದೇಶದಿಂದ ಬಹು ದೂರ ಬಂದಿರುವೆ, ಮಿ. ಹಾರ್ಮನ್?"

"ಹೌದು. ನಾನು ವಿರಾಮಕ್ಕಾಗಿ ಇಂಗ್ಲಂಡಿಗೆ ಬಂದೆ. ಇಲ್ಲಿ ನನಗೆ ಮಿಸ್. ಪೇಜಟ್‌ಳ ಹೊರತಾಗಿ ಮತ್ತ್ಯಾರ ಗುರುತಿಲ್ಲ. ಅವಳಿಗೂ ಸಂತಸವಾಗಬಹುದೆಂದು ಅವಳನ್ನು ಭೇಟಿ ಆಗಬೇಕೆಂದೆ."

"ವಿರಾಮಕ್ಕಾಗಿ ಇಷ್ಟು ದೂರ ಬರುವದು ಅನುಕೂಲವಾಯಿತೆ?"

"ನನಗೆ ಲಾಟರಿಯಲ್ಲಿ ಒಂದು ಸಾವಿರ ಪೌಂಡುಗಳ ಬಹುಮಾನ ಸಿಕ್ಕಿತು."

"ಸರಿ, ನಾನು ಮಿಸ್ ಪೇಜಟ್‌ಳ ಸಲಹೆಗಾರನೆಂದು ನಿನಗೆ ಹೇಗೆ ತಿಳಿಯಿತು?"

"ಮಲಯಾದಲ್ಲಿ ಒಮ್ಮೆ ಆಕೆ ಸೌಥಾಂಪ್ಟನ್ನಿನಲ್ಲಿದ್ದಳೆಂದು ಹೇಳಿದ್ದಳು. ಅದಕ್ಕೆ ಅಲ್ಲಿ ಹೋಗಿ ವಿಚಾರಿಸಿದೆ. ಅವಳ ಸೋದರತ್ತೆಯೊಬ್ಬಳು ವೇಲ್ಸ್‌ನಲ್ಲಿರುವಳೆಂದಷ್ಟೇ ಮಾಹಿತಿ ಸಿಕ್ಕಿತು. ಅಲ್ಲಿಂದ ವೇಲ್ಸಿಗೆ ಹೋಗಿ ಅವಳ ಸೋದರತ್ತೆಯನ್ನು ಭೇಟಿಯಾದೆ. ನೀವು ಅವಳ ಪಾರುಪತ್ಯಗಾರರೆಂದು ಆಕೆ ಹೇಳಿದಳು. ಅದಕ್ಕೆ ಇಲ್ಲಿ ಬಂದೆ."

"ಇಂಗ್ಲಂಡಿಗೆ ಯಾವಾಗ ಬಂದೆ?"

"ಐದು ದಿನವಾಯಿತು."

"ಮಿಸ್ ಪೇಜಟ್‌ಳನ್ನು ಕಾಣಲು ನಿನಗೆ ತುಂಬಾ ಆಸೆಯಿರಬೇಕಲ್ಲವೆ?"

ಆತ ನನ್ನನ್ನು ನೇರವಾಗಿ ನೋಡಿ, "ಹೌದು" ಅಂದ.

"ನಾನು ಕುರ್ಚಿಯಲ್ಲಿ ಹಿಂದಕ್ಕೊರಗಿ ಹೇಳಿದೆ: "ಆದರೆ ಮಿ. ಹಾರ್ಮನ್, ನಿನಗೊಂದು ನಿರಾಸೆ ಕಾದಿದೆ. ಸದ್ಯ ಮಿಸ್ ಪೇಜಟ್ ಪರದೇಶದಲ್ಲಿ

ದ್ದಾಳೆ."

ಒಂದು ಕ್ಷಣ ಆತ ತಲೆ ತಗ್ಗಿಸಿ ಸುಮ್ಮನಿದ್ದ. ಬಳಿಕ ಮುಖವೆತ್ತಿ, "ಅಂದರೆ, ಬಹಳ ದೂರ ಇರುವಳೆ? ಫ್ರಾನ್ಸ್, ಅಥವಾ ಇಲ್ಲಿಯೇ ಹತ್ತಿರ ಎಲ್ಲಿಯಾದರೂ ಇದ್ದರೆ ನಾನಲ್ಲಿ ಹೋಗಬಹುದು."

"ಆಕೆ ಪೌರಸ್ತ್ಯ ದೇಶದಲ್ಲಿದ್ದಾಳೆ."

"ಓಹ್," ಎಂದು ಮೆಲ್ಲನೆ ಉಸುರಿದ.

ಈ ವ್ಯಕ್ತಿಯ ಬಗ್ಗೆ ನನಗೆ ಮೆಚ್ಚುಗೆ, ಆದರ ಅನಿಸದೆ ಇರಲಿಲ್ಲ. ಜೀನಳನ್ನು ಕಾಣಲು ಆತ ಹನ್ನೆರಡು ಸಾವಿರ ಮೈಲು ದೂರ ಬಂದಿದ್ದ. ಆಕೆ ಇಲ್ಲಿ ಇರದೆ ಇದ್ದದ್ದು ಆತನ ದುರ್ದೈವವೇ. ಆದರೂ ಆತ ನಿರಾಶೆಗೊಂಡಿರಲಿಲ್ಲ.

"ನೀನು ಅವಳಿಗೊಂದು ಪತ್ರ ಬರೆದು ಕೊಟ್ಟರೆ ನಾನದನ್ನು ಅವಳಿಗೆ ರವಾನಿಸುತ್ತೇನೆ" ನಾನವನಿಗೆ ಹೇಳಿದೆ.

ಆತನ ಮುಖ ಅರಳಿತು. "ಸರಿ, ಅವಳ ವಿಳಾಸವೇನು?" ಕೇಳಿದ.

"ಅವಳ ವಿಳಾಸವನ್ನು ಎಲ್ಲರಿಗೂ ಕೊಡಲಿಕ್ಕಾಗುವದಿಲ್ಲ, ಮಿ. ಹಾರ್ಮನ್. ಅವಳು ಶ್ರೀಮಂತ ಯುವತಿ. ಹಾಗೆಲ್ಲ ಎಲ್ಲರಿಗೂ ಅವಳ ವಿಳಾಸವನ್ನು ಕೊಡಲಾಗದು. ನಾನೇ ನಿನ್ನ ಪತ್ರ ಕಳಿಸುವುದು ಉಚಿತ. ಬೇಕಾದರೆ ಅದಕ್ಕವಳು ಉತ್ತರಿಸುತ್ತಾಳೆ." ಎಂದೆ.

ಆತ ನನ್ನ ಮುಖ ದಿಟ್ಟಿಸಿದ. "ಆಕೆ ಶ್ರೀಮಂತಳೆಂದು ನನಗೆ ಹೇಳಲಿಲ್ಲ. ಆಫೀಸಿನಲ್ಲಿ ಬರಿ ಟೈಪಿಸ್ಟ್ ಆಗಿದ್ದೆನೆಂದಳು."

"ಹೌದು ಇತ್ತೀಚೆಗೆ ಅವಳಿಗೊಂದು ಆಸ್ತಿ ದೊರಕಿದೆ."

ಆತ ಸುಮ್ಮನೆ ಇದ್ದ.

"ನಾಳೆ ಬೆಳಿಗ್ಗೆ ನಿನ್ನ ಪತ್ರ ಬರೆದು ತಂದು ಕೊಡು" ಎಂದು ಸೂಚಿಸಿದೆ.

"ಸರಿ" ಎಂದು ಎದ್ದು ಹೋದ.

ಸಂಜೆಯೆಲ್ಲಾ ನಾನು ಚಿಂತಿಸಿದೆ. ಹಾರ್ಮನ್ನನಿಗೆ ಜೀನಳ ವಿಳಾಸ ಕೊಡದಿದ್ದದ್ದು ಸರಿಯಾಯಿತೋ, ಇಲ್ಲವೋ ಎಂಬ ಯೋಚನೆ. ಜೀನಳಿಗೆ ಗೊತ್ತಾದರೆ ಕೋಪಿಸಿಕೊಳ್ಳುತ್ತಿದ್ದಳು ನಿಜ. ಆದರೆ ಆರು ವರ್ಷಗಳ ನಂತರ, ಈಗ ಅವನಿಗೆ ಆಕೆಯನ್ನು ಭೇಟಿ ಆಗಲು ಇಷ್ಟೇಕೆ ಆತುರ? ಎಂದು ಆಲೋಚಿಸಿದೆ.

ಮರುದಿನ ನಿಶ್ಚಿತ ವೇಳೆಗೆ ಆತ ಬರಲಿಲ್ಲ. ಮುಂದೆರಡು ದಿನವೂ ಆತನ ಪತ್ತೆ ಇಲ್ಲ. ಆವಾಗ ನಾನು ನಿಜಕ್ಕೂ ಗಾಬರಿಯಾದೆ. ಮೂರನೆಯ ದಿನ ಮಾತ್ರ ಆತ ನನ್ನೆದುರು ನಿಂತಾಗ ಸಮಾಧಾನವೆನಿಸಿತು.

"ಪತ್ರ ತರಲಿಲ್ಲವೆ?" ಕೇಳಿದೆ.

"ನಾನು ಮನಸ್ಸು ಬದಲಿಸಿದ್ದೇನೆ. ಜೀನಳಿಗೆ ಪತ್ರ ಬರೆಯಬಾರದೆಂದು ನಿರ್ಧರಿಸಿದ್ದೇನೆ."

"ಯಾಕೆ?"

"ಯಾಕಿಲ್ಲ... ಆ ವಿಷಯ ಮರೆತು ಬಿಡೋಣ ಮಿ. ಸ್ಟ್ರಾಶನ್."

"ಅವಳು ಶ್ರೀಮಂತಳೆಂದು ತಿಳಿದೊಡನೆ ಗಾಬರಿಯಾಯಿತೆ? ಅದಕ್ಕೆ ಹಿಂಜರಿಯುವಿಯಾ?"

"ಹಾಗೇನಿಲ್ಲ..." ಎಂದು ಅನುಮಾನಿಸಿದ.

"ಕುಳಿತುಕೋ, ಜೋ. ಸ್ವಲ್ಪ ಮಾತಾಡೋಣ. ನನಗೆಲ್ಲವನ್ನೂ ಹೇಳಯ್ಯ" ಎಂದೆ.

"ಹೇಳುವುದೇನೂ ಹೆಚ್ಚಾಗಿಲ್ಲ" ಎಂದು ನಕ್ಕ.

"ಯುದ್ಧ ಕಾಲಾನಂತರ ನೀನು ಅವಳನ್ನು ಕಂಡಿಲ್ಲವಲ್ಲ? ಆರು ವರ್ಷಗಳ ಮೇಲೆ ಈಗೇಕೆ ಅವಳ ಭೇಟಿಗಾಗಿ ಇಷ್ಟು ಆತುರ?" ಎಂದುಕೇಳಿದೆ.

"ಇಷ್ಟು ದಿನವೆಲ್ಲ ಆಕೆ ವಿವಾಹಿತ ಸ್ತ್ರೀ ಎಂದು ತಿಳಿದಿದ್ದೆ." ನಗುತ್ತ ಹೇಳಿದ. "ಕಳೆದ ತಿಂಗಳು ನನಗೊಬ್ಬ ವಿಮಾನ ಚಾಲಕ ಸಿಕ್ಕಿದ್ದ. ಯುದ್ಧ ವೇಳೆ ಕೈದಿಗಳಾಗಿ ಮಲಯಾದ ತುಂಬೆಲ್ಲ ದಾರುಣ ಪಾದಯಾತ್ರೆ ಮಾಡಿದ ಆ ಮಹಿಳೆಯರ ತಂಡವನ್ನು ಕೋಟಾಬಾರುವಿನಿಂದ ಸಿಂಗಾಪುರಕ್ಕೆ ಆತನೇ ಕರೆತಂದನಂತೆ. ಅವರ ಮುಖಂಡಳಾದ 'ಮಿಸ್' ಜೀನ್ ಪೇಜಟ್‌ಳ ಸಾಹಸ, ಧೈರ್ಯ ಸ್ಥೈರ್ಯವನ್ನೆಲ್ಲ ವರ್ಣಿಸಿದ. ಆಗಷ್ಟೇ ನನಗೆ ತಿಳಿಯಿತು, ಆಕೆ ಅವಿವಾಹಿತೆ, ಎಂದು. ಮಿ. ಸ್ಟ್ರಾಶನ್, ಆಕೆ ಅದ್ಭುತ ಹುಡುಗಿ. ನಾನು ಮದುವೆಯಾದರೆ, ಅಂಥವಳನ್ನೇ ಆಗಬೇಕೆಂಬಾಸೆ ನನಗೆ."

"ಅದಕ್ಕೋಸ್ಕರ ಇಂಗ್ಲಂಡಿಗೆ ಬಂದೆಯಾ?"

"ಹೌದು."

"ಮತ್ತೇಕೆ ಈಗ ಮನಸ್ಸು ಬದಲಾಯಿಸಿದೆ?"

"ವಿಲ್ಸ್‌ಟೌನ್‌ಗೋಸ್ಕರ. ಅದೊಂದು ಕುಗ್ರಾಮ. ತೀರ ಹಿಂದುಳಿದ ಪ್ರದೇಶ. ಇಲ್ಲಿಯ ಹಾಗಿಲ್ಲ. ಸುಧಾರಿಸಿದ, ಶ್ರೀಮಂತ ಸ್ತ್ರೀಗೆ ಅಲ್ಲಿರುವುದು ಎಷ್ಟು ಕಷ್ಟ, ಎಂಬ ಯೋಚನೆ ಬಂದಿದೆ. ಅಲ್ಲಿ ಒಳ್ಳೆಯ ಮನೆಗಳಿಲ್ಲ. ತಾಜಾ ಹಣ್ಣು, ತರಕಾರಿ, ಹಾಲು ಸಹ ಸಿಗುವುದಿಲ್ಲ. ರೇಡಿಯೋ ಕೇಂದ್ರವಿಲ್ಲ. ಪುಸ್ತಕ ಅಂಗಡಿಗಳಿಲ್ಲ. ಫೋನ್ ಸೌಕರ್ಯವಿಲ್ಲ. ಬಟ್ಟೆ, ಪಾದರಕ್ಷೆಗಳ ಅಂಗಡಿಯೂ ಇಲ್ಲ. ಈಜುಗೊಳವಿಲ್ಲ. ಸಾಕಷ್ಟು ಮಹಿಳೆಯರ ಸಹವಾಸವೂ ಸಿಗುವುದಿಲ್ಲ." ಮತ್ತೆ ಸ್ವಲ್ಪ ವಿಚಾರ ಮಾಡಿ, "ಅಲ್ಲಿರುವುದೊಂದೇ ಒಳ್ಳೆ ಊರು ಎಂದರೆ ಆ್ಯಲಿಸ್ ಸ್ಪ್ರಿಂಗ್ಸ್. ಆ್ಯಲಿಸ್ ಭಾರಿ ಭವ್ಯ ಶಹರ. ಆದರೆ ವಿಲ್ಸ್‌ಟೌನ್, ಸ್ತ್ರೀಯರು ಇರುವಂಥ ಸ್ಥಳವಲ್ಲ... ಆದರೆ ನನ್ನ ನೌಕರಿ ಅಲ್ಲಿಯೇ. ನಾನು ಹೆಚ್ಚಿಗೆ ಓದು ಬರಹ ಕಲಿತವನಲ್ಲ. ಪಟ್ಟಣಗಳಲ್ಲಿ ನಾನೇನು ಮಾಡುವುದು? ನಾನು ಕೃಷಿ ಕ್ಷೇತ್ರಗಳಲ್ಲಿ ದನಕರುಗಳ ಪಾಲನೆ ಪೋಷಣೆ ಮಾಡುವವನು."

"ಅಂದರೆ, ನೀನು ಜೀನಳನ್ನು ಮದುವೆಯಾದರೆ ಆಕೆಗೆ ಅಲ್ಲಿ ಸೌಖ್ಯವಾಗುವುದಿಲ್ಲ. ಎಂದೇನು ನಿನ್ನ ಸಂಶಯ?"

"ಹೌದು."

"ಏನಾದರೂ, ಈ ವಿಷಯವಾಗಿ ನೀನು ಅವಳಿಗೊಂದು ಪತ್ರ ಬರೆಯುವದು ಸರಿಯಾದದ್ದು."

"ಅದರಲ್ಲಿ ಏನು ಬರೆಯಬೇಕೆಂದೇ ತಿಳಿಯುತ್ತಿಲ್ಲವಲ್ಲ..."

"ಹಾಗಾದರೆ ನಾನು ಬರೆದು ಅವಳಿಗೆಲ್ಲವನ್ನೂ ತಿಳಿಸುತ್ತೇನೆ. ನೀನು ಆಸ್ಟ್ರೇಲಿಯಕ್ಕೆ ಬೇಗನೆ ವಾಪಸು ಹೋಗಿಬಿಡು. ಅಲ್ಲಿ ನಿನಗೆ ಅವಳ ಉತ್ತರವಾಗಲಿ, ಸ್ವತಃ ಅವಳಾದರೂ ಸಿಗಬಹುದು" ಎಂದು ಸಲಹೆ ನೀಡಿದೆ.

ಎರಡು ದಿನಗಳ ನಂತರ ಜೋ ಹಾರ್ಮನ್ ಆಸ್ಟ್ರೇಲಿಯಕ್ಕೆ ಮರು ಪ್ರಯಾಣ ಬೆಳೆಸಿದ. ಜೀನ್ ಆತನನ್ನು ಹುಡುಕಲು ಆಸ್ಟ್ರೇಲಿಯಕ್ಕೆ ಹೋಗಿರುವಾಗ, ಆತ ಅಲ್ಲಿಂದ ಇಂಗ್ಲಂಡಿಗೆ ಬಂದು ಇಲ್ಲಿ ಆಕೆಯನ್ನು ಹುಡುಕುತ್ತಿರುವದು ವಿಧಿಯ ವಿಪರ್ಯಾಸ ಎಂದು ನನಗನಿಸಿತು.

೪

ಆಸ್ಟ್ರೇಲಿಯದ ಡಾರ್ವಿನ್ ವಿಮಾನನಿಲ್ದಾಣದಲ್ಲಿ ಇಳಿದಾಗ ಜೀನ್ ನಿಜಕ್ಕೂ ಆನಂದೋತ್ಕರ್ಷೆಯಲ್ಲಿದ್ದಳು. ನನಗನಿಸಿದ ನಿಜಸಂಗತಿಯೇನಂದರೆ, ಇಷ್ಟು ದಿನ ಆಕೆ ಯುದ್ಧದ ಆಘಾತದಿಂದ ಇನ್ನೂ ಸುಸ್ಥಿತಿಗೆ ಬಂದಿರಲೇ ಇಲ್ಲ. ಜೀವನವನ್ನು ನಿರುತ್ಸಾಹದಿಂದ, ಐವತ್ತರ ವೃದ್ಧೆಯಂತೆ ಸಾಗಿಸುತ್ತಿದ್ದಳಷ್ಟೆ. ಅವಳ ಹೃದಯಾಂತರಾಳದಲ್ಲಿ ಕುಆನ್‌ಟಾನಿನ ದುರಂತ ಹುದುಗಿಕೊಂಡಿದ್ದು ಅವಳ ಯೌವನಭರವನ್ನು ಕೊಂದುಹಾಕುತ್ತಲಿತ್ತು.

ಡಾರ್ವಿನ್ನಿನಿಂದ ಬಸ್ಸಿನಲ್ಲಿ ಆ್ಯಲಿಸ್‌ಸ್ಪ್ರಿಂಗ್ಸಿಗೆ ಹೋದಳು. ಹಾರ್ಮನ್ ವಿವರಿಸಿದಂತೆ, ಅದೊಂದು ಸುಂದರ ಶಹರವೆನಿಸಿತು. ಅಲ್ಲಿ ಆತನ ಬಗ್ಗೆ ಅನೇಕ ಜನರನ್ನು ವಿಚಾರಿಸಿದಳು. ಆತನಿಗೆ ಆ ಊರನ್ನು ಬಿಟ್ಟು ಹೋಗಿದ್ದು, ಸದ್ಯ ಎಲ್ಲಿರುವನೆಂದು ಯಾರಿಗೂ ಗೊತ್ತಿರಲಿಲ್ಲ. ಹೀಗೇ ವಿಚಾರಣೆ ನಡೆಸುತ್ತ ಕೊನೆಗೆ ಆತ ವಿಲ್ಸ್‌ಟೌನ್ ಹತ್ತಿರ ಮಿಡ್‌ಹರ್ಸ್ಟ್ ಕೃಷಿಕ್ಷೇತ್ರದ ಮೇಲ್ವಿಚಾರಕನಾಗಿರುವನೆಂಬ ಸಮಾಚಾರವೂ, ಆತ ಇನ್ನೂ ಅವಿವಾಹಿತನೆಂಬ ವಿಷಯವೂ ತಿಳಿಯಿತು.

ಮರುದಿನ ವಿಲ್ಸ್‌ಟೌನಿಗೆ ಪ್ರಯಾಣ ಬೆಳೆಸಿದಳು. ಅಲ್ಲಿ ಹೋದ ಬಳಿಕ, ಜೋ ಹಾರ್ಮನ್ ಕಳೆದ ತಿಂಗಳವೆ ಇಂಗ್ಲಂಡಿಗೆ ಹೋಗಿರುವನೆಂಬುದನ್ನು ಕೇಳಿ ಅವಳಿಗೆ ದಿಗ್ಭ್ರಾಂತಿಯಾಯಿತು. ಆತ ಮರಳಿ ಬರುವುದಕ್ಕೆ ಇನ್ನೂ ಎರಡೂ ತಿಂಗಳು ಆಗಬಹುದೆಂದು ತಿಳಿದು ತುಂಬಾ ನಿರಾಸೆಗೊಂಡಳು. ಆದರೂ, ಆತನ ಆರೋಗ್ಯ ಸುಧಾರಿಸಿ, ಮತ್ತೆ ತನ್ನ ಉದ್ಯೋಗದಲ್ಲಿ ತೊಡಗಿರುವನೆಂದು ಕೇಳಿ ಸಮಾಧಾನಪಟ್ಟಳು. ಏನಾದರೂ, ಆತನ ಭೇಟಿಯಾಗದೆ ತಾನು ಇಂಗ್ಲಂಡಿಗೆ ತಿರುಗಿ ಹೋಗುವದು ಅಸಾಧ್ಯದ ಮಾತು. ಅದಕ್ಕೆ ಅಲ್ಲಿಯೇ ಕೆಲವು ದಿನ ಇದ್ದರಾಯಿತೆಂದು ಬಂದು ಹೋಟೆಲಿನ ಕೋಣೆಯು

ವಾಸವಾಗಿದ್ದಳು.

ನಿಜಕ್ಕೂ ಅದೊಂದು ಬಲು ಚಿಕ್ಕ ಊರು. ಅಲ್ಲಿ ಯಾವ ಆಧುನಿಕ ಸೌಕರ್ಯಗಳಿರಲಿಲ್ಲ. ಮಹಿಳೆಯರಿಗೆ ಅಲ್ಲಿ ಜೀವಿಸುವದು ಕಷ್ಟಕರವೆಂದು ಎಲ್ಲರ ಅಭಿಪ್ರಾಯವಾಗಿದ್ದಿತು. ಆದ ಕಾರಣ ವಿವಾಹವಾದೊಡನೆ ಗಂಡಸರೆಲ್ಲ ದೊಡ್ಡ ಪಟ್ಟಣಗಳನ್ನು ಸೇರುತ್ತಿದ್ದರು. ಮೂಢ ಹೆಂಗಸರು ಮಾತ್ರ ಅಲ್ಲಿರಲು ಒಪ್ಪುವರು ಎಂದು ಅಲ್ಲಿದ್ದವರ ಮತ.

ಒಂದೇ ದಿನದಲ್ಲಿ ಜೀನಳಿಗೆ ಅನೇಕ ಜನರ ಪರಿಚಯವಾಯಿತು. ಅವರಲ್ಲಿ ಮೊಸಳೆಯ ಬೇಟೆಗಾರನಾಗಿದ್ದ ಒಬ್ಬ ವೃದ್ಧ ತನ್ನ ಜೇಬಿನಿಂದ ಒಂದು ಹದ ಮಾಡಿದ ಮೊಸಳೆಯ ಚರ್ಮವನ್ನು ತೆಗೆದು ತೋರಿಸಿದ. ಅದನ್ನು ನೋಡಿ ಆಕೆಗೆ ಆನಂದವೂ, ಆಶ್ಚರ್ಯವೂ ಆಯಿತು. ಇಂಗ್ಲಂಡಿನಲ್ಲಿ ತನ್ನ ಉದ್ಯೋಗದ ನೆನಪಾಯಿತು. ಆ ಕಾರ್ಖಾನೆಯಲ್ಲಿ ಇಂಥ ಚರ್ಮಗಳಿಂದ ಪಾದರಕ್ಷೆ, ಕೈಚೀಲಗಳನ್ನು ತಯಾರಿಸುತ್ತಿದ್ದರು. ಆದರೆ ಇದಷ್ಟು ಮೆತ್ತಗೆ, ನುಣುಪಾಗಿದೆ! ಅವಳ ತಲೆಯಲ್ಲೊಂದು ವಿಚಾರ ಸುಳಿಯಿತು: ಅದರಿಂದ ತಾನೇ ಒಂದು ಜತೆ ಪಾದರಕ್ಷೆ ತಯಾರಿಸಬಾರದೇಕೆ? ಎಂದುಕೊಂಡು ಆತನಿಂದ ಆ ಚರ್ಮವನ್ನು ಬೇಡಿ ತೆಗೆದುಕೊಂಡಳು. ಪಾದರಕ್ಷೆ ತಯಾರಿಸುವ ಕೆಲಸ ಜೀನಳಿಗೆ ಸುಪರಿಚಿತವಾದದ್ದು. ಆ ಚರ್ಮವನ್ನು ನೋಡಿದಾಗಿನಿಂದ ಅವಳ ತಲೆಯಲ್ಲಿ ಮತ್ತೊಂದು ಯೋಜನೆ ರೂಪುಗೊಂಡಿತು. ಮುಂದೆ ತಾನೇನು ಮಾಡಬೇಕೆಂಬ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿತ್ತು. ಇಲ್ಲಿ ತಾನೊಂದು ಚರ್ಮದ ಪಾದರಕ್ಷೆ, ಕೈಚೀಲ, ಪೆಟ್ಟಿಗೆಗಳ ವ್ಯವಹಾರವನ್ನು ಆರಂಭಿಸಬಹುದೆಂದು ಲೆಕ್ಕ ಹಾಕಿದಳು.

ಈ ವಿಷಯವಾಗಿ ಜೀನ್ ನನಗೆ ಪತ್ರ ಬರೆದಳು. ತನ್ನ ಸ್ವಂತ ಕಾರ್ಖಾನೆ ಆರಂಭಿಸಿದರೆ, ತನಗೆ ಅಸಲು ಹಣದಿಂದ ಐದು ಸಾವಿರ ಪೌಂಡುಗಳನ್ನು ಕೊಡಬಹುದೇ, ಎಂದು ಕೇಳಿದಳು. ಅದಕ್ಕೆ ಅವಶ್ಯವಿದ್ದ ಸಾಮಗ್ರಿಗಳ ಪಟ್ಟಿ, ಅದರ ಖರ್ಚುವೆಚ್ಚದ ವಿವರಣೆಯನ್ನೂ ಬರೆದಿದ್ದಳು. ಅವಳಿಗೆ ಉತ್ತರಿಸುವಾಗ, ಜೋ ಹಾರ್ಮನ್ ಇಂಗ್ಲಂಡಿಗೆ ಬಂದು, ನನಗೆ ಭೇಟಿಯಾದ ಎಲ್ಲ ಸಂಗತಿಗಳನ್ನೂ ತಿಳಿಸಿದೆ.

ಜೋ ಹಾರ್ಮನ್ ಆಸ್ಟ್ರೇಲಿಯಕ್ಕೆ ತಿರುಗಿ ಬರುವವರೆಗೆ ಜೀನ್ ಮೂರು ವಾರ ಕಾಯಬೇಕಾಯಿತು. ಆ ವೇಳೆ ಆಕೆ ಬಹಳ ಚಡಪಡಿಸುತ್ತಿದ್ದಳು. ತಾನು ಮೂರ್ಖತನ ಮಾಡುತ್ತಿರುವೆನೇನೋ ಎಂಬ ಭಯ ಆಕೆಗೆ. ಪ್ರತಿದಿನ ಮುಂಜಾನೆ ಎದ್ದೊಡನೆ, ಈ ಕುಗ್ರಾಮದಲ್ಲಿ ತನಗೆ ಹೊಂದಿಕೊಂಡಿರಲು ಆಗುವದೋ, ಇಲ್ಲವೋ, ಎಂಬ ವಿಚಾರಗಳು ಬಾಧಿಸುತ್ತಿದ್ದವು. ಸಂಜೆಯಷ್ಟೊತ್ತಿಗೆ ಮತ್ತೆ ದೃಢನಿರ್ಧಾರ ಮಾಡುತ್ತಿದ್ದಳು. ತನಗೆ ಇದೇ ಯೋಗ್ಯ ಸ್ಥಳವೆಂದು ಸಮಾಧಾನಪಟ್ಟುಕೊಂಡಿರುತ್ತಿದ್ದಳು.

ಕೊನೆಗೊಂದು ದಿನ ಹಾರ್ಮನ್ನನ ಹಡಗು ಬರುವ ನಿಶ್ಚಿತ ವಾರ್ತೆ ಬಂದಿತು. ಆತ ಮೊದಲು ಬ್ರಿಸ್‌ಬೇನಿಗೆ ಬಂದಿಳಿಯುವವನಿದ್ದ. ಜೀನ್ ಅಲ್ಲಿಗೊಂದು ಪತ್ರ ಬರೆದು, ತಾನು

ಅಯ್ಯೋರು ಬಿಟಿನಾಯಕರೇಲಿ
ಗಿದ್ದನಂತರವೇ ನೀನು
ಪರೀಕ್ಷೇಲಿ ಪಾಸಾಗೋದು
ಅಂತ ಭವಿಷ್ಯ ಹೇಳಿದಾರೆ.



ಆಸ್ಟ್ರೇಲಿಯಕ್ಕೆ ಬಂದು ಸುಮಾರು ದಿನಗಳಾಗಿ, ಆತನಿಗಾಗಿ ಕಾಯುತ್ತಿರುವುದಾಗಿ ತಿಳಿಸಿದಳು. ಅದಕ್ಕೆ ಟೆಲಿಗ್ರಾಮ್ ಮೂಲಕ ಅವನ ಉತ್ತರ ಬಂತು. ಬರುವ ಗುರುವಾರ ಆತ ವಿಮಾನ ದಿಂದ ಕೇರ್ನ್ಸ್‌ಗೆ ಬರುವನೆಂದು.

ಅಂದು ವಿಮಾನ ನಿಲ್ದಾಣಕ್ಕೆ ಹೋದಾಗ, ಜೀನಳ ಹೃದಯ ಹುಚ್ಚಾಗಿ ಬಡಿದುಕೊಳ್ಳು ತಿತ್ತು. ವಿಮಾನದಿಂದ ಹೊರಬಂದೊಡನೆ ಆತ ನನ್ನು ಗುರುತಿಸಿದಳು. ಕಳವಳದಿಂದ ಆತ ಸುತ್ತಮುತ್ತ ನೋಡುತ್ತ ಅವಳನ್ನು ಹುಡು ಕುತ್ತಲಿದ್ದ. ಒಂದು ನಿಮಿಷ ಆತನ ದೃಷ್ಟಿ ಅವಳ ಮೇಲೆ ಬಿದ್ದಿತು; ಆದರೆ ಮರುಕ್ಷಣ ಮುಂದೆ ಸಾಗಿದ. ಆತ ಕುಂಟುತ್ತ ಹೆಜ್ಜೆ ಹಾಕುವದನ್ನು ನೋಡಿ ಅವಳ ಹೃದಯ ಅಳು ಕಿತು. ಬೇಗನೆ ಅವನ ಹಿಂದೆ ಹೋಗಿ 'ಜೋ!' ಎಂದು ಕರೆದಳು.

ತಿರುಗಿ ನಿಂತು, ಅಪನಂಬಿಕೆಯಿಂದೆಂಬಂತೆ ಆತ ಅವಳನ್ನು ದಿಟ್ಟಿಸಿ ನೋಡಿದ. ವಿಮಾನ ದಲ್ಲಿ ಬರುವಾಗ, ಅವನನ್ನೂ ಅದೇ ವಿಚಾರ ಕಾಡುತ್ತಿತ್ತು. ಆರು ವರ್ಷಗಳ ನಂತರ ಈಗ ಅವಳ ಗುರುತು ಸಿಗುವದೋ ಎಂಬ ಚಿಂತೆ ಗೀಡಾಗಿದ್ದ. ಮೊದಲು ನೋಡಿದಾಗ ಆಕೆ ದೇಶೀಯ ಮಲಯದ ಹುಡುಗಿಯಂತೆ ಕಾಣಿ ಸುತ್ತಿದ್ದಳು. ಕೊನೆಯ ಬಾರಿ ಆಕೆಯನ್ನು ಕಂಡಾಗ, ಜಪಾನಿ ಸೈನಿಕರ ಹೊಡೆತದಿಂದ ರಕ್ತ ಮಯವಾದ ಅವಳ ಕಂದು ಬಣ್ಣದ ಮುಖ, ಚಿಂದಿಬಟ್ಟೆಗಳ ದಾರುಣ ಚಿತ್ರ ನೆನಪಿದ್ದಿತು. ಈ ಗೌರವರ್ಣದ, ಅಚ್ಚುಕಟ್ಟಾದ ಬಟ್ಟೆ ತೊಟ್ಟ ಚೆಲುವೆ ಅದೇ ಹುಡುಗಿಯಾಗಿರಬಹುದೇ? ಎಂದು ಸಂದೇಹಪಟ್ಟ. ಅಷ್ಟರಲ್ಲಿ ಆಕೆ ತಲೆ ಯನ್ನು ಹೊರಳಿಸಿದ ವಿಶಿಷ್ಟ ರೀತಿ ಕಂಡು ಹಿಡಿದ. ಮುಗುಳು ನಗುತ್ತ, "ಹಲೋ" ಎಂದು ಹಸ್ತಲಾಘವ ನೀಡಿದ. ಆತನ ಕೈ ಕುಲುಕುತ್ತ, ಅವಳು "ಓಹ್, ಜೋ," ಎಂದಿಷ್ಟೇ ಉಸುರಿದಳು. ಇಬ್ಬರಿಗೂ ತಮ್ಮ ಸಂವೇದನೆಗಳನ್ನು ವ್ಯಕ್ತಪಡಿಸಲಾಗಲಿಲ್ಲ.

ಅನಂತರ ಹೋಟೆಲಿಗೆ ಹೋಗಿ, ಪಾನೀಯ ಗಳನ್ನು ಸೇವಿಸುತ್ತ ಕುಳಿತಾಗ, ಮಾತಿಗೆ ಮೊದ ಲಾದರು. ಆತನ ಕೈಗಳನ್ನು ತನ್ನ ಕೈಯಲ್ಲಿ ಹಿಡಿದು, ಹಸ್ತಗಳ ಮೇಲಿನ ದೊಡ್ಡ ಗಾಯದ ಗುರುತುಗಳನ್ನು ನೋಡಿದಳು. ಆತನ ಕಣ್ಣಲ್ಲಿ ಕಣ್ಣಿಟ್ಟು ನೋಡಿ, "ಈಗೆಲ್ಲ ಸರಿಯಾಗಿದೆಯಾ, ಜೋ?" ಎಂದು ಕೇಳಿದಳು.

"ಪರವಾಗಿಲ್ಲ" ಅವನೆಂದ. "ಈಗ ನಾನು ಕುದುರೆ ಸವಾರಿ ಮಾಡಲು ಏನು ಆತಂಕವಿಲ್ಲ. ಆದರೆ ಭಾರಗಳನ್ನು ಎತ್ತುವದು ಅಸಾಧ್ಯ. ಬೆನ್ನು ನೋವು ಬರುತ್ತದೆ...ಸರಿ, ಕುಆಲ್ ಟೌನಿನ ಭೇಟಿಯ ನಂತರದ ನಿನ್ನ ಸಮಾಚಾರ ವೆಲ್ಲಾ ಹೇಳು" ಅಂದ. "ನನಗೆ ಗುಣವಾದ ಮೇಲೆ ಎಷ್ಟೋ ಜನರನ್ನು ವಿಚಾರಿಸಿದೆ, ಆದರೆ ಯಾರಿಗೂ ಹೇಳಲಿಕ್ಕಾಗಲಿಲ್ಲ.

ಅವರು ಕುಆಲಾ ತೆಲಂಗಿಗೆ ಹೋಗಿದ್ದು, ಅಲ್ಲಿ ಮೂರು ವರ್ಷಕಾಲವಿದ್ದು, ಭತ್ತದ ಗದ್ದೆ ಗಳಲ್ಲಿ ದುಡಿದದ್ದು, ಯುದ್ಧ ಮುಗಿದ ಮೇಲೆ ಸಿಂಗಾಪೂರಕ್ಕೆ ಹೋಗಿ ಅಲ್ಲಿಂದ ಇಂಗ್ಲಂಡಿಗೆ ಮರಳಿದ್ದು, ಅಲ್ಲಿ ಉದ್ಯೋಗ ಕೈಕೊಂಡಿದ್ದು, ತನಗೆ ಆಕಸ್ಮಿಕವಾಗಿ ಧನಲಾಭವಾದದ್ದು, ಬಳಿಕ ಮತ್ತೆ ಮಲಯಾಕ್ಕೆ ಹೋಗಿ ಅಲ್ಲಿ ಬಾವಿ ತೋಡಿಸಿದ್ದು, ಎಲ್ಲ ವೃತ್ತಾಂತ ವಿವರಿಸಿದಳು. ಮಲಯಾದಲ್ಲಿ ಬಾವಿ ತೋಡುವವರಿಂದ ಜೋ ಬದುಕಿದ್ದ ವಾರ್ತೆ ಕೇಳಿ ಅಲ್ಲಿಂದ ಆಸ್ಟ್ರೇಲಿಯಕ್ಕೆ ಬಂದೆನೆಂದು ಹೇಳಿದಳು.

ಆತ ಇದೆಲ್ಲವನ್ನು ಕೇಳಿ ಆಶ್ಚರ್ಯಚಕಿತ ನಾದ. "ಅಂದರೆ ನೀನು ನನಗೋಸ್ಕರವೇ ಆಸ್ಟ್ರೇಲಿಯಕ್ಕೆ ಬಂದೆಯಾ?"

"ಹೌದು. ನಿನ್ನ ಆರೋಗ್ಯ ಹೇಗಿದೆಯೋ ಎಂದು ನೋಡಬೇಕೆಂದೆ. ನೀನಿನ್ನೂ ಆಸ್ಪತ್ರೆ ಯಲ್ಲಿರುವಿಯೋ ಎಂಬ ಚಿಂತೆಯಾಗಿತ್ತು."

"ನೀನು ಇಂಗ್ಲಂಡಿನಲ್ಲಿಯೇ ಇದ್ದರೂ ನಾವು ಹೇಗಾದರೂ ಭೇಟಿಯಾಗುತ್ತಿದ್ದೆವು!"

"ನೀನಲ್ಲಿಗೆ ಇಷ್ಟು ಗಟ್ಟಿಮುಟ್ಟಾಗಿ ಬರುವಿ ಯೆಂದು ನನಗೇನು ಗೊತ್ತು?"

"ಸರಿ, ಇಲ್ಲಿಗೆ ಬಂದ ಬಳಿಕ ಏನೆಲ್ಲ ಮಾಡಿದೆ?" ಆತ ಕೇಳಿದ.

ಮೊದಲಿಗೆ ತಾನು ಆ್ಯಲಿಸ್ ಸ್ಪ್ರಿಂಗ್ಸಿಗೆ ಹೋಗಿದ್ದು, ಅಲ್ಲಿಂದ ವಿಲ್ಸ್‌ಟೌನಿನ ಮಾರ್ಗ

ವಾರ ಕಳೆದಿದ್ದು ಹೇಳಿದಳು.

"ಹೌದೇ?" ಆಶ್ಚರ್ಯದಿಂದ ಕೇಳಿದ. "ಎಲ್‌ಸ್ಟೌನ್ ಹೇಗಿದೆ?"

"ಓಹ್, ಬಲು ದರಿದ್ರ ಊರು. ಅಲ್ಲಿ ಜನರು ಹೇಗೆ ಇರುವರೋ ಅನಿಸುತ್ತದೆ."

ಆತನ ಮುಖ ನಿರಾಸೆಗೊಂಡಿತು. "ನಿಜ; ಹೆಂಗಸರಿಗಿರಲು ಅಸಾಧ್ಯವ ಊರದು" ಭಾರವಾದ ಧ್ವನಿಯಿಂದೆಂದ. "ನೀನು ಯಾವಾಗ ವಾಪಸು ಹೋಗಬೇಕು?"

"ನಾನು ಬರುವ ವಾರ ಬ್ರಿಸ್‌ಬೇನಿಗೆ ಹೋಗಿ, ಮರಳಿ ಹೋಗುವ ಹಡಗು ಹುಡುಕುವೆ" ಮುಗುಳುನಗುತ್ತಲೆಂದಳು.

"ಇಲ್ಲಿಯ ಪ್ರಸಿದ್ಧ ಹವಳಬಂಡೆಯ ಸಾಲು ದ್ವೀಪಗಳನ್ನು ನೋಡದೆ ನೀನು ತಿರುಗಿ ಹೋಗಕೂಡದು. ಈ ವಾರಾಂತ್ಯಕ್ಕೆ ಅಲ್ಲಿಗೆ ಹೋಗೋಣವೆ?"

ಆಕೆ ಸಂತೋಷದಿಂದ ಸಮ್ಮತಿಸಿದಳು. ಒಂದೆರಡು ದಿನ ವಿರಾಮದಿಂದಿರಲು ಗ್ರೀನ್ ಐಲ್ಯಾಂಡ್ ಎಂಬ ಹವಳ ದಂಡೆಯಿದ್ದ ಚಿಕ್ಕ ನಡುಗಡ್ಡೆಗೆ ಹೋದರು. ಅಲ್ಲಿ ವಾಸಿಸಿಸಲು ಮರಗಳ ಮಧ್ಯೆ ಪ್ರತ್ಯೇಕ ಸಣ್ಣ ಜೋಪಡಿಗಳಿದ್ದವು. ಬೆಳಿಗ್ಗೆ, ಸಾಯಂಕಾಲ ಸಮುದ್ರದಲ್ಲಿ ಈಜುವುದು; ದಿನವೆಲ್ಲ ವಿರಾಮ, ಹರಟೆಯಲ್ಲಿ ಹೊತ್ತು ಕಳೆಯುತ್ತಲಿತ್ತು. ಆತ ಅದಕ್ಕಿಂತ ಹೆಚ್ಚಿನ ಸಲಿಗೆ ತೋರದಿದ್ದುದು ಅವಳಿಗೆ ವಿಚಿತ್ರವೆನಿಸಿತು. ಈ ಅನಿಶ್ಚಿತ ಪರಿಸ್ಥಿತಿ ಹೀಗೇ ನಡೆದರೆ, ತಾನು ಬಂದ ದಾರಿಗೆ ಸುಂಕವಿಲ್ಲವೆಂದು ಇಂಗ್ಲೆಂಡಿಗೆ ಮರಳಿ ಹೋಗಬೇಕಾಗುವುದೆಂದು ಕಳವಳಗೊಂಡಳು.

ಮರುದಿನವೂ ಹಾಗೆಯೇ ಕಳೆಯಿತು. ಸಾಯಂಕಾಲ ಅವರು ಸಮುದ್ರ ದಂಡೆಯಲ್ಲಿ ಸುತ್ತಾಡಿಕೊಂಡು ಬರೋಣವೆಂದು ನಿರ್ಧರಿಸಿದರು. ಜೀನ್ ಬಟ್ಟೆ ಬದಲಾಯಿಸಿ, ತನ್ನ ಹಳೆಯ ಲುಂಗಿಯನ್ನು ಧರಿಸಿದಳು. ಕೂದಲನ್ನು ಬಾಚಿ ಒಂದು ಜಡೆ ಹೆಣೆದಳು. ಸಂಜೆಯ ಮಬ್ಬುಗತ್ತಲಲ್ಲಿ ಆಕೆ ಜೋಪಡಿಯಿಂದ ಹೊರಬಿದ್ದಾಗ, ಜೋ ಆಕೆಯನ್ನು ಕಂಡೊಡನೆ, ಆರು ವರ್ಷಗಳ ಹಿಂದಿನ ಮಲಯಾದ ದೃಶ್ಯ ಆತನ ಮನಃಪಟಲದ ಮೇಲೆ ಮೂಡಿತು. ಸಭ್ಯದ, ಸುಧಾರಿಸಿದ, ಶ್ರೀಮಂತ ಆಂಗ್ಲ ಸ್ತ್ರೀಯಾಗಿರದೆ ಆಕೆ ಹಿಂದಿನ ಮಲಯಾದ ದೇಶೀ ಹುಡುಗಿಯಂತೆ ಕಂಡಳು. ಆಕೆ ಹತ್ತಿರ ಬಂದು ಆತನ ಭುಜದ ಮೇಲೆ ಕೈಯಿಟ್ಟು "ಈಗ ನೋಡು ಜೋ" ಎಂದಾಗ ಆತ ಭಾವಪರವಶನಾದ. ಮರುಕ್ಷಣದಲ್ಲಿಯೇ ಆಕೆ ಅವನ ಬಾಹು ಬಂಧನದಲ್ಲಿ ಬಂದಿಯಾಗಿದ್ದಳು. ಆಕೆಯನ್ನು ಬಿಗಿಯಾಗಿ ಅಪ್ಪಿಕೊಂಡು ಅವಳ ಮುಖವನ್ನು ಮೋಹದಿಂದ ಚುಂಬಿಸಿದ. "ನನ್ನನ್ನು ಮದುವೆಯಾಗುವಿಯಾ?" ಅವಳ ಕಣ್ಣಲ್ಲಿ ಕಣ್ಣಿಟ್ಟು ಕೇಳಿದ.

"ನಾನು ಆಸ್ಟ್ರೇಲಿಯಕ್ಕೆ ಬಂದದ್ದು ಅದಕ್ಕಾಗಿಯೇ ಜೋ. ನಾನು ನಿನ್ನನ್ನು ತುಂಬ ಪ್ರೇಮಿಸುತ್ತೇನೆ" ಉಸುರಿದಳು.

"ಆ ಮಾತನ್ನು ಮತ್ತೆ ಹೇಳು" ಎಂದು ಆಕೆಯನ್ನು ಬರಸೆಳೆದು ಅಧರಗಳ ಮೇಲೆ ಮುತ್ತಿಟ್ಟ.

ಸಮುದ್ರ ತೀರದಲ್ಲಿ ಬೆಳದಿಂಗಳು ನಿಚ್ಚಳ



ವಾಗಿತ್ತು. ಪರಸ್ಪರ ಸಾನ್ನಿಧ್ಯ ಅದೆಷ್ಟು ಸುಖ ವೆನಿಸಿತು! "ನನಗಿದು ಆನಂದದ ಪರಮಾವಧಿ" ಮೆಲ್ಲನೆ ಎಂದನಾತ.

ಮರುದಿನ ಬೆಳಿಗ್ಗೆ ಉಪಾಹಾರ ಮಾಡುವಾಗ ಜೋ ಹೇಳಿದ. "ಮಧುವೆಯಾದ ಮೇಲೆ ನಾನು ಇಲ್ಲಿಯ ಉದ್ಯೋಗ ಬಿಟ್ಟುಬಿಡುತ್ತೇನೆ. ಆ್ಯಲಿಸ್ ಸ್ಪ್ರಿಂಗ್ಸ್ ಹತ್ತಿರ, ಅಥವಾ ಮತ್ತೆಲ್ಲಿಯಾದರೂ ಒಳ್ಳೆ ಶಹರಿನಲ್ಲಿ ಹೋಗಿರೋಣ".

ಆಕೆಗೆ ವಿಸ್ಮಯವಾಯಿತು. "ಯಾಕೆ, ಜೋ? ಮದುವೆಯಾದ ಮಾತ್ರಕ್ಕೆ ನಿನ್ನ ಒಲವಿನ ಉದ್ಯೋಗ ಬಿಟ್ಟುಬಿಡುವುದೇ ? ನನಗೆ ಇಲ್ಲಿ ಸುಖವಾಗಲಿಕ್ಕಿಲ್ಲವೆಂದು ನಿನ್ನ ಭಯ, ಅಲ್ಲವೇ?"

"ಹೌದು."

"ನೀನೇನೂ ಚಿಂತಿಸಬೇಡ. ಇಲ್ಲಿಯೇ ಇದ್ದು ಈ ಊರನ್ನು ಸುಧಾರಿಸೋಣ" ಎಂದು ಅವನೊಡನೆ ತನ್ನ ವಿಚಾರಗಳನ್ನು ಪ್ರಸ್ತಾಪಿಸಿದಳು. ತಾನು ಆರಂಭಿಸಬೇಕೆನ್ನುವ ಚರ್ಮದ ಕಾರ್ಖಾನೆಯ ವಿಷಯವನ್ನೂ ತಿಳಿಸಿದಳು. ಹಾಗೂ ಅಲ್ಲೊಂದು ಈಜುಗೊಳ, ಹಾಲು, ಐಸ್ ಕ್ರೀಮಿನ ಅಂಗಡಿ, ಮಹಿಳೆಯರ ವಸ್ತ್ರಾಲಯ ಟೆಲಿಫೋನ್ ಸೌಕರ್ಯ, ಇತ್ಯಾದಿ ನವಯೋಜನೆಗಳನ್ನು ಪ್ರಾರಂಭಿಸುವ ವಿಚಾರಗಳನ್ನು ಹೇಳಿದಳು.

"ಆದರೆ ಅದಕ್ಕೆಲ್ಲ ಬಹಳ ದುಡ್ಡು ಬೇಕಲ್ಲವೇ?"

"ನನ್ನಲ್ಲಿ ಸಾಕಷ್ಟು ಹಣವಿದೆ. ಯೋಗ್ಯ ಕಾರಣಗಳಿಗೆಂದು ಕೇಳಿದರೆ, ಮಿ. ಸ್ಟ್ರಾಚನ್ ಖಂಡಿತ ಕೊಡುತ್ತಾರೆ."

"ಹಾಗಾದರೆ ಬೇಗನೆ ಈ ವಿಲ್ಸ್‌ಟೌನ್ ಕೂಡ ಆ್ಯಲಿಸ್‌ದಂಥ ಶಹರವೇ ಆಗುವದು" ಜೋ ಉದ್ಗರಿಸಿದ.

"ಹಾಗೆ ಮಾಡಬೇಕೆಂಬುದೇ ನನ್ನ ಉದ್ದೇಶ. ಆ್ಯಲಿಸ್‌ನಂಥ ಶಹರ," ಅವಳೆಂದಳು.

*

ಕೆಲ ದಿನಗಳ ನಂತರ ನವೆಂಬರ್ ತಿಂಗಳಲ್ಲಿ ನನಗವಳ ಪತ್ರ ಬಂದಿತು. ಜೋ ಹಾರ್ಮನ್ನನೊಡನೆ ಅವಳ ವಿವಾಹನಿಶ್ಚಯದ ಸುದ್ದಿಯನ್ನು ತಿಳಿಸುವ ಹರ್ಷಭರಿತ ಪತ್ರ. ನಿಜಕ್ಕೂ ನಾನು ಭಾವಪರವಶನಾದೆ. ಆಕೆಯ ಪ್ರೇಮಪ್ರಕರಣ ಸುಖಾಂತ್ಯ ಕಂಡಿದ್ದು ಕೇಳಿ ನನಗೆ ಅತ್ಯಾನಂದವಾಯಿತು. ನನ್ನ ಪರಿಚಿತರೆಲ್ಲರಿಗೂ ಈ ಸುದ್ದಿಯನ್ನು ಹೇಳುತ್ತ ಹೋದೆ.

ಮುಂದಿನ ಎರಡು ಮೂರು ತಿಂಗಳು ಅವಳು ಸತತ ಪರಿಶ್ರಮಪಟ್ಟು ತನ್ನ ಕಲ್ಪನೆಗಳನ್ನೆಲ್ಲ ಕಾರ್ಯರೂಪಕ್ಕಿಳಿಸುತ್ತಲಿದ್ದಳು. ತನ್ನ ಯೋಜನೆಗಳಿಗೆ ಅವಶ್ಯವಿದ್ದ ಸಾಮಗ್ರಿಗಳನ್ನು ಸಂಗ್ರಹಿಸುವದು, ಕಟ್ಟಡಗಳ ವ್ಯವಸ್ಥೆ ಮಾಡುವದು, ಇತ್ಯಾದಿ ಭರದಿಂದ ನಡೆಯಿತು. ತನ್ನ ಕಾರ್ಯದಲ್ಲಿ ಸಹಕರಿಸಲು ಊರಿನ ಜನರನ್ನು ಪುಸಲಾಯಿಸಿ ಉತ್ತೇಜನ ನೀಡುತ್ತಿದ್ದಳು. ಈ ದೇಶಕ್ಕೆ ಅಪರಿಚಿತಳಾದ ಒಬ್ಬ ಆಂಗ್ಲ ತರುಣಿಯ ವಿಚಿತ್ರ ಸಾಹಸವನ್ನು ಜನರೆಲ್ಲ ಸಂಶಯಾಶ್ಚರ್ಯಗಳಿಂದ ನೋಡತೊಡಗಿದರು.

ಬಹು ಬೇಗನೆ ಅವಳ ಪಾದರಕ್ಷೆಯ ಕಾರ್ಖಾನೆ ಪ್ರಾರಂಭವಾಯಿತು. ಅನಂತರ ಐಸ್‌ಕ್ರೀಮ್, ತಂಪು ಪಾನೀಯಗಳ ಅಂಗಡಿ ಬಹಳ ಜನಪ್ರಿಯವಾಯಿತು. ಈಜುಗೊಳದ ಸಿದ್ಧತೆಯೂ ನಡೆಯಿತು. ಹಾಗು ಕೃಷಿಕ್ಷೇತ್ರದ ಯಜಮಾನನ ಪತ್ನಿಯಾಗಿ ಆತನ ಪ್ರಾಣಿಸಂಗೋಪನಕಾರ್ಯದಲ್ಲಿ ನೆರವಾಗಲು ಕುದುರೆ ಸವಾರಿಯನ್ನೂ ಕಲಿತುಕೊಂಡಳು.

ಅದೇ ವರ್ಷ ಬೇಸಿಗೆಯಲ್ಲಿ ಜೀನ್-ಜೋ ಹಾರ್ಮನ್ನರ ವಿವಾಹವಾಯಿತು. ಊರಿನ ಜನರೆಲ್ಲ ಮದುವೆ ಸಮಾರಂಭಕ್ಕೆ ಹಾಜರಿದ್ದು, ನವದಂಪತಿಗಳನ್ನು ಅಭಿನಂದಿಸಿದರು. ಅವರ ಮಧುಚಂದ್ರ ಗ್ರೀನ್ ಐಲಂಡಿನಲ್ಲಾಯಿತು. ಅನಂತರ ಆಕೆ ಮತ್ತೆ ತನ್ನ ಕಾರ್ಯಕಲಾಪಗಳಲ್ಲಿ ನಿರತಳಾದಳು. ಅವುಗಳ ವಿವರಗಳನ್ನು ನನಗೆ ಮೇಲಿಂದ ಮೇಲೆ ತಿಳಿಸುತ್ತ, ಆಗಾಗ್ಗೆ ಹಣವನ್ನು ಬೇಡುತ್ತಿದ್ದಳು, ದುಡ್ಡಿನ ವಿಷಯದಲ್ಲಿ ಅವಳ ವ್ಯಾವಹಾರಿಕತೆಯ ಬಗ್ಗೆ ನನಗೆ ಸಂದೇಹವೇ ಇರಲಿಲ್ಲ. ವರಮಾನ, ವೆಚ್ಚವೆಲ್ಲ ಸರಿಯಾಗಿ ಲೆಕ್ಕ ಹಾಕಿ, ಉಚಿತ ಕಾರಣಕ್ಕಾಗಿ ಖರ್ಚು ಮಾಡುತ್ತಿದ್ದಳೆಂದು ನಾನು ಆಕೆ ಬೇಡಿದಷ್ಟು ಹಣ ಕಳಿಸಿಕೊಡುತ್ತಿದ್ದೆ. ಆರು ತಿಂಗಳಿಗೊಮ್ಮೆ ಸುಮಾರು ಮೂರು-ನಾಲ್ಕು

ಸಾವಿರ ಪೌಂಡುಗಳನ್ನು ಕೊಡುತ್ತಿದ್ದೆ. ಒಂದೆರಡು ವರ್ಷಗಳಲ್ಲಿ ಆಕೆ ತನ್ನ ಚುರುಕುತನ, ಸ್ಥಿರ ಪ್ರಯತ್ನಗಳಿಂದ ಆ ಊರಿಗೆ ಅನೇಕ ಕಲ್ಪನಾತೀತ ಸೌಕರ್ಯಗಳನ್ನು ಒದಗಿಸಿಕೊಟ್ಟಳು.


ಮರುವರ್ಷ ಜೀನ್ ನನಗೆ ಆಸ್ಟ್ರೇಲಿಯಕ್ಕೆ ಬರಲು ಆಮಂತ್ರಣ ನೀಡಿದಳು. ನನಗೆ ಆಕೆಯನ್ನು ಮತ್ತೆ ನೋಡುವ ಆತುರ. ಆಕೆಯ ಎರಡು ಗಂಡುಮಕ್ಕಳನ್ನು ನೋಡುವ ಆಸೆಯನ್ನು ತಡೆಹಿಡಿಯಲಾಗಲಿಲ್ಲ. ನನ್ನಲ್ಲಿ ಆಕೆಯ ಸಾಧನೆಗಳನ್ನೆಲ್ಲ ಕಣ್ಣಾರೆ ಕಾಣುವ ಕುತೂಹಲವಿತ್ತು. ಅವಳ ಆಮಂತ್ರಣವನ್ನು ಸ್ವೀಕರಿಸಿ, ಎಪ್ಪತ್ತೈದರ ಇಳಿವಯಸ್ಸಿನಲ್ಲಿಯೂ ಅಷ್ಟು ದೂರದ ಪ್ರಯಾಣ ಕೈಕೊಂಡೆ.

ವಿಲ್ಸ್‌ಟೌನ್ ವಿಮಾನ ನಿಲ್ದಾಣದಲ್ಲಿ ಆಕೆಯನ್ನು ನೋಡಿದಾಗ ನನ್ನ ಹೃದಯ ತುಂಬಿ ಬಂದಿತು. ಮೊದಲಿಗಿಂತ ಅಧಿಕ ಅಂದವಾಗಿ, ಪರಿಪಕ್ವ ವ್ಯಕ್ತಿಯಾಗಿ ಕಂಡಳು. ನನ್ನನ್ನು ಹೃತ್ಪೂರ್ವಕ ಪ್ರೇಮಾದರದಿಂದ ಸ್ವಾಗತಿಸಿ, ತನ್ನ ಮನೆಯಲ್ಲಿ ಆದರಾತಿಥ್ಯ ನೀಡಿದಳು. ಊರಲ್ಲೆಲ್ಲ ತನ್ನ ಕಾರಿನಲ್ಲಿ ಸುತ್ತಾಡಿಸಿ ತನ್ನ ನವ್ಯ ಕಲ್ಪನೆಗಳ ಫಲಿತಾಂಶಗಳನ್ನೆಲ್ಲ ತೋರಿಸಿದಳು. ಚರ್ಮದ ಕಾರ್ಯಾಲಯ, ತರಕಾರಿ ಅಂಗಡಿ, ಹಾಲು, ಐಸ್‌ಕ್ರೀಮಿನ ಹೋಟೆಲು, ಈಜುಗೊಳ, ಸಿನೆಮಾ ಗೃಹ, ಟೆಲಿಫೋನ್ ಸೌಕರ್ಯ ಎಲ್ಲ ಉದ್ಯಮಗಳೂ ಆಕೆಯ ಕೈಚಳಕದಿಂದಲೇ ನಿರ್ಮಿತವಾಗಿದ್ದವು. ನಿಜವಾಗಿಯೂ ಆ ಕುಗ್ರಾಮವನ್ನು ಆ್ಯಲಿಸ್‌ದಂಥ ಶಹರದ ಮಟ್ಟಕ್ಕೆ ತಂದಿದ್ದಳೆಂಬುದು ಶ್ಲಾಘನೀಯ ಸಂಗತಿಯೇ ಸರಿ. ಅವಳ ಸರಳತೆ, ಕಾರ್ಯತತ್ಪರತೆಯಿಂದ ತನ್ನ ಜೀವನದಲ್ಲಿ ಸುಖ ಸಮೃದ್ಧಿಯನ್ನು ಸಾಧಿಸುವಲ್ಲಿ ಯಶಸ್ವಿಯಾದಳು.

ಈ ದಂಪತಿಯ ಜತೆಯಲ್ಲಿ ನಾನು ಕಳೆದ ಆ ಎರಡು ವಾರಗಳು ಅತಿ ಆಹ್ಲಾದಕರವಾಗಿದ್ದವು. ಆ ವೇಳೆ, ನಾನು ಇಂಗ್ಲಂಡ್ ಬಿಟ್ಟು, ಅವರೊಡನೆಯೇ ಯಾಕಿರಬಾರದೆಂದು ಜೀನ್ ಒತ್ತಾಯಪಡಿಸಿದಳು. ಆದರೆ ನನಗೂ ಮಕ್ಕಳು, ಮೊಮ್ಮಕ್ಕಳು ಇರುವರು, ನಾನು ಇಂಗ್ಲಂಡಿಗೆ ಹಿಂತಿರುಗಬೇಕೆಂದು ಅವಳಿಗೆ ಹೇಳುವಾಗ ನನ್ನ ಗಂಟಲು ಉಬ್ಬಿಬಂದಿತು.

ನನ್ನ ಆಸ್ಟ್ರೇಲಿಯದ ವಾಸ್ತವ್ಯ ಮುಗಿದು, ನಾನು ಹೊರಡುವ ದಿನ ವಿಮಾನನಿಲ್ದಾಣದಲ್ಲಿ ಅವಳಿಗೆ ಕೊನೆಯ ಬಾರಿ ವಿದಾಯ ಹೇಳುವಾಗ ನನ್ನ ಕಣ್ಣುಗಳು ಹನಿಗೂಡಿದವು. ವಿಮಾನದಲ್ಲಿ ಕುಳಿತಾಗ, ನನ್ನ ಕಣ್ಣೀರು ಯಾರಿಗೂ ಕಾಣಿಸಬಾರದೆಂದು ವೃತ್ತಪತ್ರಿಕೆಯ ಹಿಂದೆ ನನ್ನ ಮುಖ ಅಡಗಿಸಿದೆ.

ಈ ಕಥೆ ಬರೆಯುವಾಗ ನನಗೆ ಆ ಸಾಹಸಿ ಯುವತಿ, ಆಕೆ ಎದುರಿಸಿದ ವಿಚಿತ್ರ ಘಟನೆಗಳು, ಸಹಿಸಿದ ದೀನ ದುರಂತ, ಆಕೆಯ ವರ್ಣನೀಯ ಕಾರ್ಯಗಳ ಸ್ಮರಣೆಗಳ ಆವಾಹನೆಯಲ್ಲಿ ತುಂಬಾ ಸಂತಸಪಟ್ಟಿದ್ದೇನೆ. ಲೋಕವೆಲ್ಲ ಆಕೆಯ ಧೀರೋದಾತ್ತತೆ, ಮಹತ್ಸಾಧನೆಯನ್ನು ಮೆಚ್ಚುತ್ತದೆಂದು ನನ್ನ ತೀವ್ರ ಹಾರೈಕೆ.



Edited, printed and published by M. N. Mahishi on behalf of the Loka Shikshana Trust, Samyukta Karnataka Press, Koppikar Road, Hubli-580 020 Phone: 64307, Rept: Bombay: V. Satyamurthi. Phone; 5510502, Madras S. K. Murthi. Phone: 414870. New Delhi: V. K. Chopra. Phone: 7114785.

Registered with the Registrar of Newspapers for India under No. 3539/57

KASTURI PRICE : 2-50 Reg. No. KRNG 4
Licence No. L2120/WPP No. 3